1. ವಿತ್ತೀಯ ಕಾರ್ಯಕಲಾಪ

(ಅ) 2012-13 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ:

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪ, ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ನಿನ್ನೆ ದಿನ ನಾನು ಸದನದಲ್ಲಿ ಹಾಜರಿರಲಿಲ್ಲ. ಈ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಗಿದೆ ಎಂದು ಹೇಳಿ ಈ ದಿನ ಬೇಡಿಕೆಗಳ ಮೇಲೆ ಉತ್ತರವೆಂದು agenda ದಲ್ಲಿದೆ. ನಿನ್ನೆ ಮತ್ತು ಮೊನ್ನೆ ಕೇವಲ ಎರಡು ದಿನಗಳು ಮಾತ್ರ Demand ಗಳ ಮೇಲೆ ಚರ್ಚೆಯಾಗಿರುವುದು ಬೇರೆ ದಿನಗಳಲ್ಲಿ ಬರಗಾಲದ ಮೇಲೆ ಚರ್ಚೆ ನಡೆಯಿತು ಮತ್ತು ಉತ್ತರ ಬಂತು. ಮತ್ತೇ ಬೇರೆ ಬೇರೆ ವಿಚಾರಗಳು Calling attention ಗಳು, question hours, Zero Hours, ಇವೆಲ್ಲವೂ ನಡೆದಿವೆ. ಬಜೆಟ್ ಮೇಲೆ ಕೇವಲ ಎರಡು ದಿನಗಳು ಮಾತ್ರ ಚರ್ಚೆಯಾಗಿದೆ. ರೂಲ್ 178 ರಲ್ಲಿ ಅನುದಾನದ ಬೇಡಿಕೆಗಳನ್ನು ಮತಕ್ಕೆ ಹಾಕುವುದು. ರೂಲ್ 177 ರಲ್ಲಿ ಬಜೆಟ್ ಕುರಿತು ಸಾಮಾನ್ಯ ಚರ್ಚೆ ಇದು ಆಗಿದೆ. "ವಿಧಾನ ಸಭಾಧ್ಯಕ್ಷರು ಸದನದ ನಾಯಕರೊಂದಿಗೆ ಸಮಾಲೋಚಿಸಿ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚಿಸಲು ಮತ್ತು ಮತಕ್ಕೆ ಹಾಕಲು ಹದಿನೈದು ದಿನಗಳಿಗೆ ಕಡಿಮೆಯಿಲ್ಲದಂತೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಮಂಜಸವೆಂದು ತೋರಬಹುದಾದಷ್ಟು ದಿನಗಳನ್ನು ನಿಗದಿಪಡಿಸುವುದು. 15 ದಿವಸಗಳಿಗೆ ಕಡಿಮೆ ಇಲ್ಲದಂತೆ ಇನ್ನು ಹೆಚ್ಚು ದಿನಗಳನ್ನು ತಾವು ನಿಗದಿಪಡಿಸಬಹುದೆಂದು ಎಂದು ರೂಲ್ಸ್‌ನಲ್ಲಿದೆ". ಈ ಬಗ್ಗೆ ಎರಡೇ ದಿನದಲ್ಲಿ ಮುಗಿಸಿದರೆ How can he give the justice? ಇಲ್ಲಿ ಒಂದು ಕಾಲವಿತ್ತು. 300 ರಿಂದ 500 ಕೋಟಿ ರೂಪಾಯಿಗಳು ಹಾಗೂ 2000 ರಿಂದ 3000 ಕೋಟಿ ರೂಪಾಯಿಗಳ ಬಜೆಟ್ ಇಡುವಂತಹ ಕಾಲದಲ್ಲಿ 70 ದಿನಗಳು, 90 ದಿನಗಳು, 100 ದಿನಗಳು ಅಸೆಂಬ್ಲಿ ನಡೆದಿರುವಂತಹ ನಿದರ್ಶನಗಳು ಇವೆ. ಆಗ ಯಾವುದೇ ಕಾನೂನುಗಳು ಇರಲಿಲ್ಲ. ಈಗ ನಾವು ಕಾನೂನನ್ನು ಮಾಡಿಕೊಂಡು ಕನಿಷ್ಠ ಅಧಿವೇಶನವನ್ನು 60 ದಿವಸಗಳ ಕಾಲ ನಡೆಸಬೇಕೆಂದು ಹೇಳಿ ನಾವೇ ನಮ್ಮ ಮೇಲೆ

ನಿರ್ಬಂಧಗಳನ್ನು ಹೇರಿಕೊಂಡು ಈಗ ನಾವು 60 ದಿನಗಳ ಕಾಲ ಅಧಿವೇಶನವನ್ನು ನಡೆಸದೇ ಇರುವುದು ಸರಿಯಲ್ಲ. Business Advisory Committee ಮೀಟಿಂಗ್‌ನಲ್ಲಿ ಅನೇಕ ಸಾರಿ ಈ ಬಗ್ಗೆ ಚರ್ಚೆ ಮಾಡಿದಾಗ ಈ ವರ್ಷ 60 ದಿನಗಳ ಕಾಲ ಅಧಿವೇಶನವನ್ನು ನಡೆಸುತ್ತೇವೆ ಎಂದು ಸರ್ಕಾರ ಉತ್ತರವನ್ನು ಕೊಟ್ಟಿರುತ್ತಾರೆ. ನಾವು ಈ ವರ್ಷ 60 ದಿನಗಳಿಗಿಂತ ಕಡಿಮೆ ಇಲ್ಲದಂತೆ ಅಧಿವೇಶನವನ್ನು ನಡೆಸುತ್ತೇವೆ ಎಂದು ಕಳೆದ ವರ್ಷವೂ ಹೇಳಿದರು, ಈ ವರ್ಷವೂ ಹೇಳಿದರು. ಈಗ ಅಧಿವೇಶನವು 18 ಅಥವಾ 20 ದಿನಗಳ ಕಾಲ ನಡೆದಿದೆ. Correct ಆಗಿ ನನಗೆ ಗೊತ್ತಿಲ್ಲ ಬಹಳ ಕಡಿಮೆ ದಿನ ನಡೆದಿದೆ. Less than 30 days ನಡೆದಿದೆ. ಈ ಪರಿಸ್ಥಿತಿ ಇರುವಾಗ ನಾವು ಬಜೆಟ್ ಮೇಲೆ 1,03,338 ಕೋಟಿ ರೂಪಾಯಿಗಳ ಬಜೆಟ್ ಇದೆ. ಇಷ್ಟೊಂದು ದೊಡ್ಡ ಪ್ರಮಾಣದ ಮೊತ್ತವನ್ನು ಅಸೆಂಬ್ಲಿ ಅಂಗೀಕಾರ ಮಾಡುವಾಗ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕಾಗಿರುವುದು ನ್ಯಾಯಸಮ್ಮತವಾಗಿದೆ ಇದು ಆಗಲೇಬೇಕಾಗಿದೆ, Because government is answerable and accountable to the legislature. ಆ ಕಾರಣದಿಂದ ಇದು primary duty on the part of the government So, ಈ ತರಹ ಪರಿಸ್ಥಿತಿ ಇರುವಾಗ ನಾವು ಎರಡು ದಿನದಲ್ಲಿ ಮುಗಿಸುತ್ತೇವೆ. ನಮಗೆ ಬೇರೆ ಸಮಸ್ಯೆಗಳು ಇವೆ. ಅದಕ್ಕೋಸ್ಕರ ನಾವು ಎರಡು ದಿನದಲ್ಲಿ ಮುಗಿಸುತ್ತೇವೆ. ನಮಗೆ ಬೇರೆ ಸಮಸ್ಯೆಗಳು ಇವೆ. ಅದಕ್ಕೋಸ್ಕರ ನಾವು ಇವತ್ತೇ ಉತ್ತರವನ್ನು ಕೊಡುತ್ತೇವೆ ಎಂದು ಸರ್ಕಾರ ಹಠ ಹಿಡಿಯುವುದಾಗಲಿ, ಅಥವಾ ನಾವು ಬಿಎಸಿಯಲ್ಲಿ 27 ನೇ ತಾರೀಖು ಉತ್ತರವನ್ನು ಕೊಡುತ್ತೇವೆ ಎಂದು ತೀರ್ಮಾನ ಮಾಡಿದ್ದೇವೆ ಎಂದು ಹೇಳುವುದಾಗಲಿ ಆಗಬಾರದು. ಬಿಎಸಿಯಲ್ಲಿ ಮಾಡಿರುವಂತಹ ಅನೇಕ ನಿರ್ಣಯಗಳು ಇಲ್ಲಿ ಪಾಲನೆಯಾಗಿರುವುದಿಲ್ಲ. ನಾವು ಈ ತರಹ ಎರಡೇ ದಿನ ಸಿಗುತ್ತದೆ ಎಂದು ಬಿಎಸಿಯಲ್ಲಿ ನಿರೀಕ್ಷೆಯನ್ನೂ ಸಹ ಮಾಡಿರುವುದಿಲ್ಲ. ಇನ್ನೊಂದು ದಿನವಾದರೂ ಕರೆದು ಈ ತರಹ ಎರಡೇ ದಿನ ಸಿಕ್ಕಿತ್ತು ಎಂದು ಚರ್ಚೆಯನ್ನು ಸಹ ಮಾಡಿರುವುದಿಲ್ಲ. No.1, No.2 ಇವತ್ತಿನವರೆಗೆ ಎಲ್ಲಾ ಇಲಾಖೆಗಳ ಆಡಳಿತ ವರದಿ, performance budget ಕೊಟ್ಟಿದ್ದಾರಾ? ಅದನ್ನು ಇವತ್ತಿನವರೆಗೂ ಕೊಟ್ಟಿರುವುದಿಲ್ಲ. 2011–12ನೇ ಸಾಲಿನ ಆಡಳಿತ ವರದಿ, 2012–13 ನೇ ಸಾಲಿನ performance budget ಇವೆಲ್ಲವನ್ನೂ ಕೊಡಬೇಕು.

Along with the demands ಅವೆಲ್ಲವನ್ನೂ ಸಹ ಕೊಟ್ಟಿರುವುದಿಲ್ಲ. When such being the case, how can a member participate in the discussion? Without proper information, without correct information, how can anybody participate and have a fruitful discussion in the Assembly? Not at all possible. ನಾನು ನಿಮ್ಮ ಮೂಲಕ ಮನವಿ ಮಾಡುವುದೇನೆಂದರೆ, Financial Bill, Appropriation Bill ಅನ್ನು ವಿರೋಧ ಮಾಡಬೇಕೆನ್ನುವುದು ನಮ್ಮ ಉದ್ದೇಶವಲ್ಲ. ಆ ರೀತಿ ನಾವು ಇವತ್ತಿನವರೆಗೂ ಯಾವತ್ತೂ ಮಾಡಿಲ್ಲ.Co-operate ಮಾಡಿಕೊಂಡು ಹೋಗಿದ್ದೇವೆ. That is a different aspect. We have to co-operate, we will co-operate. ಹಾಗೆಂದು ಹೇಳಿ Appropriation Bill-pass ಮಾಡಿಕೊಳ್ಳಲು ಇನ್ನೂ 30ನೇ ತಾರೀಖು ಇದೆ, 31ನೇ ತಾರೀಖು ಇದೆ. ಎರಡು ದಿನಗಳಿವೆ. ಇಂತಹ ಸನ್ನಿವೇಶದಲ್ಲಿ ಇವತ್ತು ಆಗಿರತಕ್ಕಂಥ ಬೆಳವಣಿಗೆಯ ಹಿನ್ನೆಲೆಯಲ್ಲಿ ಹಾಗೂ ಸರ್ಕಾರದ ನ್ಯೂನ್ಯತೆಗಳು ಇರುವುದರಿಂದ, performance Budget ಕೊಟ್ಟಿಲ್ಲ. ಆಡಳಿತ ವರದಿ ಕೊಟ್ಟಿಲ್ಲ. ಇವೆಲ್ಲಾ ಇರುವುದರಿಂದ Government has failed to furnish all these informations. They ought to have furnished under the law, under the constitution. ಅದು ಮಾಡದೇ ಇರುವುದರಿಂದ, ನಾನು ನಿಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ, ನೀವೂ ಕೂಡ ಸರ್ಕಾರಕ್ಕೆ ಹೇಳಬೇಕು. ಇವತ್ತು ಇಡೀ ದಿನ ಚರ್ಚೆ ಆಗಲಿ. ಇನ್ನೂ ಬಹಳ ಜನ ಸದಸ್ಯರು ಇದರಲ್ಲಿ participate ಮಾಡುವವರಿದ್ದಾರೆ. ಚರ್ಚೆ ಮಾಡುವವರು ಇದ್ದಾರೆ. ನಾನೂ ಕೂಡ ಮಾತನಾಡಿಲ್ಲ. ನಮ್ಮ Deputy Leader ಕೂಡ ಮಾತನಾಡಿಲ್ಲ. ಇನ್ನು ಬೇರೆಯವರು ಆ ಕಡೆ ಸದಸ್ಯರು, ಈ ಕಡೆ ಸದಸ್ಯರು, ಎರಡೂ ಕಡೆಯ ಸದಸ್ಯರು ಇನ್ನೂ ಕೆಲವರು ಮಾತನಾಡುವವರು ಇದ್ದಾರೆ. ಅವರಿಗೆ ಇರತಕ್ಕಂಥ ಆಗಿರತಕ್ಕಂಥ ಅನುಭವ, ಮತ್ತೆ it helps the Government. It is not that, ನಾವು ಸರ್ಕಾರಕ್ಕೆ ಏನೋ ಮುಜುಗರ ಮಾಡಬೇಕು ಎನ್ನುವುದಕ್ಕಿಂತ ಹೆಚ್ಚಾಗಿ it helps the Government. ನಮ್ಮ ಡಾ:ಮಾಲಕರೆಡ್ಡಿಯವರು ಮಾತನಾಡಿದರು. ಅವರು ಎಷ್ಟು ಮಾಹಿತಿಗಳನ್ನು ಕೊಟ್ಟರು ಎಂದು ನೀವೇ ನೋಡಿದ್ದೀರಿ. ಅವರ ಅನುಭವದಿಂದ, as a

Doctor, as a Professor of Medicine ಬೇಕಾದಷ್ಟು ಮಾಹಿತಿಗಳನ್ನು ಕೊಟ್ಟರು. ಮಾನ್ಯ ಈಶ್ವರ ಖಂಡ್ರೆಯವರು ಬಹಳಷ್ಟು ವಿಚಾರಗಳನ್ನು ಹೇಳಿದರು. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಬಹಳಷ್ಟು ಮಾಹಿತಿಗಳನ್ನು ಕೊಟ್ಟರು. ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು, ಯಾರ್‍ಯಾರು ಮಾತನಾಡಿದ್ದಾರೆ ಅವರೆಲ್ಲಾ ಬಹಳಷ್ಟು ಮಾಹಿತಿ ಕೊಟ್ಟರು. ಯಾವತ್ತೂ ನಮ್ಮ ಬೆನ್ನು ನಮಗೆ ಕಾಣಿಸುವುದಿಲ್ಲ. ಅದಕ್ಕೋಸ್ಕರವೇ ಈ demands ಚರ್ಚೆಯಾಗಬೇಕಾಗಿರುವುದು. ನಾವು ಒಂದು ಕಾಲದಲ್ಲಿ subject Committees ಎಂದು ಮಾಡಿಕೊಂಡಿದ್ದೆವು. ಆ Subject Committees ನಿಲ್ಲಿಸಿಬಿಟ್ಟರು. A Subject Committees ಯಲ್ಲಿ on each subject detail ಆಗಿ ಚರ್ಚೆ ಮಾಡುವುದಕ್ಕೆ MLA ಗಳಿಗೆ ಸಮಯ ಸಿಗುತ್ತಿತ್ತು. ಸರ್ಕಾರವನ್ನು ಎಚ್ಚರಿಸಲಿಕ್ಕೆ, ಅಧಿಕಾರಿಗಳನ್ನು pullup ಮಾಡಲಿಕ್ಕೆ ಇವುಗಳಿಗೆಲ್ಲಾ ಅವಕಾಶ ಸಿಗುತ್ತಿತ್ತು. ನನಗೆ ನೆನಪಿದೆ. ನಾನು Animal Husbandry Minister ಮತ್ತು Transport Minister ಆಗಿದ್ದಾಗ, ಒಂದೊಂದು ಇಲಾಖೆಯ ಮೇಲೂ ಕೂಡ ಚರ್ಚೆಯಾಗಿ ಉತ್ತರ ಕೊಟ್ಟ ನಂತರ ಬೇರೆ ಇಲಾಖೆಯನ್ನು ತೆಗೆದುಕೊಳ್ಳಲಾಗುತ್ತಿತ್ತು. ಪ್ರತಿ ಇಲಾಖೆ ಮೇಲೆ ಚರ್ಚೆ ಆದ ಮೇಲೆ Concerned Minister ಉತ್ತರ ಕೊಟ್ಟ ಮೇಲೆ Next Department ಅನ್ನು ತೆಗೆದುಕೊಳ್ಳುತ್ತಿದ್ದೆವು. ಈಗೆಲ್ಲಾ ಆ ಪದ್ಧತಿಗೆ we have given go by. 1999 ರಲ್ಲಿ Subject Committees ಬಂದ ಮೇಲೆ ಮತ್ತೇ 2004 ರಲ್ಲಿ Subject Committees ಹೋಯಿತು, ಮತ್ತೆ Demands ಮೇಲೆ ಚರ್ಚೆ ನಡೆಸಬೇಕೆಂದು ಆಯಿತು. ಈಗ ಆಗುತ್ತಿದೆ. ಆದ್ದರಿಂದ ನೀವು ಈ ಸರ್ಕಾರದವರಿಗೂ ಹೇಳಬೇಕು, ನಮಗೆ ಅವಕಾಶ ಕೊಡದೇ ಹೋದರೆ, ನಮ್ಮ rights cut down ಆಗುತ್ತದೆ. Privileges cut down ಆಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಅವರೇನೋ ನಿಮ್ಮ Chamber ನಲ್ಲಿ ಬಹಳ ಜಗಳಕ್ಕೇ ಬರುತ್ತಿದ್ದರು. ಮಾನ್ಯ ಈಶ್ವರಪ್ಪನವರು ಆ ರೀತಿ ಮಾತನಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ. ನೀವೇಕೆ ಜಗಳಕ್ಕೆ ಬರುವುದನ್ನು ಶುರು ಮಾಡಿದಿರಿ? ನಾವಿಬ್ಬರು ಸ್ನೇಹಿತರಲ್ಲವೇ ಅದಕ್ಕೆ ಹೇಳಿದೆ.

ಶ್ರೀ.ಕೆ.ಎಸ್.ಈಶ್ವರಪ್ಪ (ಉಪಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ. .

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೋಡಿ ಸ್ನೇಹಿತರು ಎಂದರೂ ನಿಮಗೆ ಕೋಪ. ಸ್ನೇಹಿತರು ಎಂದು ಹೇಳಬಾರದೇ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : – ನಾನು ನಿಂತರೆ ಕೋಪ ಎಂದು ಏಕೆ ತಿಳಿದುಕೊಳ್ಳುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಾನು ಇನ್ನೂ ಮಾತನಾಡುವುದು ಮುಗಿಸಿಲ್ಲ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : – ಮುಗಿಸುವುದಲ್ಲ. ಅವರು ಸ್ನೇಹಿತರು ಎಂದು ಹೇಳಿದ್ದಾರೆ ತುಂಬಾ ಸಂತೋಷ. ಇದು ಇದೇ ರೀತಿಯೇ ಮುಂದುವರೆಯಲಿ ಎಂದು ಆಸೆ ಅಷ್ಟೆ. ಬೇರೆ ಇನ್ನೇನೂ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಸ್ನೇಹಿತರೋ ಅಲ್ಲವೋ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : – ಖಂಡಿತ ಹೌದು. ಅದಕ್ಕೋಸ್ಕರ ಇದೇ ರೀತಿ ಮುಂದುವರೆಯಲಿ ಎಂದು ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ : – ನಾನು ಯಾವಗಲೂ ಸ್ನೇಹಿತನೇ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಇಲ್ಲ, ಇಲ್ಲ, ಕೆಲವು ಸಾರಿ ಏನೇನೋ ಮಾಡಿಬಿಡುತ್ತೀರಿ. ಕೆಲವು ಸಾರಿ ಏನೇನೋ ಆಟವಾಡುತ್ತೀರಿ.

ಶ್ರೀ ಸಿದ್ದರಾಮಯ್ಯ : – ಎಲ್ಲವನ್ನೂ ನಿಮಗೇ ಹೇಳುವುದು.

ಶ್ರೀ ಕೆ.ಎಸ್.ಈಶ್ವರಪ್ಪ: ನನಗೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಅಯ್ಯೋ, ನಿಮ್ಮ ಪಾರ್ಟಿಯವರೇ ಹೇಳುವುದು. ನಾನಲ್ಲ. ಈಶ್ವರಪ್ಪನವರು ಏನೇನೂ ಆಟವಾಡಿಬಿಡುತ್ತಾರೆ ಎಂದು ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : – ನಮ್ಮ ಪಾರ್ಟಿಯವರು ಯಾರೂ ಹೇಳುವುದಿಲ್ಲ. ನೀವೊಬ್ಬರೇ ಬುದ್ಧಿವಂತಿಕೆ ಮಾಡಿ, ಶಂಕರಲಿಂಗೇಗೌಡರೆ. ಏನು ಹೇಳುತ್ತೀರಿ ಮತ್ತೆ ಅವರೇನೂ ಹೇಳುತ್ತೀರಿ, ಇವರೇನೂ ಹೇಳುತ್ತೀರಿ ಅಂದಾಗ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಹೇಳುವುದು ಏನೂ ಇಲ್ಲ. ಯಾರೋ ಒಬ್ಬರು ಚಿನ್ನಪ್ಪ ಎಂದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : – ಮತ್ತೆ ಶುರು ಮಾಡಿದರು ನೋಡಿ. ಮತ್ತೆ ಅದೇ ಕೆಲಸ.

ಶ್ರೀ ಸಿದ್ದರಾಮಯ್ಯ : – ನಾನು ಹೇಳುತ್ತೇನಾ? ಹೋಗಲಿ ಬಿಡಿ. ನಾವೂ ನೀವು ಸ್ನೇಹಿತರಾಗಿಯೇ ಇರೋಣ.

(ಗೊಂದಲ)

ಶ್ರೀ ಆರ್.ಅಶೋಕ್ : – ಅದಕ್ಕೇ ಹೇಳುವುದು ವಿಶೇಷ ಪ್ರೀತಿ ಎಂದು.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಆದ್ದರಿಂದ ನಾನೇನು ಹೇಳುತ್ತೇನೆ ಅದಕ್ಕೆ ಅವರು mistake ಮಾಡಿಕೊಳ್ಳಬಾರದು. ಇವತ್ತೆಲ್ಲಾ ಚರ್ಚೆ ಮಾಡೋಣ. 30 ನೇ ತಾರೀಖು ನೀವು ಬೆಳಿಗ್ಗೆನೇ ಬಂದು ಮಧ್ಯಾಹ್ನದವರೆಗೂ ಇಲ್ಲಿ ಉತ್ತರ ಕೊಡಿ. Appropriation Bill move ಮಾಡಿ. ಮಧ್ಯಾಹ್ನದ ಮೇಲೆ ವಿಧಾನ ಪರಿಷತ್ತಿನಲ್ಲಿ ಹೋಗಿ move ಮಾಡಿ. ಸಾಯಂಕಾಲದ ಹೊತ್ತಿಗೆ ಎಲ್ಲಾ Finance Bills pass ಮಾಡಿಕೊಂಡು ಅನಂತರ ಬೆಳಿಗ್ಗೆ 31ನೇ ತಾರೀಖಿಗೆ fresh ಆಗಿ Governor ನವರ ಹತ್ತಿರ ಹೋಗಿ ಅದಕ್ಕೆ ರುಜು ಹಾಕಿಸಿ approval ಮಾಡಿಸಿಕೊಳ್ಳಿ. Time is there. Time ಇಲ್ಲದೇ ಇವತ್ತೇ ಕೊನೆ ದಿನ ಎಂದರೆ we can understand. Today is not the last day.

ಅದಕ್ಕೆ ಯಾರ್‍ಯಾರು ಮಾತನಾಡಬೇಕೋ ಅವರು ಮಾತನಾಡಲಿ. ಕೊನೆಯಲ್ಲಿ ಒಂದು ಗಂಟೆ ನನಗೆ ಮಾತನಾಡಲು ಅವಕಾಶ ಕೊಡಿ. ಎಲ್ಲವನ್ನೂ Conclude ಮಾಡುತ್ತೇನೆ. ಅನಂತರ ಅವರು 30ನೇ ತಾರೀಖು ಉತ್ತರ ಕೊಡಲಿ. ಇದು ನಮ್ಮ ಒತ್ತಾಯ. ಒಂದು ವೇಳೆ ಕೊಡದೇ ಹೋದರೆ, ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಸುಮ್ಮನೆ ನಾನು ಬೆದರಿಕೆ ಹಾಕುತ್ತಿದ್ದೇನೆ ಎಂದು ಅಲ್ಲ. ಅದೊಂದು ಬೇರೆ ಅಸ್ತ್ರ ಅಷ್ಟೆ. ಸರ್ಕಾರ ಒಪ್ಪದೇ ಇದ್ದರೆ that is one of the weapons provided under the rules and the Constitution, under the Law. ಅದು last resort. ಅದಕ್ಕೆ ಈ ಬಾರಿ ಬಾವಿಗೆ ಹೋಗಬಾರದೆಂದು ತೀರ್ಮಾನ ಮಾಡಿಕೊಂಡು ಈ ಬಾರಿ ಬಾವಿಗೆ ಹೋಗೇ ಇಲ್ಲ. ಏಕೆಂದರೆ ಅವರು Guillotine ಮಾಡಿಕೊಂಡು ಬಿಲ್‌ಗಳನ್ನೆಲ್ಲಾ pass ಮಾಡಿಕೊಂಡು ಹೋಗುತ್ತಾರೆ ಎಂದು. ಒಂದು ಬಾರಿಯೂ ಬೇಡಿಕೆ ಮೇಲೆ ಚರ್ಚೆ ಆಗಿಲ್ಲ. ಅದಕ್ಕೆ ಈ ಸಾರಿ ನಾವು ಬಹಳ Co-operate ಮಾಡಿದ್ದೇವೆ. If they want continuous co-operation from the opposition they have to agree to these points. ಅಷ್ಟು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : – ಏನು ಪ್ರತಿಪಕ್ಷದ ನಾಯಕರು ನಮ್ಮ ರೂಲ್ಸ್ ಬುಕ್ 178 ಅನ್ನು ಇಲ್ಲಿ quote ಮಾಡಿ ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 15 ದಿವಸ ಯಾವ ವರ್ಷ ಚರ್ಚೆಯಾಗಿದೆ. ಎಂದು ತಮಗೂ ಗೊತ್ತು. ಅದು ಚರ್ಚೆಗೆ ಬಿಟ್ಟ ಒಂದು ವಿಚಾರ. ಎರಡನೆಯದಾಗಿ Subject Committee ನಿಜವಾಗಿಯೂ ಒಳ್ಳೆಯದು ಇತ್ತು. ನಾವೆಲ್ಲಾ ಅನೇಕರು Subject Committee ಯಲ್ಲಿ ಅನೇಕ ವಿಚಾರಗಳನ್ನು ತಿಳಿದುಕೊಂಡು ಅಧ್ಯಯನ ಮಾಡಿ, participate ಮಾಡುವ ಅನುಕೂಲ ಆಯಿತು. Subject Committee ಕೂಡ ಯಾವ ವರ್ಷ ಯಾರ ಕಾಲದಲ್ಲಿ ಅದು ನಿಂತಿತು ಎನ್ನುವುದೂ ಕೂಡ ಈಗ ಚರ್ಚೆ ಬೇಡ. ನಾವು ಬಂದ ಮೇಲೆ 2008 ರಲ್ಲಿ .

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ. . .

ಶ್ರೀ ಎಸ್.ಸುರೇಶ್ ಕುಮಾರ್ : – ಒಂದು ನಿಮಿಷ ಸಾರ್, ನಾನು ಪೂರ್ತಿ ಹೇಳಿಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ : – I admitted. ನಮ್ಮ ಕಾಲದಲ್ಲಿಯೇ ನಿಲ್ಲಿಸಿದ್ದು. ಅಷ್ಟು ಬೇಕಾದರೆ ನಿಮಗೆ ಸಹಾಯ ಮಾಡಬಹುದು.

ಶ್ರೀ ಎಸ್.ಸುರೇಶ್ ಕುಮಾರ್ : – O.K., Fine. ಈ ಒಂದು ನಮ್ಮ Finance Bill ಚರ್ಚೆಗೋಸ್ಕರ ನಾವು 19 ನೇ ತಾರೀಖಿನಿಂದ ಸದನ ಸೇರಿದ್ದೇವೆ. 19 ಮತ್ತು 20 ರಂದು ಸದನ ನಡೆಯಿತು. 21,22 ರಂದು ರಜೆ ಇತ್ತು. 23 ಮತ್ತು 24 ರಂದು ನಾಲ್ಕು ದಿವಸ ಇದರ ಬಗ್ಗೆ ಚರ್ಚೆ ಮಾಡಲಿಕ್ಕೇ ಆಗಲಿಲ್ಲ. ಬರ ಕುರಿತು ನಿಲುವಳಿ ಸೂಚನೆ ತಂದು ಅದೂ ಕೂಡ ಒಂದಷ್ಟು ನಿಗದಿತ ಸಮಯದಲ್ಲಿ ಆಗಿದ್ದರೆ ಇನ್ನಷ್ಟು ಸಮಯ ಸಿಗುತ್ತಿತ್ತು. ಸದನದ ಬಹುತೇಕ ಅವಧಿಯನ್ನು ಬರ ನುಂಗಿ ಹಾಕಿತು.

ಶ್ರೀ ಸಿದ್ದರಾಮಯ್ಯ : – ಹಾಗಾದರೆ ಬರದ ಬಗ್ಗೆ ಚರ್ಚೆ ಬೇಕಾಗಿರಲಿಲ್ಲವೇ?

ಶ್ರೀ ಎಸ್.ಸುರೇಶ್‌ಕುಮಾರ್ : – ಬರದ ಬಗ್ಗೆ ಚರ್ಚೆ ಬೇಕಾಗಿರಲಿಲ್ಲ ಎಂದು ಹೇಳುತ್ತಿಲ್ಲ. ನಾವು time management ಯಾವ ರೀತಿ ಮಾಡಬಹುದಾಗಿತ್ತು ಎನ್ನುವುದು ನನ್ನ ಅನಿಸಿಕೆ. 25 ನೇ ತಾರೀಖು ಮಧ್ಯಾಹ್ನ 1.30 ಗಂಟೆಗೆ ಈ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಇದುವರೆಗೂ ಸುಮಾರು 20 ಜನ ಶಾಸಕರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಒಂದು ರೀತಿಯಿಂದ ಕಳೆದ ವರ್ಷದಷ್ಟೆ ಸಂಖ್ಯೆಯಲ್ಲಿ ಶಾಸಕರು ಭಾಗವಹಿಸಿದ್ದಾರೆ. ಅದರಲ್ಲಿ 16 ಶಾಸಕರು ನಮ್ಮ ಪ್ರತಿಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶಾಸಕರು ಮಾತನಾಡಿದ್ದಾರೆ. ಜನತಾದಳ ಪಕ್ಷದ ಶಾಸಕಾಂಗ ನಾಯಕರಾದ ಮಾನ್ಯ ರೇವಣ್ಣವವರು ಒಬ್ಬರು ಮಾತನಾಡಿದ್ದಾರೆ. 20 ಜನ ಎಲ್ಲಾ ಇಲಾಖೆಗಳ ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ಸರ್ಕಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಅಗತ್ಯ ಬಿದ್ದಾಗ ಕಿವಿಯನ್ನೂ ಕೂಡ ಹಿಂಡಿದ್ದಾರೆ. ಇದು ಪರಿಸ್ಥಿತಿ. ಈ ಒಂದು Finance Bill ಚರ್ಚೆಯೇ ಇಲ್ಲದೇ approve ಆಗುತ್ತಿದೆ ಎನ್ನುವ ಒಂದು message ಹೋಗುವುದು ಬೇಡ. ಪ್ರತಿ ಪಕ್ಷದ ನಾಯಕರು ಈಗ ಮಾತನಾಡಲು ತಾವೇ ನಿನ್ನೆ ನಿಗದಿ ಮಾಡಿದ್ದೀರಿ. 19ನೇ ತಾರೀಖಿನಂದು ನಡೆದ ಕಾರ್ಯಕಲಾಪಗಳ ಸಮಿತಿಯಲ್ಲಿ ಎಲ್ಲರೂ ಕುಳಿತುಕೊಂಡು ನಿಶ್ಚಯ

ಮಾಡಿದ್ದೆವು ಏನೆಂದರೆ, 27 ನೇ ತಾರೀಖು ಬೆಳಿಗ್ಗೆ ಇದನ್ನು approve ಮಾಡಬೇಕು. 27 ನೇ ತಾರೀಖು ಸಂಜೆ ವಿಧಾನ ಪರಿಷತ್ತಿಗೆ ಹೋಗಬೇಕೆನ್ನುವುದು ಪ್ರತಿಪಕ್ಷದ ನಾಯಕರು, ಜನತಾದಳ(ಎಸ್) ಪಕ್ಷದ ಶಾಸಕಾಂಗ ನಾಯಕರು, ನಮ್ಮ ಸಭಾ ನಾಯಕರು ಎಲ್ಲರೂ ಕೂಡ ಕುಳಿತುಕೊಂಡು ಚರ್ಚೆ ಮಾಡಿ ನಿಗದಿಯಾಗಿರುವ ದಿನ. ನಾನು ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಏನು ತಾವು ರಾತ್ರಿ ಸುಮಾರು 1 ಗಂಟೆ 10 ನಿಮಿಷದವರೆಗೂ ಸಭೆ ನಡೆಸಿ, ಯಾರ್ಯಾರು ಚರ್ಚೆಗೆ ತಯಾರಿದ್ದರು ಅವರಿಗೆಲ್ಲಾ ಅವಕಾಶ ಸಿಕ್ಕಿದೆ. ನನಗೆ ಬಹಳ ಸಂತೋಷವಾಯಿತು. ಆ ಒಂದು ರಾತ್ರಿಯಲ್ಲಿಯೂ ಕೂಡ ಬಹಳ ಉತ್ಸುಕರಾಗಿ ನಿನ್ನೆ ಮಾನ್ಯ ಅಭಯಚಂದ್ರರವರು ರಾತ್ರಿ 1 ಗಂಟೆಗೆ ಉತ್ಸುಕರಾಗಿ ಅನೇಕ ವಿಚಾರಗಳನ್ನು ಇಲ್ಲಿ ಗಮನಕ್ಕೆ ತಂದು ಸರ್ಕಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ನಿನ್ನೆ ರಾತ್ರಿ ಅನಂತರ ಏನು ನಿಶ್ಚಯ ಮಾಡಿದ್ದೀರಿ, ಅದೇ ರೀತಿಯಾಗಿ ಪ್ರತಿ ಪಕ್ಷದ ನಾಯಕರು ಏನು ಮಾತನಾಡುತ್ತಾರೆ ಎಂದು ನಾವು ಕೂಡ ಬಹಳ ಎದುರು ನೋಡುತ್ತಿದ್ದೇವೆ. ಅವರ ಅಪಾರವಾದ ಅನುಭವದ ಹಿನ್ನೆಲೆಯಲ್ಲಿ ಯಾವ ರೀತಿಯಾಗಿ ಮಾರ್ಗದರ್ಶನ ಬರುತ್ತದೆ ಎಂದು ಈ ಬಗ್ಗೆ ಅವರು ಚರ್ಚೆ ಮಾಡಲಿ ಅದು ಆದ ನಂತರ clarification time ನಲ್ಲಿ ಯಾರಾದರೂ clarification ಕೇಳಲಿ. ದಯವಿಟ್ಟು voting ಹಾಕಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ವಿರೋಧ ಪಕ್ಷದ ಉಪನಾಯಕರು) : – ಮಾನ್ಯ ಅಧ್ಯಕ್ಷರೆ, ಏನು ಸರ್ಕಾರ ಒಂದು ರೀತಿಯಲ್ಲಿ ಭಾವನಾತ್ಮಕವಾದಂತಹ ರೀತಿಯಲ್ಲಿ ವರ್ತನೆ ಮಾಡಿದಂತೆ ಕಾಣಿಸುತ್ತದೆ. ನಿಮಗೆ ಸಂವಿಧಾನ ಅದು ಮೂಲ ಆದಂತೆ ಕಾಣುತ್ತಿಲ್ಲ. ಮಳೆ ಬರಲಿಲ್ಲವೆಂದರೆ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಇವತ್ತು ವರಮಹಾಲಕ್ಷ್ಮಿ ಹಬ್ಬದ ದಿವಸ demands ಅನ್ನು pass ಮಾಡಿಬಿಟ್ಟರೆ ದುಡ್ಡು ಏನಾದರೂ ಉಕ್ಕಿಬಿಡುತ್ತದೆಯೇ? ತಾವು ಆ ವಿಚಾರಕ್ಕಾದರೂ ಅಂಟುಬಿದ್ದಿದ್ದೀರಾ? ಎಂದು ನನಗಂತೂ ಅರ್ಥವಾಗಲಿಲ್ಲ. ಮಾನ್ಯ ಈಶ್ವರಪ್ಪನವರು ಪಟ್ಟು ಹಿಡಿಯುತ್ತಿರುವುದನ್ನು ನೋಡಿದರೆ ಇವತ್ತೇ demands pass ಆಗಬೇಕೆಂದು ಏನಾದರೂ ಇದೆಯಾ? ದಯಮಾಡಿ ಆ ರೀತಿಯಾಗಿ ಹೋಗಬೇಡಿ. ಬಹುಶ: ಈ ರಾಜ್ಯದ ಜನರು ತೆರಿಗೆಯನ್ನು

ಕೊಡದೇ ಇದ್ದರೆ ಕೇಂದ್ರ ಸರ್ಕಾರಕ್ಕೆ ನಾವು ಹೋಗಿ ಹಣವನ್ನು ತರದೇ ಇದ್ದರೆ ಇದ್ಯಾವುದೂ ಆಗುವುದಿಲ್ಲ. ವರಮಹಾಲಕ್ಷ್ಮಿ ಹಬ್ಬವನ್ನು ಮಾಡಿದರೆಷ್ಟು ಪೂಜೆ ಮಾಡಿದರೆಷ್ಟು, ಬಿಟ್ಟರೆಷ್ಟು? ಅದು ಬಹುತೇಕ ಪೂಜೆ ಇರುವಂತಹದ್ದು ಹೆಣ್ಣು ಮಕ್ಕಳಿಗೆ. ಅವರು ಪೂಜೆಯನ್ನು ಮಾಡಿಕೊಳ್ಳುತ್ತಾರೆ. ಅದಕ್ಕೆ ನಾವು ಜೋತು ಬೀಳುವುದು ಬೇಡ. ದಯಮಾಡಿ ಮಾನ್ಯ ಅಧ್ಯಕ್ಷರೆ, ಎಲ್ಲೋ ಒಂದು ಕಡೆ ಕೆಲವು ವಿಚಾರಗಳ ಬಗ್ಗೆ ಚರ್ಚೆಯನ್ನು ಮಾಡೋಣ. ಈಗ ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್ ರವರು ಬೇಡಿಕೆಗಳ ಬಗ್ಗೆ ಸುಮಾರು 20 ಜನ ಮಾತನಾಡಿದ್ದಾರೆ ಎಂದು ಹೇಳಿದರು. ಅವರು ಎಷ್ಟೆಷ್ಟು ನಿಮಿಷ ಮಾತನಾಡಿದ್ದಾರೆ? 5–5 ನಿಮಿಷ, 2–2 ಮಾತನಾಡಿದ್ದಾರೆ.

ಅಧ್ಯಕ್ಷರು : – ಆ ತರಹ ಏನೂ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : – ಆಗಿದೆ. ಕೊನೆ ಕೊನೆಯಲ್ಲಿ ಮಾತನಾಡಿದ್ದಾರೆ.

ಅಧ್ಯಕ್ಷರು : – ಆ ತರಹ ಇಲ್ಲ. 2 ನಿಮಿಷ, 5 ನಿಮಿಷ ಎಂದು ಇಲ್ಲ. ಶ್ರೀ ಕಿಮ್ಮನೆ ರತ್ನಾಕರ್‌ರವರು ಒಂದು ಗಂಟೆಗಳ ಕಾಲ ಮಾತನಾಡಿದ್ದಾರೆ. ಶ್ರೀ ತುಕರಾಮ್‌ರವರು 21 ನಿಮಿಷ ಮಾತನಾಡಿದ್ದಾರೆ. ಶ್ರೀ ಯು.ಟಿ.ಖಾದರ್‌ರವರು 30 ನಿಮಿಷ ಮಾತನಾಡಿದ್ದಾರೆ. ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು 90 ನಿಮಿಷಗಳ ಕಾಲ ಮಾತನಾಡಿದ್ದಾರೆ. ಶ್ರೀ ಗೋಪಾಲ ಭಂಡಾರಿಯವರು 15 ನಿಮಿಷ ಮಾತನಾಡಿದ್ದಾರೆ. ಶ್ರೀ ನೆ.ಲ.ನರೇಂದ್ರಬಾಬುರವರು 25 ನಿಮಿಷ ಮಾತನಾಡಿದ್ದಾರೆ. ಶ್ರೀ ಈಶ್ವರ ಭೀಮಣ್ಣ ಖಂಡ್ರೆಯವರು 20 ನಿಮಿಷ ಮಾತನಾಡಿದ್ದಾರೆ. ಡಾ:ಎ.ಬಿ.ಮಾಲಕ–ರೆಡ್ಡಿಯವರು 1 ಗಂಟೆ 20 ನಿಮಿಷ ಮಾತನಾಡಿದ್ದಾರೆ. ಶ್ರೀ ಎನ್.ಎ.ಹ್ಯಾರೀಸ್‌ರವರು 30 ನಿಮಿಷ ಮಾತನಾಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : – ಇದರಿಂದ ಸರ್ಕಾರಕ್ಕೆ ಸಹಾಯವಾಗಿದೆಯಲ್ಲವೇ?

ಅಧ್ಯಕ್ಷರು : – ಅದರ ಬಗ್ಗೆ ನನ್ನದೇನೂ dispute ಇಲ್ಲ. ಸಮಯ ಎಲ್ಲರಿಗೂ 5 ಮತ್ತು 10 ನಿಮಿಷ ಎಂದು ಕೊಟ್ಟಿರುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : – ಅನುಭವ ಇರುವಂತಹವರು ಮಾತನಾಡಿದ್ದಾರೆ.ಅವರು ಸರ್ಕಾರಕ್ಕೆ ಸಲಹೆ ಹಾಗೂ ಸಹಾಯವನ್ನು ಹಾಗೂ

ಸೂಚನೆಯನ್ನು ಕೊಡುವವರು ಮಾತನಾಡಿದ್ದಾರೆ. ಅವರು ಹೆಚ್ಚು ಮಾತನಾಡಿದಾಗ ಇದರಿಂದ ಸರ್ಕಾರಕ್ಕೆ ಹೆಚ್ಚಿನ ಸಹಾಯವಾಗುತ್ತದೆ. ಈ ಸದನವು 98 ದಿವಸಗಳ ಕಾಲ ನಡೆದಿರುವ ಬಗ್ಗೆ ನಾವು ನೋಡಿದ್ದೇವೆ. ಈಗ ನಾವು ಇಡೀ 5 ವರ್ಷದಲ್ಲಿ 4 ವರ್ಷ ತುಂಬಿ 5 ವರ್ಷದಲ್ಲಿ ಇಡೀ ದಿವಸ ತೆಗೆದುಕೊಂಡರು 125 ದಿವಸಗಳ ಕಾಲ ಸದನವು ನಡೆದಿರುವುದಿಲ್ಲ. ನೀವು ವರ್ಷಕ್ಕೆ 60 ದಿವಸಗಳ ಕಾಲ ಅಧಿವೇಶನವನ್ನು ನಡೆಸುತ್ತೇವೆಂದು ಕಾನೂನನ್ನು ಮಾಡುತ್ತೀರಿ. ನಮ್ಮ ನಿಯಮಾವಳಿಯಲ್ಲಿ 15 ದಿವಸಗಳ ಕಾಲ demands ಮೇಲೆ ಚರ್ಚೆ ಮಾಡಬೇಕೆಂದು ಇದ್ದಾಗಲೂ ಕೂಡ ನಾವು ಇದನ್ನು ಮೀರಿ ಏನು ಕೇಳಿದ್ದೇವೆ ಅದೇನು ದೊಡ್ಡದೇನೂ ಅಲ್ಲ. ಸರ್ಕಾರವು 30 ನೇ ತಾರೀಖಿನ ದಿವಸ ರಿಪ್ಲೈ ಕೊಡಿ ಎಂದು ಒಂದೇ ದಿವಸ ಕೇಳುತ್ತಿದ್ದೇವೆ. ತಾವು prestige ಆಗಿ ನಿಲ್ಲುವುದಕ್ಕೆ ಹೋಗಬೇಡಿ. ದಯಮಾಡಿ ಒಂದು ದಿವಸ ಅವಕಾಶ ಕೊಡಿ. ನಾನು ನಿಜವಾಗಿಯೂ ಹೇಳಬೇಕೆಂದರೆ ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕೆಂದು ನಿಂತಿದ್ದೇನೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವವರಿದ್ದಾರೆ. ಬೇರೆಯವರೂ ಸಹ ಮಾತನಾಡುವವರು ಇದ್ದಾರೆ. ತಾವು ಏತಕ್ಕಾಗಿ discussion ಅನ್ನು curtail ಮಾಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ಅಂತಹ ಪ್ರಮಾದ ಏನಾಗಿದೆ. ಸೋಮವಾರ ಸರ್ಕಾರವು ಉತ್ತರವನ್ನು ಕೊಡಲಿ, ನಾವು ಸೋಮವಾರ ಡಿಮ್ಯಾಂಡ್ಸ್ ಅನ್ನು ಪಾಸು ಮಾಡಿಕೊಡುತ್ತೇವೆ. ನಿಮಗೆ ಏನಾದರೂ ಅನುಮಾನವಿದೆಯೇ, ಏನು ಪಾಸು ಮಾಡಿಕೊಡುತ್ತಾರೋ ಇಲ್ಲವೋ ಕಾಂಗ್ರೆಸ್‌ನವರು ವಿಪ್ ಅನ್ನು ಕೊಟ್ಟಿದ್ದಾರೆ ಎಂದು ಏನಾದರೂ ಮಾನ್ಯ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಕಿವಿಯಲ್ಲಿ ಏನಾದರೂ ಹೇಳಿದ್ದಾರಾ? ನೀವು ಏನೂ ತಿಳಿದುಕೊಳ್ಳಬೇಡಿ. ನೋಡಿ ಯಾವತ್ತೂ ಕೂಡ ಕಾಂಗ್ರೆಸ್ ಪಕ್ಷಕ್ಕೆ ಒಂದು ಇತಿಹಾಸವಿದೆ. ನಾವು ಸುಮಾರು 50–50 ವರ್ಷದಿಂದ ರಾಜ್ಯ ಮತ್ತು ದೇಶದಲ್ಲಿ Finance bills ಗೆ ಯಾವತ್ತೂ ಕೂಡ ವಿರುದ್ಧ ಹೋಗುವಂತಹವರಲ್ಲ ಅದು ನಮ್ಮ ಸಂಪ್ರದಾಯವಾಗಿದೆ. ಸರ್ಕಾರ ನಡೆಯಬೇಕು, ಆ ತರಹ ತೊಂದರೆಗಳು ಬಂದರೆ ಅದು ನಿಮ್ಮಲ್ಲಿ ನಡೆಯಬಹುದೇ ವಿನಃ ನಮ್ಮಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಇಷ್ಟೆಲ್ಲಾ ನಾವು ಹೇಳಿದರೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ ಎಂದರೆ ಏಕೆ

ಮೀನಾಮೇಷ ಎಂದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಸೋಮವಾರ ದಿವಸ reply ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ(ಸಕಲೇಶಪುರ) : ಮಾನ್ಯ ಸಭಾಧ್ಯಕ್ಷರೆ, ನಾನು ಕೂಡ ಈ ಸದನದಲ್ಲಿ 1985ನೇ ಇಸವಿಯಿಂದಲೂ ಸದಸ್ಯನಾಗಿದ್ದೇನೆ. ಬಹುಶ: ಇಲಾಖಾ ವಿತ್ತೀಯ ಕಾರ್ಯಕಲಾಪ ಎಂದರೆ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಎಂದರೆ ಒಂದು ರೀತಿಯ ಹಬ್ಬ ಇದ್ದಹಾಗೆ ಇರುತ್ತಿತ್ತು. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪನವರಿಗೆ ಗೊತ್ತಿದೆ. ಬರೀ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆಗೆ ಈ ಸದನವು ಸುಮಾರು ಒಂದರಿಂದ ಒಂದೂವರೆ ತಿಂಗಳುಗಳ ಕಾಲ ನಡೆದಿದೆ. ಆ ಚರ್ಚೆಯು ನಡೆದ ದಿನ ಇಲಾಖಾ ಸಚಿವರು ರೆಡಿಯಾಗಿ ಬಂದು ಇಲ್ಲಿ ಪ್ರತ್ಯೇಕವಾಗಿ ಉತ್ತರ ಕೊಡುತ್ತಿದ್ದರು. ಆ ದಿನ ಶಾಸಕರುಗಳಿಗೆ ಎಲ್ಲರಿಗೂ ಊಟವನ್ನು ಏರ್ಪಡಿಸುತ್ತಿದ್ದರು. ಮಾನ್ಯ ಕಾನೂನು ಸಚಿವರಿಗೆ ಇವೆಲ್ಲವೂ ಮರೆತು ಹೋಗಿರಬಹುದು. ಅಧಿವೇಶನ ಅಂದರೆ ಹಬ್ಬ ಇದ್ದಹಾಗೆ ಇರುತ್ತಿತ್ತು ಎಂದು ತಮಗೂ ಕೂಡ ಗೊತ್ತಿದೆ. ಇವತ್ತು ಹಬ್ಬವೂ ಇಲ್ಲ, ಏನೂ ಕೂಡ ಇಲ್ಲ. ಎಲ್ಲವೂ 30–40 ಡಿಮ್ಯಾಂಡ್ಸ್‌ಗೆ ಮಾನ್ಯ ಮುಖ್ಯಮಂತ್ರಿಯವರು ಅರ್ಧ ಗಂಟೆಗಳ ಕಾಲ ಉತ್ತರವನ್ನು ಕೊಟ್ಟುಬಿಡುತ್ತಾರೆ. ಅಂದರೆ ಏನೋ ಒಂದು ರೀತಿಯಲ್ಲಿ ಕಾಟಾಚಾರಕ್ಕೆ ಅಧಿವೇಶನವನ್ನು ನಡೆಸುತ್ತೇವೆನ್ನುವಂತಹ ಭಾವನೆ ಸದಸ್ಯರಿಗೂ ಬಂದಿದೆ. ಸಾರ್ವಜನಿಕರಿಗೂ ಮತ್ತು ಎಲ್ಲರಿಗೂ ಬಂದಿದೆ. ತಾವು ಬಿಎಸಿಯಲ್ಲಿ ಈ ತರಹ ತೀರ್ಮಾನವಾಗಿದೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ತಾವು ಕೈಚೆಲ್ಲುವಂತಹ ಮಾತನ್ನು ಹೇಳುತ್ತೀರಿ. ಅನೇಕರು ಅವರ ಅಭಿಪ್ರಾಯಗಳನ್ನು ಹೇಳುತ್ತಾರೆ. ಬಿಎಸಿ ಈ ಸದನಕ್ಕಿಂತ ದೊಡ್ಡದೇನೂ ಅಲ್ಲ. ಬಿಎಸಿಯ ನಿಲುವನ್ನು ತಾವು ಯಾವಾಗ ಬೇಕಾದರೂ change ಮಾಡಬಹುದು. ನಿನ್ನೆ ದಿನ ನಾನು ಕೂಡ ರಾತ್ರಿ 12.00 ಗಂಟೆಯವರೆಗೆ ಸದನದಲ್ಲಿದ್ದೆ. ಮಾನ್ಯ ಸದಸ್ಯರುಗಳು ಮೊದಲನೇ ಬಾರಿ ಗೆದ್ದವರು ಸುಮಾರು ಜನರು ಅಂಕಿ ಅಂಶಗಳ ಸಮೇತ ತುಂಬಾ ಚೆನ್ನಾಗಿ ಮಾತನಾಡಿದರು ನನಗೆ ಬಹಳ ಖುಷಿಯಾಯಿತು. ಎಲ್ಲಾ ಸದಸ್ಯರು ಭಾಗವಹಿಸಬೇಕೆನ್ನುವಂತಹ ಭಾವನೆಯು ಬರುತ್ತಿತ್ತು. ನಾವು ನಮ್ಮ ಪಕ್ಷದಿಂದ ನಾಯಕರಾದಂತಹ ಶ್ರೀ ಹೆಚ್.ಡಿ.ರೇವಣ್ಣನವರು ಮಾತನಾಡಿದ್ದಾರೆ. ನಮ್ಮ ಪಕ್ಷದ ಸುಮಾರು 26 ಜನ

ಸದಸ್ಯರು ಇದ್ದೇವೆ. ನಮಗೂ ಕೂಡ ಮಾತನಾಡಬೇಕೆಂದು ಇದೆ. ಮಾತನಾಡಿದಂತಹ ಸದಸ್ಯರನ್ನು ಬಿಟ್ಟು ಉಳಿದಂತಹ ಸದಸ್ಯರಿಗೆ ಅವರ ಅಭಿಪ್ರಾಯಗಳನ್ನು ಹೇಳುವಂತಹದ್ದು ಇದೆ. ಮಲೆನಾಡಿನ ಭಾಗದಲ್ಲಿ ಏನು ಸಮಸ್ಯೆಗಳು ಇದೆ ಎಂದು ತಮಗೂ ಕೂಡ ಗೊತ್ತಿದೆ. ಆದ್ದರಿಂದ ತಾವು ದಯಮಾಡಿ ಸರ್ಕಾರ ಈ ವಿಷಯದಲ್ಲಿ ಆತುರವನ್ನು ತೋರಬಾರದು. ಏತಕ್ಕಾಗಿ ತಾವು ಅಂಜುತ್ತಿದ್ದೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ. ದಯಮಾಡಿ ಇನ್ನು ಒಂದು ವಾರಗಳ ಕಾಲ ಅಧಿವೇಶನವನ್ನು ಮುಂದಕ್ಕೆ ಹಾಕಿ ನಮ್ಮ ಹಿರಿಯ ನಾಯಕರುಗಳು ಹೇಳಿದ ಹಾಗೆ ಸೋಮವಾರ ಅಥವಾ ಮಂಗಳವಾರ ಮಾಡತಕ್ಕಂತಹ ಕೆಲಸವನ್ನು ಮಾಡಿ. ನಾಳೆಯೂ ಬೇಕಾದರೆ ಅಧಿವೇಶನವನ್ನು ನಡೆಸಿ ಎಲ್ಲವೂ ಸುಸೂತ್ರವಾಗಿ ಚೆನ್ನಾಗಿ ಎಲ್ಲರ ಗಮನಕ್ಕೆ ವಿಷಯವನ್ನು ತರೋಣ. ಚರ್ಚೆ ಮುಖಾಂತರ ಎಲ್ಲವನ್ನು ನಾವು ಬಗೆಹರಿಸಿಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ತಾವು ರೂಲ್ 178 ಅನ್ನು ನೋಡಿದ್ದೀರಿ. ಅದನ್ನು ತಾವು ಪಾಲನೆ ಮಾಡಬೇಕೋ ಅಥವಾ ಬೇಡವೋ ಸ್ವಾಮಿ. ಅದನ್ನು ತಾವೇ ಮಾಡಬೇಕಾಗಿದೆ. ಬೇಡಿಕೆಗಳ ಮೇಲೆ ಸುಮಾರು 20 ಜನ ಮಾತನಾಡಿದ್ದಾರೆನ್ನುವಂತಹ ಮಾತನ್ನು ಮಾನ್ಯ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಹೇಳಿದ್ದಾರೆ. ಎಲ್ಲಾ ಇಲಾಖೆಗಳ ಮೇಲೆ 20 ಜನ ಮಾತನಾಡಿದ್ದಾರೆ. ಎಲ್ಲಾ ಇಲಾಖೆಗಳಿಗೆ ಅವರು ಮಾತನಾಡಿರುವ ಬಗ್ಗೆ divide ಮಾಡಿದರೆ ಒಬ್ಬೊಬ್ಬರಿಗೆ ಎಷ್ಟು ನಿಮಿಷ ಬರುತ್ತದೆ ಅಂದರೆ ಒಂದೊಂದು ಇಲಾಖೆಗೆ ಅರ್ಧ ನಿಮಿಷ, 1–1 ನಿಮಿಷ ಬರುತ್ತದೆ. ಇಷ್ಟು ಇಲಾಖೆಗಳ ಬಗ್ಗೆ ಒಟ್ಟಿಗೆ ಮತಕ್ಕೆ ಹಾಕಿದರೆ ಏನು each demand ಬಗ್ಗೆ ಚರ್ಚೆಯಾಗಿದೆಯೇ? ಎಲ್ಲಾ demand ಗಳು ಕೂಡ ಎಲ್ಲಾ subject ಗಳನ್ನು ಇಲ್ಲಿ ಮತಕ್ಕೆ ಹಾಕಿ ಮಾತನಾಡಿ ಅಂದರೆ ಹೇಗೆ ಆಗುತ್ತದೆ? ಈ ಬಗ್ಗೆ ಅವರು ಉತ್ತರವನ್ನು ಕೊಡಲಿ. ನೀವು ನಮಗೆಲ್ಲರಿಗೂ performance budget ಅನ್ನು ಕೊಡಿಸಿದ್ದೀರಾ? ನಿಮ್ಮ secretariat ನವರು ಹೇಳಲಿ. ಅವೆಲ್ಲವೂ ಬಂದಿದೆಯಾ? ಇಲ್ಲಿಗೆ ಎಷ್ಟು ಬಂದಿದೆ, ಎಷ್ಟು ಬಂದಿಲ್ಲವೆಂದು ಹೇಳಿ ಸ್ವಾಮಿ.

Does it amount to irresponsible attitude of the government? ಏಕೆ ಕೊಡುವುದಿಲ್ಲ? ಯಾವ ಇಲಾಖೆಯವರು ಕೊಟ್ಟಿಲ್ಲ? ಅವರ ಮಂತ್ರಿಗಳು

ಇಲ್ಲಿ ಏತಕ್ಕಾಗಿ ಇರಬೇಕು? ಅವರ ಇಲಾಖೆಯಲ್ಲಿ ಅವರು performance budget ಅನ್ನು ಕೊಡಿಸುವುದಕ್ಕೆ ಆಗದೆ ಇದ್ದರೆ ಅವರು ಮಂತ್ರಿಗಳಾಗಿ ಏನು ಕೆಲಸವನ್ನು ಮಾಡುತ್ತಾರೆ? ಅವರ ಅಧಿಕಾರಿಗಳು ಅವರ ಮಾತನ್ನು ಕೇಳುತ್ತಾರೆಯೇ ಅಥವಾ ಇಲ್ಲವೋ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈಗ ನಮಗೆ ಒಂದು ವರದಿಯನ್ನು ಕೊಡಿ. ಎಷ್ಟು ಕೊಟ್ಟಿದ್ದೀರಿ, ಎಷ್ಟು ಕೊಟ್ಟಿಲ್ಲ ಕೊಡದೇ ಇದ್ದರೆ ಏತಕ್ಕಾಗಿ ಕೊಟ್ಟಿಲ್ಲ? ಯಾವ ಮಂತ್ರಿಯವರು ಯಾವ ಇಲಾಖೆಯನ್ನು ಕೊಟ್ಟಿರುವುದಿಲ್ಲ? ಅಧಿಕಾರಿಗಳು ಏನು ಮಾಡುತ್ತಿದ್ದರು? Why they have not furnished? What action they have taken? Is it the way of the running the government? Can you call this the government? ಅಲ್ಲಿ governance ಇದೆ ಎಂದು ಕರೆಯಬೇಕೇ? ಆಡಳಿತವು ನಡೆಯುತ್ತಿದೆ ಎಂದು ಕರೆಯಬೇಕೇ? Secretary ಗಳು ಏನು ಮಾಡುತ್ತಿದ್ದಾರೆ? Head of the Departments ಏನು ಮಾಡುತ್ತಿದಾರೆ? ಅವರಿಗೆ ಇದಕ್ಕಿಂತ ದೊಡ್ಡ ಕೆಲಸ ಯಾವುದು ಇದೆ? Not only government, government means the ministers and civil servants both are answerable and accountable to this House, not only ministers. They are eligible to make a statement of the floor of the House. But officers, all the Civil servants are also responsible to this house. ಅವರು ಯಾವುದನ್ನೂ ಮಾಡುವುದಿಲ್ಲ. ನಾನು ನಿಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 20 ಜನರು ಮಾತನಾಡಿದ್ದಾರೆ, ಅಲ್ಲಿ 5 ಜನ ಮಾತನಾಡಿದ್ದಾರೆ. ಇವು ಯಾವುದೂ ಕಾರಣವಲ್ಲ, ಒಂದೊಂದು ಇಲಾಖೆಯ ಬೇಡಿಕೆಯ ಬಗ್ಗೆ ಸುಮಾರು 20 ಜನರು ಮಾತನಾಡುತ್ತಿದ್ದರು. ಇಲ್ಲಿ ಈ ಹಿಂದೆ ಮಾಜಿ ಸಚಿವರಾದ ಶ್ರೀ ಭೈರೇಗೌಡರು Agriculture Minister ಆಗಿದ್ದರು. ಆಗ ನಾನು Finance Minister ಆಗಿದ್ದೆ, He has given reply on his own, He has given 5 hours reply only on agriculture. ಬೇಕಾದರೆ ರೆಕಾರ್ಡ್ ಇದೆ. ತಾವು ತೆಗೆದುಕೊಂಡು ನೋಡಬಹುದು. ನಾಲ್ಕೂವರೆ ಗಂಟೆ ಅಥವಾ ಐದು ಗಂಟೆ

ಭೈರೇಗೌಡರು ಒಬ್ಬರೇ ಉತ್ತರ ಕೊಟ್ಟಿದ್ದಾರೆ. ಜ್ಞಾಪಕವಿರಬೇಕು, ಬಹುಶ: 1994–99, ಆ ಅವಧಿಯಲ್ಲಿ ಎಂದೆನಿಸುತ್ತದೆ. Five hours only on agriculture ಬಚ್ಚೇಗೌಡರಿಗೆ ಜ್ಞಾಪಕವಿರಬೇಕು. ಸುರೇಶ್ ಕುಮಾರ್‌ರವರು ಇದ್ದರು. ಹಾಗೆಂದು ಹೇಳಿಬಿಡುವುದೆ? ನಾವ್ಯಾರೂ ಮಂತ್ರಿಗಳು ಉತ್ತರ ಕೊಡುವುದಿಲ್ಲ. Chief Minister ಉತ್ತರ ಕೊಡುವುದಿಲ್ಲ ಎನ್ನಬಹುದೆ? That is not the defence. ಆ ರೀತಿ protection ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಮೂರು ವರ್ಷ Animal Husbandry Department Minister ಆಗಿದ್ದಾಗ ಎಷ್ಟು ಸಾರಿ ಉತ್ತರ ಕೊಟ್ಟಿದ್ದೇವೆ, ನೋಡಿ, ನಾವೆಲ್ಲಾ ಉತ್ತರ ಕೊಡುತ್ತಿದ್ದೆವು. ಈಗ ಈ ಕೆಟ್ಟ ಚಾಳಿ ಬಂದು ಬಿಟ್ಟದೆ. ಈ ವರ್ಷ ಕೊನೆಗೆ ಬಂದಿದ್ದೇವೆ. ನಾವು ಮುಂದೆಯಾದರೂ ಇದನ್ನು ಕೂಡ ಚರ್ಚೆ ಮಾಡೇಕಲ್ಲವೇ? ಈ ರೀತಿ ಮುಂದುವರೆಸುವುದಾದರೆ ನಾವು ಅಸೆಂಬ್ಲಿಗೆ ಏಕೆ ಬರಬೇಕು? ಅಸೆಂಬ್ಲಿ ಏಕೆ ನಡೆಸಬೇಕು? ಈ development ಇದೆಯಲ್ಲಾ ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. Parliament system of Governmentಗೆ ಅಪಾಯಕಾರಿ. ನಾವು ಇರುತ್ತೇವೆಯೋ, ಅವರು ಇರುತ್ತಾರೋ, it is different. ಪ್ರಜಾಪ್ರಭೂತ್ವದಲ್ಲಿ ಬರುತ್ತಾರೆ, ಹೋಗುತ್ತಾರೆ ಅದನ್ನು ಜನ ತೀರ್ಮಾನ ಮಾಡುತ್ತಾರೆ. ಆದರೆ ಪ್ರಜಾಪ್ರಭುತ್ವ ಉಳಿಯಬೇಕು. Parliament system of Government survive ಆಗಬೇಕು. ಅದರ ಉಳಿವಿಗೋಸ್ಕರ ನಾವೆಲ್ಲಾ ಶ್ರಮ ಪಡಬೇಕು. ಅದರಿಂದ ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳಲ್ಲಿ ನಿಮ್ಮ ಮೂಲಕ ಹೇಳುತ್ತೇನೆ. ನೀವು ಇವತ್ತೇ ಉತ್ತರ ಕೊಡಬೇಕೆಂಬ ಹಠಕ್ಕೆ ಬೀಳದೆ ಚರ್ಚೆ ಪ್ರಾರಂಭ ಮಾಡೋಣ. ಮುಗಿದರೆ ಸಂಜೆ ಉತ್ತರ ಕೊಡಲಿ. ಮುಗಿಯಲಿಲ್ಲ ಎಂದರೆ ಸೋಮವಾರ ಬೆಳಿಗ್ಗೆ ಬಂದ ತಕ್ಷಣ ಉತ್ತರ ಕೊಡಲಿ. ಹಾಗಾಗಿ ನೀವು ಆ ರೀತಿ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ. ಅವರೇನು ಮಾಡುತ್ತಾರೋ ಮಾಡಿಕೊಂಡು ಹೋಗಲಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹಲವಾರು

ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆ ಮಾನ್ಯ ಸುರೇಶ್‌ಕುಮಾರ್‌ರವರು ಈಗಾಗಲೇ ಸರಿಯಾದಂಥ ಮಾಹಿತಿಗಳನ್ನು ಕೊಟ್ಟಿದ್ದಾರೆ. 60 ದಿವಸಗಳ ಅಧಿವೇಶನ ನಡೆಯಬೇಕೆನ್ನುವುದನ್ನು ನಾವೆಲ್ಲಾ ಒಪ್ಪಿಕೊಂಡು ಬಂದಂಥ ಸಂಗತಿ. ಆದರೆ ಕಳೆದ ಹಲವಾರು ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದ 60 ದಿವಸಗಳ ಕಾಲ ಅಧಿವೇಶನ ನಡೆಯುತ್ತಿಲ್ಲವೆಂದು ನಮಗೂ ನಿಮಗೂ ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕಾಗಿ ಏನು ಪ್ರಯತ್ನವನ್ನು ಮಾಡಬೇಕು, ಆ ಪ್ರಯತ್ನವನ್ನು ನಾವು ಪ್ರಾಮಾಣಿಕವಾಗಿ ಮಾಡುವಂಥ ಪ್ರಯತ್ನ ಮಾಡುತ್ತೇವೆ. ಒಂದು ಮಾತು ಈ ಅಧಿವೇಶನ 16ನೇ ತಾರೀಖು ಪ್ರಾರಂಭವಾಗಬೇಕಾಗಿತ್ತು. ಆದರೆ 19 ನೇ ತಾರೀಖು ಪ್ರಾರಂಭವಾಯಿತು. ಮೊದಲನೆ ದಿವಸ ನಾವು ಬಿಎಸಿ ಮೀಟಿಂಗ್ ಕರೆದಂಥ ಸಂದರ್ಭದಲ್ಲಿ ಸಹ ಇದರ ಬಗ್ಗೆ ಎಲ್ಲವನ್ನೂ ಅಂದು ಚರ್ಚೆ ಮಾಡಿದ್ದೆವು. ಬಜೆಟ್ ಬಗ್ಗೆ ಎಷ್ಟು ಮಾತನಾಡಬೇಕು, ಎಷ್ಟು ಅವಧಿ ಕೊಡಬೇಕು ಎಂದು ಚರ್ಚೆಯಾಗಿತ್ತು. ಬರಗಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಬಂತು. ಅದು ಬಹಳ ಮಹತ್ವದ ವಿಷಯ. ಅದಕ್ಕಾಗಿ ಆ ವಿಷಯ ಮಾತನಾಡಬಾರದು, ಅದಕ್ಕೆ ಅಷ್ಟು ಸಮಯ ಕೊಡಬಾರದು ಎಂದು ನಾನೇನು ಹೇಳುವುದಿಲ್ಲ. ಹಾಗಾಗಿ ಸಾಕಷ್ಟು ಶಾಸಕರು ಅದರಲ್ಲಿ ಭಾಗವಹಿಸಿದರು. ಸರ್ಕಾರ ಕೂಡ ಅದಕ್ಕೆ response ಕೊಟ್ಟಿತು. ಈಗಾಗಲೇ ಮುಖ್ಯವಾದಂಥ ಕೆಲವು ನಿರ್ಣಯಗಳನ್ನು ಕೈಗೊಂಡಿದ್ದೇವೆ. ಸಾಲ ಮನ್ನಾ ಮಾಡುವಂಥ ವಿಚಾರ. ಅದನ್ನು ಸಹ ಇದರಲ್ಲಿ ಘೋಷಣೆ ಮಾಡಿದೆವು. ಹೀಗಾಗಿ ರೈತರ ನೆರವಿಗೆ ಏನು ಮಾಡಬೇಕೆಂಬ ಬಗ್ಗೆ ನಾವು ಈಗಾಗಲೇ ಘೋಷಣೆಯನ್ನು ಮಾಡಿದ್ದೇವೆ. ಬಜೆಟ್ ಬಗ್ಗ ಮಾನ್ಯ ಸಿದ್ದರಾಮಯ್ಯನವರು ಹಿಂದೆ ಐದಾರು ಬಜೆಟ್‌ಗಳನ್ನು ಮಂಡನೆ ಮಾಡಿದಂಥವರು 7 ಬಜೆಟ್‌ಗಳನ್ನು ಮಂಡನೆ ಮಾಡಿದಂಥವರು. ಹಾಗಾಗಿ ಅವರು ಹಣಕಾಸು ವಿಚಾರದಲ್ಲಿ ಬಹಳಷ್ಟು ಅನುಭವವಿರುವಂಥ ವ್ಯಕ್ತಿ ಸಿದ್ದರಾಮಯ್ಯನವರು. ಅವರಿಗೆ ಬಹಳಷ್ಟು ಮಾಹಿತಿ ತೆಗೆದುಕೊಳ್ಳಬೇಕೆನ್ನುವುದು ಏನೂ ಬೇಕಾಗಿಲ್ಲ. ನಿನ್ನೆ ರಾತ್ರಿ ಒಂದು ಗಂಟೆಯಾದರೂ ಕುಳಿತು ಬಹಳ ಜನ ಶಾಸಕರು ಮಾತನಾಡಲಿಕ್ಕೆ ಅವಕಾಶ ಕೊಡಲಾಗಿದೆ. ಮಾನ್ಯ ಸಭಾಧ್ಯಕ್ಷರು,

ತಾವೂ ಸಹ ತಾಳ್ಮೆಯನ್ನು ತೆಗೆದುಕೊಂಡು ರಾತ್ರಿ ಒಂದು ಗಂಟೆಯವರೆಗೂ ಕುಳಿತುಕೊಂಡು ತಾವು ಯಾರ್‍ಯಾರಿಗೆ ಅವಕಾಶವನ್ನು ಕೊಡಬೇಕೆಂಬ ಬಗ್ಗೆ ನೋಡಿ ಅವಕಾಶವನ್ನು ಕೊಟ್ಟಿದ್ದೀರಿ. ಹೀಗಾಗಿ ಇವತ್ತು ಸಮಗ್ರವಾಗಿ ಚರ್ಚೆಯಾಗಿದೆ. General Budjet, Annual Reports ಬಹಳ ಮುಖ್ಯವಾದುದು ಬಹಳಷ್ಟು ಇಲಾಖೆಗಳದ್ದು, ನಾವು ಈಗಾಗಲೇ submit ಮಾಡಿದ್ದೇವೆ. ಹೀಗಾಗಿ ಅದರ ಎಲ್ಲಾ ಮಾಹಿತಿ ಇದೆ. ಆ ದೃಷ್ಟಿಯಿಂದ ಬಿಎಸಿ ಮೀಟಿಂಗ್‌ನಲ್ಲೇನು ನಿರ್ಧಾರವಾಗಿದೆ, ಆ ರೀತಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ಎಲ್ಲವೂ ಬಜೆಟ್ ಮೇಲೆ ಚರ್ಚೆ ಮುಗಿದು ಇವತ್ತು ಬೆಳಿಗ್ಗೆ ನಾನು ಉತ್ತರ ಕೊಡಬೇಕಾಗಿತ್ತು. ಇಲ್ಲಿಂದ ಮತ್ತೇ ಕೌನ್ಸಿಲ್‌ಗೆ ಹೋಗಬೇಕು. ಏಕೆ urgent ಮಾಡುತ್ತೀರಿ? 30, 31 ನೇ ತಾರೀಖು ಇದೆ ಎಂದು ಕೇಳಿದ್ದೀರಿ. ಯಾವುದೇ ತಾಂತ್ರಿಕ ಕಾರಣಗಳು ನಾಳೆ ಆಗಬಾರದು. ಏಕೆಂದರೆ ಇದು ನಾಳೆ ಕೌನ್ಸಿಲ್‌ನಲ್ಲಿ ಪಾಸ್ ಆಗಿ ಗೌರ್ನರ್‌ರವರಿಗೆ ಹೋಗಿ ಅವರಿಂದ ಅಪ್ರೂವಲ್ ತೆಗೆದುಕೊಂಡು 1ನೇ ತಾರೀಖಿನಿಂದ ಎಲ್ಲಾ process start ಆಗಬೇಕು. ಹೀಗಾಗಿ ಇದಕ್ಕೆಲ್ಲಾ ಸಮಯ ಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು 27ನೇ ತಾರೀಖು ಬೆಳಿಗ್ಗೆ ಉತ್ತರ, ಮತ್ತೆ ಅದಕ್ಕೆ ಸ್ಪಷ್ಟೀಕರಣ ಕೇಳುವಂಥದ್ದು. ಇಲ್ಲಿಂದ ಮುಂದೆ ಕೌನ್ಸಿಲ್‌ಗೆ ಹೋಗುವಂಥದ್ದು ಇವೆಲ್ಲಾ procedure ಇದೆ. ಮೊನ್ನೆ ಬಿಎಸಿ ಮೀಟಿಂಗ್‌ನಲ್ಲಿ ಎಲ್ಲರೂ ಕುಳಿತುಕೊಂಡು ನಿರ್ಣಯ ಕೈಗೊಳ್ಳುವಂಥದ್ದು ಆಗಿದೆ. ಆ ದೃಷ್ಟಿಯಿಂದ ಇವತ್ತು ಸಿದ್ದರಾಮಯ್ಯನವರು ಪ್ರತಿಪಕ್ಷದ ನಾಯಕರು ಅವರು ಮಾತನಾಡಲಿಕ್ಕೆ ಹಕ್ಕಿದೆ. ಅವರು ಮೊದಲೇ ಮಾತನಾಡಿದ್ದರೆ ನಾವು ಇನ್ನೂ ಹೆಚ್ಚು ತಿಳಿದುಕೊಳ್ಳಬಹುದಿತ್ತು.

ಶ್ರೀ ಸಿದ್ದರಾಮಯ್ಯ :- ಹಿಂದೆ ಇರುವವರೆಲ್ಲಾ ಮಾತನಾಡಲಿ ಎಂದು ನಾನು ಮಾತನಾಡಲಿಲ್ಲ. General Budget ಮಾತ್ರ Leader of the opposition ಮಾತನಾಡಬೇಕು. ಇನ್ನು ಬಾಕಿ ವಿಚಾರಗಳಲ್ಲಿ ಯಾರಾದರೂ ಮಾತನಾಡಬಹುದು.

ಶ್ರೀ ಜಗದೀಶ್ ಶೆಟ್ಟರ್ :- ಇರಲಿ, ತಾವು ಮೊದಲೇ ಮಾತನಾಡಿದ್ದರೆ ನಿಮ್ಮ ವಿಚಾರಗಳಿಗೆ ಹೆಚ್ಚು ಸ್ಪಷ್ಟವಾಗಿ ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತಿತ್ತು.

ನೀವು ಯಾವಾಗ ಮಾತನಾಡಬೇಕೆಂಬ ಬಗ್ಗೆ ನಿಮಗೆ ಹಕ್ಕಿದೆ. ನೀವು ಯಾವಾಗಲಾದರೂ, ಕೊನೆಗೂ ಮಾತನಾಡಬಹುದು. ದಯವಿಟ್ಟು ನೀವು ಮಾತನಾಡಬೇಕು. ನಿಮ್ಮ ವಿಚಾರಗಳನ್ನು ನಮಗೆ ತಿಳಿಸಬೇಕು. ಅದರಿಂದ ನಮಗೆ ಇನ್ನೂ ಹೆಚ್ಚು enlighten ಆಗುತ್ತದೆ. ನಾವು ಇನ್ನೂ ಹೆಚ್ಚು ಉತ್ತಮವಾದಂಥ ಬಜೆಟ್ ಅನ್ನು ಕೊಡಲಿಕ್ಕೆ ಮತ್ತು ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ, ಈಗ ಮಾತನಾಡಬೇಕೋ ಬೇಡವೋ ಎಂದು ಚರ್ಚೆ ಮಾಡಲಿಕ್ಕೆ ಒಂದು ಗಂಟೆಯಾಗಿ ಹೋಯಿತು. 10.00 ರಿಂದ 11.00 ಗಂಟೆವರೆಗೆ ಸಮಯ ಆಯಿತು. ನೀವು ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಹಾಗಾಗಿ ದಯವಿಟ್ಟು ಸಹಕಾರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಪ್ರತಿ ಪಕ್ಷದ ನಾಯಕರಲ್ಲಿ ಮತ್ತು ಎಲ್ಲಾ ಶಾಸಕರಲ್ಲಿ ವಿನಂತಿ ಮಾಡುತ್ತೇನೆ. ದಯವಿಟ್ಟು ಸಹಕಾರ ಕೊಡಿ. ಇವತ್ತು ತಾವೆಲ್ಲಾ ಮಾತನಾಡಿ. ನಾವು ಉತ್ತರ ಕೊಡುತ್ತೇನೆ. ಮುಂದೆ ಇದನ್ನು ಕೌನ್ಸಿಲ್‌ಗೆ ತೆಗೆದುಕೊಂಡು ಹೋಗೋಣ. ಅದಕ್ಕೆ ಮತ್ತೊಮ್ಮೆ ತಮ್ಮ ಸಹಕಾರ ನೀಡುವಂತೆ ವಿನಂತಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, 2011–12 ನೇ ಸಾಲಿನ ಇಲಾಖಾ ವಾರ್ಷಿಕ ವರದಿಗಳು ಮತ್ತು 2011–12 ನೇ ಸಾಲಿನ ನಿರ್ವಹಣಾ ಮುಂಗಡ ಪತ್ರಗಳು, ವರದಿಗಳು ಬಂದಿರುವುದಿಲ್ಲ. ಇದು ನಿಮಗೂ ಗೊತ್ತಾಗಿದೆ. ಹಾಗಾದರೆ ಇದನ್ನು ಹೇಗೆ ಚರ್ಚೆ ಮಾಡುವುದು ಸ್ವಾಮಿ? ಇದನ್ನು ನೋಡಿಕೊಂಡು ಕುಳಿತುಕೊಳ್ಳಬೇಕೆ? ನಾನು ಮೂರು ಸಾರಿ ಈ ಬಗ್ಗೆ ಪ್ರಸ್ತಾಪ ಮಾಡಿದೆ. ಬಂದಿಲ್ಲ, ಕೊಡಿಸಿ ಎಂದು ಕೇಳಿದೆ. ಇನ್ನೂ ಈ ಘಳಿಗೆಯವರೆಗೆ ಕೊಟ್ಟಿಲ್ಲ. ನೋಡಿ ಯಾವ್ಯಾವ ಇಲಾಖೆಗಳೆಂದರೆ, ಕಾನೂನು ಮತ್ತು ಮಾನವ ಹಕ್ಕುಗಳು, ಯುವಜನ ಸೇವೆ, ಪ್ರಾಥಮಿಕ ಶಿಕ್ಷಣ, ಕಾರಾಗೃಹ, ಆರ್‌ಡಿಪಿಆರ್, ಸಣ್ಣ ನೀರಾವರಿ, ಕಾರ್ಮಿಕ, ಸಮಾಜ ಕಲ್ಯಾಣ, ವಾಣಿಜ್ಯ ಮತ್ತು ಕೈಗಾರಿಕೆ, ಅರಣ್ಯ ಮತ್ತು ಪೋಲೀಸ್ ಇಲಾಖೆ, ನೋಡಿ ಎಷ್ಟು ಇಲಾಖೆಗಳಿವೆ. ವಾರ್ಷಿಕ ವರದಿಗಳು ಬಾರದಿರುವುದು 8 ಇಲಾಖೆಗಳು, ನಿರ್ವಹಣಾ ವರದಿಗಳು

ಬಾರದಿರುವುದು 13 ಇಲಾಖೆಗಳು. ಇದು ನನ್ನದಲ್ಲ. ಇವತ್ತು ನೀವೇ ಕೊಟ್ಟಿರುವ ವರದಿಯಿದು. ನೋಡಿ, Legislature ನವರು ತಯಾರು ಮಾಡಿಕೊಟ್ಟಿರುವಂಥ ವರದಿ. ಇದು ಸುಳ್ಳು ಎನ್ನುವಿರಾ? ನಾನು ಸುಳ್ಳು ಹೇಳುತ್ತಿದ್ದೇನೆಯೇ? ಇದನ್ನು ನೋಡಿ, ಓಂಪ್ರಕಾಶ್ ಕೊಡಿ ಅವರಿಗೆ ನೋಡಲಿ.

ಶ್ರೀ ಜಗದೀಶ್ ಶೆಟ್ಟರ್ : – ನಾವೇ ಕೊಡಿಸಿರುವುದು ನಿಮಗೆ. ಬಾರದಿರುವ ಬಗ್ಗೆ ನಾವೇ ನಿಮಗೆ ಲಿಸ್ಟ್ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ : – ಸುಮಾರು 19 ಇಲಾಖೆಳದ್ದು ಬಂದಿಲ್ಲ. 8 ಇಲಾಖೆಗಳಲ್ಲಿ ವಾರ್ಷಿಕ ವರದಿ ಬಂದಿಲ್ಲ. 13 ಇಲಾಖೆಗಳಲ್ಲಿ Performance Budget ಬಂದಿಲ್ಲ. ನಮಗೆ ಹೇಗೆ ಮಾಹಿತಿ ಸಿಗುತ್ತದೆ? ನಾನು ಯಾವ ಆಧಾರದ ಮೇಲೆ ಮಾತನಾಡಲಿ? ಹೇಳಿ ನೋಡೋಣ. This is the only information you have to furnish. ಇಲ್ಲಿ ಅಸೆಂಬ್ಲಿಗೆ ಕೊಡಬೇಕು. ಇಲ್ಲದಿದ್ದರೆ ನಾವು ಯಾವ ಆಧಾರದ ಮೇಲೆ ಮಾತನಾಡಬೇಕು? ಒಂದೊಂದು ಇಲಾಖೆಗೆ ಎರಡೆರಡು ವರದಿಗಳನ್ನು ಕೊಡಬೇಕು, ಒಂದು ಆಡಳಿತ ವರದಿ ವಾರ್ಷಿಕ ವರದಿ ಮತ್ತೊಂದು ನಿರ್ವಹಣಾ ವರದಿ ಕೊಟ್ಟಿಲ್ಲ. ನೋಡಿ ನೀವೇ ಹೇಳಿ, ಅದರಿಂದ ನಾವು ಬರಗಾಲ ಬಹಳ ತೀವ್ರವಾದುದು. ಇವರು 142 ತಾಲ್ಲೂಕುಗಳೆಂದು declare ಮಾಡಿದ್ದಾರೆ. ಅದು ಮೂರು ದಿನ ಚರ್ಚೆಯಾಗುತ್ತದೆಂದು ನಾವು expect ಮಾಡಿರಲಿಲ್ಲ. ಮೂರು ದಿವಸ ನಡೆಯಿತು. ಅವರು ಉತ್ತರ ಕೊಡಲಿಕ್ಕೆ ಒಂದು ದಿನ, ನಾಲ್ಕು ದಿವಸಗಳು ನಡೆಯಿತು. ಏನೂ ಮಾಡುವುದಕ್ಕಾಗುವುದಿಲ್ಲ. ಅದರಿಂದ ನಾವು ಈ contingency ಗಳನ್ನೆಲ್ಲಾ ಅವತ್ತೇ ಒಟ್ಟಿಗೆ ಬಿಎಸಿಯಲ್ಲಿ ತೀರ್ಮಾನ ಮಾಡಲಿಕ್ಕಾಗುವುದಿಲ್ಲ. ಅದರಿಂದ ಮಾನ್ಯ ಅಧ್ಯಕ್ಷರೆ ನಾನು ಬಹಳ ದಿವಸ ಹೇಳುತ್ತಿಲ್ಲ. ಇವತ್ತು ರಾತ್ರಿಯವರೆಗೆ ಚರ್ಚೆ ಮಾಡೋಣ. ಸೋಮವಾರ ಬೆಳಿಗ್ಗೆ ಅವರು ಉತ್ತರ ಕೊಡಲಿ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು) : – ಸಭಾಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮತ್ತು

performance budget ಬಹಳ ಅವಶ್ಯಕತೆ ಇದೆ. ನಾನೂ ಕೂಡ ಒಪ್ಪುತ್ತೇನೆ. ಇದರಲ್ಲಿ ಎರಡು ವಿಚಾರಗಳಿವೆ. ಕಳೆದ ವರ್ಷದ performance budget ಮೇಲೆ ಈ ವರ್ಷ ಹೇಗೆ ಚರ್ಚೆ ಮಾಡಬೇಕೆಂಬ ಸಲುವಾಗಿ ಅವರು ಕೇಳುತ್ತಿರುವುದು ಸರಿಯಿದೆ. ಇಲ್ಲಿ ನಾವು ಲೇಖಾನುದಾನವನ್ನು ತೆಗೆದುಕೊಂಡ ಮೇಲೆ ಮುಂದಿನ 8 ತಿಂಗಳುಗಳಿಗೆ ನಾವು ಅನುಮೋದನೆಯನ್ನು ಕೊಡಬೇಕು. ಈ performance budget ಬಗ್ಗೆ ಕಳೆದ ವರ್ಷದ ಮಾಹಿತಿ ಬಗ್ಗೆ ಮತ್ತೆ ಸೋಮವಾರ ಮತ್ತು ಮಂಗಳವಾರ ಕೂಡ ಚರ್ಚೆ ಮಾಡಬಹುದು. Major ಇಲಾಖೆಗಳದ್ದು ಎಲ್ಲಾ ಮಾಹಿತಿ ಬಂದಿದೆ. ಅದರ ಆಧಾರದ ಮೇಲೆ ತಾವು ಚರ್ಚೆಯನ್ನು ಪ್ರಾರಂಭ ಮಾಡಿ. ಯಾವುದೇ ಸಂದರ್ಭದಲ್ಲೂ ಕೂಡ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ. ಕೆಲವೊಂದು ಇಲಾಖೆಗಳ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ನೀವು ಪ್ರಮುಖವಾದ ಇಲಾಖೆಗಳ ಬಗ್ಗೆ ಮಾತನಾಡಿ ಬೆಳಕು ಚೆಲ್ಲಿ, ನಿಮ್ಮ ಏಳು ವರ್ಷದ ಅನುಭವದ ಹಿನ್ನೆಲೆಯಲ್ಲಿ ಕೂಡ ಸಾಕಷ್ಟು ಗೈಡ್ ಮಾಡಬಹುದು. ಅದನ್ನು ನೀವು ಮಾಡಿ. ನಿಮ್ಮ ಸಂಪೂರ್ಣವಾದ ಭಾಷಣವನ್ನು ಕೇಳಿ ಅದರ ಆಧಾರದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಈಗಾಗಲೇ Major Departments ನಿಂದ ವರದಿಗಳು ಬಂದಿವೆ ಅವುಗಳ ಆಧಾರದ ಮೇಲೆ ದಯವಿಟ್ಟು ಮಾತನಾಡಬೇಕು. 34 ಇಲಾಖೆಗಳ ಬಗ್ಗೆ ಸಂಪೂರ್ಣವಾಗಿ ಎಲ್ಲರೂ ಕೂಡ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಕೆಲವೊಂದು ಇಲಾಖೆಗಳ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದಾರೆ. ಉದಾಹರಣೆಗೆ ಮಾನ್ಯ ಹೆಚ್.ಡಿ.ರೇವಣ್ಣನವರು ನಿನ್ನೆ ವಿದ್ಯುತ್ ಇಲಾಖೆ, ಕಂದಾಯ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದಾರೆ. ಹಾಗೆ ಬೇರೆ ಬೇರೆ ಇಲಾಖೆಗಳ ಬಗ್ಗೆ ಚರ್ಚೆ ಆಗಿದೆ. ತಾವು ಕೂಡ ಪ್ರಮುಖ ಇಲಾಖೆಗಳ ಮೇಲೆ ಚರ್ಚೆ ಮಾಡಿ. ನಿಮಗಿರುವ ಅನುಭವದಲ್ಲಿ ನೀವು ಕಳೆದ ವರ್ಷದ performance ಬಗ್ಗೆ ಹೇಳಬಹುದು ಹಾಗೂ ಈ ವರ್ಷದ ಬರಗಾಲದ ಹಿನ್ನೆಲೆಯಲ್ಲಿ ನಮ್ಮ ಬಜೆಟ್ ಯಾವ ರೀತಿ ಇರಬೇಕು, planning ಯಾವ ರೀತಿ ಇರಬೇಕೆಂಬುದನ್ನೂ ಕೂಡ ನೀವು ಹೇಳಬಹುದು. Plan size ಕೂಡ fix ಆಗಿದೆ. ಉದಾಹರಣೆಗೆ ಮಾರ್ಚ್‌ನಲ್ಲಿ ನಾವು ಪೂರ್ಣ ಪ್ರಮಾಣದ

ಬಜೆಟ್‌ನ್ನು ಮಾಡಿದ್ದರೆ performance budget ಇಟ್ಟುಕೊಂಡೆ ನೀವು ಮಾತನಾಡುತ್ತಿದ್ದರಾ? ಆದ್ದರಿಂದ ನೀವು ಮಾತನಾಡುವುದಕ್ಕೇನೂ ತೊಂದರೆಯಿಲ್ಲವೆಂದು ನಾನು ಭಾವಿಸುತ್ತೇನೆ. ದಯವಿಟ್ಟು ಸಹಕರಿಸಬೇಕು. ಈಗಾಗಲೇ ಒಂದು ಗಂಟೆಯಾಗಿದೆ. ಇಷ್ಟೊತ್ತಿಗೆ ಮಾನ್ಯ ಕೆ.ಎಂ.ಶಿವಲಿಂಗೇಗೌಡರು ಅತ್ಯಂತ ಒಳ್ಳೆಯ ಹಾಗೂ ಪರಿಣಾಮಕಾರಿಯಾದ ಭಾಷಣವನ್ನು ಮಾಡುತ್ತಿದ್ದರು. ಅದಕ್ಕೆ ದಯವಿಟ್ಟು ಸಹಕಾರ ಮಾಡಿ.

ಶ್ರೀ ಸಿದ್ದರಾಮಯ್ಯ : – First of all, ಈ ಮಂತ್ರಿಗಳು ಅವರವರಿಗೆ ಸಂಬಂಧಪಟ್ಟ 71 ಇಲಾಖೆಗಳ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. They have shown disrespect to ths house. It is mandatory of the part of the department. Each department has to furnish the reports. They have not furnished. ಇಲ್ಲವಾದರೆ ಇದು ಮಕ್ಕಳಾಟವಾಗುತ್ತದೆ. Not only irresponsibility, ಅವರುಗಳ್ಯಾರು ಇನ್ನು ಮುಂದೆ ಹೌಸ್‌ಗೆ ಮರ್ಯಾದೆ ಕೊಡುವುದಿಲ್ಲ. ಯಾರೋ ಮಂತ್ರಿಗಳು ಉತ್ತರ ಹೇಳುತ್ತಾರೆ. ವಿರೋಧ ಪಕ್ಷದವರು ಏನೋ ಹೇಳುತ್ತಾರೆ ಹೇಗೋ ಅಧಿವೇಶನ ನಡೆದುಕೊಂಡು ಹೋಗುತ್ತಿದೆ ಎನ್ನುವ ಭಾವನೆ ಬರುತ್ತದೆ. ಆದ್ದರಿಂದ ಇದನ್ನೆಲ್ಲಾ ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. This is not correct. ಮೊದಲು ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : – ಅವರುಗಳನ್ನು ಕರೆಯಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಾಳೆ ವರದಿಗಳನ್ನು ಕೊಟ್ಟರೆ ಆಗುವುದಿಲ್ಲ. ಇವತ್ತು ಡಿಮ್ಯಾಂಡ್ಸ್ ಪಾಸ್ ಮಾಡುವುದು ನಾಳೆ ವರದಿಗಳನ್ನು ತೆಗೆದುಕೊಂಡು ಉಪ್ಪಿನಕಾಯಿ ಹಾಕಿಕೊಂಡು ತಿನ್ನಲಾ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – Performance budget ಯಾವಾಗ ಬೇಕಾದರೂ ಚರ್ಚೆ ಮಾಡಬಹುದು. ಸೋಮವಾರ ಕೂಡ ಚರ್ಚೆ ಮಾಡಬಹುದು, ಏಕೆ ಚರ್ಚೆ ಮಾಡವುದಕ್ಕಾಗುವುದಿಲ್ಲ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಯಾವತ್ತಾದರೂ ಡಿಮ್ಯಾಂಡ್ ಪಾಸ್ ಮಾಡೋಣ ಬಿಡಿ. Why today only? ನಾಳೆ ಪಾಸ್ ಮಾಡಬಹುದು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– BAC ಯಲ್ಲಿ ತೀರ್ಮಾನವಾಗಿರುವ ಪ್ರಕಾರ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – All these reports will have to be placed before this House.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : – ಈ ವಿಷಯಗಳನ್ನು ನೀವೆಷ್ಟು ಹಗುರವಾಗಿ ತೆಗೆದುಕೊಳ್ಳುತ್ತಿದ್ದೀರಿ. ನಾವು ಯಾವ ಆಧಾರದ ಮೇಲೆ ಮಾತನಾಡಬೇಕು?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಮಾನ್ಯ ಅಧ್ಯಕ್ಷರೆ, ಈ ಸದನದ ಸಮಯವನ್ನು ವ್ಯರ್ಥ ಮಾಡುವುದು ಬೇಡ. ತಾವು direction ಕೊಡಿ ಆ ಪ್ರಕಾರ ಎಲ್ಲರೂ ನಡೆದುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – All these reports, department wise will have to be placed. It is mandatory on the part of the government to place all these records.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – Yes, we are ready.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – ದಯಮಾಡಿ ಪ್ಲೇಸ್ ಮಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಪ್ಲೇಸ್ ಮಾಡುತ್ತೇವೆ ದಯಮಾಡಿ ಚರ್ಚೆಯನ್ನು ನಿಲ್ಲಿಸುವುದು ಬೇಡ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – ಅದನ್ನು ಬಿಟ್ಟು ಎಲ್ಲಿ ಚರ್ಚೆ ಮಾಡುತ್ತೀರಿ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಎರಡೂ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಆ ವರದಿಗಳ ಮೇಲೆ ಚರ್ಚೆಯಾಗಬೇಕು,

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಗೊತ್ತು. Performance budget ಮತ್ತು ಈ ವರ್ಷದ್ದು ಇದೆ.

(ಗೊಂದಲ)

ಶ್ರೀ ಆರ್.ಅಶೋಕ್ : – ಮಾನ್ಯ ಅಧ್ಯಕ್ಷರೆ, ದಯವಿಟ್ಟು ಪ್ರಾರಂಭ ಮಾಡುವುದಕ್ಕೆ ಹೇಳಿ. ನಿನ್ನೆ ಕೂಡ ರಾತ್ರಿ 1 ಗಂಟೆಯವರೆಗೆ ಚರ್ಚೆಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : – ಮಾನ್ಯ ಅಧ್ಯಕ್ಷರೆ, ಇವತ್ತು ಬೇಡಿಕೆಗಳು ಬರುತ್ತಿರುವುದು ಕೇವಲ ಒಂದು ಲಕ್ಷ ಮೂರು ಕೋಟಿ ರೂ.ಗಳಲ್ಲ. ಅದಲ್ಲದೆ ಬಜೆಟ್ ವ್ಯಾಪ್ತಿಗೆ ಬರದೇ ಇರತಕ್ಕಂತ ಕೇಂದ್ರ ಸರ್ಕಾರದಿಂದ ಬರುವ ಹಣದ ಬಗ್ಗೆ ಕೂಡ ಚರ್ಚೆ ಆಗುವುದಿಲ್ಲ.

(ಗೊಂದಲ)

ಶ್ರೀ ಆರ್.ಅಶೋಕ್ : – ಅದರ ಬಗ್ಗೆ ಚರ್ಚೆ ಮಾಡಿ. ಯಾರು ಬೇಡವೆಂದರು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – ಅದನ್ನೇ ಚರ್ಚೆ ಮಾಡಬೇಕಾಗಿರುವುದು.

(ಗೊಂದಲ)

ಶ್ರೀ ಬಸವರಾಜು ಬೊಮ್ಮಾಯಿ : – ಅದಕ್ಕೆ explanation ಕೊಡುತ್ತಾರೆ. ಈಗ ಚರ್ಚೆ ಪ್ರಾರಂಭ ಮಾಡಿ. ಮಧ್ಯದಲ್ಲಿ ನಿಲ್ಲಿಸುವುದು ಬೇಡ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – ಹೋದ ವರ್ಷ ಏನಾಯಿತು?

(ಗೊಂದಲ)

ಶ್ರೀ ಆರ್.ಅಶೋಕ್ : – ನಿನ್ನೆ ಮತ್ತು ಮೊನ್ನೆ ಎರಡು ದಿವಸಗಳು ರಿಪೋರ್ಟ್ ಇಲ್ಲದೆ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ರಿಪೋರ್ಟ್ ಇಲ್ಲದೆ ಮಾನಾಡಬಾರದೆಂದು ಎಲ್ಲಿದೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : – ಇದು ಬೇಜವಾಬ್ದಾರಿತನದ ಮಾತಾಗುತ್ತದೆ.

(ಗೊಂದಲ)

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : – ಮಾನ್ಯ ಅಧ್ಯಕ್ಷರೆ, ಒಂದು ವಾರದಿಂದ ಹೇಳುತ್ತಿದ್ದೇನೆ. Is it the reply?

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದು, ಬಹಳ ಅನುಭವವಿರುವವರು ತಾವು ಹೇಳುತ್ತಿರುವ ಸಲಹೆಗಳು ಸರಿಯಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೆಲವೊಂದು ಮಾಹಿತಿಗಳಿಲ್ಲವೆಂದು ತಾವು ಹೇಳುತ್ತಿರುವುದು ಮತ್ತು ಅದರ ಆಧಾರದ ಮೇಲೆ ಇಲ್ಲಿರುವ ಸದಸ್ಯರುಗಳು ಮಾತನಾಡಬೇಕೆಂದು ಹೇಳುತ್ತಿರುವುದು ಸರಿಯಿದೆ. ಅನೇಕ ಬಾರಿ ಪ್ರತಿ ಪಕ್ಷದಲ್ಲಿದ್ದಾಗ ಈ ರೀತಿಯಾದ ಸಲಹೆಗಳನ್ನು ಕೊಟ್ಟಿದ್ದೀರಿ, ವರ್ತನೆಗಳನ್ನು ಸರಿಪಡಿಸಿಕೊಳ್ಳ–ಬೇಕೆಂದು ಅಧಿಕಾರಿಗಳಿಗೆ ಹೇಳಿದ್ದಿರಿ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ರೀತಿಯ ಕೊರತೆಗಳಾಗಿದೆ. ಇದನ್ನು

ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡೋಣ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೀರಿ. ಮುಂದೆ ಈ ರೀತಿಯಾಗದಂತೆ ಎಚ್ಚರವಹಿಸೋಣ. ದಯಮಾಡಿ ತಾವು ಭಾಷಣವನ್ನು ಶುರು ಮಾಡಿ. ಮಾನ್ಯ ಅಧ್ಯಕ್ಷರೆ, ನಾವ್ಯಾರೂ ಮಧ್ಯಾಹ್ನದ ಊಟಕ್ಕೆ ಹೋಗುವುದಿಲ್ಲ. ಇಲ್ಲೇ ಚಹ ಕುಡಿದು ಕುಳಿತುಕೊಳ್ಳುತ್ತೇವೆ. ಮಧ್ಯಾಹ್ನ ಮೂರು ಅಥವಾ ನಾಲ್ಕು ಗಂಟೆ ಮೇಲೆ ಮಾನ್ಯ ಮುಖ್ಯಮಂತ್ರಿಗಳು reply ಪ್ರಾರಂಭ ಮಾಡಲಿ. ಉಳಿದವರಿಗೂ ಅವಕಾಶ ಮಾಡಿಕೊಟ್ಟು time limit ಮಾಡಿ. ನೀವು ಮಾತನಾಡುವುದಕ್ಕೆ ಪ್ರಾರಂಭಿಸಿ. ಕಡಿಮೆ ಅವಧಿಯಲ್ಲಿ ಹೆಚ್ಚು ಬೆಳಕು ಚೆಲ್ಲುವ ಶಕ್ತಿ ನಿಮಗಿದೆ. ಅದೇ ರೀತಿ ಉಳಿದ ಗೌರವಾನ್ವಿತ ಸದಸ್ಯರು ಮಾತನಾಡಲಿ. ಇದರ ಮೇಲೆ ಬೆಳಕು ಚೆಲ್ಲಬೇಕು. ದಯವಿಟ್ಟು ತಮ್ಮ ಮಾತನ್ನು ಪ್ರಾರಂಭಿಸಿ. ಮಧ್ಯಾಹ್ನ ಮೂರು ಅಥವಾ ನಾಲ್ಕು ಗಂಟೆ ಮೇಲೆ reply ಕೊಡುತ್ತಾರೆ.

ಅಧ್ಯಕ್ಷರು: ಹಾಗೇ ಮಾಡೋಣ. ನಾಲ್ಕು ಗಂಟೆವರೆಗೆಂದರೆ ಇನ್ನೂ ಸುಮಾರು ಸಮಯ ಇದೆ.

ಶ್ರೀ ಸಿದ್ದರಾಮಯ್ಯ : – ಇಲ್ಲ, ನಾವು ಒಪ್ಪುವುದಿಲ್ಲ. ಇದು ಒಂದು ಕೆಟ್ಟ ಸಂಪದ್ರದಾಯವಾಗಿ ಬಿಡುತ್ತದೆ, if you allow this type of discussion. ಹಾಗಾದರೆ ಈ ರಿಪೋರ್ಟ್‌ನ್ನು ಕೊಡದಿದ್ದರೆ what shoud we presume ರವರು ಸರಿಯಾಗಿ perform ಮಾಡಿಲ್ಲ. ಅಲ್ಲಿ ಏನೇನೋ ಅವ್ಯವಹಾರಗಳು ನಡೆದಿರುತ್ತವೆ. ಅದಕ್ಕೋಸ್ಕರ ಇವರು ಮುಚ್ಚಿ ಹಾಕಿದ್ದಾರೆಂಬ ಭಾವನೆ ಬರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಏನೋ ನಡೆದಿರುತ್ತದೆ ಅದಕ್ಕೋಸ್ಕರ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ತಪ್ಪೋ ಸರಿಯೋ compulsory ಆಗಿ ಕೊಡಲೇಬೇಕಾಗುತ್ತದೆ. Mandatory ಅನ್ನು ಮಾಡಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಇದರ ಬಗ್ಗೆ ಎರಡು ಮೂರು ದಿನಗಳಿಂದ ಚರ್ಚೆ ನಡೆದಿದೆ. ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಇಲ್ಲ ಇದನ್ನು ನಾವು ಒಪ್ಪುವುದಿಲ್ಲ. ಈ ಕ್ರಮವನ್ನು ಖಂಡಿಸಿ ನಾವು ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : – Reply ಕೊಡುವುದಕ್ಕೆ ನಾನು ತಯಾರಿದ್ದೇನೆ. ಅವರು ಅನುಭವವಿರುವವರು. ಚರ್ಚೆಯಲ್ಲಿ ಭಾಗವಹಿಸಲಿ. ನಂತರ ನಾನು reply ಕೊಡುತ್ತೇನೆ. ಇನ್ನೂ ಏನಾದರೂ ಮಾಹಿತಿ ಬೇಕಾದರೆ ಕೊಡುತ್ತೇವೆ. ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : – ಈ ಕ್ರಮವನ್ನು ಖಂಡಿಸಿ ನಮ್ಮ ಪಕ್ಷದವರೂ ಸಹ ಧರಣಿ ಮಾಡುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಹಾಗೂ ಜಾತ್ಯಾತೀತ ಜನತಾ ದಳದ ಎಲ್ಲಾ ಸದಸ್ಯರು ಬಾವಿಗಿಳಿದು ಧರಣಿ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಸಹಕಾರ ಕೊಡಲಿ. ಚರ್ಚೆ ಪ್ರಾರಂಭವಾಗಲಿ. ನೀವು ಹೇಳಿದ ನಂತರ maximum ವಿವರಗಳನ್ನು ಕೊಟ್ಟಿದ್ದೇವೆ. Annual reports and performance ಬಜೆಟ್ ಕೆಲವೊಂದು ಇಲಾಖೆಗಳನ್ನು ಬಿಟ್ಟರೆ ಎಲ್ಲವನ್ನೂ submit ಮಾಡಿದ್ದೇವೆ. ಚರ್ಚೆ ಪ್ರಾರಂಭ ಮಾಡಬಹುದು ದಯವಿಟ್ಟು ಪ್ರಾರಂಭ ಮಾಡಿ. ನಾನು ನಿಮ್ಮಲ್ಲಿ request ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : – ನಾವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು let them announce.

(ಗೊಂದಲ)

ಅಧ್ಯಕ್ಷರು : – ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸಭೆಯು 11 ಗಂಟೆ 30 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸಭೆಯು ಬೆಳಿಗ್ಗೆ 11 ಗಂಟೆ 58 ನಿಮಿಷಕ್ಕೆ ಪುನ: ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಶ್ರೀ ಸಿದ್ದರಾಮಯ್ಯ : (ವಿರೋಧ ಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೆ, ಹಣಕಾಸಿನ ಮಸೂದೆಯ Appropriation Bills ತಡೆ ಹಿಡಿಯಬೇಕೆಂಬ ಉದ್ದೇಶವೇನಲ್ಲ. ಆದರೆ ಸರ್ಕಾರದ ವೈಫಲ್ಯತೆ, ಅವರು ಕಡ್ಡಾಯವಾಗಿ ಪ್ರತಿ ಇಲಾಖೆಯ ಬೇಡಿಕೆಗಳ ಆಡಳಿತಾತ್ಮಕ ವರದಿ Annual Report ಕೊಡಬೇಕು. ಈ ವರ್ಷದ ಆರ್ಥಿಕ ವರ್ಷಕ್ಕೆ performance Budget ಕೊಡಬೇಕು. It is a Mandatory on the part of the Government. Government fail ಆಗಿದೆ ಇದರಲ್ಲಿ. ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಿಲ್ಲ. There is a dereliction of duty on the part of the officers and there is a failure on the part of the Government. ಆ ಕಾರಣಕ್ಕೋಸ್ಕರವಾಗಿ ಧರಣಿ ಮಾಡುತ್ತಿದ್ದೇವೆ. ಸರ್ಕಾರ ಪದೇ ಪದೇ ಪ್ರತಿ ವರ್ಷ ಇದನ್ನೇ ಮುಂದುವರೆಸುವುದಾದರೆ, ಅದು ಸರಿಯಲ್ಲ. ನೀವು ನಮ್ಮನ್ನು ಕರೆದು ಚರ್ಚೆ ಮಾಡಿದ್ದೀರಿ. ಸರ್ಕಾರ ಹೇಳಬೇಕು. ಇನ್ನು ಮುಂದೆ ಹೀಗೆ ಆಗಬಾರದು ನಂಬರ್ ಒನ್.

(ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್) ಪಕ್ಷದ ಸದಸ್ಯರು ಧರಣಿ ನಿರತರಾಗಿದ್ದರು) ನಂಬರ್ ಟೂ. ಯಾವ್ಯಾವ ಅಧಿಕಾರಿಗಳು ಕರ್ತವ್ಯ ಚ್ಯುತಿ ಮಾಡಿದ್ದಾರೆ, ಕರ್ತವ್ಯ ಚ್ಯುತಿ ಮಾಡಿದವರ ಮೇಲೆ ನೋಟಿಸ್ ಕೊಡಬೇಕು. ಅವರಿಂದ explanation call for ಮಾಡಬೇಕು. ಅವರ ಮೇಲೆ diciplinary action initiate ಮಾಡಬೇಕು. Whether he is Secretary to the Government or Head of the Department. ಇದನ್ನು ಮಾಡಲೇಬೇಕು. ಇಲ್ಲದಿದ್ದರೆ we are going to establish a wrong precedent. ಇದು ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಬೆಳವಣಿಗೆ ಆಗುವುದಿಲ್ಲ. We are all

answerable to the people. The Government and the civil servants are answerable and accountable to this House. We have come here to represent the people, discuss the problems of the people and give relief to them. ನಾನು as a Leader of Opposition D.O. letters ಬರೆದಿದ್ದೇನೆ. Principal Secretary Office ಗೆ ಪತ್ರವನ್ನು ಬರೆದಿದ್ದೇನೆ. 15 ದಿನ ಒಂದು ತಿಂಗಳಾದರೂ ನನಗೆ ಬೇಕಾದ ಮಾಹಿತಿಯನ್ನು ಕಳಿಸಿಲ್ಲ. This shows how irresponsible they are and how adamant they are. They should change their attitude. ಇದು ಸರಿಯಾದ ಪ್ರವೃತ್ತಿಯಲ್ಲ. ಸರ್ಕಾರ ಕೂಡ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅವರೆಲ್ಲರಿಗೂ ನೋಟೀಸ್ ಕೊಡಬೇಕು. ಇವತ್ತು ಎಲ್ಲಾ ವರದಿಗಳನ್ನೂ ಕೊಡಲೇಬೇಕು. ಅದು ಆಗದೇ ಹೋದರೆ ಚರ್ಚೆ ಮಾಡುವುದು ಹೇಗೆ? ವರದಿಗಳು ಇಲ್ಲದೇ ಚರ್ಚೆ ಆದರೆ we can not give justice. We are not respomding the principles of democracy and Parlimentary system of Government ಎಂದು ಆಗುತ್ತದೆ. ಅದಕ್ಕೋಸ್ಕರ ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಒಂದು ಕೆಟ್ಟ ಸಂಪ್ರದಾಯ ಮಾಡಿದ ಹಾಗೆ ಆಗುತ್ತದೆ. ಇವತ್ತು ನಾವು ಇರುತ್ತೇವೆ. ನೀವು ಇರುತ್ತೀರಿ. ಮುಂದೆ ಯಾವುದೇ ಸರ್ಕಾರ ಬರಲಿ, ಈ ತರಹ ಆದರೆ ಕೆಟ್ಟ ಸಂಪ್ರದಾಯ ಆಗುತ್ತದೆ. ಅದು ಆಗದ ಹಾಗೆ ಸರ್ಕಾರ ಕೂಡ ಗಂಭೀರವಾಗಿ ಚಿಂತನೆ ಮಾಡಬೇಕು. ಅದಾದ ಮೇಲೆ ನೀವು ಏನು ಭರವಸೆ ಕೊಡುತ್ತೀರೋ ಅದಕ್ಕೆ ನಾವು ಬದ್ಧರಾಗುತ್ತೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಯಾವುದೇ ಇಲಾಖೆಯ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡಬೇಕು. ಕಳೆದ ವರ್ಷ 2011-12 ನೇ ಸಾಲಿಗೆ ಪ್ರತಿ ಇಲಾಖೆಗೆ ಎಷ್ಟು ಹಣ ನಿಗದಿ ಮಾಡಿದ್ದರು ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದರು? ಎಷ್ಟು ಹಣ ಖರ್ಚಾಗಿದೆ ಎನ್ನುವ ಮಾಹಿತಿ ಇಲ್ಲದಿದ್ದರೆ ನಾವು ಹೇಗೆ ಚರ್ಚೆ ಮಾಡಲು ಆಗುತ್ತದೆ? ಈ ವರ್ಷ ಏಪ್ರಿಲ್, ಮೇ, ಜೂನ್, ಜುಲೈ 4

ತಿಂಗಳಾಗಿದೆ. ಏನು ಪ್ರಗತಿ ಆಗಿದೆ? ಎಷ್ಟು ಹಣ ಈ ವರ್ಷ ಲೇಖಾನುದಾನದಲ್ಲಿ ಬಿಡುಗಡೆ ಆಗಿದೆ? ಎಷ್ಟು ಖರ್ಚಾಗಿದೆ, ಏನೇನು ಸಾಧನೆ ಮಾಡಿದ್ದಾರೆ? ಎಲ್ಲಾ ಇಲಾಖೆಗಳ ವಾರ್ಷಿಕ ವರದಿ ಹಾಗೂ ನಿರ್ವಹಣಾ ವರದಿಯನ್ನು ಮಂಡಿಸಿದರೆ ಚರ್ಚೆ ಮಾಡಲು ಅನುಕೂಲವಾಗುತ್ತದೆ. ಪ್ರತಿ ಇಲಾಖೆಯ ವರದಿಯನ್ನು ಮಂಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : – ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ವಿರೋಧ ಪಕ್ಷದ ಸದಸ್ಯರು ತಮ್ಮ ಭೇಂಬರಿಗೆ ಬಂದಂತಹ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಶಾಸಕರು ಚರ್ಚೆಯಲ್ಲಿ ಪಾರ್ಟಿಸಿಪೇಟ್ ಮಾಡಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡುವ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. Annual report and performance Budget ಗಳನ್ನು ಮಂಡನೆ ಮಾಡಬೇಕು. ಈಗಾಗಲೇ maximum ಇಲಾಖೆಗಳ ವರದಿಗಳನ್ನು ಮಂಡನೆ ಮಾಡಿದ್ದಾರೆ. ಇನ್ನೂ ಕೆಲವು ಮಂಡನೆ ಮಾಡಿಲ್ಲ. ಒಂದು ತಾಸಿನಲ್ಲಿ ಸಲ್ಲಿಸಬೇಕೆಂದು instructions ಕೊಟ್ಟಿದ್ದೇನೆ. ಬಹುಶಃ ಅವರು ಕೂಡ ಮಂಡನೆ ಮಾಡುತ್ತಾರೆ. ಯಾವುದೇ ಸರ್ಕಾರ ಇರಲಿ, ಯಾವುದೇ ಸಂದರ್ಭದಲ್ಲಿ ಸಹ ಯಾವ ಕೆಲಸವನ್ನು ಮಾಡಬೇಕೋ ಅದನ್ನು ಮಾಡಲೇಬೇಕು. ಬಜೆಟ್ ಮೇಲೆ ಹಾಗೂ ಬೇಡಿಕೆ ಮೇಲೆ ಚರ್ಚೆ ಆಗುವಂತಹ ಸಂದರ್ಭದಲ್ಲಿ ವರದಿಗಳನ್ನು ಸದನದ ಮುಂದೆ ಮಂಡಿಸಬೇಕು. ಅದರಲ್ಲಿ ಬೇರೆ ಪ್ರಶ್ನೆ ಇಲ್ಲ. ಈ ಬಗ್ಗೆ ಯಾರು ನಿರ್ಲಕ್ಷ್ಯ ತೋರಿಸಿದ್ದಾರೆ, ಅವರಿಗೆ definitely ನೋಟಿಸ್ ಕೊಡುವಂಥ ಕೆಲಸ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ನೋಟಿಸ್ ಕೊಡಲೇ ಬೇಕು.

ಶ್ರೀ ಜಗದೀಶ್ ಶೆಟ್ಟರ್ : – ನೋಟಿಸ್ ಕೊಡುವ ಕೆಲಸ ಆಗುತ್ತದೆ. ಮುಂದೆ ಎಲ್ಲರಿಗೂ ಒಂದು ಎಚ್ಚರಿಕೆ ಆಗಬೇಕು. ಈ ರೀತಿ ಆದಂತಹ ಸಂದರ್ಭದಲ್ಲಿ ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ದೃಷ್ಟಿಯಿಂದ ನಿಮ್ಮ ಸಹಕಾರ ಅಗತ್ಯ. ದಯಮಾಡಿ ಚರ್ಚೆಯನ್ನು ಮುಂದುವರಿಸಬೇಕು. ಈ

ಬಜೆಟ್ ಚರ್ಚೆ ಬಗ್ಗೆ ತಮ್ಮದೂ ಹೆಚ್ಚಿನ ಸಹಕಾರದ ಅವಶ್ಯಕತೆ ಇದೆ. ಸಭಾಧ್ಯಕ್ಷರು ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದಕ್ಕೆ ತಾವು ಒಪ್ಪಬೇಕು.

ಅಧ್ಯಕ್ಷರು : – 13 ಇಲಾಖೆಗಳ ನಿರ್ವಹಣಾ ವರದಿ ಹಾಗೂ 8 ಇಲಾಖೆಗಳ ವಾರ್ಷಿಕ ವರದಿ ಬಂದಿಲ್ಲ. ಈಗಾಗಲೇ ತೀರ್ಮಾನ ಮಾಡಿದ ಹಾಗೆ ಅವರಿಗೆ ನೋಟಿಸ್ ಕೊಟ್ಟು ಅವರಿಂದ explanation call for ಮಾಡಿ Some action has to be taken against those who are very negligent.

ಶ್ರೀ ಟಿ.ಬಿ.ಜಯಚಂದ್ರ : – Democratic system ನಲ್ಲಿ ಈ institutions fail ಆಗಬಾರದು. As politicians we may fail, but bureaucracy should not fail.

ಅಧ್ಯಕ್ಷರು : – ಈಗಾಗಲೇ ಯಾವ ಇಲಾಖೆಗಳವರು ವಾರ್ಷಿಕ ವರದಿ ಸಲ್ಲಿಸಲ್ಲ, ಅವರಿಂದ explanation ತೆಗೆದುಕೊಂಡು, ಯಾವ ಇಲಾಖೆಯವರು negligent ಆಗಿದ್ದಾರೆ ಖಂಡಿತ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇದು ಮುಂದುವರಿಯದಂತೆ ಒಂದು ಎಚ್ಚರಿಕೆ ಗಂಟೆ ಆಗುತ್ತದೆ. ಇನ್ನು ಮುಂದೆ ಈ ತರಹ ಘಟನೆಗಳಿಗೆ ಅವಕಾಶ ಕೊಡದ ಹಾಗೆ ನಮ್ಮ ಜವಾಬ್ದಾರಿ ಕೂಡ ಇದೆ. ಅದನ್ನು ಮಾಡಬೇಕು.

SRI T.B.JAYACHANDRA : What action do you propose to take?

MR.SPEAKER : After calling for the explanation, let them see.

ಶ್ರೀ ಟಿ.ಬಿ.ಜಯಚಂದ್ರ : – ಸರ್ಕಾರ ಈ ವಿಚಾರದಲ್ಲಿ strict ಆಗಿರಬೇಕು.

ಅಧ್ಯಕ್ಷರು : – ಈಗಾಗಲೇ ತೀರ್ಮಾನ ಮಾಡಿದ ಹಾಗೆ ಈ ಕಡೆಯಿಂದ ಮಾನ್ಯ ಜಯಚಂದ್ರ ಅವರು ಮಾತನಾಡುತ್ತಾರೆ. ಆ ಕಡೆಯಿಂದ ಮಾನ್ಯ ಶಿವಲಿಂಗೇಗೌಡ ಹಾಗೂ ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಾರೆ. ನಂತರ ಮಾನ್ಯ ವಿರೋಧ ಪಕ್ಷದ ನಾಯಕರು

ಮಾತನಾಡುತ್ತಾರೆ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕು.

ಶ್ರೀ ಶಿವರಾಜ ತಂಗಡಗಿ : – ಸಭಾಧ್ಯಕ್ಷರೆ, ನಮಗೂ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : – ಪ್ರಶ್ನೋತ್ತರವನ್ನು ಅನಂತರ ತೆಗೆದುಕೊಳ್ಳೋಣ. ದಯಮಾಡಿ ಎಲ್ಲಾ ಸದಸ್ಯರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

(ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್) ಪಕ್ಷದ ಸದಸ್ಯರು ಧರಣಿಯನ್ನು ಕೈಬಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ವಾಪಾಸ್ಸು ತೆರಳಿದರು.

ಅಧ್ಯಕ್ಷರು : – ತಾವು ಪ್ರಾರಂಭ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : – ಮಾನ್ಯ ಸಭಾಧ್ಯಕ್ಷರೆ, ತಾವು ಇವತ್ತು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು: Please, ಅಲ್ಲಲ್ಲಿ ಮಾತನಾಡುವುದು ಬೇಡ.

ಶ್ರೀ ಟಿ.ಬಿ.ಜಯಚಂದ್ರ : – ನಿಖರವಾಗಿ ವಿಶೇಷ ಸಂದರ್ಭದಲ್ಲಿ ವಸ್ತು ಸ್ಥಿತಿಯನ್ನು, ವಿಷಯವನ್ನು ಆಧರಿಸಿ ಮಾತನಾಡತಕ್ಕದ್ದು ಸ್ವಲ್ಪ ಮಟ್ಟಿಗೆ ಕಷ್ಟ ಆಗುತ್ತದೆ. ಆ ಕಾರಣ ನಮ್ಮ ಮುಂದೆ ಬರಲೇ ಬೇಕಾಗಿರತಕ್ಕ ವಾರ್ಷಿಕ ವರದಿ, ನಿರ್ವಹಣಾ ವರದಿ ಅನೇಕ ಇಲಾಖೆಗಳ ವರದಿ ನಮ್ಮ ಮುಂದೆ ಇಲ್ಲದೇ ಇರತಕ್ಕ ಹಿನ್ನೆಲೆಯಲ್ಲಿ ವಸ್ತು ಸ್ಥಿತಿಯನ್ನು ಇಡಲು ಕಷ್ಟ ಆಗುತ್ತದೆ.

ಅಧ್ಯಕ್ಷರು : – plese, ಅಲ್ಲಲ್ಲಿ ಮಾತನಾಡಬೇಡಿ.

ಶ್ರೀ ಟಿ.ಬಿ.ಜಯಚಂದ್ರ : – ಸುಮಾರು ಬೇಡಿಕೆಗಳ ಮೇಲೆ ಚರ್ಚೆ ಆಗಬೇಕು ಅಂದರೆ ಬಹುಶ: ಈ ಬೇಡಿಕೆಗಳ ಮೇಲೆ ಚರ್ಚೆ ಆಗುವುದರ ಮುಖೇಣ. . . .

ಅಧ್ಯಕ್ಷರು : – ತನ್ವೀರ್ ಸೇಠ್, please ಮಾತನಾಡಬೇಡಿ.

ಶ್ರೀ ಟಿ.ಬಿ.ಜಯಚಂದ್ರ : – ಬೇಡಿಕೆ ಮೇಲೆ ಏಕೆ ಚರ್ಚೆ ಆಗಬೇಕು?

ಅಧ್ಯಕ್ಷರು : – ಮಾನ್ಯ ಉಮೇಶ್ ಕತ್ತಿಯವರೇ, ನೀವು ಅಲ್ಲೇ ಮಾತನಾಡಿಕೊಂಡೇ ಇರುತ್ತೀರಲ್ಲ. ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಸಿದ್ದರಾಮಯ್ಯ : – ಪಾರ್ಕ್‌ನಲ್ಲಿ ತಿರುಗಾಡುವ ಹಾಗೆ ತಿರುಗಾಡುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : – ಬೇಡಿಕೆಯ ಮೇಲೆ ಏಕೆ ಚರ್ಚೆ ಆಗಬೇಕು? ಎಂದರೆ ಎಲ್ಲಾ ಶಾಸಕರೂ ಚರ್ಚೆಯಲ್ಲಿ ಭಾಗವಹಿಸುವುದರ ಮುಖೇಣ ಯೋಜನೆಗಳೇನು ಕೇಂದ್ರ ಸರ್ಕಾರದ ಯೋಜನೆಗಳೇನು ರಾಜ್ಯ ಸರ್ಕಾರದ ಯೋಜನೆಗಳೇನು ಎಂದು ಗೊತ್ತಾಗುತ್ತದೆ. ನಮ್ಮ ಪಾತ್ರದ ಅರಿವು ಆಗಬೇಕು ಎನ್ನುವ ಕಾರಣಕ್ಕೋಸ್ಕರ ಅದನ್ನು ಕನಿಷ್ಠ 15 ದಿನ ಅಥವಾ ತಿಂಗಳಾದರೂ ಚರ್ಚೆ ಆಗಬೇಕು ಎನ್ನತಕ್ಕದ್ದು. ಅದು ನಿಯಮ. ಆದರೆ ಇವತ್ತು ವಿಶೇಷವಾದ ಸಂದರ್ಭದಲ್ಲಿ ನಾನು ಮಾತನಾಡುತ್ತಿದ್ದೇನೆ. ನಾನು ಎಲ್ಲಾ ವಿಚಾರಗಳನ್ನು ಕೂಡ ಮಾನಾಡುವುದಕ್ಕೆ ಆಗದೇ ಇದ್ದರೂ ಕೂಡ ಒಂದು ವಿಚಾರಕ್ಕೆ ಮಾತ್ರ ನಾನು ಸೀಮಿತವಾಗಿ ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ. ಗ್ರಾಮೀಣ ಪ್ರದೇಶದ ಚಿತ್ರಗಳು ಏನಿವೆ ಎಂದು ಎಲ್ಲರಿಗೂ ಅರಿವು ಬಂದಿರತಕ್ಕಂಥದ್ದು. ಅದು ವಿಶೇಷವಾಗಿ ಬರ ಬಂದಿರುವಂತಹ ಸಂದರ್ಭದಲ್ಲಿ ಸತತವಾಗಿ ಎರಡನೇ ವರ್ಷ ಬರ ಮುಂದುವರೆದಿರತಕ್ಕಂತಹ ಸಂದರ್ಭದಲ್ಲಿ ಹಳ್ಳಿಗಳ ಚಿತ್ರ ಅದು ಹೇಳತೀರದಾಗಿರುತ್ತದೆ. ಹಳ್ಳಿಗಳು ಇವತ್ತು ಒಂದು ರೀತಿಯ ವೃದ್ಧಾಶ್ರಮಗಳಾಗುತ್ತಿವೆ. ಹಳ್ಳಿಗಳಲ್ಲಿ ಯಾರೂ ಕೂಡ ಇಲ್ಲ. ಉದ್ಯೋಗ ಖಾತರಿ ಯೋಜನೆಗಳು ತತ್ವಶಃ ಜಾರಿಯಾಗಬೇಕು. ಇದಕ್ಕೆ ಯಾರು ಬರುತ್ತಾರೆಂದರೆ ವಯೋವೃದ್ದರಾಗಿರತಕ್ಕಂತಹವರು ಮತ್ತು ಅಂಗಹೀನರೇ ಹಳ್ಳಿಗಳಲ್ಲಿ ಉಳಿದಿರುವಂತಹವರು. ಅವರೆಲ್ಲರೂ ಉದ್ಯೋಗ ಖಾತರಿ ಯೋಜನೆಗೋಸ್ಕರ ಕೆಲಸ ಮಾಡುವುದಕ್ಕೆ ಬರತಕ್ಕಂತಹ ಚಿತ್ರವನ್ನು ನಾವು ನೋಡುತ್ತಿದ್ದೇವೆ. ಬಹಳ ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, ಹಳ್ಳಿಗಳಿಂದ ಪಟ್ಟಣ ಪ್ರದೇಶಕ್ಕೆ ಜನ ವಲಸೆ ಬರುತ್ತಿದ್ದಾರೆ. ಉದ್ಯೋಗಕ್ಕೋಸ್ಕರ ಬರುತ್ತಿದ್ದಾರೆ. ವಿದ್ಯಾಭ್ಯಾಸಕ್ಕೋಸ್ಕರ ಬರುತ್ತಿದ್ದಾರೆ. ಮತ್ತು ಇನ್ನೂ ಅನೇಕ ಕಾರಣಕ್ಕೋಸ್ಕರ ಮೂಲಭೂತ ಸೌಕರ್ಯಗಳ ಕೊರತೆ ಹಳ್ಳಿಗಳಲ್ಲಿರತಕ್ಕಂತಹ ಕಾರಣಕ್ಕೋಸ್ಕರ ಇವತ್ತು ಜನ ವಲಸೆ ಬರುತ್ತಿದ್ದಾರೆ. ಶಾಶ್ವತವಾಗಿ ಇವತ್ತು ನೆಲೆಸುವಂತಹ ಪ್ರಯತ್ನ ಆಗಿದೆ. ಆ ಕಾರಣದಿಂದಾಗಿ ಇವತ್ತು ನಮ್ಮ ರಾಜ್ಯದಲ್ಲಿ 80% ಇದ್ದಂತಹವರು ಇವತ್ತು

ಕೇವಲ 65% ಮಾತ್ರ ಹಳ್ಳಿಗಳಲ್ಲಿದ್ದಾರೆ. ಇನ್ನಿತರೆ ಎಲ್ಲರೂ ಪಟ್ಟಣ ಪ್ರದೇಶಕ್ಕೆ ಬಂದು ವಾಸ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪಟ್ಟಣ ಪ್ರದೇಶಗಳಿಗೆ ಬಂದಾಗ ಒಂದಲ್ಲ ನೂರಾರು ತರಹದ ಸಮಸ್ಯೆಗಳು ಬರುತ್ತವೆ. ವಸತಿ ಸಮಸ್ಯೆ ಬರುತ್ತದೆ, ಕುಡಿಯುವ ನೀರಿನ ಸಮಸ್ಯೆ ಬರುತ್ತದೆ. ನೈರ್ಮಲ್ಯದ ಪ್ರಶ್ನೆ ಬರುತ್ತದೆ. ಆರೋಗ್ಯದ ಪ್ರಶ್ನೆ ಬರುತ್ತದೆ. ಇವೆಲ್ಲಾ ಕಾರಣಗಳು ಬರುತ್ತವೆ. ಅದು ಕೇವಲ ಬೆಂಗಳೂರಿಗೆ ಸೀಮಿತವಾಗುವುದಿಲ್ಲ. ತುಮಕೂರಿಗೆ ಸೀಮಿತವಾಗುವುದಿಲ್ಲ. ಅಥವಾ ಒಂದು ತಾಲ್ಲೂಕಿಗೆ ಸೀಮಿತವಾಗುವುದಿಲ್ಲ. ನಗರೀಕರಣದ ಪ್ರಭಾವದಿಂದಾಗಿ ಅನೇಕ ತರಹದ ಸಮಸ್ಯೆಗಳು ಬರುತ್ತವೆ. ಇದರಲ್ಲಿ ಮುಖ್ಯವಾಗಿ ಕಾಲಾವಕಾಶ ಹೆಚ್ಚು ಇಲ್ಲದೆ ಇರತಕ್ಕಂತಹ ಕಾರಣಕ್ಕೋಸ್ಕರ, ಬಹಳ ಮುಖ್ಯವಾಗಿ ಎಂದರೆ, BDA ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಚಾರವನ್ನು ಪ್ರಸ್ತಾಪ ಮಾಡುವ ಮುಖೇಣ ಎಲ್ಲಾ ನಗರ CMC ಇರಲಿ, TMC ಇರಲಿ ಮುನಿಸಿಪಲ್, ಪಟ್ಟಣ ಪಂಚಾಯಿತಿ ಇರಲಿ, ಪಟ್ಟಣ ಪ್ರದೇಶದಲ್ಲಿ ಏನೆಲ್ಲಾ ಆಗುತ್ತದೆ, ಏನೆಲ್ಲಾ ಆಗಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜವಾಬ್ದಾರಿ ನಿವೇಶನಗಳನ್ನು ಮಾಡಬೇಕು. ಮೂಲಭೂತ ಸೌಕರ್ಯಗಳನ್ನು ಕೊಡಬೇಕು, ಇತ್ಯಾದಿ ಇತ್ಯಾದಿ ಇರುತ್ತದೆ. ಅದನ್ನು ನಾವು ಎಷ್ಟರ ಮಟ್ಟಿಗೆ ಸಾರ್ಥಕವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಾಡಿದೆ ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರತಕ್ಕಂತಹ ಸಂಗತಿ. ಒಂದು ವಿಚಾರವೇನೆಂದರೆ, ಬೆಳಿಗ್ಗೆ ಎದ್ದರೆ ಪತ್ರಿಕೆಯಲ್ಲಿ ಒಂದಲ್ಲ ಒಂದು ರೀತಿಯಾದಂತಹ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಅದರ ಕಾರ್ಯ ವೈಖರಿ ಬಗ್ಗೆ, ಅಲ್ಲಿನ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ಹೈಕೋರ್ಟಿನಲ್ಲಿ, ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಸ್ತಾಪ ಆಗುತ್ತಿರತಕ್ಕಂಥದ್ದು ನಾವು ನೋಡುತ್ತಿದ್ದೇವೆ. ಇವತ್ತಿಗೂ ಕೂಡ ಅದು ಅದರಿಂದ ಹೊರತಾಗಿಲ್ಲ. ಅದನ್ನೇ ಮೂಲವಾಗಿ ಆಧರಿಸಿ ನಾನು ಮಾತನಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಒಂದು ವಿಚಾರ ಪ್ರಸ್ತಾಪವಾದಾಗ ಇಡೀ ರಾಜ್ಯದಲ್ಲಿ ಪರಿಸ್ಥಿತಿ ಏನಿದೆ ಎನ್ನುವುದನ್ನು ಅವಲೋಕನ ಮಾಡಬೇಕು ಹಾಗೂ ಯೋಚನೆ ಮಾಡಬೇಕು. ಸರ್ಕಾರ ಅದನ್ನು ಮನದಟ್ಟು ಮಾಡತಕ್ಕಂತಹ ಕೆಲಸವನ್ನು ಮಾಡಬೇಕು. "BDA fast tracks sites for

bureaucrats. Some of the farmers who had lost their land to the Metropolitan Co-operative Housing Society Limited, Jakkur in Bangalore....” ಅದೆಲ್ಲಾ ಫೋಟೋ ಹಾಕಿ ವಿಚಾರವನ್ನು ಹೇಳಿದ್ದಾರೆ. ಇವತ್ತು BDA ಜವಾಬ್ದಾರಿ ಏನು? ಕಳೆದ ಹತ್ತು ವರ್ಷಗಳಿಂದ ನಾವು ನಿವೇಶನಗಳನ್ನು ಹೆಚ್ಚು ಮಾಡಬೇಕು, ಸ್ಥಳೀಯವಾಗಿರತಕ್ಕಂತಹವರು ನಗರ ಪ್ರದೇಶಕ್ಕೆ ಬಂದು ವಾಸ ಮಾಡತಕ್ಕಂತಹ ಅಧಿಕಾರಿಗಳೇ ಇರಲಿ ಯಾರೇ ಇರಲಿ, ಅವರಿಗೆ ನಿವೇಶನ ಕೊಡುವುದು ಒಂದು ಪ್ರಮುಖವಾದ ಜವಾಬ್ದಾರಿ. ಆ ಕರ್ತವ್ಯವನ್ನು ನಿರ್ವಹಿಸಬೇಕಾದಾಗ ಏನು ತಪ್ಪುಗಳು ಆಗುತ್ತಿವೆ ಎನ್ನತಕ್ಕಂಥದ್ದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದಾಗ ಗೊತ್ತಾಗುತ್ತದೆ. ಪ್ರಮುಖವಾದ ನಾಲ್ಕೈದು ಲೇಔಟ್‌ಗಳನ್ನು ಮಾಡಬೇಕೆಂದು ತೀರ್ಮಾನ-ವಾಯಿತು. ಒಂದು ಅರ್ಕಾವತಿ ಲೇಔಟ್, ಶಿವರಾಮ ಕಾರಂತ ಲೇಔಟ್, ಕೆಂಪೇಗೌಡ ಲೇಔಟ್ ಈ ರೀತಿ ನಾಲ್ಕೈದು ಲೇಔಟ್‌ಗಳನ್ನು ಮಾಡಬೇಕೆಂದು ಕಳೆದ 10 ವರ್ಷಗಳಿಂದ ಆ ಲೇಔಟ್‌ಗಳನ್ನು ಮಾಡುವುದಕ್ಕೋಸ್ಕರ ಸರ್ಕಾರದ BDA ಮಟ್ಟದಲ್ಲಿ ಪ್ರೋಸೆಸ್ ನಡೆಯುತ್ತಿದೆ. ಆದರೆ ಎಷ್ಟು ಪ್ರಾಮಾಣಿಕವಾಗಿ ಅದು ನಡೆಯುತ್ತಿದೆ ಎಷ್ಟರ ಮಟ್ಟಿಗೆ ಜನಗಳಿಗೆ ಸಹಾಯ ಆಗತಕ್ಕಂತಹ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ನೋಡಿದಾಗ ಎಲ್ಲೋ ಒಂದು ಕಡೆಗೆ ಅನುಮಾನ ಬರುತ್ತದೆ. ಅದು ಕೇವಲ ಕೆಲವೇ ಜನರಿಗೆ ಕೆಲವರ ಹಿತಾಸಕ್ತಿ ಇರತಕ್ಕಂತಹ ಜನರಿಗೆ ಮಾತ್ರ ಸಹಾಯ ಮಾಡುವುದಕ್ಕೆ BDA ಇದೆ ಎನ್ನತಕ್ಕಂತಹ ಭಾವನೆ ಬರುತ್ತದೆ. 10 ವರ್ಷಗಳಿಂದ ಯಾವುದೂ ಸಾಧನೆ ಮಾಡಿಲ್ಲ. 2002–03 ರಲ್ಲಿ ನಾವು ಅಂದು 69,000 ಸೈಟುಗಳನ್ನು BDA ಮುಖೇಣ ಕೊಟ್ಟಿರುವುದು ಬಿಟ್ಟರೆ ಅದರ ಪೂರ್ವದಲ್ಲಿ ಕೂಡ ಬಹಳ ವರ್ಷಗಳ ಕಾಲ ನಿವೇಶನ ಕೊಡುವುದಕ್ಕಾಗಲಿಲ್ಲ. ಕಾರಣವೇನೆಂದರೆ ಎಲ್ಲಿಯೂ ಲೇಔಟ್‌ಗಳು ಆಗಲಿಲ್ಲ. ಲೇಔಟ್‌ಗಳನ್ನು ಮಾಡಿ ಎಂದು ಸರ್ಕಾರ ಒಪ್ಪಿಗೆ ಕೊಟ್ಟ ಮೇಲೆ ಕೂಡ ಅದರಲ್ಲಿ ಯಾವ ರೀತಿಯಾಗಿ ದಂದೆ ನಡೆಯುತ್ತಿದೆ ಎನ್ನುವುದಕ್ಕೆ ಒಂದು ಸೂಕ್ಷ್ಮವಾಗಿ ಹೇಳುವುದಾದರೆ ಶಿವರಾಮ ಕಾರಂತ ಲೇಔಟ್ ಅನ್ನು ಮಾಡಬೇಕೆಂದು ಸರ್ಕಾರ ಒಪ್ಪಿಗೆ ಕೊಡುತ್ತದೆ. ಒಪ್ಪಿಗೆ ಕೊಡಬೇಕಾದಾಗ ಒಂದು ಬೌಂಡರಿಯನ್ನು ಫಿಕ್ಸ್ ಮಾಡಿ ಅಲ್ಲಿ ಅಗತ್ಯತೆ ಎಷ್ಟು ಇದೆ, ಎಷ್ಟು ನಿವೇಶನಗಳನ್ನು ಮಾಡಬಹುದು ಎನ್ನುವುದರ ಮೇಲೆ ಸಚಿವ

ಸಂಪುಟ ಅನುಮೋದನೆ ಕೊಟ್ಟ ಮೇಲೆ ನಿವೇಶನ ಮಾಡುವುದಕ್ಕೆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಆದರೆ BDA Act ಪ್ರಕಾರ ಲ್ಯಾಂಡ್ ಅಕ್ವಿಸಿಷನ್ ಆಗಬೇಕು. ಆದರೆ ಇದರಲ್ಲಿ ಇವತ್ತು ಏನಾದರೂ ಭ್ರಷ್ಟಾಚಾರ ಜಾಸ್ತಿಯಾಗುತ್ತಿದೆ, ಭ್ರಷ್ಟಾಚಾರದ ಹೆಸರಿನಲ್ಲಿ ಕೋರ್ಟ್‌ಗಳಲ್ಲಿ ಹಗರಣಗಳು ಜಾಸ್ತಿಯಾಗುತ್ತಿವೆ ಇದಕ್ಕೆ ಯಾವುದು ಕಾರಣವೆಂದರೆ, ನನಗೆ ಹೆಚ್ಚು ಕಾರಣ ಆಗುತ್ತಾ ಇರುವುದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ, ಅದರ ವಹಿವಾಟಿನಲ್ಲಿ ಹಸ್ತಕ್ಷೇಪ ಆಗುತ್ತಿರತಕ್ಕಂಥದ್ದು ಜಾಸ್ತಿಯಾಗಿದೆ. ಬಹಳ ಮುಖ್ಯವಾಗಿ ಎಂದರೆ, ಡಿ–ನೋಟಿಫಿಕೇಷನ್. ಡಿ–ನೋಟಿಫಿಕೇಷನ್ ಯಾವ ಸಂದರ್ಭದಲ್ಲಿ ಮಾಡಬಹುದು, ಒಂದು ಸಾರಿ ನಾವು ನೋಟಿಫಿಕೇಷನ್ ಮಾಡುತ್ತೇವೆ ಒಂದು ಲೇಔಟ್‌ಗೆ ನೋಟಿಫಿಕೇಷನ್ ಮಾಡಿ ಫೈನಲ್ ನೋಟಿಫಿಕೇಷನ್ ಆದ ಮೇಲೆ ಕೂಡ ಅದನ್ನು ಡಿ–ನೋಟಿಫಿಕೇಷನ್ ಮಾಡತಕ್ಕಂತಹ ಪ್ರಕ್ರಿಯೆಯಲ್ಲಿ ಇರತಕ್ಕಂಥದ್ದು ಎಲ್ಲಾ ವಿಚಾರಗಳನ್ನು ಆಡಗಿರತಕ್ಕಂಥದ್ದು ಅಲ್ಲಿ. ಆದರೆ ಇದಕ್ಕೆ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯಗಳು ಅನೇಕ ತರಹದ ತೀರ್ಪುಗಳನ್ನು ಕೊಟ್ಟಿವೆ. ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಡಿ–ನೋಟಿಫಿಕೇಷನ್ ಮಾಡಬೇಕಾದಾಗ ಏನು ನಿಯಮ ಇದೆ ಎಂದು. ನಾನು ಆ ನಿಯಮದ ಒಂದು ಒಕ್ಕಣೆ ಹೈಕೋರ್ಟಿನ ಅಬ್ಸರ್‌ವೇಷನ್ ಇದೆ ಅದನ್ನು ಓದಿ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

"Under the Land Acquisition Act, 1864 also, the liberty to withdraw from acquisition is available to Government only when it has not taken possession of land. The following box contains excerpts of the judgment of the High Court of Karnataka of Smt.Radhamma and others V/s Smt.Lakshmamma K.Murthy, 1995(4) which gives a prospective of reversal of the acquisition process under the land Acquisition Act, 1984.

"The Act of reconveyance is virtually unheard of in the scheme of law relating to land acquisitions. Acquisition of

property for a public purpose is a very serious matter in so far as such a property is compulsorily required to be surrendered by a citizen for a modest compensation and the only justification for this is the plea of overwhelming public purpose because the law subjugates personal interest to the public interest. Once that procedure is completed, all rights stand extinguished and the property along with attachment thereon vests completely in the acquiring authority. It is amazing in these circumstances to find Government authorities, on all sorts of personal and extraneous considerations, interfering with the acquisition process and reversing it in a manner that is unheard of under the provisions of the Land acquisition Act. Quite apart from the loss to the exchequer, since it is presumed that the earlier acquisition was done in public interest, a reversal of that process signifies that the political authority who directs it is subverting public interest by subjugating it to personal interest..." ಇದು ಒಂದು high court observation ಇದೆ. ಈ ರೀತಿಯ ಪ್ರಕರಣಗಳ ಹಿನ್ನೆಲೆಯಲ್ಲಿ ಬಂದಿರುವ ಒಂದು ತೀರ್ಪು. ಈ ತೀರ್ಪಿನ ಅಡಿಯಲ್ಲಿ ಆಗುತ್ತಿರುವುದೇನೆಂದರೆ, ಶಿವರಾಮ ಕಾರಂತ ಲೇಔಟ್, ಇನ್ನೂ ಪ್ರಾರಂಭ ಹಂತದಲ್ಲಿದೆ. ಪ್ರಾರಂಭದ ಹಂತದಲ್ಲೇ ಇವತ್ತು ಅಲ್ಲೇ ಒಂದು ತೀರ್ಮಾನ ಮಾಡುತ್ತಾರೆ. ಶಿವರಾಮ ಕಾರಂತ ಬಡಾವಣೆ ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿದ 17 ಹಳ್ಳಿಗಳಲ್ಲಿ 3246 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳುವುದು, ಸಾರ್ವಜನಿಕರಿಗೆ 2871 ಎಕರೆ ಜಮೀನು ಕಳೆದುಕೊಳ್ಳುವ ಭೂ ಮಾಲೀಕರಿಗೆ, ಅದೆಲ್ಲಾ ವಿಚಾರವಿದೆ, ಅದನ್ನು denotification ಮಾಡುತ್ತಾರೆ. ಇನ್ನೂ ಪ್ರಾರಂಭದಲ್ಲೇ ನೋಟಿಫಿಕೇಷನ್ ಆಯಿತು, ಈ ಹಂತದಲ್ಲೇ notification ಆಗುತ್ತದೆ. ಈಗಾಗಲೇ 2010ರಲ್ಲಿ ಯಾವುದೇ ಒಂದು ಸಂದರ್ಭದಲ್ಲಿ denotification ಮಾಡಬೇಕಾದಾಗ ಅದಕ್ಕೊಂದು ನಿಯಮವಿದೆ.

Additional Chief Secretary, All department heads ಇರುತ್ತಾರೆ. ಇಲಾಖೆಯ ಎಲ್ಲಾ ಮುಖ್ಯಸ್ಥರು ಇರುತ್ತಾರೆ, ಬೆಂಗಳೂರಿನ ಎಲ್ಲಾ ಜಿಲ್ಲಾಧಿಕಾರಿಗಳು ಸೇರಿ ತೀರ್ಮಾನ ಮಾಡಬೇಕು. ಯಾವ ಕಾರಣಕ್ಕೋಸ್ಕರ denotification ಆಗುತ್ತದೆ ಎನ್ನುವುದನ್ನು ಮಾಡಬೇಕು. ಇದು ಇನ್ನೂ notification stage ನಲ್ಲಿದೆ. ಆಗಲೇ acquire ಮಾಡುತ್ತಾರೆ. ಎಷ್ಟು ಎಕರೆ acquire ಮಾಡುತ್ತಾರೆಂದರೆ, 400 ಎಕರೆ notification ಮಾಡುವಲ್ಲಿ 257 ಎಕರೆ ಬಿಡುವುದಕ್ಕೆ ಪ್ರಯತ್ನ ಪಡುತ್ತಾರೆ. ಅದಕ್ಕೆ ಏನು ಒಕ್ಕಣೆ, ಯಾವ ಕಾರಣಕ್ಕೋಸ್ಕರ ಎಂದರೆ, ಪ್ರಾಧಿಕಾರದ ಸಭೆಯ ವಿಷಯ ಸಂ:196/9 ರಲ್ಲಿ 27ರಲ್ಲಿ 1 ಎಕರೆ 36 ಗುಂಟೆ, 44 ರಲ್ಲಿ 1 ಎಕರೆ 17 ಗುಂಟೆ, 45 ರಲ್ಲಿ 35 ಗುಂಟೆ ಈ ರೀತಿಯಾಗಿ ಒಟ್ಟು 8 ಎಕರೆ 17 ಗುಂಟೆ ಜಮೀನಿಗೆ ಸಂಬಂಧಿಸಿದ ಪ್ರಾರಂಭಿಕ ಅಧಿಸೂಚನೆ ಹೊರಡಿಸುವ ಮುನ್ನವೇ ಪ್ರಾಧಿಕಾರದಿಂದ ತಾತ್ಕಾಲಿಕವಾಗಿ ಖಾಸಗಿ ಬಡಾವಣೆಯ ವಿನ್ಯಾಸ ನಕ್ಷೆಯ ಅನುಮೋದನೆಯನ್ನು ಪಡೆದಿರುವ ಅಂಶವನ್ನು ಸಭೆ ಗಮನಿಸಿತು. ಅಂದರೆ ಇವರು land acquisition process ಶುರು ಮಾಡಬೇಕಾದರೇ, ಈ definition ನನಗೆ ಅರ್ಥವಾಗಲಿಲ್ಲ, ತಾತ್ಕಾಲಿಕವಾಗಿ ಖಾಸಗಿ ಬಡಾವಣೆಯ ವಿನ್ಯಾಸ ನಕ್ಷೆ ಅನುಮೋದನೆ ಪಡೆದಿರುವ ಅಂಶವನ್ನು ಸಭೆ ಗಮನಿಸಿತು. ಅಲ್ಲದೆ, ಬೆಂಗಳೂರು ಜಲಮಂಡಳಿ ಮತ್ತು ವಿದ್ಯುತ್ ಪ್ರಸರಣ ನಿಗಮದಿಂದ ನಿರಪೇಕ್ಷಣಾ ಪತ್ರವನ್ನು ಪಡೆದಿರುವ ಹಿನ್ನೆಲೆಯಲ್ಲಿ ಪ್ರಸ್ತಾವಿತ ಸರ್ವೆ ನಂಬರ್ ಜಮೀನುಗಳನ್ನು ಶಿವರಾಮ ಕಾರಂತ ಬಡಾವಣೆಯ ಪ್ರಾರಂಭಿಕ ಅಧಿಸೂಚನೆಯಿಂದ ಕೈಬಿಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಗಿದೆ. ನನಗೆ ಅರ್ಥವಾಗುತ್ತಿಲ್ಲ, ನಾನು ಮೇಲೆ ಹೈಕೋರ್ಟ್‌ನ ತೀರ್ಪನ್ನು private interest ಗಿಂತ public ಮುಖ್ಯವೆಂದು ಹೇಳಿದೆ, ಇಲ್ಲಿ ಯಾರ interest ಇದೆ, it is self-interest ಇದು ಕಾರಣವೇ, ಇದನ್ನು ಸರ್ಕಾರ ಒಪ್ಪಬೇಕೆ? ಈ ರೀತಿ ಎಷ್ಟು ಆಗಿರುವುದು? ಒಂದೇ ಎರಡೇ ಹತ್ತಾರು ಪ್ರಕರಣಗಳಿವೆ. ಈ de-notification ಅನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ ಆ ಸಮಿತಿಯವರೇನಾದರು ಕುಳಿತು ಚರ್ಚೆ ಮಾಡಿದ್ದಾರಾ? ಏನೂ ಇಲ್ಲ. ಇವತ್ತು ಏಕಾಏಕಿ 500–1000 ಎಕರೆ ಜಮೀನನ್ನು ಕೈಬಿಡುವ ಕೆಲಸ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ನೂರಾರು ಕೋಟಿ ರೂಪಾಯಿಗಳ

ಹಸ್ತಾಂತರವಾಗುವ ಸಂದರ್ಭವಿದೆ, ಆಗಿದೆ, ಅದೊಂದು ದೊಡ್ಡ ದಂಧೆ, ಇದು ಬಿಡಿಎನಲ್ಲಿ ಆಗುತ್ತಿರುವ ವಿಚಾರ, ಇದರ ಕಡೆಗೆ ಗಮನವಿರಬೇಕು. ಇದೊಂದು ಕಡೆಯಾದರೆ, ಅರ್ಕಾವತಿ ಲೇಔಟ್, ನಮಗೆಲ್ಲಾ ಗೊತ್ತಿದೆ, ಎಷ್ಟು ವರ್ಷದಿಂದ ಅರ್ಕಾವತಿ ಲೇಔಟ್‌ನದು ಕೋರ್ಟ್‌ನಲ್ಲಿ ವಿವಾದವಿರುವುದು? ನಿನ್ನೆಯೋ ಮೊನ್ನೆಯ ದಿವಸವೋ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ನೋಡಿದೆ. Land acquisition ಆಗಿರುವವರು ಹಣಕ್ಕೋಸ್ಕರ ಇವತ್ತು ಬಿಡಿಎ ಕಛೇರಿ ಮುಂದೆ, ನಮ್ಮ land acquire ಆಗಿದೆ, ಜಮೀನು ಕಳೆದುಕೊಂಡು ಬಹಳ ವರ್ಷವಾಗಿದೆ ನಮಗೆ ದುಡ್ಡು ಕೊಡಿ ಎಂದು ಸಾಲು ನಿಂತಿದ್ದಾರೆ. ಇದರ ಜೊತೆಗೆ 40:60 ಅನುಪಾತದ ಮೇಲೆ ಭೂಮಿಯನ್ನು ಕೊಡುವ ಒಂದು ವಿಚಾರ ಇದೆ. ಅದರ ಬಗ್ಗೆಯೂ ಯಾವುದೇ ಚಕಾರವಿಲ್ಲ. ಸುಮಾರು ಎಂಟು ಒಂಬತ್ತು ಸಾವಿರ ಎಕರೆ ಜಮೀನು acquire ಮಾಡಿರುವ ಅರ್ಕಾವತಿ ಲೇಔಟ್ ನಲ್ಲಿ layout develop ಆಗಲಿಲ್ಲ, ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾದ ಮೇಲೂ ಕೂಡ ಯಾವುದೇ ಪ್ರಕ್ರಿಯೆ ಆಗಲಿಲ್ಲ. ಅರ್ಕಾವತಿ ಲೇಔಟ್ ಎಂದರೆ ಕಣ್ಣಿಗೆ ಒಂದೇ ಒಂದು ಕಾಣುವುದೆಂದರೆ, Metropolitian Cooperative Housing Society Limited, Bangalore ಇವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಗಟು ಹಂಚಿಕೆ ನಿಯಮಗಳ ಮೇಲೆ 20 ಎಕರೆ ಜಮೀನನ್ನು ಷರತ್ತುಗೊಳಪಟ್ಟು ಹಂಚಿಕೆ ಮಾಡಲು ಸರ್ಕಾರ ಅನುಮೋದನೆ ನೀಡಿದೆ. ಇದನ್ನು ನಾವು compare ಮಾಡೋಣ, ಅದರ ಫಲಾನುಭವಿಗಳ್ಯಾರೆಂದರೆ, IAS, IPS, IFS and IRS ಅಧಿಕಾರಿಗಳು. ಅವರಿಗೆ ಮಾಡುವುದನ್ನು ನಾನು ಬೇಡವೆನ್ನುವುದಿಲ್ಲ, ಇವತ್ತು ಕಾನೂನಿನಲ್ಲಿ ಅವಕಾಶವಿದೆ. ಇವತ್ತು Bangalore Development Authority ರೂಲ್ಸ್ ನಲ್ಲಿ ಅವಕಾಶವಿದೆ, "Power of authority to make bulk allotment:- Notwithstanding anything contained in this Act or development scheme sanctioned under this Act, the Authority may, subject to any restriction, condition and limitation as may be prescribed, make bulk allotment by way of sale, lease or otherwise of any land which belongs to it or is vested in it or acquired by it for the purpose of any development scheme." ನಾನು IAS ನವರಿಗೆ ಮಾಡಿದ್ದಾರೆನ್ನುವ ಕಾರಣಕ್ಕೆ

ಹೇಳುತ್ತಿಲ್ಲ. bulk allotment ನಲ್ಲಿ ಅವಕಾಶವಿತ್ತು. ನಾನು ಇವತ್ತು ಕೇಳುತ್ತಿರುವುದೇನೆಂದರೆ, IAS ಅಧಿಕಾರಿಗಳು ಕೇಳಿದರೆನ್ನುವ ಕಾರಣಕ್ಕೋಸ್ಕರ bulk allotment ಕೊಟ್ಟಿರಲ್ಲಾ, ಅದೇ ಪ್ರಕಾರವಾಗಿ ಬೇರೆಯವರಿಗೆ ಏತಕ್ಕೆ ಕೊಡಲಿಲ್ಲ? ಬೆಳಿಗ್ಗೆ ಎದ್ದರೆ G category ಯಲ್ಲಿ ಸೈಟು ಕೊಟ್ಟಿರುವ ಬಗ್ಗೆ ದೊಡ್ಡ ಹಗರಣಗಳೇ ನಡೆಯುತ್ತಿದೆ. High court single judge ಮುಂದೆ ಬರುತ್ತದೆ, ಆಮೇಲೆ BDA appeal ಹೋಗುತ್ತಾರೆ, Division Bench judgement ಬರುತ್ತದೆ. ಒಬ್ಬ ಶಾಸಕನಾಗಿರುವವನು ನಿವೇಶನವನ್ನು ತೆಗೆದುಕೊಳ್ಳುವುದಕ್ಕೆ ಹೊರಟರೆ ಎಷ್ಟೆಲ್ಲಾ ಕಷ್ಟವಿದೆ? ಇವತ್ತು ಯಾವುದೋ ಒಂದು ಕ್ಯಾಟಗರಿಯಲ್ಲಿ ಶಾಸಕರಿಗೊಂದು ನಿವೇಶನ ಕೊಡಲು ಹೊರಟರೆ ಜಿ ಕ್ಯಾಟಗರಿಯಲ್ಲಿ ಕೊಟ್ಟಿದ್ದು ತಪ್ಪೆಂದು ಇವತ್ತು ಕೋರ್ಟಿಗೆ ಹೋಗುತ್ತಾರೆ, ಕೋರ್ಟ್ನ ಛೀಮಾರಿ ಹಾಕುತ್ತದೆಂದರೆ, ಇವತ್ತು IAS ಅಧಿಕಾರಿಗಳು ಅವಕಾಶವನ್ನು ಪಡೆದುಕೊಂಡರಲ್ಲ? ಯಾವುದೇ ಗುಂಪಾಗಲಿ, ಒಂದು ಇಂಡಸ್ಟ್ರಿಯಲ್ಲಿ ಕೆಲಸ ಮಾಡುವವರಿರಬಹುದು ಅಥವಾ ಶಾಸಕರಾಗಿರಬಹುದು, ಇವರಿಗೆ ಏಕೆ ಅದನ್ನು ಮಾಡಲಿಲ್ಲ? ಅವರಿಗೆ ಮಾಡುವುದಕ್ಕೆ ಏಕೆ ಈ ಅವಕಾಶವನ್ನು ಮಾಡಿಕೊಳ್ಳಲಿಲ್ಲ? ಇವತ್ತು ಇಷ್ಟೊಂದೆಲ್ಲಾ ಟೀಕೆ ಮಾಡಿಸಿಕೊಳ್ಳಬೇಕಾಗಿ ಬಂತಾ? ಇವತ್ತು ಬೆಂಗಳೂರಿನಲ್ಲಿ ನಿವೇಶನ ಪಡೆಯಲು ಎಷ್ಟು ಕಷ್ಟವಿದೆ ಎನ್ನುವುದು ಗೊರತ್ತಿರುವ ವಿಚಾರ. ಏತಕ್ಕೆ ಹಾತೊರೆಯುತ್ತಾರೆಂದರೆ, ಒಂದು ಸೈಟಿನ ಬೆಲೆ ಎಂದರೆ, ಇದು ಲಕ್ಷದಲ್ಲಿಲ್ಲ, ಕೋಟಿಯಲ್ಲಿದೆ. ರಾಜಕಾರಣಿಗಳಾಗಿರತಕ್ಕಂತಹವರು ಏಕೆ ಸೈಟ್ ಬೇಕೆಂದು ಹೇಳುತ್ತಾರೆಂದರೆ ಎಲ್ಲೋ ಒಂದು ಕಡೆ ಚುನಾವಣೆ ವೇಳೆ ತಲೆ ಕಾಯುವುದು ಅದು ಒಂದೇ. ಬಹಳಷ್ಟು ಜನ ಸೈಟ್‌ಗಳು ಮಾರಿ ಚುನಾವಣೆಗೆ ನಿಂತಿರುವುದು. ಇಂತಹ ಪ್ರಕರಣದಲ್ಲಿ ಅವರಿಗೆ ಮಾಡಬಾರದು ಎಂದು ಅಲ್ಲ. ಅದನ್ನು ಏಕೆ ಆ ಕೆಟಗರಿಯಲ್ಲಿ ಬಲ್ಕ್ ಅಲಾಟ್‌ಮೆಂಟ್ ಮಾಡಬಾರದಾಗಿತ್ತು. ಅದು ನನ್ನ ಪ್ರಶ್ನೆ ಇರತಕ್ಕಂಥದ್ದು. ಅದೆಲ್ಲಕ್ಕಿಂತ ಹೆಚ್ಚಾಗಿ ಅರ್ಕಾವತಿ ಲೇಔಟ್‌ಗೆ ಹೋದರೆ ದೊಡ್ಡದಾಗಿ ಲೇಔಟ್ ಫಾರ್ಮ್ ಆಗಿ ಹೋಗಿದೆ. ಅಲ್ಲಿ ಕಾಣತಕ್ಕಂಥದ್ದು ಯಾವುದು ಎಂದರೆ, ಕೇವಲ ಇದು IAS officers ಗಳಿಗೆ ಆಗಿರತಕ್ಕಂತಹ house building society lay-out ಮಾತ್ರ ಆಗಿರುವುದು ಬಿಟ್ಟರೆ ಬೇರೆ ಇನ್ನ್ಯಾವುದೂ ಕೂಡ ಡೆವಲಪ್ ಆಗಿಲ್ಲ. ಜನಸಾಮಾನ್ಯರಿಗೋಸ್ಕರ ದುಡ್ಡು

ಕೊಟ್ಟು ಕಾಯುತ್ತಿರುವವರಿಗೆ ಯಾವುದೂ ಆಗಿಲ್ಲ. ನಾನು ಅದನ್ನು ನೋಡುವುದಕ್ಕೋಸ್ಕರ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದ ನಂತರ ನೋಡೋಣ ಏನಿದೆ ಎಂದು ಸ್ನೇಹಿತರ ಜೊತೆ ಹೋದೆ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಏಕೆ ಇದನ್ನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆಂದರೆ, ಅಲ್ಲಿ ಆರು ಪಾರ್ಕ್‌ಗಳು ಇವೆ. ಪಾರ್ಕ್ ಇರುವ ಜಾಗ ಏನೆಂದು ನಾವು ನೋಡುವುದಕ್ಕೆ ಹೊರಟೆವು. ಅಲ್ಲಿ ಇಷ್ಟು ದೊಡ್ಡದಾಗಿರತಕ್ಕಂತಹ ಕಟ್ಟಡ ಇದೆ. ಇದು ಯಾವಾಗ ಕಟ್ಟಿದರು ಏನು ಎಂದು ನನಗೆ ಗೊತ್ತಿಲ್ಲ. ಅದನ್ನು ಕಟ್ಟಿ ಹತ್ತಾರು ವರ್ಷಗಳಾಗಿವೆ. ಬಹಳ ದೊಡ್ಡದಾದ ಕಟ್ಟಡ ಇರತಕ್ಕಂತಹ ಪಾರ್ಕ್ ಇದು. BDA ಏನು ಮಾಡುತ್ತಿದೆ ಇವತ್ತು ಕಾನೂನು ಕೇಳಿದರೆ ಅವರಿಗೂ ಒಂದೇ, ನಮಗೂ ಒಂದೇ. ಈ ವಿಚಾರ ಇಲ್ಲಿ ಸದನದಲ್ಲಿ ಪ್ರಸ್ತಾಪವಾದಾಗ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸದಾನಂದಗೌಡರು ಹೋದ ಸದನದಲ್ಲಿ ಹೇಳಿದರು ಇವತ್ತೇ ನಾನು CID enquiry ಮಾಡಿಸುತ್ತೇನೆಂದು ಹೇಳಿದರು. CID enquiry ಮಾಡಿದರೆ? ದಯಮಾಡಿ ನಾನು ಕೇಳುತ್ತಿದ್ದೇನೆ, ತಪ್ಪಾಗಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಜಮೀನು ಮಾಲೀಕರಿಗೆ ಇದುವರೆಗೂ compensation ಹೋಗಿಲ್ಲ. ಅವರು ಬಿಡಿಎ ಆಫೀಸ್ ಮುಂದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಅಲ್ಲಿ ಲೇಔಟ್‌ಗಳನ್ನು ಮಾಡುತ್ತಿದಾರೆ. ಇದು ಒಂದು ಕಡೆ ಆದರೆ, ಅದೇ ರೀತಿಯಾಗಿ ಅರ್ಕಾವತಿ ಲೇಔಟ್‌ಗೆ ಬೇರೆ ಸೈಟ್‌ಗಳಿಗೆ ದುಡ್ಡು ಕೊಟು ಕಾಯುತ್ತಿದ್ದಾರಲ್ಲ, 8,000 ಸೈಟುಗಳಿಗೆ ಅವರಿಗೇಕೆ ಕೊಡಲಿಲ್ಲ? ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆಯೇ? ಇದು ಸರ್ಕಾರದ ನೀತಿಯೆ? ಇದು ವಿಧಾನ ಸಭೆಯಲ್ಲಿ ಪ್ರಸ್ತಾಪ ಆದಾಗ ಹಿಂದಿನ ಮುಖ್ಯ ಮಂತ್ರಿಗಳು CID enquiry ಮಾಡಿಸುತ್ತೇವೆಂದು ಹೇಳಿದ್ದರು. ಸದನದಲ್ಲಿ ಕೊಟ್ಟಂತಹ ಆಶ್ವಾಸನೆ. ಆಗ ನಾನು ಕೂಡ ಇದ್ದೆ. ಏಕೆ ಮಾಡಲಿಲ್ಲ. ಯಾರ ಹುಳುಕು ಈಚೆ ಬಂದು ಸತ್ಯ ಗೊತ್ತಾಗುತ್ತದೆ ಎಂದು ಹೇಳಿ ಮಾಡಲಿಲ್ಲ? ಇದನ್ನು ನಾನು ಹೇಳುತ್ತೇನೆ, ಇದನ್ನು ಅವರೂ ಇವರೂ ಎನ್ನುವುದಕ್ಕಿಂತ ಹೆಚ್ಚಾಗಿ BDA ನಲ್ಲಿ ನಡೆಯುತ್ತಿರತಕ್ಕಂತಹ ದಂಧೆ ಏನು ಎನ್ನತಕ್ಕಂಥದ್ದನ್ನು ಮನವರಿಕೆ ಮಾಡುವುದಕ್ಕೆ ಇಚ್ಚೆ ಪಡುತ್ತೇನೆ. ಆ ದಂಧೆಯಿಂದ ನಾವು ಹೊರಬರಬೇಕಾದಾಗ ಇದು ಎಲ್ಲೋ ಒಂದು ಕಡೆಗೆ ಅಂತಿಮ ಆಗಬೇಕು. ನೀವು BDA ನಲ್ಲಿ ಯಾವುದೇ ವಿಚಾರವಾಗಿ ಹೋಗಿ ದುಡ್ಡಿಲ್ಲದ ವಿಚಾರವೇ ಇಲ್ಲ. ಯಾವುದೇ

ವಿಚಾರ it is all fixed. Everything is fixed. ನನಗೆ ಇಷ್ಟೆಲ್ಲಾ ಗೊತ್ತಾಗುವುದಕ್ಕೆ ಕಾರಣವೇನೆಂದರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಕೆಲವು ವಿಚಾರಗಳನ್ನು ಚರ್ಚೆ ಮಾಡುವಾಗ ನನಗೆ ಗೊತ್ತಾಯಿತು. Alternative site. Site ಮಂಜೂರಾಗುತ್ತದೆ ಅಲ್ಲಿ ಸೈಟ್ ಇರುವುದಿಲ್ಲ. ಕೋರ್ಟಿನಲ್ಲಿ ಇರುತ್ತದೆ. ಅವರಿಗೆ ಮಂಜೂರಾಗಬೇಕು. ಇನ್ಯಾರೋ ಅಲ್ಲ, ನಮ್ಮ Urban Development Minister Mr.Suresh Kumar ರವರಿಗೆ ಸೈಟ್ ಸಿಗಲಿಲ್ಲ. ಅವರಿಗೂ alternative site ಕೊಟ್ಟಿದ್ದು, ಈ ದಂಧೆ ಒಂದು ಸಾರಿ ರಿಜಿಸ್ಟರ್ ಮಾಡುತ್ತಾರೆ. ರಿಜಿಸ್ಟ್ರೇಷನ್ ಆಗುತ್ತದೆ ಅದು ಕ್ಯಾನ್ಸಲ್ ಆಗುವುದಿಲ್ಲ. ಇನ್ನೊಂದು alternative site ಕೊಡುತ್ತಾರೆ. ಸೈಟ್ ಕೊಟ್ಟಾಗ ಮತ್ತೆ ಪುನ: ರಿಜಿಸ್ಟ್ರೇಷನ್ ಫೀಸ್ ಕಟ್ಟಬೇಕು. BDA ನಲ್ಲಿ ಏನು ನಡೆಯುತ್ತಿದೆ? ಒಂದೆರಡು ಮೂರು ಉದಾಹರಣೆಗಳನ್ನು ಹೇಳುತ್ತೇನೆ. ಅಲ್ಲಿನ ಖರೋಲ ಎನ್ನುವವರು ಪ್ರಾಮಾಣಿಕ ಅಧಿಕಾರಿ. ನಾನು ಒಂದು ದಿನ ಹೋಗಿ ಅವರ ಹತ್ತಿರ ಏನಿದು ಕಥೆ ಎಂದು ಪ್ರಸ್ತಾಪ ಮಾಡಿದೆ. ಆಗ ಅವರು ಇವೆಲ್ಲಾ ವಿಚಾರಗಳನ್ನು ಹೇಳಿದರು ಹೀಗೆ ಆಗುತ್ತಿದೆ ಎಂದು. ಅದಕ್ಕೆ ನಾನು ಒಂದೇ ಒಂದು ವಿಚಾರ ಹೇಳುತ್ತೇನೆ. ನಾನು ಒಂದು ಅಪ್ಲಿಕೇಷನ್ ಕೊಟ್ಟಿದ್ದೆ., ಈಗ ನನಗೆ ಜನಾರ್ಧನ ಗುಪ್ತ ಹಾಗೂ ಅನಿತಾ ಎಂದು ಇಬ್ಬರು ಅರ್ಜಿ ಕೊಡುತ್ತಾರೆ. ಅವರು ಮೇಲೆ ಗ್ಯಾಲರಿಯಲ್ಲಿ ಕೂತಿದ್ದಾರೆ. ಗುಪ್ತ ಎನ್ನುವವರು ಅವರ ಅರ್ಜಿಯಲ್ಲಿ ಹೇಳಿರುವಂಥದ್ದು ಮೇಲ್ಕಂಡ ನಿವೇಶನದಾರರಿಗೆ ಯಾವುದೇ ನಿವೇಶನ ಹಾಗೂ ಸ್ವಂತ ಮನೆ ಇಲ್ಲ, ನನಗೆ ಈಗಾಗಲೇ 65 ವರ್ಷವಾಗಿದ್ದು ಹಿರಿಯ ನಾಗರೀಕನಾಗಿದ್ದೇನೆ. ಪದೇ ಪದೇ ಬರುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ನನಗೆ ಒಂದು ಸೈಟ್ ಕೊಡಿ. ಕಾರಣವೇನೆಂದರೆ, ನನ್ನ ನಿವೇಶನವನ್ನು ಜಮೀನು ಕೊಡುವುದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಡಿ ನೋಟಿಫೈ ಮಾಡಿರುವುದಾಗಿ ತಿಳಿದುಬಂದಿರುತ್ತದೆ. ಅಂದರೆ, ಇವರಿಗೆ ಅಲಾಟ್‌ಮೆಂಟ್ ಕೊಟ್ಟುಬಿಟ್ಟರು, ಆಮೇಲೆ ಡಿ–ನೋಟಿಫಿಕೇಷನ್. ಡಿ–ನೋಟಿಫಿಕೇಷನ್ ಆದ ಮೇಲೆ ನಿನಗೆ ಸೈಟ್ ಇಲವೆಂದು ಹೇಳುವುದು. ಅವರಿಗೆ ಆಲ್ಟರ್‌ನೇಟಿವ್ ಸೈಟ್ ಕೊಡಬಾರದಾ? Is it not the duty? ಅದೇ ರೀತಿ ಇನ್ನೊಂದು ಜ್ಞಾನಭಾರತಿಯ ನಾಗದೇವನಹಳ್ಳಿಯಲ್ಲಿ ಕೂಡ ಆ ಜಮೀನು ಡಿ ನೋಟಿಫೈ ಆಗಿದೆ ನನಗೆ ನಿವೇಶನ ಇಲ್ಲ ನನಗೆ ನಿವೇಶನ ಕೊಡಿಸಿ ಎಂದು

ಹೇಳಿದ್ದಾರೆ. ಇಂತಹ ಪ್ರಕರಣಗಳು ಒಂದಲ್ಲ ಸಾವಿರಾರು ಪ್ರಕರಣಗಳಿವೆ. ಒಂದೊಂದು ಪ್ರಕರಣಗಳಿಗೂ ಕೂಡ ನಾವು ಒಂದು alternative site ಪಡೆಯಬೇಕಾದಾಗ ಇಷ್ಟು ಎಂದು ಫಿಕ್ಸ್ ಆಗಿರುತ್ತದೆ ಅಲ್ಲಿ. ಶಾಸಕರಿಗೆ ಅಲಾಟ್ ಆಗಿರತಕ್ಕಂತಹ ಸೈಟ್‌ಗೆ alternative site ಕೊಡಬೇಕಾದರೂ ದುಡ್ಡು ಕೊಡಬೇಕಾಗಿರುವುದನ್ನು ಮರೆಯಬೇಡಿ. ಈ ರೀತಿ ಆದರೆ ನಾವು ಕಣ್ಣು ಮುಚ್ಚಿ ಕೂರಬೇಕಾ? ಈ ವಿಚಾರ ಪ್ರಸ್ತಾಪ ಮಾಡಬಾರದಾ? ಆ ಕಾರಣಕ್ಕೋಸ್ಕರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಕೊನೆ ಆಗಬೇಕು. ಕೊನೆ ಆಗಬೇಕಾದರೆ ಕಾನೂನು ಪ್ರಕಾರ ಎಲ್ಲರಿಗೂ ಒಂದೇ ರೀತಿಯಾಗಿ ಇರಬೇಕಾಗುತ್ತದೆ. ವ್ಯತ್ಯಾಸಗಳು ಆಗಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವಿಚಾರಗಳೆಲ್ಲವೂ ಕೂಡ ಬಯಲಿಗೆ ಬರಬೇಕು. ಸತ್ಯ ಈಚೆ ಬರಬೇಕು ಎನ್ನುವುದಾದರೆ ದಯಮಾಡಿ ಸದನ ಸಮಿತಿ ಮಾಡಿ. ಸದನ ಸಮಿತಿ ಮಾಡಿ ನಾವು ಯಾವ ಯಾವ ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಕೊಟ್ಟಿದ್ದಾರೆ, ಪಾರ್ಕ್ ಎಂದು ಇರುವ ಕಡೆ ಎಲ್ಲೆಲ್ಲಿ ಏನೇನು ಕಟ್ಟಿದ್ದಾರೆ, ಎಷ್ಟು ಕಡೆ ಜಾಗ ಬಿಟ್ಟಿದ್ದಾರೆ ಬಿಡಿಎ ವಶದಲ್ಲಿ ಎಷ್ಟು ಸೈಟ್‌ಗಳು ಇವೆ, ಅದೆಲ್ಲವೂ ಕೂಡ ವಿಚಾರಣೆ ಆಗಲಿ. ಅದೆಲ್ಲಕ್ಕಿಂತ ಹೆಚ್ಚಾಗಿ ಹೈಕೋರ್ಟ್ ಒಂದು ಸಾರಿ ಅಲ್ಲ ಹತ್ತು ಸಾರಿ ಹೇಳಿದೆ. ಈ ವಿಚಾರಕ್ಕೋಸ್ಕರ ಇದು ನಮಗೆ ಬೇಕಾ? ಬಿಡಿಎ ಬೇಕಾ? ಇದನ್ನು ತೆಗೆದು ಬಿಸಾಕಿ ಎಂದು ಹೇಳುತ್ತಾರೆ. ಬಿಡಿಎ ಗೆ ಸರ್ಜರಿ ಆಗಲೇ ಬೇಕು ಎಂದು ಹೈಕೋರ್ಟ್‌ನಲ್ಲಿ ಆದೇಶ ಅದ ಮೇಲೆ ಈ ರೀತಿಯಾದ ಟೀಕೆಗಳು ಬಂದ ಮೇಲೆ BDA warned against the peaceful approach of land use change. ಒಂದೇ ಎರಡೇ, ಎಲ್ಲಾ ತರಹದ ವಿಚಾರಗಳು ಇದರಲ್ಲಿ ಇದೆ. ಅಧ್ಯಕ್ಷರೆ, ಬಿಡಿಎ ಡಬಲ್ ಗೇಮ್ ಸ್ಪಷ್ಟೀಕರಣ ಮಾಡಿದ್ದು ಒಂದು. ಈ ತರಹ ಟೀಕೆಗಳು ಬೆಳಿಗ್ಗೆ ಪತ್ರಿಕೆಯಲ್ಲಿ ಬರುತ್ತಿದ್ದರೆ ವಿಶ್ವಾಸ ಎಲ್ಲಿ ಉಳಿಯುತ್ತದೆ? ಇದನ್ನು ಸರ್ಕಾರ ಕೊನೆಗಾಣಿಸಬೇಕು ಒಂದಲ್ಲ ಒಂದು ರೀತಿಯಲ್ಲಿ ಕೊನೆಗಾಣಿಸಬೇಕಾದರೆ ಒಂದು ಸದನ ಸಮಿತಿ ಮಾಡಿ ಇದನ್ನು ವಿಚಾರ ಮಾಡತಕ್ಕಂತಹ ಕೆಲಸ ಮಾಡಿ. ಕೆಲವು ವಿಚಾರಗಳು ನಮಗೆ ಹೇಗೆ ಗೊತ್ತಾಗುತ್ತವೆ ಎಂದರೆ, ರಿಯಲ್ ಎಸ್ಟೇಟ್ ಏಜೆಂಟ್‌ಗಳಿದ್ದಾರೆ. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಕೂಡ ನಾಳೆ ವಿಧಾನ ಸಭೆ ಚುನಾವಣೆಗೆ ಹೋಗಬೇಕು ಒಬ್ಬರಲ್ಲ ಒಬ್ಬ ರಿಯಲ್ ಎಸ್ಟೇಟ್ ಏಜೆಂಟ್ ಅರ್ಜಿ ಹಾಕಿಕೊಂಡು ಕೂತಿದ್ದಾರೆ.

ನಾನು ಕ್ಯಾಂಡಿಡೇಟ್ ನಾನು ಇಷ್ಟು ಖರ್ಚು ಮಾಡುತ್ತೇನೆಂದು ಇವರಿಗೆ ಎಲ್ಲಿಂದ ಆ ಧೈರ್ಯ ಬಂತು, ಹಣ ಎಲ್ಲಿಂದ ಬಂತು, ಎಲ್ಲಿಂದ ಬಂತು ಈ ಶಕ್ತಿ? ಯಾರ ಮುಖೇಣ ಬಂತು, ಯಾರು ಶಕ್ತಿ ಕೊಡುವವರು ಇವರಿಗೆಲ್ಲಾ? ಇವತ್ತು ಸರ್ಕಾರದ ವೈಫಲ್ಯ ಬಿಡಿಎ ವಿಚಾರದದಲ್ಲಿ ಆಗುತ್ತಿರತಕ್ಕಂತಹ ತಪ್ಪಿನಿಂದಾಗಿ ಈ ರೀತಿಯಾಗಿ ಆಗುತ್ತಿದೆ. ಹಿಂದೆ ರಿಯಲ್ ಎಸ್ಟೇಟ್‌ನವರು ಕೆಲವರು ದುಡ್ಡು ಮಾಡಿಕೊಳ್ಳುತ್ತಿದ್ದರು, ಮನೆ ಕಟ್ಟಿಕೊಂಡು ಹೇಗೋ ಇರುತ್ತಿದ್ದರು. ಈಗ ಅವರೆಲ್ಲಾ ರಾಜಕೀಯಕ್ಕೆ ಬಂದಿದ್ದಾರೆ. ಲಾಬಿಗಳು ನಡೆಸುತ್ತಿದ್ದಾರೆ. ನಮಗೆ ಏನು ಭಯ ಆಗುತ್ತಿದೆ ಅಂದರೆ, ನಾಳೆ ನಾವು ಚುನಾವಣೆ ಹೇಗೆ ಫೇಸ್ ಮಾಡುವುದು? ಚುನಾವಣೆಗೆ ಹೋಗಿ ಹೇಗೆ ನಿಲ್ಲುವುದು? ಯಾವ ರೀತಿಯಾಗಿ ಅವರನ್ನು ಫೇಸ್ ಮಾಡುವುದು? ಮಾನದಂಡ ಏನು? ನಾನು ಇಷ್ಟು ಕೋಟಿ ಖರ್ಚು ಮಾಡುತ್ತೇನೆ, ಅಷ್ಟು ಕೋಟಿ ಖರ್ಚು ಮಾಡುತ್ತೇನೆ ಎಂದು ಹೇಳುತ್ತಾರೆ. ಜನರೂ ಅದೇ ತರಹ ಆಗಿ ಹೋಗಿದ್ದಾರೆ. ಇದಕ್ಕೆ ನಾವು ಕಡಿವಾಣ ಹಾಕಬೇಕಾದರೆ, ಈ ರಾಜಕೀಯ ಸರಿ ಹೋಗಬೇಕು ಎನ್ನುವುದಾದರೆ ಪ್ರಜಾಪ್ರಭುತ್ವದ ನೆಲೆಗಟ್ಟು ಸರಿಹೋಗಬೇಕು ಎನ್ನುವುದಾದರೆ ಅಕ್ರಮವಾಗಿ ಹಣ ಬರತಕ್ಕಂಥದ್ದನ್ನು ತಪ್ಪಿಸತಕ್ಕಂತಹ ಕೆಲಸ ಮಾಡಬೇಕಾದಾಗ ಸದನ ಸಮಿತಿ ಮಾಡತಕ್ಕಂಥದ್ದು ಒಳ್ಳೆಯದು ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ನಾನು ಹೇಳಬೇಕೆಂದರೆ ಇನ್ನೂ ಸಾಕಷ್ಟು ವಿಚಾರಣೆಗಳಿವೆ ಅಧ್ಯಕ್ಷರೆ, ಇವೆಲ್ಲಾ ವಿಚಾರಗಳನ್ನು ಹೇಳುತ್ತಾ ಹೋದರೆ ಅದು ಸರಿಯಾಗುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ, ಇನ್ನು ಮುಂದೆ ಈ ಅಕ್ರಮ ದಂಧೆ ಬಿ.ಡಿ.ಎ ನಲ್ಲಿರತಕ್ಕಂಥ ದಂಧೆಯನ್ನು ತಪ್ಪಿಸಬೇಕಾದಾಗ ಅದಕ್ಕೆ ಮಧ್ಯವರ್ತಿಗಳಿಂದ ಇವತ್ತು ಅವರಿಂದಾಗುತ್ತಿರತಕ್ಕಂಥ ತಪ್ಪುಗಳೇನು, ಆ ರಿಯಲ್ ಎಸ್ಟೇಟ್ ಏಜೆನ್ಸಿಗಳು ಮಾಡುತ್ತಿರತಕ್ಕಂಥದ್ದೇನು, ಅದನ್ನು ತಪ್ಪಿಸಬೇಕಾದಾಗ, ಎಲ್ಲೋ ಒಂದು ಕಡೆ ನಗರ ಪ್ರದೇಶಗಳಲ್ಲಿರತಕ್ಕಂಥ ಪ್ರಾಧಿಕಾರಗಳು, ಬಿ.ಡಿ.ಎ.ಯಂಥ ಪ್ರಾಧಿಕಾರಗಳಿರಬಹುದು ಅಥವಾ ಜಿಲ್ಲೆಗಳಿರತಕ್ಕಂಥ ಅಭಿವೃದ್ಧಿ ಪ್ರಾಧಿಕಾರಗಳಿದೆಯಲ್ಲ, ಅಲ್ಲಿ ನಡೆಯುತ್ತಿರತಕ್ಕಂಥ ವಹಿವಾಟನ್ನು ಇವತ್ತು ನಾವು ಎಲ್ಲೋ ಒಂದು ಕಡೆ ಕುಳಿತುಕೊಂಡು ವಿಶ್ಲೇಷಣೆ ಮಾಡಬೇಕಾಗುತ್ತದೆ. ಅಧ್ಯಕ್ಷರೆ, ಇನ್ನೊಂದು ಮಾತನ್ನು ಹೇಳುತ್ತೇನೆ, ನಾವು ನಿನ್ನೆ ಸಾಲ ಮನ್ನಾ ಮಾಡಬೇಕು, ಮಾಡಬೇಕು ಎಂದು ಕೂಗಾಡುತ್ತಿದ್ದೆವು. ನಮ್ಮ

ಸಹಾಯಕ್ಕೆ ಯಡಿಯೂರಪ್ಪನವರು ಬಂದರು, ಹೌದು ಸಾಲ ಮನ್ನಾ ಆಗಬೇಕು, ಹತ್ತು ಸಾವಿರ ಕೋಟಿ ರೂ.ಗಳು ಖರ್ಚಾದರೂ ಆಗಲಿ ಎಂದು ಹೇಳಿದರು. ನನಗನ್ನಿಸುತ್ತದೆ ಅಧ್ಯಕ್ಷರೆ, ಹತ್ತು ಸಾವಿರ ಕೋಟಿ it is nothing, ಬೆಂಗಳೂರಿನಲ್ಲಿ ಎಷ್ಟು ಎಕರೆ ಇರಬಹುದು ಎಂದರೆ, ನೋಟಿಫಿಕೇಷನ್ ಆಗಿ, ಫೈನಲ್ ನೋಟಿಫಿಕೇಷನ್ ಆಗಿ ಪೊಸೆಶನ್‌ಗೆ ತೆಗೆದುಕೊಂಡಿತಕ್ಕಂಥ ಲ್ಯಾಂಡ್‌ನಲ್ಲಿ ಅಕ್ರಮವಾಗಿ ತಲೆ ಎತ್ತಿ ನಿಲ್ಲುತ್ತಿರತಕ್ಕಂಥ ಲೇ-ಔಟ್‌ಗಳು, ನಿವೇಶನಗಳು, ಇವು ಎಷ್ಟಿರಬಹುದು ಎಂದು ಹೇಳಿ ಅಂದಾಜನ್ನು ಮಾಡಿದರೆ ಬಹುಶ: ನಿಮಗೆ ಗೊತ್ತೋ ಇಲ್ಲವೋ, ನನಗೂ ಸಹಿತಿ ನಿಖರವಾಗಿ ಗೊತ್ತಿಲ್ಲ. ಆದರೆ ಅದು ಲಕ್ಷಾಂತರ ಎಕರೆಗಳಿವೆ. ಕನಿಷ್ಠವೆಂದರೂ 70 ರಿಂದ 80 ಸಾವಿರ ಎಕರೆಗಳಿವೆ. ಅದನ್ನು ರೆಗ್ಯುಲರೈಸ್ ಮಾಡತಕ್ಕಂಥ ಕೆಲಸ ಮಾಡಬೇಕು. ಏಕೆ ನೀವು ಯಾವುದೋ ಒಂದು ಕೇಸನ್ನು ಡಿನೋಟಿಫಿಕೇಷನ್ ಮಾಡುತ್ತೀರಿ? ಎಲ್ಲರಿಗೂ ಅನುಕೂಲವಾಗತಕ್ಕಂಥ ರೀತಿಯಲ್ಲಿ ಎಲ್ಲವನ್ನೂ ಮಾಡಿ. ನೀವು ಇದರ ಬಗ್ಗೆ ಕುಳಿತುಕೊಂಡು ಚರ್ಚಿಸಿ ಒಂದು ತೀರ್ಮಾನ ಮಾಡಿ. ನಿಮಗೆಷ್ಟು ಬರುತ್ತದೆಂದರೆ ಸುಮಾರು 2 ರಿಂದ 3 ಲಕ್ಷ ಕೋಟಿ ಹಣ ಸರ್ಕಾರಕ್ಕೆ ಬರುತ್ತದೆ. ಎರಡರಿಂದ ಮೂರು ಲಕ್ಷ ಕೋಟಿ ಹಣ ಸರ್ಕಾರಕ್ಕೆ ಬರುತ್ತದೆಂದರೆ,, ನಮ್ಮ ಕರ್ನಾಟಕ ರಾಜ್ಯದ ಸಾಲವೆಷ್ಟಿದೆಯೆಂದರೆ ಈಗ ಲಕ್ಷ ಕೋಟಿಗೆ ಬಂದಿದ್ದೀವಿ. ಒಂದೇ ಇಡುಗಂಟಿನಲ್ಲಿ ಸಾಲವನ್ನು ತೀರಿಸತಕ್ಕಂಥ ಶಕ್ತಿ ಇವತ್ತು ಬೆಂಗಳೂರಿನಲ್ಲಿದೆ. ಇವತ್ತೇನಾಗಿದೆಯೆಂದರೆ, ಏನು ಇರಲಿ, ಬಿಡಲಿ, ಬೆಂಗಳೂರಿನಲ್ಲಿ ಜನರಿಗೆ ಸೈಟ್ ಬೇಕು. ನೀವು ದೆಹಲಿಗೆ ಹೋಗಿ, ನೀವು ಪಂಜಾಬ್‌ಗೆ ಹೋಗಿ, ನೀವು ಬೇರೆ ಎಲ್ಲಿಗೇ ಹೋದರು ಅಲ್ಲಿಯವರು ಎಲ್ಲಿಂದ ಬಂದಿದ್ದೀರಿ ಎಂದು ಕೇಳುತ್ತಾರೆ. ಬೆಂಗಳೂರಿನವರು ಎಂದರೆ ತಕ್ಷಣ ನೀವು ಬೆಂಗಳೂರಿನವರೆ? ನನ್ನ ಮಗ ಕೂಡ ಬೆಂಗಳೂರಿನಲ್ಲಿದ್ದಾನೆ, ನಮಗೊಂದು ಸೈಟ್‌ನ್ನು ಅಲ್ಲಿ ಕೊಡಿಸಿ ಎಂದು ಕೇಳುತ್ತಾರೆ ಅಥವಾ ಆ ನಮ್ಮ ಸೈಟ್ ಅಥವಾ ನಮ್ಮ ಅಪಾರ್ಟ್‌ಮೆಂಟ್ ಕೂಡ ಬೆಂಗಳೂರಿನಲ್ಲಿದೆ ಎಂದು ಹೇಳುವುದನ್ನು ಕೇಳಿದರೆ, ಇವತ್ತು ಇಡೀ ವಿಶ್ವದ ಜನ, ದೇಶದ ಜನ ಬೆಂಗಳೂರಿನ ಕಡೆ ಬರಬೇಕು ಎಂದು ಎನ್ನುತ್ತಿರುವಾಗ ಏಕೆ ನೀವು ಹಿಂದುಮುಂದು ಯೋಚನೆ ಮಾಡುತ್ತೀರಿ? ಕದ್ದು ಮುಚ್ಚಿ ಅಲ್ಲೊಂದು ಇಲ್ಲೊಂದು ಎನ್ನುವಂತೆ ಏಕೆ ಡಿ-ನೋಟಿಫಿಕೇಷನ್ ವ್ಯವಹಾರಗಳನ್ನು ಮಾಡುತ್ತೀರಿ? ಏಕೆ ಅದನ್ನು

ಸಾರಾಸಗಟಾಗಿ ರೆಗ್ಯುಲರೈಸ್ ಮಾಡತಕ್ಕಂಥ ಕೆಲಸವನ್ನು ಮಾಡುವುದಿಲ್ಲ. ನೀವು ಈಗ ಆ ರೀತಿ ಮಾಡದೇ ಇರುವುದರಿಂದ ಏನಾಗುತ್ತಿದೆಯೆಂದರೆ, ನೀವು ಅವರಿಗೆ ನಾಗರೀಕ ಸೌಲಭ್ಯಗಳೆಲ್ಲವನ್ನೂ ಕೊಡುತ್ತಿದ್ದೀರಿ, ವಿದ್ಯುತ್ ಪೂರೈಕೆ ಸೇರಿದಂತೆ ಎಲ್ಲ ನಾಗರೀಕ ಸೌಲಭ್ಯಗಳನ್ನು ಕೊಡುತ್ತಿದ್ದೀರಿ. ಸಾರಿಗೆ ವ್ಯವಸ್ಥೆ, ಟ್ರಾಫಿಕ್ ಜಾಮ್ ಕೂಡ ಆಗಿದೆ. ಆದರೆ ಅವರು ಒಂದು ರೂಪಾಯಿ ಟ್ಯಾಕ್ಸ್ ಕೂಡ ಸರ್ಕಾರಕ್ಕೆ ಕೊಡುತ್ತಿಲ್ಲ. ಇವತ್ತು ಅಕ್ರಮ ಸಕ್ರಮ ಕೂಡ ಜಾರಿಗೆ ಬಂದಿದ್ದರೆ ಸ್ವಲ್ಪ ಮಟ್ಟಿಗೆ ಬಿ.ಬಿ.ಎಂ.ಪಿ ಗೆ ಸಹಾಯವಾಗಿರುತ್ತಿತ್ತು. ಇವತ್ತು ಬಿ.ಬಿ.ಎಂ.ಪಿಯಲ್ಲಿ ದುಡ್ಡಿಲ್ಲ. ದುಡ್ಡೇ ಇಲ್ಲದೇ ಅವರು ಬಜೆಟ್‌ನ್ನು ಮಂಡನೆ ಮಾಡತಕ್ಕಂಥದ್ದು ಕೂಡ ಅರ್ಥವಿಲ್ಲವೆಂದು ನಾವು ವಿಶ್ಲೇಷಣೆ ಮಾಡುತ್ತೇವೆ. ದುಡ್ಡಿಲ್ಲದೇ ಬಜೆಟ್‌ನ್ನು ಮಂಡನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇವೆಲ್ಲಾ ಏಕೆ ಬೇಕಾಗಿತ್ತು? ಈ ರೀತಿಯ ತೀರ್ಮಾನವನ್ನು ಮಾಡಬಾರದು. ಈ ಸದನದಲ್ಲಿ ಇಂಥ ವಿಚಾರಗಳು ಚರ್ಚೆಯಾಗಬೇಕು. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸರಿದೂಗಿಸುವುದಕ್ಕೆ ಇದೊಂದೇ ಮಾರ್ಗವಿರತಕ್ಕಂಥದ್ದು. ಇವತ್ತು ಬೆಂಗಳೂರಿನ ಒಂದು ಮೂಲದಿಂದ ಕರ್ನಾಟಕದ ಸಾಲವನ್ನು ತೀರಿಸಿ ಸಾಲದಿಂದ ವಿಮುಕ್ತಿಯನ್ನು ಮಾಡುವುದಕ್ಕೆ ಸಾಧ್ಯವಿದೆ. ಇದರ ಜೊತೆಗೆ ಅತ್ಯಂತ ಸಂಕಟದಿಂದಿರತಕ್ಕಂಥ ರೈತರಿಗೆ ಪರಿಹಾರ ಕೊಡುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಏಕೆ ಚಿಂತನೆಯನ್ನು ಮಾಡಬಾರದು? ಬಹುಶ: ಈ ರೀತಿ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತೇವೆ. ಇವತ್ತು ನೀವು ಈ ಬಗ್ಗೆ ಹೈಕೋರ್ಟಿನ ಚೀಫ್ ಜಸ್ಟಿಸ್ ಜೊತೆ ಕುಳಿತು ಚರ್ಚೆ ಮಾಡುತ್ತೀರೋ ಅಥವಾ ಯಾವ ರೀತಿಯಾಗಿ ಮಾಡುತ್ತೀರೋ, ಒಟ್ಟಿನಲ್ಲಿ ಇದು ಸಾರ್ವತ್ರಿಕವಾಗಿ ಆಗಲಿ. ಒಂದು ಬಾರಿ ರೆಗ್ಯುಲರೈಸ್ ಮಾಡತಕ್ಕಂಥ ಕೆಲಸವನ್ನು ಮಾಡಿ. ಅದರಿಂದ ಬರತಕ್ಕಂಥ ಹಣ ಸದ್ವಿನಿಯೋಗವಾಗಲಿ, ಸಾರ್ವಜನಿಕವಾಗಿ ಉಪಯೋಗವಾಗಲಿ. ನೊಂದಿರತಕ್ಕಂಥ ರೈತನಿಗೂ ಕೂಡ ಸಹಾಯವಾಗತಕ್ಕಂಥ ರೀತಿಯಲ್ಲಿ ಇದು ಆಗಬೇಕು ಎನ್ನುವ ಉದ್ದೇಶದಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು. ಇವತ್ತು ಪ್ರತಿ ದಿನ ಬೆಳಿಗ್ಗೆ ಎದ್ದರೆ ಪೇಪರ್‌ನಲ್ಲಿ ಸಣ್ಣ ಪುಟ್ಟ ಡಿನೋಟಿಫಿಕೇಶನ್‌ಗಳದ್ದೇ ಇರುತ್ತದೆ. ನಿಜ, ಇದಕ್ಕೆ ಕಾನೂನು ಇದೆ,

ಆಗೋಗಿದೆ, ಪೊಸೆಶನ್ ತೆಗೆದುಕೊಂಡಾಗಿದೆ, ನಾಗರೀಕ ಸೌಲಭ್ಯಗಳನ್ನೂ ಕೂಡ ಅವರಿಗೆ ಕೊಡಲಾಗುತ್ತಿದೆ. ಆದರೆ ಸರ್ಕಾರಕ್ಕೆ ಒಂದು ರೂಪಾಯಿಯ ಟ್ಯಾಕ್ಸನ್ನೂ ಕೂಡ ಕೊಡುತ್ತಿಲ್ಲ. ಅನುಭವಿಸುತ್ತಿದ್ದಾರೆ. ಆದರೆ ಅವರು ದುಡ್ಡು ಕೊಡುವುದಕ್ಕೆ ತಯಾರಾಗಿದ್ದಾರೆ. ಸರ್ಕಾರಕ್ಕೆ ತೆರಿಗೆ ಕೊಡುವ ವ್ಯಾಪ್ತಿಯಲ್ಲಿ ಬರಲು ಅವರು ತಯಾರಾಗಿದ್ದಾರೆ. ಅಂಥವರಿಗೆ ಏಕೆ ಅವಕಾಶವನ್ನು ಕೊಡಬಾರದು? ಈಗಾಗಲೇ ಕಟ್ಟಿರುವುದನ್ನು ಒಡೆದುಹಾಕುವುದಕ್ಕೆ ಸಾಧ್ಯವೆ? ಅದರ ಬಗ್ಗೆಯಾದರೂ ಒಂದು ತೀರ್ಮಾನವನ್ನು ಮಾಡಿ. ಇದನ್ನು ಡಿಲೇ ಮಾಡಿದಷ್ಟು ಇನ್ನೂ ಕೂಡ illegal activities ಜಾಸ್ತಿಯಾಗುತ್ತದೆ. ಆದುದರಿಂದ ಇದರ ಬಗ್ಗೆ ಅಂತಿಮವಾಗಿ ತೀರ್ಮಾನ ಮಾಡಬೇಕಾದಾಗ ಜ್ಯುಡಿಷಿರಿಯವರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು, ಬ್ಯುರೋಕ್ರಸಿಯವರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಒಂದು ತೀರ್ಮಾನವನ್ನು ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಈ ರಾಜ್ಯಕ್ಕೆ ಒಂದು ಒಳ್ಳೆಯ ಸಹಾಯವನ್ನು ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಾನು ಈ ವಿಚಾರವನ್ನು ಇನ್ನೂ ಹೆಚ್ಚಿಗೆ ಮುಂದುವರೆಸುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಬಹಳ ಪ್ರಮುಖವಾದ ವಿಚಾರವೆಂದರೆ, ನನಗೆ ಬಹಳ ಆಸಕ್ತಿಯಿರುವ ಗ್ರಾಮೀಣ ಪ್ರದೇಶದ ವಿಚಾರ. ಅಧ್ಯಕ್ಷರೆ, ನಾನು Meteorological Department ನಲ್ಲಿ ಕೇಳಿದಾಗ ಆಗಸ್ಟ್ 15 ರಿಂದ 27ರ ನಂತರದಲ್ಲಿ ಮಳೆ ಬರುವುದಕ್ಕೆ ಸಾಧ್ಯವೆನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಇನ್ನು ಹದಿನೈದು ದಿವಸ ಮಳೆ ಏನಾದರೂ ಬರದಿದ್ದರೆ ಆಮೇಲೆ ಹಳ್ಳಿಗಳಲ್ಲಿ ಯಾವ ಪರಿಸ್ಥಿತಿಯಾಗುತ್ತದೆ ಗೊತ್ತಿಲ್ಲ. ದನಕರುಗಳ ಪರಿಸ್ಥಿತಿ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಇವತ್ತು ಜನರು ಉದ್ಯೋಗಕ್ಕೋಸ್ಕರ ಎಲ್ಲಿ ನೋಡಿದರೂ ಬೆಂಗಳೂರಿನಲ್ಲಿ ಬೇರೆ ಕಡೆಯಿಂದ ಕೂಲಿ ಕೆಲಸಕ್ಕೋಸ್ಕರ ಬಂದಿರುವ ಬಡಜನರು ಕಾಣುತ್ತಾರೆ. ಮೊನ್ನೆ ರಾತ್ರಿ ಗಂಗಮ್ಮ ಕಲ್ಯಾಣ ಮಂಟಪಕ್ಕೆ ಒಂದು ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಕಲ್ಯಾಣ ಮಂಟಪದ ಹತ್ತಿರ ಉತ್ತರ ಕರ್ನಾಟಕದಿಂದ ಕೂಲಿ ಕೆಲಸಕ್ಕೋಸ್ಕರ ಸಾವಿರಾರು ಜನರು ಬಂದು ಕುಳಿತಿದ್ದನ್ನು ನೋಡಿದೆ. ಈ ರೀತಿಯಾಗಿ ಕೂಲಿ ಕೆಲಸಕ್ಕೋಸ್ಕರ ಗುಳೆ ಹೋಗತಕ್ಕಂಥದ್ದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೆ? ನಮಗೆ ಬೇಕಾದಷ್ಟು ಯೋಜನೆಗಳಿವೆ. ಇವತ್ತಿನ ಮುಖ್ಯಮಂತ್ರಿಗಳೇ ಗ್ರಾಮೀಣಾಭಿವೃದ್ಧಿ ಖಾತೆಯನ್ನು

ಹಿಂದೆ ನಿರ್ವಹಿಸಿದ್ದರು. ಅವರಿಗೆ ಸಾಧಕ–ಬಾಧಕಗಳೆರಡೂ ಕೂಡ ಬಹಳ ಚೆನ್ನಾಗಿ ಗೊತ್ತಿದೆ. ದಯಮಾಡಿ ಅದಕ್ಕೆ ಏನಾದರೂ ಮಾಡಿ ಪ್ರಧಾನ ಮಂತ್ರಿಗಳ ಹತ್ತಿರ ಕುಳಿತು ಚರ್ಚೆ ಮಾಡಿ ಇದನ್ನು ನೀವು ಸಿಂಕ್ರೊನೈಸ್ ಮಾಡಿ ಇವತ್ತು ಆ ಉದ್ಯೋಗ ಖಾತರಿ ಯೋಜನೆಯಲ್ಲಿ ಆ ರೈತರಿಗೆ ಸಹಾಯವಾಗತಕ್ಕಂಥ ರೀತಿಯಲ್ಲಿ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಬೇಕು. ರೈತರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಸಿಂಕ್ರೊನೈಸ್ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಆಗ ಆ ರೈತನೂ ಉಳಿಯುತ್ತಾನೆ ಮತ್ತು ಈ ಯೋಜನೆ ಕೂಡ ಉಳಿಯುತ್ತದೆ ಮತ್ತು ಕೇಂದ್ರ ಸರ್ಕಾರ ಕೊಟ್ಟ ಹಣವೂ ಕೂಡ ಖರ್ಚಾಗುತ್ತದೆ. ಅಧ್ಯಕ್ಷರೆ, ನಾನು ನಿನ್ನೆಯ ದಿವಸ ಒಂದು ಮಾಹಿತಿಯನ್ನು ಪಡೆದುಕೊಂಡೆ. ಕಳೆದ ನಾಲ್ಕು ತಿಂಗಳಲ್ಲಿ ಕೇವಲ 112 ಕೋಟಿಯೇನೋ ಖರ್ಚಾಗಿದೆ. ಇನ್ನು ಒಂಭತ್ತು ತಿಂಗಳಿದೆ. ಉಳಿದಿರುವ ಒಂಭತ್ತು ತಿಂಗಳಲ್ಲಿ ನಾವು ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಬೇರೆ ಬೇರೆ ರಾಜ್ಯದವರು ಇಲ್ಲಿ ಏನು ಮಾಡುತ್ತಿದ್ದಾರೆ, ಅವರು ಸ್ಥಳೀಯವಾಗಿರತಕ್ಕಂಥ ಇಲಾಖೆಯ ಪ್ರೋಗ್ರಾಂಗಳಿಗೆ ಕೇಂದ್ರ ಸರ್ಕಾರ ಒಪ್ಪಿರತಕ್ಕಂಥ ಯೋಜನೆಗಳಿಗೆ ಹಣವನ್ನು ಕೊಡುವುದಕ್ಕೆ ಅವರು ತಯಾರಾಗಿದ್ದಾಗ ನಾವ್ಯಾಕೆ ಆ ಕೆಲಸವನ್ನು ಮಾಡಬಾರದು ಎನ್ನತಕ್ಕಂಥ ಮಾತನ್ನು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಅಧ್ಯಕ್ಷರೆ, ನಾನು ಖಾಸಗಿಯಾಗಿ ಕೂಡ ಅವರ ಜೊತೆ ಸಾಕಷ್ಟು ಮಾತನಾಡಿದ್ದೇನೆ. ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗಲೂ ಕೂಡ ಅವರ ಜೊತೆ ನಾನು ಮಾತನಾಡಿದ್ದೇನೆ. ಆದರೆ ನಾನು ಹೇಳುತ್ತೇನೆ, ಎಲ್ಲೋ ಒಂದು ಕಡೆಗೆ ನೀವು ಧೈರ್ಯವನ್ನು ತೆಗೆದುಕೊಳ್ಳಿ. ಇವತ್ತು ಉತ್ತರ ಕರ್ನಾಟಕದ ಜನರು ಬೆಂಗಳೂರಿಗೆ ಉದ್ಯೋಗಕ್ಕೋಸ್ಕರ ವಲಸೆ ಬರುತ್ತಾರೆಂದರೆ ಅದು ಈ ರಾಜ್ಯಕ್ಕೆ ಮತ್ತು ರಾಜ್ಯದಲ್ಲಿರುವ ಸರ್ಕಾರಕ್ಕೆ ಆಗತಕ್ಕಂಥ ಅವಮಾನವೆಂದು ನಾವು ಭಾವಿಸಬೇಕಾಗುತ್ತದೆ. ದಯಮಾಡಿ ಅದರ ಬಗ್ಗೆ ಯೋಚನೆಯನ್ನು ಮಾಡಿ. ಇವತ್ತು ನಿಮ್ಮ ಅಧಿಕಾರಿಗಳನ್ನು ಚುರುಕುಗೊಳಿಸತಕ್ಕಂಥ ಕೆಲಸವನ್ನು ಮಾಡಿ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ, ಇವತ್ತೂ ಕೂಡ ಜಗದೀಶ್ ಶೆಟ್ಟರ್ ರವರೆ, 2009–10, 2010–11 ರಲ್ಲಿ ಆಗಿರತಕ್ಕಂಥ ಕಾಮಗಾರಿಗಳಿಗೆ ಹಣ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ರೈತನಾಗಿರತಕ್ಕಂಥವನೋ ಯಾರೋ

ಒಬ್ಬ ಮಧ್ಯವರ್ತಿಯೇ ಇಟ್ಟುಕೊಳ್ಳಿ. ಮತ್ತೊಬ್ಬರನ್ನೇ ಇಟ್ಟುಕೊಳ್ಳಿ. ಕಾಮಗಾರಿಗಳಲ್ಲಿ ಕೆಲಸವಾಗಿದೆ. ಆದರೆ ದುಡ್ಡನ್ನು ಕೊಡುತ್ತಿಲ್ಲವೆಂದು ಹೇಳಿದರೆ ಅದಕ್ಕೆ ಒಂದೇ ಒಂದು ಕಾರಣವೆಂದರೆ ಕಂಪ್ಯೂಟರ್‌ನಲ್ಲಿ ಲಾಕ್ ಆಗಿರುವುದು. ಕಂಪ್ಯೂಟರ್ ಲಾಕ್‌ನ್ನು ಓಪನ್ ಮಾಡುವುದಕ್ಕೆ ಎಡಿಟ್ ಆಪ್ಷನ್‌ಗೆ ಹೋಗಬೇಕು. ನಾವು ಮೊನ್ನೆ ಈಶ್ವರಪ್ಪನವರು ಬಂದಾಗ ಸಾಕಷ್ಟು ರೀತಿಯಲ್ಲಿ ಏಳಿದ್ದೇವೆ. ದಯಮಾಡಿ ನಾಳೆಯೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಈ ಇಲಾಖೆಯ ಜವಾಬ್ದಾರಿಯನ್ನು ನೀವು ಹೊತ್ತುಕೊಂಡಿದ್ದೀರಿ. ಈಗಿನ ಹೊಸ ಸೆಕ್ರಟರಿಗಳು, ಹಳೆ ಸೆಕ್ರೆಟರಿಗಳು, ಎಲ್ಲರನ್ನೂ ಕರೆದು ಆ edit option ಅನ್ನು open ಮಾಡಿದರೆ ಇವತ್ತಿಗೂ ಕೂಡ ಪ್ರೋಗ್ರೆಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಒಂದಲ್ಲ ಒಂದು ರೀತಿಯಲ್ಲಿ ರೈತ ತನ್ನ ಜಮೀನಿನಲ್ಲಿ invest ಮಾಡಿದ್ದಾನೆ. ಅದರಿಂದ ಇವತ್ತು ವಾಪಾಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆ ಬಗ್ಗೆ ನಾನು ಬರದ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾಗ 2006–07 ರಿಂದ ಎಷ್ಟು ಹಣವನ್ನು ಕೊಡಲಾಗಿದೆ, ಪ್ರಾರಂಭಿಕ ಶಿಲ್ಕು ಎಷ್ಟು ಹಣ ಉಳಿದುಕೊಂಡಿತು, ಲೇಬರ್ ಕಾಂಪೊನೆಂಟ್‌ನಲ್ಲಿ ಹಣ ಖರ್ಚಾಗಿಲ್ಲದಿರತಕ್ಕಂಥದ್ದು, ಹೀಗೆ ಎಲ್ಲ ವಿಚಾರಗಳ ಬಗ್ಗೆ ನಾನು ಹೇಳಿರತಕ್ಕಂಥದ್ದೆಲ್ಲವೂ ಕಡತದಲ್ಲಿದೆ. ಎಲ್ಲರಿಗೂ ಅದು ಗೊತ್ತಿರತಕ್ಕಂಥ ವಿಚಾರವಾಗಿರುವುದರಿಂದ ದಯಮಾಡಿ ಅದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿ ಇವತ್ತು ಗುಳೆ ಹೋಗುತ್ತಿರತಕ್ಕಂಥ ರೈತನನ್ನು ತಡೆಗಟ್ಟತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥಾದ್ದು ರೇಷನ್ ಕಾರ್ಡ್ ವಿಚಾರ. ಬಹುಶ: ನಮ್ಮ ಮಾನ್ಯ ಶಿವಲಿಂಗೇಗೌಡರು ರೇಷನ್ ಕಾರ್ಡ್ ವಿಚಾರ ಬಂದಾಗ ಮಾತನಾಡುತ್ತಾರೆ. ನಾನು ಮತ್ತು ಮಾನ್ಯ ಶಿವಲಿಂಗೇಗೌಡರು ಎಲ್ಲರೂ ಕೂಡ Public Accounts Committee ಯಿಂದ Food Department ಜೊತೆ ಕುಳಿತು ಚರ್ಚೆ ಮಾಡಿದಾಗ ಅವರು ಹೇಳಿದಂತಹ ಮಾತು ಏನೆಂದರೆ, ಕೇಂದ್ರ ಸರ್ಕಾರ 33 ಲಕ್ಷ ಕುಟುಂಬಗಳಿಗೆ ತಲಾ 35 ಕೆ.ಜಿ.ಯಂತೆ ಆಹಾರ ಧಾನ್ಯ ಕೊಡುತ್ತಿರುವುದನ್ನು divide ಮಾಡಿ

ಕೊಡುತ್ತಿದ್ದೇವೆಂದು ಹೇಳಿದರು. ಕೇಂದ್ರ ಸರ್ಕಾರ, ನಾವು ಐಡೆಂಟಿಫೈ ಮಾಡಿ ಇಷ್ಟು ಕೊಡುತ್ತಿದ್ದೇವೆ, ಹೆಚ್ಚುವರಿಯಿದ್ದರೆ ಅದನ್ನು ರಾಜ್ಯ ಸರ್ಕಾರ ಕೊಡಬೇಕು, ಅದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ಹೇಳುವಾಗ, ಇದು ಎಲ್ಲೋ ಹಿಂದೆ 2006 ರಲ್ಲಿ ತಪ್ಪಾಗಿದೆ. ಎಲ್ಲರಿಗೂ ಕೂಡ ಸಾರಾಸಗಟಾಗಿ ಒಂದೇ ಸಮನಾಗಿ ಮಾಡಿ ಕೇಂದ್ರ ಸರ್ಕಾರ ಕೊಡುತ್ತಿರುವುದನ್ನೆಲ್ಲ ಸರಿಸಮಾನ ಮಾಡಿ ತಲೆಗೆ 4 ಕೆ.ಜಿ ಎಂದು ಮಾಡಿ, 20 ಕೆ.ಜಿ ಮೇಲೆ ಜಾಸ್ತಿ ಇಲ್ಲ, ಮಕ್ಕಳಿಗೆ ಅನ್ನ ಇಲ್ಲವೆನ್ನುವಂತಹ ರೀತಿಯಲ್ಲಿ ತೀರ್ಮಾನ ಮಾಡಿದೆ. 2006 ರಲ್ಲಿ ತೀರ್ಮಾನವಾಗಿದ್ದು, 2012 ರಲ್ಲಿ ಅದೇ ಮುಂದುವರೆದುಕೊಂಡು ಬರುತ್ತಿದೆ. ಸ್ವಲ್ಪ ಏನಾದರೂ ಕೂಡ ಬದಲಾವಣೆ ತರುವಂತಹ ಕೆಲಸವನ್ನು ಮಾಡಬಹುದಾಗಿತ್ತು. ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದಿರಿ. ನೀವು ನಾಲ್ಕೂವರೆ ವರ್ಷದಿಂದ ಅಧಿಕಾರ ಮಾಡುತ್ತಿರುವಂತಹ ಸಂದರ್ಭದಲ್ಲಿ ಶಾಶ್ವತವಾಗಿ ಬಡವರು ಯಾರು ಎಂದು ಗುರುತಿಸುವಂತಹ ಪ್ರಕ್ರಿಯೆ ಇದುವರೆಗೂ ಅಂತಿಮವಾಗಲಿಲ್ಲವೆಂದರೆ ಏನು ಪ್ರಯೋಜನವಾಯಿತು? ನೀವು ಹಾಕಿರುವಂತಹ ಕಾರ್ಯಕ್ರಮಗಳನ್ನು ಒಂದು ಬಾರಿ ಅಲ್ಲ, ನೀವು ಅಂತಹ ಆಕ್ಷನ್ ತೆಗೆದುಕೊಂಡಿದ್ದೇವೆ, ಇಂತಹ ಆಕ್ಷನ್ ತೆಗೆದುಕೊಂಡಿದ್ದೇವೆ ನೂರು ಬಾರಿ ಹೇಳಿದರೂ ಏನು ಪ್ರಯೋಜನ? Physically handicapped ಆಗಿರುವಂತಹ ಕುಂಟರು, ಕುರುಡರಿಗೆ ಇವತ್ತು ರೇಷನ್ ಕಾರ್ಡು ಇಲ್ಲ, ನಮಗೆ ವಜಾ ಮಡಿದ್ದಾರೆ, ನಮಗೆ ಹಣ ಇಲ್ಲವೆಂದು ಬರುತ್ತಾರೆ, ದಯಮಾಡಿ ಇನ್ನು ಅದಕ್ಕೋಸ್ಕರ ಅವರು ಕಾಯಬೇಕೇ? ನಾನು ಹೇಳುತ್ತೇನೆ, ಇವತ್ತು ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು, ಅಷ್ಟೇ ಪ್ರಾಮಾಣಿಕವಾಗಿ physically handicapped ಏನಿದ್ದಾರೆ, ಅವರ ಬಗ್ಗೆ ಕೂಡ ಕ್ರಮವನ್ನು ತೆಗೆದುಕೊಳ್ಳುವಂತಹ ಕಾರ್ಯಕ್ರಮವನ್ನು ಮಾಡಬೇಕು. ಅದರ ಬಗ್ಗೆ ಈಗಾಗಲೇ ಒಂದು ಕಾನೂನು ಮಾಡಿದ್ದೇವೆ. ಮೊದಲು Deputy Commissioner approve ಮಾಡಬೇಕೆಂದು ಹೇಳುತ್ತಿದ್ದರು. ಈಗ ಸರ್ಕಾರ ಅಪ್ರೂವ್ ಮಾಡಬೇಕೆಂದು ಹೇಳುತ್ತಿದ್ದಾರೆ. ಇವತ್ತು ಎಲ್ಲಾ ಹಣ ಸರ್ಕಾರಕ್ಕೆ ಬಂದಿದೆ, ಇವತ್ತು ಲಕ್ಷಾಂತರ ಜನರ physically handicapped ಹಣದ ಹಣೆಬರಹ ಸರ್ಕಾರದಲ್ಲಿದೆ. ದಯಮಾಡಿ ಅದಕ್ಕೆ ಅಂತಿಮ ಹಾಡಿ, ಅವರಿಗೆ ಕೊಡಿಸುವಂತಹ ಕೆಲಸವನ್ನು ಮಾಡಿ ಎಂದು ನಾನು ಹೇಳುತ್ತೇನೆ. ಅವರಿಗೆ

pension ಎಂದು ಕೊಡುವಂತಹ ಹಣ 400–500 ರೂಪಾಯಿ ಏನಿದೆ, ಅದು ನಿಜವಾಗಲೂ ಕೂಡ ಏನೇನೂ ಸಾಲದು. ಅವರಿಗೆ compulsory ಆಗಿ ನೀವು pension ಕೊಡುವುದರ ಜೊತೆಗೆ food ಅನ್ನು ಕೂಡ compulsory ಆಗಿ ಕೊಡಬೇಕೆಂದು ಮಾಡಿದರೆ ಖಂಡಿತವಾಗಿ ಕೂಡ ಬಹಳ ಸಹಾಯವಾಗುತ್ತದೆ. ಇವತ್ತು ಕುಂಟರು, ಕುರುಡರನ್ನು ಯಾರೂ ಕೂಡ ನೋಡುತ್ತಿಲ್ಲ. ಹೆತ್ತ ತಂದೆ–ತಾಯಿಯರು ಸತ್ತ ಮೇಲೆ ಮುಗಿದುಹೋಯಿತು, ಅವರು ಬೀದಿ ಪಾಲಾಗಿದ್ದಾರೆ, ಅವರ ಜೀವನ ನಾಯಿ ಪಾಡಾಗಿದೆ ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ ಎಂದರೆ ಬಹಳ ಕಷ್ಟದಲ್ಲಿರುವಂತಹ ರೈತನಿಗೆ ಇವತ್ತು ಸಾಲ ಮನ್ನಾ ಮಾಡುವುದಕ್ಕೆ ಒಪ್ಪಿದ್ದೀರಿ. ದಯಮಾಡಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ ಮಾರನೇ ದಿವಸವೇ ನಾವು ಶೂನ್ಯ ವೇಳೆಯಲ್ಲಿ date ನ ಬಗ್ಗೆ ತಮಗೆ ಅರಿವು ಇರಲಿ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದೆವು. ಮಾನ್ಯ ಮುಖ್ಯಮಂತ್ರಿಗಳು ತೆರೆದ ಮನಸ್ಸಿನಿಂದ ಇಲಾಖೆಯವರ ಹತ್ತಿರ ಚರ್ಚೆ ಮಾಡಿ 27ನೇ ತಾರೀಖು ಎಂದರೆ ಇವತ್ತು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾನು ಹೇಳುತ್ತೇನೆ ಎನ್ನುವಂತಹ ಮಾತನ್ನು ಕೂಡ ಹೇಳಿದ್ದಾರೆ. ಬಹಳ ಸಂತೋಷ, ದಯಮಾಡಿ ಹೆಚ್ಚಿನ ರೈತರಿಗೆ ಸಹಾಯವಾಗುವಂತಹ ರೀತಿಯಲ್ಲಿ ನಮ್ಮ ಯೋಜನೆ ಇರಬೇಕು. ನೀವು ಇವತ್ತು ಹೇಳಿರತಕ್ಕಂಥ ರೀತಿಯಲ್ಲಿ 16 ಲಕ್ಷ ಜನರಿಗೆ ಯಾವ ರೀತಿಯಲ್ಲಿ ಸಹಾಯ ಆಗಬೇಕು ಆ ರೀತಿಯಾದಂತಹ ಯೋಜನೆಗಳ ಬಗ್ಗೆ ನೀವು ಚಿಂತನೆ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಾವು ಈಗಾಗಲೇ ಬರಗಾಲದ ವಿಚಾರದಲ್ಲಿ ಸಾಕಷ್ಟು ಮಾತನಾಡಿದ್ದೇವೆ. ನಾವು ಎಲ್ಲಾ ಕಡೆ exhaust ಆಗಿದ್ದೇವೆ. ನಾನು ಒಂದು ಹೊಸ ವಿಚಾರವನ್ನು ನಿನ್ನೆ ಸನ್ಮಾನ್ಯ ಈಶ್ವರಪ್ಪನವರಿಗೆ ಹೇಳಿದ್ದೆನು. ಇವತ್ತು NDRH ಯೋಜನೆ ಪ್ರಕಾರ ನೀವು feed ಕೊಡುವುದಕ್ಕೆ ಅವಕಾಶ ಇದೆ, ಮೇವು ಸಿಗುತ್ತಿಲ್ಲ. ಈಗ ನಾವು ಮೇವು ತರಿಸಿಕೊಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರುತ್ತಿದೆ. ಒಂದು ದಿನಕ್ಕೆ ಎರಡು ಕೆ.ಜಿ. ಬೂಸವನ್ನು ಕೊಡಿಸುವಂತಹ ಕೆಲಸವನ್ನು ಮಾಡಿದರೆ ಅದು ಬಹಳಷ್ಟು ಸಹಾಯವಾಗುತ್ತದೆ. ಅದರ ಕಡೆಗೆ ಓಪನ್ ಆಗಿ ಟೆಂಡರ್ ಕರೆದು ಮಾಡುವಂತಹ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ.

ಇವತ್ತು ನಮ್ಮ ಕಡೆ ಕುಡಿಯುವ ನೀರಿನ ವಿಚಾರದಲ್ಲಿ ಅತ್ಯಂತ critical position ಆಗಿದೆ. ನಮ್ಮಲ್ಲಿ semi-critical ಅಲ್ಲ, ಎಲ್ಲಾ critical ಆಗಿದೆ. ಇವತ್ತು 123 ತಾಲ್ಲೂಕುಗಳ ಜೊತೆಗೆ ಇನ್ನೂ 20 ರಿಂದ 30 ತಾಲ್ಲೂಕುಗಳು ಹೆಚ್ಚಾಗುವಂತಹ ಸಂದರ್ಭದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಬಗ್ಗೆ ವಿಶೇಷವಾದಂತಹ ಗಮನವನ್ನು ಹಾಕಬೇಕು. ನಾವು ಎಲ್ಲೋ ಒಂದು ಕಡೆಗೆ ಸ್ವಲ್ಪ ಹಣವನ್ನು ಕೊಡುತ್ತಿದ್ದೇವೆ. ಆದರೆ ಕೊಡುತ್ತಿರುವಂತಹ ಹಣ ಖರ್ಚಾಗುತ್ತಿಲ್ಲ. ಕಾರಣವೇನೆಂದರೆ ನಮ್ಮ bureaucracy procedure, ದಯಮಾಡಿ ಆ procedure simplify ಮಾಡಬೇಕಾದಾಗ ಅಧಿಕಾರಿಗಳಿಗೆ Chief Secretary, executive ಅಧಿಕಾರವನ್ನು ಕೊಟ್ಟು, ಎಲ್ಲೋ ಒಂದು ಕಡೆಗೆ ನೀವು ಕಾರ್ಯಪ್ರವೃತ್ತರಾಗಿ, ಯಾರಿಗೋಸ್ಕರವೂ ಕಾಯುವುದು ಬೇಡ, problematic village ಗೆ immediate ಆಗಿ ಕರೆ ಬಂದ ತಕ್ಷಣ ದುಡ್ಡನ್ನು ಖರ್ಚು ಮಾಡುವುದಕ್ಕೆ ಮುಂದಾಗಿ ಎನ್ನುವಂತಹ ಮಾತನ್ನು ಹೇಳಿದರೆ, ನಾನು ಒಂದು ಮಾತು ಹೇಳುತ್ತೇನೆ. ಆಕಸ್ಮಾತ್ ಒಂದು ಪೈಪ್‌ಲೈನ್ ಊರಿನ ಹೊರಗಡೆ ದೂರದಿಂದ ಹಾಕಿ ನೀರು ಕೊಟ್ಟರೆ 3–4 ಲಕ್ಷ ರೂಪಾಯಿ ಖರ್ಚು ಮಾಡಿದರೆ, ಅದು permanent asset ಆಗುತ್ತದೆ. ಆ ದುಡ್ಡು ವೇಸ್ಟ್ ಆಗುವುದಿಲ್ಲ. ಅದು ಕೇವಲ ಈ ವರ್ಷಕ್ಕಲ್ಲ, ಮುಂದಿನ ವರ್ಷಕ್ಕೆ ಆ ಯೋಜನೆ ಅಲ್ಲಿನ ಜನರಿಗೆ ಮೀಸಲಾಗಿರುತ್ತದೆ. ಅದರಿಂದ ಜನರಿಗೆ ಸಹಾಯವಾಗುತ್ತದೆ ದಯಮಾಡಿ ಅದನ್ನು synchronize ಮಾಡತಕ್ಕಂಥ ರೀತಿಯಲ್ಲಿ direction ಕೊಡಬೇಕೆನ್ನುವ ಮಾತನ್ನು ಹೇಳುತ್ತಾ, ನೀವು ಸ್ವಲ್ಪ ಆಡಳಿತವನ್ನು ಚುರುಕು ಮಾಡುವಂತಹ ಕೆಲಸವನ್ನು ಮಾಡಬೇಕು. ನನಗೆ ಬಹಳ ಸಂತೋಷ, ಮಾನ್ಯ ಯಡಿಯೂರಪ್ಪನವರು ಆಡಳಿತದ ನಿಷ್ಕ್ರಿಯತೆಯ ಬಗ್ಗೆ ಇವತ್ತು ಧ್ವನಿಯೆತ್ತಿದ್ದರು. ಅದರ ಬಗ್ಗೆ ಅವರಿಗೆ ಅರಿವಾಗಿದೆ. ಯಾವ ಕಾರಣಕ್ಕೋಸ್ಕರ ನಿಷ್ಕ್ರಿಯತೆ ಬಂತು ಅದು ಬೇರೆ ಪ್ರಶ್ನೆ. ಅವರಿಗೆ ಒಂದು ಮಾರ್ಗಸೂಚಿ ಇರಲಿಲ್ಲವೆ? ಅಥವಾ ಉತ್ತೇಜನ ಇರಲಿಲ್ಲವೆ? ಅದೇನೋ ಆಗಿದೆ. ರಾಜಕೀಯದಲ್ಲಿ ತಪ್ಪಾಗಿರಬಹುದು. ಆದರೆ ಎಲ್ಲೋ ಒಂದು ಕಡೆ ಆಡಳಿತವನ್ನು ಚುರುಕುಗೊಳಿಸುವಂತಹ ಕೆಲಸ ಎಂದಿಲ್ಲದಿದ್ದರೂ ಇವತ್ತು ಆಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇದೊಂದು ಬಹಳ ಮುಖ್ಯವಾಗಿರುವಂತಹ ವಿಚಾರ, ನೀವು ಸಾಲವನ್ನು ಮನ್ನಾ ಮಾಡುವಂತಹ ಸಂದರ್ಭದಲ್ಲಿ, ಇವತ್ತು ಸಾಲ ಪಡೆದು ಬೆಳೆದ ಕಮರ್ಷಿಯಲ್ ಕ್ರಾಪ್ ಎಲ್ಲಾ ಹಾಳಾಗಿಹೋಗಿದೆ. ನಾವು ಉತ್ತರ ಕರ್ನಾಟಕದ ಭಾಗದಲ್ಲಿ ಹೋದಾಗ ದಾಳಿಂಬೆ, ನಿಂಬೆ, ದ್ರಾಕ್ಷಿ, ಈ ರೀತಿಯಾಗಿರತಕ್ಕಂಥ ಬೆಳೆಗಳು, ಅದರಲ್ಲೂ ಕೂಡ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಶಾಶ್ವತ ಬೆಳೆಗೆ ಎಂದು ಸಾಲ ತೆಗೆದುಕೊಂಡಿರುವಂತಹ ಎಲ್ಲಾ ಬೆಳೆಗಳು ಹಾಳಾಗಿ ಹೋಗಿವೆ. ನಾವು ಕಣ್ಣಾರೆ ನೋಡಿದ್ದೇವೆ, ನಮ್ಮ ಹಾಗೆ ನೀವೆಲ್ಲ ಕೂಡ ನೋಡಿದ್ದೀರಿ, ನಿಮ್ಮ ಜಿಲ್ಲಾ ಮಂತ್ರಿಗಳೂ ಸಹ ನೋಡಿದ್ದಾರೆ. ದಯಮಾಡಿ ಅದರ ಸಾಲವನ್ನು ಕೂಡ ಮನ್ನಾ ಮಾಡುವುದರ ಜೊತೆಗೆ ಯೋಚನೆ ಮಾಡಬೇಕು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾಜಿ ಮುಖ್ಯಂತ್ರಿಗಳಾದಂತಹ ಮಾನ್ಯ ಯಡಿಯೂರಪ್ಪನವರಿಗೆ ಮನವಿ ಮಾಡುತ್ತೇನೆ. ಇವತ್ತು ಶಿಕಾರಿಪುರದಂತಹ ತಾಲ್ಲೂಕಿನಲ್ಲಿ ಕೂಡ ಮಳೆ ಕಡಿಮೆಯಾಗಿದೆ. ನಿನ್ನೆ ಶಿಕಾರಿಪುರದವರೆಲ್ಲ ಕೂಡ ಬಂದಿದ್ದರು. ನಾನು ಏನು ಎಂದು ಕೇಳಿದಾಗ, ಅವರು ಏನು ಹೇಳಿದರು ಎಂದರೆ ಈ ಬಾರಿ ಏನೂ ಬೆಳೆಯುವುದಕ್ಕಾಗುವುದಿಲ್ಲ. ನಾವು ಜೋಳ ಹಾಕಬೇಕು, ಗೊಬ್ಬರ ಸಿಗುತ್ತಿಲ್ಲವೆಂದು ಹೇಳಿದರು. ನಾನು ಆಗಲೇ ತಮ್ಮ ಕಛೇರಿಯವರ ಜೊತೆ ಮಾತನಾಡಿ ತಕ್ಷಣ ಗೊಬ್ಬರವನ್ನು ಕಳಿಸುವಂತಹ ಕೆಲಸವನ್ನು ಮಾಡಿ ಎಂದು ಹೇಳಿದೆನು. ಎಲ್ಲೋ ಒಂದು ಕಡೆ ಮಾನ್ಯ ಯಡಿಯೂರಪ್ಪನವರ ಜವಾಬ್ದಾರಿಯನ್ನು ಇಳಿಸುವಂತಹ ಕೆಲಸವನ್ನು ನಾನು ಆಗಾಗ ಮಾಡುತ್ತಿರುತ್ತೇನೆ. ಶಿಕಾರಿಪುರದಂತಹ ಪ್ರದೇಶದಲ್ಲಿರುವಂತಹ ರೈತರಿಗೆ ಈ ಪರಿಸ್ಥಿತಿ ಬಂದಿದೆ ಎಂದರೆ ಏನಾಗುತ್ತಿದೆ ಎಂದು ನಾವು ಅರ್ಥ ಮಾಡಿ-ಕೊಳ್ಳಬೇಕು. ಪಿ.ಎಲ್.ಡಿ.ಬ್ಯಾಂಕ್‌ನಲ್ಲಿ ಆಗಿರುವಂತಹ ಸಾಲಗಳಿಗೂ ಕೂಡ ಅನ್ವಯವಾಗುವಂತಹ ರೀತಿಯಲ್ಲಿ ಮಾಡಬೇಕು. ಹಿಂದೆ ಪಿಎಲ್‌ಡಿ ಬ್ಯಾಂಕ್-ನಿಂದ ಬಾವಿಗಳನ್ನು ತೆಗೆಯುವುದಕ್ಕೆ ಸಾಕಷ್ಟು ಸಾಲಗಳನ್ನು ಕೊಟ್ಟಿದ್ದೆವು.ಈಗ ಕೊಡುತ್ತಿಲ್ಲ. ಹಿಂದೆ ಕೊಟ್ಟಿರುವುದು ಸುಸ್ತಿಯಾಗಿರುವುದು ಬೇಕಾದಷ್ಟು ಇದೆ. ಅದು due ಆಗಿರತಕ್ಕಾಂಥಾದ್ದು ಇದೆ. ಬಹುಶ: ನೀವು ಒಂದೊಂದು ತಾಲ್ಲೂಕಿಗೆ ಲೆಕ್ಕ ಹಾಕಿಕೊಂಡರೆ 10–15 ಕೇಸುಗಳು ಇವೆ. ಇಡೀ ರಾಜ್ಯ ಮತ್ತು ಉತ್ತರ ಕರ್ನಾಟಕದಲ್ಲೆಲ್ಲಾ ಲೆಕ್ಕ ಹಾಕಿಕೊಂಡರೆ 20–30 ಕೋಟಿ ರೂಪಾಯಿ

ಮೇಲೆ ಇರುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಅದನ್ನು ಮನ್ನಾ ಮಾಡುವಂತಹ ಕೆಲಸವನ್ನು ಮಾಡಬೇಕು. ರೈತರಿಗೆ ಎಲ್ಲೋ ಒಂದು ಕಡೆಗೆ ಆ ಋಣದಿಂದ ಪರಿಹಾರ ಸಿಗುವಂತಹ ರೀತಿಯಲ್ಲಿ ಕೆಲಸವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮಲ್ಲಿ ಕಾಪಿ, ಅಡಿಕೆ ಇರಬಹುದು, ಇವೆಲ್ಲ ಕ್ರಾಪ್ಸ್ ಕೂಡ, ಒಂದಲ್ಲ ಒಂದು ರೀತಿ ಹವಾಮಾನದ ವೈಪರೀತ್ಯ ಮತ್ತು ಅವುಗಳಿಗೆ ಬರುತ್ತಿರುವಂತಹ ರೋಗದ ಹಿನ್ನೆಲೆಯಲ್ಲಿ ಎಲ್ಲಾ ಬೆಳೆಗಳೂ ಕೂಡ ಕಷ್ಟದಲ್ಲಿದೆ. ರೈತರಾಗಿರುವವರು ಇವತ್ತು ಎಲ್ಲಾ ಕೈ ಕಟ್ಟಿ ಕುಳಿತುಕೊಂಡಿದ್ದಾರೆ. ಏನಾಗುತ್ತದೆ ಎಂದರೆ ಎಲ್ಲೋ ಒಂದು ಕಡೆ 8–10 ವರ್ಷಗಳಾದ ಮೇಲೆ ವ್ಯವಸಾಯ ಮಾಡುವಂತಹ ಜನರೇ ಇರುವುದಿಲ್ಲ. ಇವತ್ತು ನಮ್ಮಲ್ಲಿ agricultural production ಕಡಿಮೆಯಾಗು–ತ್ತಿದೆ ಎಂದರೆ, ಬಹುಶ: ಇದೊಂದು ಮೂಲ ಕಾರಣವಾಗುತ್ತದೆ. ಈಗ ವ್ಯವಸಾಯವನ್ನು ಯಾರೂ ಮಾಡುವುದಕ್ಕೆ ತಯಾರಾಗುವುದಿಲ್ಲ. ಕಾರಣವೇ–ನೆಂದರೆ ನೀವು ಯಾವುದೇ ಬೆಳೆ ಬೆಳೆದರೂ ಕೂಡ ಬೆಲೆ ಸಿಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನೀವು ಇವತ್ತು ಬೆಳಿಗ್ಗೆ ಪತ್ರಿಕೆಯನ್ನು ನೋಡಬೇಕು. ಪ್ರತಿ ಪತ್ರಿಕೆಯಲ್ಲಿ ವಿಶೇಷವಾಗಿ ಕೊಡುತ್ತಾರೆ. ಅದನ್ನು ಬಹಳ ಜನ ನೋಡುವುದಿಲ್ಲ. ತರಕಾರಿ ಬೆಲೆ, ಹೋಲ್‌ಸೇಲ್ ಪ್ರೈಸ್ ಮತ್ತು ರೀಟೈಲ್ ಪ್ರೈಸ್ ಏನು ಎಂದು ಕೊಡುತ್ತಾರೆ. ಬದನೆಕಾಯಿ ಹೋಲ್‌ಸೇಲ್‌ನಲ್ಲಿ 15 ರೂಪಾಯಿ ಕೆ.ಜಿ, ರೀಟೈಲ್‌ನಲ್ಲಿ 65 ರೂಪಾಯಿ ಕೆ.ಜಿ ಇರುತ್ತದೆ. ಒಬ್ಬ ಮಧ್ಯವರ್ತಿಗೆ ಸಿಗುವಂತಹ ಲಾಭ 300%, 400%,500% ಎಂದರೆ ರೈತ 6 ತಿಂಗಳು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಬೆಳೆದಿರುವಂಥ ರೈತರಿಗೆ ಲಾಭವಾಗುತ್ತಿಲ್ಲ. ಇವತ್ತು ಅವನಿಗೆ ಲಾಭವಾಗಬೇಕೆಂದರೆ, ದಯಮಾಡಿ ಮಾನ್ಯ ಮುಖ್ಯಮಂತ್ರಿಯವರೆ, ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಿ. ನಿಮಗೆ ಕೃಷಿಗೆ ಪೂರಕವಾಗಿರುವಂತಹ ಚಟುವಟಿಕೆಗಳು ಏನಿವೆ, ಅದಕ್ಕೆ ಕೈಗಾರಿಕೆಗಳಿವೆ, ಇದಕ್ಕೆ ಹೆಚ್ಚು ಒತ್ತನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ತಾವು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಮಾಡಿ, ಪೇಪರ್‌ಗಳಲ್ಲಿ ಹಾಕಿಸಿಕೊಂಡರೆ ಪ್ರಯೋಜನವಾಗುವುದಿಲ್ಲ. ಇವತ್ತು 65% ರೈತರು ಬದುಕಬೇಕೆಂದರೆ, ಅವನು ಬೆಳೆದ ಬೆಲೆ ಬರಬೇಕೆಂದರೆ, ಅದಕ್ಕೆ ಪೂರಕವಾದಂಥ ಬೇಕಾಗಿರುವಂಥ ಕೈಗಾರಿಕೆಗಳಿಗೆ ಪ್ರೋತ್ಸಾಹನೀಡುವಂಥ ನೀತಿ ನಿಮ್ಮಲ್ಲಿರಬೇಕು. ನೀತಿಯ

ಜೊತೆಗೆ ಪ್ರೋತ್ಸಾಹವಿರಬೇಕು. ಅದಕ್ಕೆ ಸಬ್ಸಿಡಿಯನ್ನು ಕೊಡಬೇಕು. ಸರ್ಕಾರ ಮುಂದೆ ಮಾಡಬೇಕಾದಂಥ ಕೆಲಸವನ್ನು ಮಾಡಬೇಕಾಗುತ್ತದೆ. Government of India ದಲ್ಲಿ Agro Processing Industry ಎನ್ನುವಂಥ ಒಂದು ದೊಡ್ಡ Directorate ಇದೆ. ನಮ್ಮಲ್ಲೂ ಒಂದು Directorate ಅನ್ನು ಮಾಡಿದ್ದೇವೆ. ಕರ್ನಾಟಕದಲ್ಲಿ Directorate of Government of India ಇದೆ, ಅಲ್ಲಿಗೆ ವಸಂತಕುಮಾರ್ ಎಂಬ ಒಬ್ಬ ಪರಿಣಿತ ಅಧಿಕಾರಿಯನ್ನು ಅಲ್ಲಿ ಕೂರಿಸಿದ್ದೀರಿ. ಅದು ಬಿಟ್ಟರೆ ಬೇರೆ ಏನೂ ಆಗುತ್ತಿಲ್ಲ. ಇದಕ್ಕೆ ಪ್ರೋತ್ಸಾಹ ಕೊಡುವಂಥ ಕೆಲಸವನ್ನು ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ನಾವು ಇವತ್ತು ಒಂದು ನೀತಿಯನ್ನು ಅರ್ಥ ಮಾಡಿಕೊಳ್ಳಬೇಕು. ರೈತ ತಾನು ಬೆಳೆದಂಥ ಯಾವುದೇ ಬೆಳೆಯಾಗಲಿ, ಅದನ್ನು ನೇರವಾಗಿ ಮಾರುಕಟ್ಟೆಗೆ ಅಲ್ಲ, ಅದು ಒಂದು finished product ಆಗಿ ಬಂದಾಗ ಮಾತ್ರ ಸಾಧ್ಯವಾಗುತ್ತದೆ. ಅವನಿಗೆ ಲಾಭವಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ರೈತರು ತೊಗರಿ ಬೇಳೆಯನ್ನು ಬೆಳೆಯುತ್ತಾರೆ. ಇದಕ್ಕೆ ಬೆಲೆ 22 ರೂ. ಗಳು, 23 ರೂ.ಗಳು, 28 ರೂ.ಗಳು ಸಿಕ್ಕರೆ ಹೆಚ್ಚು, ಇವನಿಗೆ 28 ರೂ.ಗಳು ಸಿಕ್ಕರೆ ಖುಷಿಯಾಗುತ್ತದೆ. ಆದರೆ ತೊಗರಿ ಬೇಳೆಯನ್ನು ಗ್ರಾಹಕ ಖರೀದಿಸುವಂಥದ್ದು 80 ರೂ.ಗಳು, 90 ರೂ.ಗಳು, 100 ರೂ.ಗಳಾಗುತ್ತದೆ. ಅದೇ ತೊಗರಿ ಬೇಳೆಯನ್ನು ಅವನೇ ಏಕೆ ಮಾಡಬಾರದು? ಅವನೇ ತೊಗರಿ ಬೇಳೆಯನ್ನು ಮಾಡಿ, ಅದನ್ನು ಮಾರುಕಟ್ಟೆಗೆ ತರುವಂಥ ರೀತಿಯಲ್ಲಿ ಸಣ್ಣ ಕೈಗಾರಿಕೆಗಳನ್ನು ಮಾಡುವುದಕ್ಕೆ ಪ್ರೋತ್ಸಾಹ ಏಕೆ ಮಾಡಬಾರದು? ಹಳ್ಳಿಗಳಿಗೆ ದಾಲ್ ಮಿಲ್‌ಗಳನ್ನು ಏಕೆ ಹಾಕಿಸಬಾರದು? ಇವತ್ತು ಒಂದು ದಾಲ್ ಮಿಲ್ ಅನ್ನು ಹಾಕುವುದರಿಂದ ಅವನು ಬೆಳೆಯುವಂಥದ್ದನ್ನು ನೇರವಾಗಿ ಕಚ್ಚಾ ಮಾಲನ್ನಾಗಿ ಪರಿವರ್ತನೆ ಮಾಡಿ ಮಾರುಕಟ್ಟೆಗೆ ಬರುವಂಥ ವ್ಯವಸ್ಥೆಯನ್ನು ರೂಪಿಸಿದರೆ, ಇವತ್ತು ಕೃಷಿ ಉಳಿಯುತ್ತದೆ, ಇಲ್ಲವಾದರೆ ಉಳಿಯುವುದಿಲ್ಲ. ದಯಮಾಡಿ ತಾವು ಆ ಕಡೆಗೆ ಹೆಚ್ಚು ಗಮನವನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ನಾವು ಎಷ್ಟೇ ಮಾತನಾಡಿದರೂ ಕೂಡ, ಇವತ್ತು ಹೆಚ್ಚು cold storage ಬೇಕಾಗುತ್ತದೆ. ಇವತ್ತು cropping pattern change ಆಗುತ್ತಿದೆ. ನಮ್ಮಲ್ಲಿ agriculture ನಿಂದ horticulture ಗೆ 300% shift ಆಗುತ್ತಿದೆ. ಏಕೆಂದರೆ, ಕರ್ನಾಟಕದಲ್ಲಿರುವಂಥ ವೈವಿಧ್ಯಮಯವಾಗಿರುವಂಥ ವಾತಾವರಣ ಬಹುಶ:

ಇಡೀ ದೇಶದಲ್ಲಿ ಇಲ್ಲ. ಇಡೀ ದೇಶದಲ್ಲಿ 17 Agro Climatic Zones ಇವೆ. ಇವು ಕರ್ನಾಟಕದಲ್ಲೇ 13 ಇದೆ. ಅಂದರೆ ಇಡೀ ವಿಶ್ವಕ್ಕೆ ಏನು ಬೇಕಾದರೂ ಬೆಳೆದು ಕೊಡುವಂಥ ವಾತಾವರಣ ನಮ್ಮ ಕರ್ನಾಟಕದಲ್ಲಿದೆ. ಇದಕ್ಕೆ ನಮ್ಮ ರೈತರು ಸಮರ್ಥರಾಗಿದ್ದಾರೆ. ಆದರೆ, ಸಾಮರ್ಥ್ಯವನ್ನು ನಮ್ಮ ನೀತಿಗಳ ಮುಖೇನ ತುಂಬಬೇಕಾಗಿರುವಂಥದ್ದು. ನಾವು ಕೈಗಾರಿಕೆಗಳನ್ನು ಮಾಡಿ, ಅವರಿಗೆ ಪ್ರೋತ್ಸಾಹ ನೀಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಒಳ್ಳೆಯ Agriculture Secretary ಗಳನ್ನು ಇಟ್ಟಿದ್ದೀರಿ.ಅವರ ಕಡೆಯಿಂದ ಆ ಕೆಲಸಗಳನ್ನು ಮಾಡಿಸುವಂಥದ್ದನ್ನು ಮಾಡಿ. ಇವತ್ತು ನಮ್ಮ bureaucracy ಬಗ್ಗೆ ನನಗೆ highest respect ಇದೆ. ನಾನು ಎಲ್ಲೇ ಹೋದರೂ, ಆಗಾಗ ನಾವು ಬೇರೆ ರಾಜ್ಯಗಳಿಗೆ ಹೋದಾಗ Karnataka bureaucracy ಬಗ್ಗೆ ಒಳ್ಳೆಯ ಮಾತುಗಳನ್ನು ಆಡುತ್ತಾರೆ. ನಮಗೆ ಸಂತೋಷವಾಗುತ್ತದೆ. ಅವರ ಅನುಭವವನ್ನು, ಪ್ರಯೋಜನಗಳನ್ನು ಪಡೆದುಕೊಳ್ಳುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಇಲ್ಲಿ bureaucracy ಶಾಶ್ವತವಾಗಿರುವಂಥದ್ದು, ನಾವು ಬರುತ್ತೇವೆ, ಹೋಗುತ್ತೇವೆ. ಈ ಚುನಾವಣೆಯಲ್ಲಿ ಏನು ಆಗುತ್ತದೋ, ಏನು ಕತೆಯೋ, ಯಾರು ಎಲ್ಲಿ ಇರುತ್ತಾರೋ ಗೊತ್ತಿಲ್ಲ. ಅದು ಏನೇ ಆಗಲಿ, ಯಾರು ಇರಲಿ, ಬಿಡಲಿ, ಆದರೆ ನಮ್ಮ permanent set up ಇದೆಯಲ್ಲಾ, ಅದನ್ನು ನಾವು ಉಪಯೋಗಿಸುವಂಥ ಕೆಲಸವನ್ನು ಮಾಡಬೇಕು. ಅದನ್ನು ಚುರುಕುಗೊಳಿಸುವಂಥ ಕೆಲಸವನ್ನು ಮಾಡಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ, irrigation ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾವೆಲ್ಲರೂ ಕೂಡ irrigation ಬಗ್ಗೆ ಮಾತನಾಡುತ್ತಿದ್ದೇವೆ. ಕೋಲಾರ ಜಿಲ್ಲೆಯವರಂತೂ ನಮಗೆ ಎಲ್ಲಾ ನೀರು ಬಂದೇ ಬಿಟ್ಟಿತೆಂದು ಹಾಹಾಕಾರದಿಂದ, ಕಾತರದಿಂದ ಕುಳಿತ್ತಿದ್ದಾರೆ. ಇವತ್ತು 1,200 ಅಡಿ ಆಳದವರೆಗೂ ಕೊಳವೆ ಬಾವಿಗಳು ಹೋಗುತ್ತಿವೆ. ಇದನ್ನು ಹೇಗೆ solve ಮಾಡುವುದು, ಮಾಡುವುದಕ್ಕೆ ಸಾಧ್ಯವೇ? ಇದಕ್ಕೆ ನಾನು ಒಂದು ಮಾತನ್ನು ಹೇಳುತ್ತೇನೆ. ಕೆಲವು ವಿಚಾರಗಳು ಪತ್ರಿಕೆಗಳಲ್ಲಿ ಬಂದಿರುವಂಥದ್ದನ್ನು ನೋಡಿದ್ದೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ನಾವು ಒಂದು ರಾಷ್ಟ್ರೀಯ ಜಲ ನೀತಿ ಇಲ್ಲವೆನ್ನುವ ಮಾತನ್ನು ಪದೇ ಪದೇ ಹೇಳುತ್ತಿರುತ್ತೇವೆ. ಇವತ್ತು ರಾಷ್ಟ್ರಕ್ಕೆ ಒಂದು ಜಲ ನೀತಿಯನ್ನು ತರುವಂಥ ಅವಕಾಶವನ್ನು ಈಗಾಗಲೇ ರಾಜ್ಯ ಸರ್ಕಾರವೂ ಒಪ್ಪಿಗೆ ಕೊಟ್ಟಂತೆ, ಇವತ್ತು ಒಂದು ನೀತಿ, ಕೇಂದ್ರ ಸರ್ಕಾರದ ಮುಂದೆ ಇದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ಅದನ್ನು ಏನಾದರೂ ಮಾಡಿ ಆ ರಾಷ್ಟ್ರೀಯ ಜಲ ನೀತಿಯನ್ನು ಒಪ್ಪಿಸುವ ಕೆಲಸವನ್ನು ಮಾಡಿದರೆ, ಇವತ್ತು ತೀರ್ಪಿನ ಹಿನ್ನೆಲೆಯಲ್ಲಿ ನಾವು ನೀರಿನ ವಂಚನೆಯನ್ನು ಒಳಗಾಗಿದ್ದೆವಲ್ಲಾ, ಆ policy ಬಂದರೆ, ಮಹಾದಾಯಿಂದಲೂ ನೀರನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಕಾವೇರಿ ನದಿ ಯೋಜನೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಕೃಷ್ಣದಲ್ಲೂ ಕೂಡ ಸಾಧ್ಯವಾಗುತ್ತದೆ. ಮೊದಲು ಇದನ್ನು ಮಾಡಬೇಕು. ಒಂದು ರಾಷ್ಟ್ರೀಯ ಜಲ ನೀತಿ ಕೇಂದ್ರ ಸರ್ಕಾರದ ಮುಂದೆ ಏನು ಇದೆ, ಇದಕ್ಕೆ ಒಪ್ಪಿಗೆಯಾಗುವ ಕೆಲಸವನ್ನು ಮಾಡಬೇಕು. ಇವತ್ತು ಆ ಕೆಲಸವನ್ನು ಮಾಡಿದಾಗ ಮಾತ್ರ ನಮಗೆ ಏನಾದರೂ ಯೋಜನೆಗಳನ್ನು ಮಾಡುವುದಕ್ಕೆ ಆಗುತ್ತದೆ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಕಾವೇರಿ ಮತ್ತು ಕೃಷ್ಣ ನಮ್ಮಲ್ಲಿರುವಂಥದ್ದು. ಇವೆರಡಕ್ಕೂ ಕೂಡ ಅಂತಿಮ ತೀರ್ಪು ಬಂದು ಹೋಗಿದೆ, ಇವೆರಡಕ್ಕೂ ತೀರ್ಪು ಬಂದಾಗ, ಈ ಎರಡೂ ತೀರ್ಪಿನ ಅನ್ವಯ ನಮಗೆ ಸಮುದ್ರದ ಪಾಲಾಗುತ್ತಿರುವ ನೀರಿನ ಪ್ರಮಾಣವೆಷ್ಟು ಎನ್ನುವಂಥದ್ದನ್ನು ನಾವು ಅವಲೋಕನ ಮಾಡಿದರೆ, ಕಾವೇರಿ ಬೇಸಿನ್ ಒಂದರಲ್ಲೇ ನಮಗೆ ತೀರ್ಪು ಬಂದಿರುವಂಥದ್ದು ಏನೆಂದರೆ, ನೀವು ಮೆಟ್ಟೂರಿನಿಂದ 197 ಟಿ.ಎಂ.ಸಿ. ನೀರನ್ನು ಕೊಟ್ಟರೆ ಸಾಕು. ಅದರ ಮುಂದಕ್ಕೆ ಒಂದು drop ಕೊಡುವ ಹಾಗಿಲ್ಲವೆಂದು ಹೇಳುತ್ತಾರೆ. ಅವರು ಸುಪ್ರೀಂ ಕೋರ್ಟ್‌ಗೆ ಅಪೀಲು ಹಾಕಿಕೊಂಡಿರುವ ಪ್ರಶ್ನೆ ಬೇರೆ, ಇದು ಸುಪ್ರೀಂ ಕೋರ್ಟ್‌ಗೆ ಹಾಕಿಕೊಂಡ ತಕ್ಷಣ ನಾವು ಯೋಜನೆಗಳನ್ನು ಮಾಡಬಾರದೆಂದು ಏನೂ ಇಲ್ಲ. ಇಲ್ಲಿ 197 ಟಿ.ಎಂ.ಸಿ ಗಿಂತ Excess ನೀರು ಕಳೆದ 50 ವರ್ಷಗಳಿಂದ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದ ಮೇಲೆ ಎಷ್ಟು ನೀರು ಹೋಗಿದೆಯೆಂದರೆ, ಒಂದು ವರ್ಷಕ್ಕೆ 65 ರಿಂದ 260 ಟಿ.ಎಂ.ಸಿ ನೀರು ಸಮುದ್ರದ ಪಾಲಾಗಿದೆಯೆಂದು ಹೇಳಿದರೆ, ನಾವು ಯೋಚನೆ ಮಾಡಬೇಕು. ನಾವು ಎಲ್ಲೋ ಒಂದು ಕಡೆಗೆ. . .

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ :– ಮಾನ್ಯ ಉಪಾಧ್ಯಕ್ಷರೆ. . .

ಶ್ರೀ ಟಿ.ಬಿ.ಜಯಚಂದ್ರ : – ನಾನು ಮುಗಿಸಿಬಿಡುತ್ತೇನೆ, ನನಗೆ yield ಆಗಬೇಡಿ ಎಂದು ಹೇಳಿದ್ದಾರೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ : – ನಾನು ಒಂದೇ ಒಂದು ಮಾತನ್ನು ಹೇಳಿ ಬಿಡುತ್ತೇನೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಬಹಳ ಗಹನವಾಗಿ ಆಲೋಚನೆ ಮಾಡಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗಿರುವಂಥದ್ದು ತುಂಬಾ ಅನಿವಾರ್ಯವಾಗಿದೆ. ಎಲ್ಲಾ ಸದಸ್ಯರೂ ಬರದ ಬಗ್ಗೆ ಮಾತನಾಡಿದ್ದಾರೆ. ಆದರೆ ಹಿರಿಯ ಸದಸ್ಯರಾಗಿರುವಂಥ ಸನ್ಮಾನ್ಯ ಜಯಚಂದ್ರರವರು ಮಾತನಾಡುತ್ತಿರುವಂಥ ರೀತಿಯಲ್ಲಿ, ಈ ಯೋಜನೆಯನ್ನು ಕೈಗೊಳ್ಳುವುದಕ್ಕೆ ನೀರಿನ ಕೊರತೆಯಂತೂ ನಮಗೆ ಯಾವುದೇ ಕಾರಣಕ್ಕೂ ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸ್ಪಷ್ಟವಾಗಿ ಅಂಕಿ–ಅಂಶಗಳ ಆಧಾರದಲ್ಲಿ ಮಾಹಿತಿ ನೀರಾವರಿ ಇಲಾಖೆಯಲ್ಲಿ ಲಭ್ಯವಿದೆ. ಇವರು TAC ಯಲ್ಲಿ ವಾದ ಮಾಡಬೇಕಾದರೆ, ತಮಿಳುನಾಡಿನ ವಾದಕ್ಕೆ ಇವರು ತಲೆ ಬಾಗುತ್ತಿದ್ದಾರೆ. ಯಾವುದೇ ಯೋಜನೆಯ ವಿಚಾರವನ್ನು ಮಾತನಾಡಿದರೂ ಕೂಡ ಸುಪ್ರೀಂ ಕೋರ್ಟ್ ಅನ್ನು ತೋರಿಸುತ್ತಿದ್ದಾರೆ. ದಯಮಾಡಿ ನಮ್ಮ ರಾಜ್ಯ ಸರ್ಕಾರ ಈ ನಿಲುವನ್ನು ಬದಲಾಯಿಸಿಕೊಂಡು ದಿಟ್ಟ ನಿಲುವನ್ನು ತೆಗೆದುಕೊಂಡು ಕಾವೇರಿ ಬೇಸಿನ್‌ನಲ್ಲಿ ನಿಜವಾಗಿಯೂ ಅವಶ್ಯಕತೆ ಇರುವಂಥ ಯೋಜನೆಗಳಿಗೆ ಮೊದಲು ಅವಕಾಶವನ್ನು ಕೊಡಬೇಕೆಂದು ಮತ್ತು ಆ ಒಂದು ವಾದವನ್ನು ಮಾಡಬೇಕೆನ್ನುವ ವಿಚಾರವನ್ನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತಿದೇನೆ.

ಶ್ರೀ ಟಿ.ಬಿ.ಜಯಚಂದ್ರ : – ಮಾನ್ಯ ಉಪಾಧ್ಯಕ್ಷರೆ, ನೀರಿನ ಕೊರತೆ ಇದೆಯೆಂದು ಅಲ್ಲ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್ ಗೌಡ : – ಮಾನ್ಯ ಉಪಾಧ್ಯಕ್ಷರೆ, ನಾವು ಸುಪ್ರೀಂ ಕೋರ್ಟ್‌ನಲ್ಲಿ ಬರೆದುಕೊಟ್ಟಿದ್ದೇವೆಂಬ ವಿಚಾರವನ್ನು ಹೇಳಿದ್ದಾರೆ. ಇದು ಕಾವೇರಿ ಬೇಸಿನ್‌ಗೆ ಭಾರಿ ಅನ್ಯಾಯವಾಗಿದೆ.

ಉಪಾಧ್ಯಕ್ಷರು: ತಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಉಪಾಧ್ಯಕ್ಷರೆ, ಕುಮಾರಿ ಜಯಲಲಿತಾರವರು ಮೂಲತ: ಕರ್ನಾಟಕದವರೆಂದರೂ, ಇವರಿಗೆ ಒಂದು ಚಾಳಿ ಏನೆಂದರೆ, ಬೆಳಿಗ್ಗೆ ಎದ್ದು ತಕರಾರು ಮಾಡುತ್ತಿರುವುದು. ಬಹುಶ: ನೀರಾವರಿ ಇಲಾಖೆಯ ಅಧಿಕಾರಿಗಳು, ಮುಖ್ಯಮಂತ್ರಿಗಳು, ಮಂತ್ರಿಗಳು, ಸೆಕ್ರಟರಿಗಳು, ನಿದ್ದೆ ಮಾಡುವುದಕ್ಕೆ ಬಿಡುವುದಿಲ್ಲ. ಪ್ರತಿ ದಿವಸವೂ ಒಂದೊಂದು ಕಾಗದ ಬರೆಯುವುದು, ಇಲ್ಲಿ ಬರ ಎಂದು ಜನರು ಸಾಯುತ್ತಿದ್ದಾರೆ. ಈಗಲೂ ನಮಗೆ ನೀರು ಕೊಟ್ಟಿಲ್ಲವೆಂದು ಕಾಗದವನ್ನು ಬರೆಯುತ್ತಾರೆ, ಈ ಕಾಗದಗಳಿಗೆ ಹೆದರುವಂಥ ಅವಶ್ಯಕತೆ ಇಲ್ಲ, ನ್ಯಾಯ ನಮ್ಮ ಪರವಾಗಿದೆ. ನಮ್ಮ ಸರ್ಕಾರ ಹೋರಾಟ ಮಾಡುವುದಕ್ಕೆ ಯಾವತ್ತು ಸಮರ್ಥವಾಗಿದೆ. ನಾವು ಸಹ ಯಾವತ್ತೂ ಕೂಡ ಈ ವಿಚಾರದಲ್ಲಿ ಸರ್ಕಾರದೊಂದಿಗೆ ಇದ್ದೇವೆ. ಇವತ್ತು ನಮ್ಮ ಪಾಲಿನ ನೀರು ಅಪವ್ಯಯವಾಗುತ್ತಿದೆ, ಸಮುದ್ರದ ಪಾಲಾಗುತ್ತಿರುವಂಥ ನೀರನ್ನು ಉಪಯೋಗಿಸಬೇಕಾದಾಗ, ಈಗ ಮೊನ್ನೆ ಕುಮಾರಿ ಜಯಲಲಿತಾರವರು ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ, ಇವರೇ ಸುಪ್ರೀಂ ಕೋರ್ಟ್‌ಗೆ ಹೋಗಿರುವಂಥದ್ದು, ಅವರು ಹೋಗಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಾರೆಂದರೆ, ಕಾವೇರಿ Tribunal judgement ಅನ್ನು notification ಮಾಡಿ ಎಂದು ಕೇಳುತ್ತಾರೆ. ಕುಮಾರಿ ಜಯಲಲಿತಾರವರಿಗೆ ಅರ್ಥವಾಗಬೇಕಾಗಿರುವಂಥದ್ದು ಏನೆಂದರೆ, notification ಆದರೂ ಸಹಿತ, ಈ ವಿಷಯವನ್ನು ಮಾಡಬೇಕೋ, ಬಿಡಬೇಕೋ ಎನ್ನುವಂಥದ್ದನ್ನು ಕಾನೂನು ತಜ್ಞರಿಗೆ ಬಿಟ್ಟು ಬಿಡೋಣ. ಇವತ್ತು ಇದನ್ನು ಮಾಡಿದರೂ ಸಹಿತ 192 ಟಿ.ಎಂ.ಸಿ. ಮೆಟ್ಟೂರಿನ ಮೇಲಿನಿಂದ ಬರುವಂಥ ನೀರನ್ನು ನಾವು ಸಂಪೂರ್ಣವಾಗಿ ಬಳಸುವುದಕ್ಕೆ ಅವಕಾಶವಿದೆ, ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಅದಕ್ಕೆ ಬೇಕಾಗಿರುವ ಯೋಜನೆಗಳನ್ನು ನಾವು ಮಾಡಬೇಕಾಗುತ್ತದೆ. ಅದು ಮೇಕೆದಾಟು ಇರಬಹುದು ಅವರು ಹೊಗೇನಕಲ್ ಹತ್ತಿರ ಕಟ್ಟಿಕೊಳ್ಳಲಿ. ಮೇಕೆದಾಟು ಹತ್ತಿರ ನಾವು ಕಟ್ಟಿದರೆ ನಮಗೆ ಕಾವೇರಿಯಿಂದ ಬರುವ ನೀರೇ ಸಾಕು, ತಮಿಳುನಾಡಿನ ಮೆಟ್ಟೂರಿಗೆ 192 ಟಿಎಂಸಿ ಕೊಡಿಸುವುದಕ್ಕೆ. ಹೇಮಾವತಿ ಮೂಲದಿಂದ ಬರುವ ನೀರನ್ನು ಸಂಪೂರ್ಣವಾಗಿ ನಾವು ಬಳಸಿಕೊಳ್ಳುವ ಕೆಲಸವನ್ನು ಮಾಡುವುದಾದರೆ ಒಂದು ವರ್ಷಕ್ಕೆ ಕನಿಷ್ಠ ಎಂದರೆ 30 ರಿಂದ 65 ರಷ್ಟು ಟಿಎಂಸಿ ನೀರು ಹೇಮಾವತಿ

ಕೊಳ್ಳದಿಂದ ಕೆಆರ್‌ಎಸ್‌ಗೆ ಹೋಗುತ್ತಿದೆ. ನಮಗೆ ಎತ್ತಿನಹೊಳೆ ಯೋಜನೆ ಏಕೆ ಬೇಕು? ಅದು ಬೇಕು ಬೇಡ ಎಂದು ನಾನು ಹೇಳುತ್ತಿಲ್ಲ. ಎತ್ತಿನಹೊಳೆ ಯೋಜನೆಗಿಂತ ಹೆಚ್ಚಾಗಿ ನಮ್ಮ ನೀರು ಇದೆಯಲ್ಲ, ಅದನ್ನು ನೀವು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಿದೆಯಲ್ಲಾ. ಬಸವರಾಜ ಬೊಮ್ಮಾಯಿಯವರು ಈಗ ಸದನಕ್ಕೆ ಬಂದರು. ಒಟ್ಟಾರೆ ಸಾರಾಂಶ ಎಂದರೆ ನೀರಾವರಿ ಇಲಾಖೆಗೆ ಹೆಚ್ಚು ಹಣವನ್ನು ಕೊಡಿ. ಯೋಜನೆಗಳನ್ನು ಮುಗಿಸುವ ಕೆಲಸವನ್ನು ಧೈರ್ಯವಾಗಿ ಮಾಡಿ. ಯೋಜನೆಗಳನ್ನು ಅನುಷ್ಠಾನ ಮಾಡಬೇಕಾದಾಗ ಆರೋಪಗಳು, ಕಷ್ಟಗಳು ಬರಬಹುದು. ನಿರ್ದಾಕ್ಷಿಣ್ಯವಾಗಿ ಧೈರ್ಯದಿಂದ ಮುಂದೆ ಹೋಗುವ ಕೆಲಸ ಮಾಡಿ. ಆಗ ಕಾವೇರಿ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿದೆ. ಆಗ ಬೇರೆ ನೀರಿಗೋಸ್ಕರ ಪ್ರಯತ್ನ ಪಡಬೇಕಾಗಿಲ್ಲ. ನಮ್ಮದೇ ಪಶ್ಚಿಮ ಘಟ್ಟದ ನೀರನ್ನು ನಾವು ಯಾವತ್ತು ಬೇಕಾದರೂ ಬಗೆಹರಿಸಿಕೊಳ್ಳಬಹುದು. ಅದನ್ನು ಮುಂದಿನ ಪೀಳಿಗೆಗೆ ಬಿಡೋಣ. ಸದ್ಯದಲ್ಲಿ ಇದನ್ನು ಬಳಸಿಕೊಳ್ಳುವುದಕ್ಕೆ ನಮಗೆ ಅವಕಾಶವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಷ್ಟೇ ಪ್ರಮಾಣದಲ್ಲೂ ಕೂಡ ಕೃಷ್ಣಾ ನದಿಯಲ್ಲಿ 957 ಟಿಎಂಸಿ ನೀರು ಹೋಗಿ 1111 ಟಿಎಂಸಿ ನೀರನ್ನು ಬಳಕೆ ಏನು ಮಾಡಬೇಕು, Schemes A, B, C, ಎಲ್ಲಾ ಹೋಗಿ ಒಟ್ಟಾರೆ ನೀರಿನ ಬಳಕೆ ಮಾಡಬೇಕಾದರೆ ಯೋಜನೆಗಳನ್ನು ಬೇಗ ರೂಪಿಸಿ ಬೇಗ ಕಾರ್ಯಗತ ಮಾಡುವ ಕೆಲಸ ಮಾಡಬೇಕು. ನಾನು ನಿಮಗೊಂದು ಕಿವಿಮಾತು ಹೇಳುತ್ತೇನೆ. ಕಾವೇರಿಯಗಲಿ, ಕೃಷ್ಣ ಆಗಲಿ ಅಥವಾ ಯಾವುದೇ ಯೋಜನೆಗಳಾಗಲೀ, ಆದ್ಯತೆ ಎಂದರೆ flow irrigation ಗೆ ಕೊಟ್ಟರೆ ಕೊಡಿ. Flow irrigation ಎಲ್ಲಾ exhaust ಆದ ಮೇಲೆ lift irrigation ಗೆ ಹೋಗಿ, Simultaneos ಆಗಿ lift irrigation ಗೆ ಕೈಹಾಕುವುದು ಬೇಡ ಎಂದು ನಾನು ಹೇಳುತ್ತಿಲ್ಲ. ನಮ್ಮ ನೀರಿನ ಬಳಕೆ ಪ್ರಮಾಣವನ್ನು ಉಳಿಸಿಕೊಳ್ಳಲೇಬೇಕಾಗುತ್ತದೆ. Priority should be given for flow irrigation. Floods manage ಮಾಡುವುದಕ್ಕೆ ಯೋಜನೆಗಳನ್ನು ಮಾಡಿ. ಈ ರೀತಿಯಾಗಿ ನೀವು ಮಾಡಿದರೆ ಒಳ್ಳೆಯದು. ಖಂಡಿತವಾಗಿಯೂ ನಮಗೆ ಕರ್ನಾಟಕದಲ್ಲಿ ನೀರಿನ ಕೊರತೆ ಇಲ್ಲ. ಹಣದ ಕೊರತೆ ಇಲ್ಲ. ಹಣದ ಕೊರತೆಗೆ ನಾನು ಈಗಾಗಲೇ ಒಂದು idea ಹೇಳಿದ್ದೆ. ಬಸವರಾಜುರವರೆ, ನೀವು ಬರಲಿಲ್ಲ. ಬಜೆಟ್‌ನಲ್ಲಿ ಕೇಳುವುದಕ್ಕಿಂತ

ಬೆಂಗಳೂರಿನಲ್ಲಿರುವ ಅಕ್ರಮ ಸಕ್ರಮದ ಜೊತೆಗೆ de-notification ದಂಥೆ ಬಿಟ್ಟು ಎಲ್ಲವನ್ನೂ ಕೂಡ Judiciary ಅನ್ನು confidence ಗೆ ತೆಗೆದುಕೊಂಡು regularization ಮಾಡುವ ಕೆಲಸವನ್ನು ನೀವು ಮಾಡಿದ್ದೇ ಆದರೆ ಲಕ್ಷಾಂತರ ಕೋಟಿ ಹಣ ಬರುತ್ತದೆ. ಆಗ ಈ ಯೋಜನೆಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಸಾಲ ತೀರಿಸಬಹುದು. ಅದರ ಬಗ್ಗೆ ಯೋಚನೆ ಮಾಡಿ. ಇನ್ನು, ಯಾವುದೇ ರೀತಿ ಕೇಂದ್ರ ಸರ್ಕಾರದ ಮುಂದಿರುವ Water-policy ಅನ್ನು ಆದಷ್ಟು ಬೇಗ ಮುಗಿಸುವ ಕೆಲಸ ಮಾಡಿ. ಜೊತೆಗೆ interbasin, intra-basin projects ಗೆ ಆದ್ಯತೆ ಕೊಟ್ಟು ಕೇಂದ್ರ ಸರ್ಕಾರದಿಂದ ಹಣವನ್ನೂ ಕೂಡ ಪಡೆದುಕೊಳ್ಳುವ ಕೆಲಸ ಮಾಡಬೇಕು. ತಮಿಳುನಾಡಿನವರು ಈಗಾಗಲೇ ಕಾವೇರಿ ಮತ್ತು ವೈದೇಹಿ, ಅದು ಕೇಂದ್ರ ಸರ್ಕಾರದ project ಆಗಿದ್ದು ಸುಮಾರು 700 ಕೋಟಿ ರೂಪಾಯಿಗಳನ್ನು clear ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಕೇಳಿ ನನಗೆ ಗಾಬರಿಯಾಯಿತು. ಆ ರೀತಿಯಾಗಿದ್ದಾಗ ಆ ರೀತಿಯ ಯೋಜನೆಗಳನ್ನು ನಾವೂ ಮಾಡುವುದಕ್ಕೆ ತಯಾರಾಗಬೇಕು. ಇನ್ನೊಬ್ಬರ ಕಡೆ ಬೆಟ್ಟು ಮಾಡಿ ತೋರಿಸಿ ಆಕ್ಷೇಪ ಮಾಡುವುದಕ್ಕಿಂತ ಹೆಚ್ಚಾಗಿ ನಾವೇನು ಮಾಡುತ್ತಿದ್ದೇವೆ, ನಾವು ಎಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನುವುದು ಬಹಳ ಮುಖ್ಯ. ಮಾತಿಗಿಂತ ಕೃತಿ ಇರಬೇಕಾಗುತ್ತದೆ. ಯೋಜನೆಗಳನ್ನು ರೂಪಿಸಿ ಮಾಡಿಸುವ ಕೆಲಸವನ್ನು ಮಾಡಿ ಎಂದು ಹೇಳುತ್ತೇವೆ. ನೀವು ಏನೇ ಮಾಡಿ ಬಿಡಿ. ಬೆಳೆ ಹಾಳಾಗಿರುವ ರೈತರೇನಿದ್ದಾರೆ, ಶಾಶ್ವತವಾಗಿ ಬೆಳೆ ಹಾಳಾಗಿರುವವರಿಗೆ ಏನಾದರು one time ಪರಿಹಾರ ಕೊಡುವ ಕೆಲಸ ಮಾಡಲೇಬೇಕು. ಬಿಜಾಪುರದಲ್ಲಿ ದ್ರಾಕ್ಷಿ ಬೆಳೆದಿರುವವರ ಕತೆ ಕೇಳುವುದೇ ಬೇಡ. ಸಾವಿರಾರು ಲಕ್ಷಾಂತರ ರೂಪಾಯಿಗಳ ಬಂಡವಾಳ ಹಾಕಿ ಕೈಸುಟ್ಟುಕೊಂಡಿದ್ದಾರೆ. ಒಂದೇ ಒಂದು ನಿದರ್ಶನ ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : – ಮಾನ್ಯ ಜಯಚಂದ್ರರವರು ಮೊದಲಿನಿಂದಲೂ ನೀರಾವರಿ ಬಗ್ಗೆ ಆಸಕ್ತಿ ಇರುವವರು ಮತ್ತು ರಾಜ್ಯದ ನೀರಾವರಿ ಬಗ್ಗೆ ಮತ್ತು ನೀರಿನ ಸದ್ಬಳಕೆ ಬಗ್ಗೆ ಈ ಸದನದಲ್ಲಿ ಹತ್ತು ಹಲವಾರು ಬಾರಿ ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಅವರು ಹೇಳಿರುವ ಮಾತಿನ ರೀತಿಯಲ್ಲಿ ನಮ್ಮ ಸರ್ಕಾರ ಈಗಾಗಲೇ ಹಲವಾರು ಕ್ರಮಗಳನ್ನು ತೆಗೆದುಕೊಂಡ ಪ್ರತಿಫಲವಾಗಿ ಕೇಂದ್ರ ಸರ್ಕಾರದ ಸಹಾಯ ಕೂಡ ಸಿಕ್ಕಿದೆ. ಈ

ವರ್ಷ ಕೇಂದ್ರ ಸರ್ಕಾರ water Mission ಎನ್ನುವ ಕಾರ್ಯಕ್ರಮ ಮಾಡಿದೆ. ಇದಕ್ಕೆ ಸುಮಾರು 30 ಸಾವಿರ ಕೋಟಿ ರೂಪಾಯಿಗಳನ್ನು ಮೊದಲನೇ ಪ್ರಾಯೋಗಿಕವಾಗಿ ಕೊಟ್ಟು ಇಟ್ಟುಕೊಂಡಿದ್ದಾರೆ. Water Mission ಹೇಗೆ ಬಂತು? ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆಯ ಕೆಲವು ಕಾರ್ಯಕ್ರಮಗಳು ಮೊದಲನೆಯದಾಗಿ stabilization of the ಅಚ್ಚುಕಟ್ಟು, ಎರಡನೆಯದಾಗಿ, concurrent audit, telemetric ಅನ್ನು ಉಪಯೋಗ ಮಾಡಿಕೊಂಡಿರುವ concurrent audit, power audit ಮಾಡುವುದಕ್ಕೆ ಎಷ್ಟು ಕಷ್ಟವಿದೆಯೋ water audit ಮಾಡುವುದೂ ಅಷ್ಟೇ ಕಷ್ಟವಿದೆ. Concurrent audit ಮಾಡಬೇಕೆಂದು telemetric ಅನ್ನು main canal, distributory ಎಲ್ಲಾ ಏನು ಹಾಕಿದ್ದೇವೆ ಅದು ಪ್ರಾಯೋಗಿಕವಾಗಿ ಮಾಡಿ ಏನು ಯಶಸ್ವಿಯಾಗಿದೆ, ಅದನ್ನು ಅವರು ಬಂದು ನೋಡಿ ಹೋಗಿದ್ದಾರೆ. Stabilization ಅನ್ನು ನೋಡಿಕೊಂಡು ಹೋದರು. Macro irrigation ಬಗ್ಗೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಅದನ್ನು ground level ನವರು ಬಂದು inspection ಮಾಡಿದರು. ಅವರು ಈ ಮೂರು component ಮಾಡಿದ ಮೇಲೆ, conservation of the water to better efficiency right from water management to the capacity building ಆಗಬೇಕು. Water management ನಲ್ಲಿ ನಮ್ಮ ನೀರಿನ ನಿರ್ವಹಣೆ ಮತ್ತು stabilization of the flow ಆಮೇಲೆ efficiency in canal flow ಅದರ ಜೊತೆಗೆ ನಮ್ಮ concurrent audit ಇವೆಲ್ಲವೂ ಆದ ಮೇಲೆ Macro irrigation, last component ಆಗಿ capacity building ಇದೆ. ಬಳಕೆದಾರರ ಬಗ್ಗೆ ತಾವು ಜಾಗ್ರತೆಯಿಂದ ಮಾತನಾಡಿದ್ದೀರಿ. Comprehensive ಆಗಿ ನಮ್ಮ ಜೊತೆಗೆ ಮೂರ್ನಾಲ್ಕು ಬಾರಿ discussion ಮಾಡಿ Planning Commissin Water Resources Member ಇದ್ದಾರೆ. ಅವರು ನಮ್ಮ ಜೊತೆ ಸುಧೀರ್ಘವಾಗಿ ಚರ್ಚೆ ಮಾಡಿದ ಮೇಲೆ ಬೇರೆ ಬೇರೆ ಯೋಜನೆ ಮಾಡಿದ್ದೇವೆ. ಅದನ್ನು ಈ ಎಲ್ಲಾ components ಅನ್ನು ಒಂದೇ ಯೋಜನೆಯಲ್ಲಿ ಹಾಕಿದ್ದಾರೆ. ಅದರಿಂದ system stabilization DV minimum 25% of the water should be saved ಎನ್ನುವ condition ಹಾಕಿ Water Mission ನಲ್ಲಿ ಒಂದು ಕಾರ್ಯಕ್ರಮ ರೂಪಿಸಿದ್ದಾರೆ. ನಾನು ಸದನಕ್ಕೆ ಒಂದು

ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. Karnataka is the first state to get the 'in principle clearance' for our projects. ನಮ್ಮ ನಾರಾಯಣಪುರ ಎಡ ದಂಡೆ ಕಾಲುವೆ, ಇಂಡಿ ಬ್ರಾಂಚ್ ಕೆನಾಲ್, ಮುಲ್ಲಾಮಾರಿ ಬ್ರಾಂಚ್ ಕೆನಾಲ್, ಶಹಾಪುರ ಬ್ರಾಂಚ್ ಕೆನಾಲ್ ಈ ನಾಲ್ಕೈದು ಬ್ರಾಂಚ್ ಕೆನಾಲ್ 1 ಲಕ್ಷ 30 ಸಾವಿರ ಹೆಕ್ಟೇರ್ ಪ್ರದೇಶದ stabilization ಗೆ 2600 ಕೋಟಿ ರೂಪಾಯಿಗಳಿಗೆ in principle ಒಪ್ಪಿಗೆ ಕೊಟ್ಟಿದ್ದಾರೆ. ನಾವು ಅದರ DPR ಕೊಟ್ಟರೆ ಇದೇ ವರ್ಷ ಅದಕ್ಕೆ ಅನುಮತಿ ಸಿಗುತ್ತದೆ. ಮೂರು ವರ್ಷಗಳಲ್ಲಿ ಸಂಪೂರ್ಣವಾಗಿ ಇಡೀ ದೇಶಕ್ಕೆ ಅದು model ಆಗುತ್ತದೆ. ಅದನ್ನು ನಾವು ಮಾಡಿದರೆ, ಬೇರೆ ಬೇರೆ ಯೋಜನೆಗಳಿಗೆ ಅಳವಡಿಸಿದರೆ ನೀವು ಹೇಳಿದಂತೆ 25% of the water ಅಂದರೆ ಇದ್ದ ನೀರನ್ನು ನಾವು ಉಳಿಸಿಕೊಳ್ಳಬೇಕು. ಈಗಾಗಲೇ ಯೋಜನೆಗಳಿಂದ ಕೊಟ್ಟಿರುವ ನೀರಿನಲ್ಲಿ 25% target ಏನು ಅವರು ಕೊಟ್ಟಿದ್ದಾರೆ, ಅದನ್ನು reach ಮಾಡಬಹುದು. ಅದಕ್ಕೆ ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ನಾವು ಬೇರೆ ಬೇರೆ ಯೋಜನೆಯಲ್ಲಿ ಮಾಡಿದ್ದನ್ನು comprehensive ಆಗಿ ಅವರು ತೆಗೆದುಕೊಂಡು ಹೋಗಿ ರಾಷ್ಟ್ರೀಯ model ಆಗಿ ಮಾಡಿ ನಮ್ಮ ಕಡೆಯಿಂದ ಹೋಗಿದ್ದರಿಂದ ಮೊದಲನೇ ಯೋಜನೆಯನ್ನು ನಮಗೇ ಕೊಟ್ಟಿದ್ದಾರೆ. 2600 ಕೋಟಿ ರೂಪಾಯಿಗಳಿಗೆ in principle ಒಪ್ಪಿಗೆಯನ್ನು ಕೊಟ್ಟಿದ್ದರ ಬಗ್ಗೆ ಈಗಾಗಲೇ ನಮಗೆ ಲೆಟರ್ ಬಂದಿದೆ. ಇನ್ನು ಎರಡು ತಿಂಗಳಲ್ಲಿ DPR ಕೊಡುತ್ತಿದ್ದೇವೆ.

And we are going to take up that complete model irrigation, Efficient irrigation system ಮಾಡುವುದಕ್ಕೆ ನಾವು ಇದೇ ವರ್ಷ ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ : – ಮಾನ್ಯ ಉಪಾಧ್ಯಕ್ಷರೆ,. . . .

ಉಪಾಧ್ಯಕ್ಷರು : – ಸಮಯ ಕಡಿಮೆ ಇದೆ ಕುಳಿತುಕೊಳ್ಳಿ.

ಶ್ರೀ ಬಸವರಾಜು ಬೊಮ್ಮಾಯಿ : – Government of India ದಿಂದ ಮಾತನಾಡಿದ್ದರಿಂದ ಅದು ಬರುತ್ತಿತ್ತು. ಆದರೆ, ಅದೇ model ಅನ್ನು ಕಾವೇರಿ ಬೇಸಿನ್‌ಗೂ ಕೂಡ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಕಬಿನಿಗೂ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ತುಮಕೂರು ಬ್ರಾಂಚ್ ಕೆನಾಲ್‌ನ

ಹೇಮಾವತಿಯಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಯಗಚಿಯಲ್ಲಿ ಕೂಡ ತೆಗೆದುಕೊಳ್ಳಬೇಕೆಂಬ ತೀರ್ಮಾನ ಮಾಡಿದ್ದೇವೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಟಿ.ಬಿ.ಜಯಚಂದ್ರ : – ನೀವು ಕೇಂದ್ರ ಸರ್ಕಾರದ ಜೊತೆ ಯಾವ್ಯಾವ ಹೊಸ ವಿಚಾರಗಳನ್ನು ಮಾತನಾಡುತ್ತೀರಿ ಅದು ಆಗಾಗ್ಗೆ ಸದನದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ರಾಜ್ಯದ ಜನತೆಗೆ ಗೊತ್ತಾಗಬೇಕು. ಬರಗಾಲ ಬಂತು, ನಾವು ಇನ್ನೇನು ಕೃಷಿಯನ್ನು ಸಂಪೂರ್ಣವಾಗಿ ಕೈಬಿಡಲೇಬೇಕು, ಬದುಕಲು ಸಾಧ್ಯವಿಲ್ಲವೆನ್ನುವ ಮಟ್ಟಿಗೆ ಇದ್ದಾಗ ಈ ರೀತಿಯಾದ ವಿಚಾರಗಳು ಬರುವುದರಿಂದ ರೈತರಿಗೆ ಹೆಚ್ಚು ಆತ್ಮವಿಶ್ವಾಸ ಬರುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : – ಮಾನ್ಯ ಅಧ್ಯಕ್ಷರೆ. . .

ಅಧ್ಯಕ್ಷರು: ನೀವು ಆಮೇಲೆ ಉತ್ತರ ಹೇಳಿ

ಶ್ರೀ ಬಸವರಾಜ ಬೊಮ್ಮಾಯಿ : – Drought ವಿಷಯದಲ್ಲಿ positive note ಹೋಗಲಿ ಎನ್ನುವ ದೃಷ್ಟಿಯಿಂದ ಅವರೂ ಕೇಳುತ್ತಿದ್ದಾರೆ, ನಾವೂ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ನಿನ್ನೆ ಒಂದು communication ಕೊಟ್ಟಿದೆ. Drought ಇರುವುದರಿಂದ Water Resources ನಲ್ಲಿ 2012–13 ವರೆಗೂ ಯವ್ಯಾವ ಯೋಜನೆಗಳನ್ನು ಮುಗಿಸಬಹುದು ಅವುಗಳಿಗೆ ನಾವು ಸಹಾಯ ಮಾಡುತ್ತೇವೆ ಎಂದು communucation ಕೊಟ್ಟಿದ್ದಾರೆ. ಇವತ್ತೇ ನಾವು ಕುಳಿತು proposal ಕಳುಹಿಸುತ್ತಿದ್ದೇವೆ.

ಅಧ್ಯಕ್ಷರು : – ಮಧ್ಯ ಉತ್ತರ ಕೊಡುವುದು ಬೇಡ.

ಶ್ರೀ ಟಿ.ಬಿ.ಜಯಚಂದ್ರ : – ಬಹಳ ಪ್ರಮುಖವಾಗಿ ತುಮಕೂರು ಬ್ರಾಂಚ್ ಕೆನಾಲ್ ಅಪ್ಪರ್ ಭದ್ರಾ ಅದು ನಮ್ಮ ಕನಸು ಕೂಸಾಗಿಯೇ ಉಳಿದಿದೆ. ದಯಮಾಡಿ ಆದಷ್ಟು ಬೇಗ ಅದರ ಕೆಲಸವನ್ನು ಪ್ರಾರಂಭ ಮಾಡಬೇಕು. ಈಗಾಗಲೇ ಮೊದಲನೇ ಹಂತದ ಕೆಲಸ ಅಂದರೆ ಅಜ್ಜಂಪುರದವರೆಗೆ ಕೆಲಸ ಆಗಿದೆ. ಅಜ್ಜಂಪುರದಿಂದ ತುಮಕೂರುವರೆಗೆ gravity flow ನಲ್ಲಿ ನೀರು ಬರುವುದಕ್ಕೆ ಸಾಧ್ಯವಿರುವುದರಿಂದ ಹೆಚ್ಚು ನೀರಿನ ಅಲೋಕೇಷನ್ ಬರುತ್ತದೆ. Flow irrigation ಎಂದರೆ ಈ ಹಂತದಲ್ಲಿ ಅಂದರೆ ಒಂದು ಹಂತದಲ್ಲಿ ಇಟ್ಟಿರಬಹುದು. ಇನ್ನೊಂದು ಹಂತದಲ್ಲಿ ನಾವು ನೀರನ್ನು ಹರಿಸುವ ಮುಖೇಣ

ತರಬಹುದು ಎಂದು ಈಗಾಗಲೇ ಹೇಳಿದ್ದೇನೆ. ಅದನ್ನು ನೀವು ಮಾಡಬೇಕು. ಇನ್ನೂ ಅನೇಕ ವಿಚಾರಗಳಿದ್ದವು. ನಾನು ಎಲ್ಲವನ್ನೂ ಮಾತನಾಡುವು–ದಕ್ಕಾಗುವುದಿಲ್ಲ. ಅಧ್ಯಕ್ಷರೆ, ನಿಮಗೆ ಮೆಚ್ಚುಗೆ ಮಾಡಿಸಬೇಕೆಂಬ ಇಚ್ಚೆ ಇತ್ತು. ನಿಮ್ಮ ಜಿಲ್ಲೆಯಿಂದ ಬರುವ ನೀರು ಇಲ್ಲದಿದ್ದರೂ ಕೂಡ ನಮಗೆ ನೀರು ಬೇಕಾದಷ್ಟಿದೆ ಅದನ್ನು ಉಪಯೋಗಿಸಿಕೊಳ್ಳಿ ಎಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು : – ನಿನ್ನೆ ನೀವೆಲ್ಲ ಮಾತನಾಡಿದ್ದಕ್ಕೆ ಈಗಾಗಲೇ ಕೊಡಗಿನಲ್ಲಿ ಭಾರೀ ಮಳೆ ಬರುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : – ಹೌದೇ, ಮಡಿಕೇರಿಯಲ್ಲಿ ಮಳೆ ಬರುತ್ತಿದೆಯೇ?

ಅಧ್ಯಕ್ಷರು: ಹೌದು. ನೀವು ಪೂಜೆ ಮಾಡಿ ಇನ್ನೆಲ್ಲಿ ಮಳೆ ನಿಂತು ಹೋಗುತ್ತದೋ ಎನ್ನುವ ಭಯ.

ಶ್ರೀ ಟಿ.ಬಿ.ಜಯಚಂದ್ರ : – ನೀವು ಆ ಪೀಠದಿಂದ ಕುಳಿತು ಸತ್ಯ ಹೇಳಿದಿರಿ.

ಅಧ್ಯಕ್ಷರು : – ಅವರ ಪಾರ್ಟಿಯವರು ಇವತ್ತು ಪೂಜೆಗೆಂದು ಹೋಗಿದ್ದಾರೆ. ಅದೇ ಭಯ.

ಶ್ರೀ ಟಿ.ಬಿ.ಜಯಚಂದ್ರ: ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ (ಮಾನ್ಯ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು reply ಕೊಡಬೇಕಾಗಿದೆ. ಇನ್ನೂ Leader of Opposition ರವರು ಮಾತನಾಡಬೇಕಾಗಿದೆ. ಸದಸ್ಯರುಗಳೇ time limitation ನಿಗದಿ ಪಡಿಸಿಕೊಂಡರೆ ಒಳ್ಳೆಯದು.

ಶ್ರೀ ಕೆ.ಎಂ ಶಿವಲಿಂಗೇಗೌಡ (ಅರಸೀಕೆರೆ) : – ಮಾನ್ಯ ಅಧ್ಯಕ್ಷರೆ, ಸರ್ಕಾರ ಸರ್ಕಾರದ ವತಿಯಿಂದ ಬೇಡಿಕೆಗಳನ್ನು ಮಂಡಿಸುವುದು ಮತ್ತು ಕೆಲವು ಇಲಾಖೆಗಳ ಬಗ್ಗೆ ಸಾರ್ವಜನಿಕವಾಗಿರುವ ಅಪೇಕ್ಷೆಗಳನ್ನು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ನನ್ನ ಕ್ಷೇತ್ರದ ಹಿತದೃಷ್ಠಿಯಿಂದ ಕೆಲವು ವಿಚಾರಗಳನ್ನು ಕೆಲವು ಇಲಾಖಾ ಮಂತ್ರಿಗಳ ಹತ್ತಿರ ನನ್ನ ಬೇಡಿಕೆ ಇಡಬೇಕೆನ್ನುವ ದೃಷ್ಟಿಯಿಂದ, ನೀವು ಕೊಟ್ಟಿರುವ ಅವಕಾಶವನ್ನು ಇವತ್ತು ಉಪಯೋಗಿಸಿಕೊಂಡು ಈ ವಿಚಾರವನ್ನು ಸ್ಪಷ್ಟಪಡಿಸಬಯಸುತ್ತೇನೆ. ಈಗ ಮಾತನಾಡುವುದಕ್ಕೆ ಸಮಯ

ತೆಗೆದುಕೊಳ್ಳುವುದೇ ಒಂದು ಬೇಡಿಕೆಯಾಗಿದೆ. ಏನೂ ಮಾಡುವುದಕ್ಕಾಗುವುದಿಲ್ಲ, ಅನಿವಾರ್ಯ. ಇಂಥ ಸಂದರ್ಭದಲ್ಲಿ ಇದಕ್ಕೆ ಹೋರಾಟ ನಡೆಯಬೇಕಾಗಿದೆ. ಪ್ರಜಾತಂತ್ರ ವ್ಯವಸ್ಥೆ ಈ ರೀತಿ ಇದೆ. ಇದಕ್ಕೆ ಕಾರಣರು ಯಾರು ಎನ್ನುವುದನ್ನು ಹುಡುಕುತ್ತಾ ಹೋದರೆ ತಪ್ಪಾಗುವುದಿಲ್ಲ ಎಂದು ಹೇಳುತ್ತೇನೆ. ಪ್ರಥಮವಾಗಿ ಹಿಂದೆ ಮುಖ್ಯಮಂತ್ರಿಯಾಗಿದ್ದ ಸದಾನಂದಗೌಡರು ಒಂದು ಲಕ್ಷದ 2 ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕವಾದ ಬಜೆಟ್ ಅನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟು ಹೋದರು. ಅದನ್ನು ಕೊಟ್ಟ ಸಂದರ್ಭದಲ್ಲಿ ಅನೇಕ ಆಶಾಗೋಪುರ ಇರುವ ಬಜೆಟ್ ಕೊಟ್ಟಿದ್ದರು. ಆದರೆ, ಇವತ್ತು ಇಲಾಖಾವಾರು ಚರ್ಚೆ ಮಾಡುವ ಸಂಧರ್ಭದಲ್ಲಿ ಯವ್ಯಾವ ಇಲಾಖೆಗಳಲ್ಲಿ ಯಾವ ಪ್ರಮಾಣದಲ್ಲಿ ಹಣದ ಹಂಚಿಕೆಯಾಗಿದೆ? ಹಂಚಿಕೆಯಾಗಿರುವ ಇಲಾಖೆಯಲ್ಲಿ ಯಾವ ರೀತಿ ಯೋಜನೆಗಳನ್ನು ರೂಪಿಸಿದ್ದಾರೆ? ಆ ಯೋಜನೆಗಳಿಂದ ಸಾರ್ವಜನಿಕ ಹಿತದೃಷ್ಟಿಯಿಂದ, ತಮ್ಮ ತಮ್ಮ ಇಲಾಖೆಗಳಿಗೆ ತಮ್ಮ ತಮ್ಮ ಕ್ಷೇತ್ರಗಳಿಗೆ ಏನೇನು ಕೆಲಸಕಾರ್ಯಗಳಾಗಿವೆ ಎನ್ನುವುದನ್ನು ಅವಲೋಕನ ಮಾಡಲಿಕ್ಕೆ ಇಲ್ಲಿ performance Budget ಇನ್ನೂ ಬಂದಿಲ್ಲ. ಹೋಗಲಿ, ಹಿಂದಿನ ವರ್ಷದ ಆಡಳಿತಾತ್ಮಕವಾಗಿರುವ ಮತ್ತು ಕೊಟ್ಟಿರುವ ವರದಿಯನ್ನಾಧರಿಸಿ ನೀವು ಕಳೆದ ಸಾರಿ ಎಷ್ಟು ಕೊಟ್ಟಿದ್ದೀರಿ? ಮುಂದಿನ ಸಾರಿ ನೀವು ಏನು ಮಾಡುತ್ತೀರಿ? ಕಳೆದ ಸಾರಿ ನೀವು ತೆಗೆದುಕೊಂಡ ಕೆಲವು ಯೋಜನೆಗಳಲ್ಲಿ ಇಂತಿಷ್ಟು ಲೋಪದೋಷಗಳಿವೆ, ಈ ಪ್ರಮಾಣದಲ್ಲಿ ನೀವು ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಕೆಲವಷ್ಟು ಯೋಜನೆಗಳಲ್ಲಿ ಇಂಥಿಂಥ ಲೋಪದೋಷಗಳಿವೆ, ಅದನ್ನು ನೀವು ತಿದ್ದಿಕೊಳ್ಳಿ ಎಂದು ಸರ್ಕಾರಕ್ಕೆ, ಇಲಾಖೆಗಳಿಗೆ ಹೇಳಬೇಕಾದ ಸಂದರ್ಭದಲ್ಲೂ ಕೂಡ ಆ ವರದಿಗಳು ಸಹ ತಲುಪಬೇಕಾದರೆ ಬಹಳ ತಡವಾಗಿದೆ. ನಾವು ಲೇಖಾನುದಾನಕ್ಕೆ ಅನುಮೋದನೆ ಕೊಡುತ್ತೇವೆ, ಅಧರೆ, ಪೂರ್ಣ ಪ್ರಮಾಣದ ಬಜೆಟ್‌ಗೆ ಅನುಮತಿ ಕೊಟ್ಟಿರುವುದಿಲ್ಲ. ಲೇಕಾನುದಾನಕ್ಕೆ ಅನುಮೋದನೆ ಕೊಟ್ಟಮೇಲೆ 2011–12 ರಲ್ಲಿ ಯಾವ ಪ್ರಮಾಣದಲ್ಲಿ ಸರ್ಕಾರದಿಂದ ಹಣವನ್ನು ನಿಮಗೆ ಒದಗಿಸಲಾಯಿತು. ಇಲಾಖಾವಾರು ನೀವು ಮಾಡಿದ ಯೋಜನೆಗಳ ಪರಿಪೂರ್ಣ ವರದಿಯನ್ನು ಸದಸ್ಯರಿಗೆ, ಸದನಕ್ಕೆ ಕೊಡುವ ಪರಿಪಾಠ ಇದೆ. ಆದರೆ, ಅದು ಕೈ ತಪ್ಪಿದೆ. ಅದನ್ನು ಕೊಟ್ಟಿದ್ದೀರಿ, ಅದು ನಿನ್ನೆ ರಾತ್ರಿ ನನ್ನ ಕೈ

ಸೇರಿದೆ. 7,8,10 ವರದಿಗಳು ಮಾತ್ರ ಬಂದಿವೆ. ನಾವು ಅವೆಲ್ಲವನ್ನೂ ಬೆಳಿಗ್ಗೆವರೆಗೆ ಕುಳಿತುಕೊಂಡು ಓದುವುದಕ್ಕೆ ಆಗುವುದಿಲ್ಲ. ಯಾವುದೋ ಒಂದು ಇಲಾಖೆ ಬಗ್ಗೆ ಓದಬಹುದು. 15 ದಿವಸಗಳು ಅಂದರೆ ಬೇಡಿಕೆಗಳ ಮೇಲೆ ಚರ್ಚಿಸಲು ಸದನವನ್ನು ಕರೆಯಲು ಏನು ಪ್ರಾರಂಭಿಸುತ್ತೀರಿ, notification ಆದ ತಕ್ಷಣ ನಮಗೆ performance budget ಕೊಟ್ಟರೆ ಎಲ್ಲ ರೀತಿಯ ಮಾಹಿತಿಗಳನ್ನು ಕೊಟ್ಟರೆ ಪ್ರತಿಯೊಂದು ಅಂಕಿ ಅಂಶಗಳನ್ನು ಹಿಡಿದು ಯಾವ ರೀತಿ ನೀವು ನಡೆದುಕೊಂಡಿದ್ದೀರಿ, ಏನು ಖರ್ಚು ಮಾಡಿದ್ದೀರಿ, ಎಷ್ಟು ಹಣ ಖರ್ಚು ಮಾಡುವುದಕ್ಕಾಗಲಿಲ್ಲ? ಕಾರಣವೇನು? ಏತಕ್ಕೋಸ್ಕರ ಖರ್ಚು ಮಾಡಲಿಲ್ಲ? ಎಂದು ಸರ್ಕಾರದ ಮುಖಕ್ಕೆ ತಿವಿದು ಹೇಳಲಿಕ್ಕೆ ಆಗದ ಪರಿಸ್ಥಿತಿಗೆ ತಲುಪಿದ್ದೇವೆ. ಈಗ ಅನಿವಾರ್ಯವಾಗಿ ಕೆಲವೊಂದು ಸಲಹೆ ಸೂಚನೆಗಳನ್ನು ಈ ಸಂದರ್ಭದಲ್ಲಿ ಇಲಾಖಾವಾರು ಕೊಡಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಸರ್ಕಾರದವರು ಹೊಸ ಸಂಪ್ರದಾಯ ಹುಟ್ಟು ಹಾಕಿದ್ದಾರೆ. ಕೃಷಿ ಬಜೆಟ್ ಮಂಡಿಸುತ್ತೇವೆ, ಕೃಷಿಗಾಗಿ ಪ್ರತ್ಯೇಕವಾಗಿ ರೈತರ ಹೆಸರಿನಲ್ಲಿ ನಾವು ಬಹಳ ಪ್ರಮಾಣದ ಕೆಲಸಗಳನ್ನು ಮಾಡಬೇಕು. ರೈತರಿಗೆ ಅನುಕೂಲವಾಗುವ ಕೆಲವೊಂದು ವಿಚಾರಗಳನ್ನು ಈ ದೇಶದಲ್ಲಿ ಮೊದಲನೆ ಬಾರಿಗೆ ಜಾರಿಗೆ ತರಬೇಕೆನ್ನುವ ಭಾವನೆಯನ್ನು ವ್ಯಕ್ತಪಡಿಸಿ ಕೃಷಿ ಬಜೆಟ್ ಜಾರಿಗೆ ತಂದರು. ಆ ಕೃಷಿ ಬಜೆಟ್ ಮಂಡಿಸುವ ಕಾಲದಲ್ಲಿ ಯಾವ ಆಶಾಭಾವನೆ ಇಟ್ಟುಕೊಂಡು ಮಂಡಿಸಿದ್ದೀರೋ ಕೆಲವೊಂದು ವಿಚಾರಗಳು ಅದರಲ್ಲಿ ಮಂಡನೆಯಾಯಿತು. ಆ ವಿಚಾರಗಳನ್ನು ಜಾರಿಗೆ ತರುವುದರಲ್ಲಿ ಸಂಪೂರ್ಣವಾಗಿ ವಿಫಲರಾದರು. ಕೃಷಿ ಮಂತ್ರಿಗಳು ಇಲ್ಲಿ ಇಲ್ಲ. ಇದ್ದಿದ್ದರೆ ನಾನು ಹೇಳುತ್ತಿದ್ದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. Subsidy ವಿಚಾರದಲ್ಲಿ ಅನೇಕ ಬಾರಿ ಪ್ರಶ್ನೆಗಳ ಮೂಲಕ ಪ್ರಶ್ನೆ ಮಾಡಿದ್ದೇವೆ. ಹಿಂದೆ ಬಂಡೆಪ್ಪ ಖಾಶೆಂಪೂರ್‌ರವರು ಕೃಷಿ ಮಂತ್ರಿಯಾಗಿದ್ದಾಗ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಸಮ್ಮಿಶ್ರ ಸರ್ಕಾರದಲ್ಲಿ ರೈತರ ಬಿತ್ತನೆ ಬೀಜಕ್ಕೆ, ಕೃಷಿ ಪರಿಕರಗಳಿಗೆ 75% subsidy ಯನ್ನು ಕೊಟ್ಟಿರುವ ನಿದರ್ಶನ ನೋಡಿದ್ದೇವೆ. ಆದರೆ, ಈ ಸರ್ಕಾರ ಬಂದ ಮೇಲೆ ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಿದ ಮೇಲೆ 50% subsidy ಯನ್ನು ನಾವು ಬಿತ್ತನೆ ಬೀಜದಿಂದ ಹಿಡಿದು ಎಲ್ಲಾ ಪರಿಕರಗಳಿಗೆ ಕೊಡುತ್ತೇವೆಂದು ಹೇಳುವಂಥ ರೀತಿಯಲ್ಲಿ technical point ನಲ್ಲಿ ಸರ್ಕಾರ

ರೈತರಿಗೆ ಏನು ಮೋಸ ಮಾಡುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನು ನೀವು ಏನೆಂದಾದರೂ ತಿಳಿದುಕೊಳ್ಳಿ. 50% subsidy ಕೊಡುತ್ತೇವೆಂದು ಹೇಳುತ್ತಾರೆ. 50% subsidy ಇದ್ದರೆ ಬಿತ್ತನೆ ಬೀಜಕ್ಕಾಗಿ tender ಕರೆಯುತ್ತಾರೆ. Tender system ಇದೆ. ಆ ಕಂಪನಿಯವರ ಹತ್ತಿರ ಹೋಗಿ ಕೇಳಿದರೆ ರೈತರಿಗೆ ಕೊಡುವುದಕ್ಕೆ 500 ಕೆ.ಜಿ. ಬಿತ್ತನೆ ಬೀಜದಷ್ಟು ಸಹ ಇರುವುದಿಲ್ಲ. ಅಂಥ ಒಂದು ಕಂಪನಿಯಿಂದ ಕಡಿಮೆ ಪ್ರಮಾಣದ rate ಅನ್ನು ಅವನ ಹತ್ತಿರ ಹಾಕಿಸುತ್ತಾರೆ. L1 rate ಗೆ ಒಂದು ಕೆ.ಜಿ. ಬಿತ್ತನೆ ಬೀಜಕ್ಕೆ ಉದಾಹರಣೆ ಸೂರ್ಯಕಾಂತಿ ಎಂದು ಭಾವಿಸಿಕೊಳ್ಳಿ, 150 ರೂಪಾಯಿ, 160 ರೂಪಾಯಿ ದರವನ್ನು ಹಾಕುತ್ತಾರೆ. 160 ರೂಪಾಯಿ ದರ ಹಾಕಿದಾಗ ಅವನಿಗೆ 50% subsidy ಎಂದರೆ 80 ರೂಪಾಯಿ ಸಿಗುತ್ತದೆ. ಆದರೆ, ಇವತ್ತು ಗಂಗಾ ಕಾವೇರಿ, ಸೂರ್ಯಕಾಂತಿ ಬೀಜ ಚಾಲ್ತಿಯಲ್ಲಿವೆ. ನಾನು ಸೂರ್ಯಕಾಂತಿ ಬೀಜದ ಒಂದು ಉದಾಹರಣೆ ಕೊಡುತ್ತೇನೆ. ಸೂರ್ಯಕಾಂತಿ ಬೀಜಕ್ಕೆ ಮಾರ್ಕೆಟ್‌ನಲ್ಲಿ ಕೆ.ಜಿ.ಒಂದಕ್ಕೆ 500 ರೂಪಾಯಿ ಇದೆ. ಅದು ಸರ್ಕಾರವೇ ನಿಗದಿಪಡಿಸಿರುವ ದರ. ಆಗ ಅವನಿಗೆ ಸಿಗುವುದು L1 ದರದ subsidy 80 ರೂಪಾಯಿ ಮಾತ್ರ. ಅವನು 420 ರೂಪಾಯಿಗಳನ್ನು ಕಂಪನಿಗೆ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ಅಂದರೆ, ಆಗ ಎಷ್ಟು percent suibsidy ಕೊಟ್ಟ ಹಾಗೆ ಆಗುತ್ತದೆ? ಸರ್ಕಾರ ನಿಜವಾಗಿಯೂ 50% subsidy ಅನ್ನು ಕೊಡುತ್ತಿದೆಯೇ? ಅದನ್ನು ಅರ್ಥ ಮಾಡಿಕೊಳ್ಳಬೇಕು. ಕೃಷಿ ಸಚಿವರಿಗೆ ಹೇಳಿದರೆ ನಗುತ್ತಾರೆ. L1 rate ಗೆ subsidy ಕೊಟ್ಟಿದ್ದೇವೆಂದು ಹೇಳುತ್ತಾರೆ. ಹಾಗೆಂದು ಸರ್ಕಾರ ಘೋಷಣೆ ಮಾಡಿ. ಆ ಬಿತ್ತನೆ ಬೀಜದ ಕಂಪನಿಯಿಂದ 160 ರೂಪಾಯಿಗಳಿಗೆ ಕರ್ನಾಟಕ ರಾಜ್ಯದ ಎಲ್ಲಾ ರೈತರಿಗೂ ಬೀಜ supply ಮಾಡಿಸಿ. 500 ರೂಪಾಯಿ ದರ ತೆಗೆದುಕೊಳ್ಳುತ್ತೀರಿ. ಇವತ್ತು ಗಂಗಾ ಕಾವೇರಿ ಬಿತ್ತನೆ ಬೀಜ 500 ರೂಪಾಯಿಗೆ ಸಿಗುತ್ತಿದೆ. ಯಾವುದು ಮೇಜರ್ ಆಗಿ ಸಿಗುತ್ತಿದೆ ಆ ಬೀಜಕ್ಕೆ 160 ರೂಪಾಯಿ ರೇಟ್ ಹಾಕುವುದಿಲ್ಲ. ಕಿತ್ತು ಹೋಗಿರುವ ಒಂದು ಕಂಪನಿ, ವರದಾ ಎನ್ನುವ ಬೆಳಗಾಂ ಕಂಪನಿ ಇದೆ. ಅವನಿಗೆ ಫೋನ್ ಮಾಡಿ ಕೇಳಿದರೆ ಅವನ ಹತ್ತಿರ 500 packet ಇದೆ ಎಂದು ಹೇಳುತ್ತಾನೆ. 500 packet ಇರುವ ಕಂಪನಿಗೆ force ಮಾಡಿ L1 rate ನಲ್ಲಿ 160 ರೂಪಾಯಿ ಹಾಕಿ, ಇಲ್ಲಿ ರೈತ ಅದನ್ನು 500 ರೂಪಾಯಿ ಕೊಟ್ಟು ಕೊಂಡಾಗ

ಅವನಿಗೆ ಸರ್ಕಾರ ಯಾವ ರೀತಿಯಾಗಿ 50% subsidy ಅನ್ನು ಕೊಟ್ಟ ಹಾಗೆ ಆಗುತ್ತದೆ? ನೀವು ಇದನ್ನು ಪೂರ್ಣ ಪ್ರಮಾಣದಲ್ಲಿ ತಿಳಿದುಕೊಳ್ಳಬೇಕು. ಅದು ಬಿಟ್ಟು ಕೃಷಿ ಬಜೆಟ್ ಮಂಡಿಸುವುದಲ್ಲ. ರೈತರಿಗೆ 20% ಮಾತ್ರ subsidy ಕೊಡುತ್ತಿದ್ದೀರಿ. ಅದು ಯಾವುದೇ ಪರಿಕರ ಇರಲಿ. ಮಾನ್ಯ ಯಡಿಯೂರಪ್ಪನವರ ಕನಸಾದ ಭೂಚೇತನ ಯೋಜನೆಯಲ್ಲಿ ಯಾವ ರೈತ ಇದ್ದಾನೆ, ಆ ರೈತನಿಗೆ, ರೈತನ ಜಮೀನಿನ ಉಳುಮೆಗೆ ಬೇಕಾದ ಪರಿಕರಗಳನ್ನು 50% subsidy ಯಲ್ಲಿ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದರು. ಒಂದು sprinkler set ಇವತ್ತು ಎಷ್ಟು ಬೆಲೆಗೆ ಸಿಗುತ್ತದೆ ಎಂಬುದು ಎಲ್ಲಾ ಶಾಸಕರಿಗೂ ಗೊತ್ತು. ಆದರೆ, ಮಾತನಾಡುವುದಕ್ಕೆ ಆಗುತ್ತಿಲ್ಲ. ಇದರ ಬೆಲೆಯನ್ನು AC roomನಲ್ಲಿ ಕುಳಿತು 19 ಸಾವಿರ ರೂಪಾಯಿಗಳೆಂದು ನಿರ್ಧರಿಸುತ್ತಾರೆ. ಆದರೆ, ಯಾವ ಕಂಪನಿ ಇದೆ ಅದೇ ಕಂಪನಿಯ ಮಾಲೀಕರನ್ನು ಕೇಳಿದರೆ ಅದನ್ನು ಅಲ್ಲಿಯೇ 14 ಸಾವಿರ ರೂಪಾಯಿಗಳಿಗೆ ಕೊಡುತ್ತೇನೆ, 12 ಸಾವಿರ ರೂಪಾಯಿಗಳಿಗೆ ಕೊಡುತ್ತೇನೆಂದು ಹೇಳುತ್ತಾರೆ. ಇಷ್ಟು ಹಣ ಏಕೆ ವ್ಯತ್ಯಾಸವಿದೆ? cultivatorಗೆ 31 ಸಾವಿರ ರೂಪಾಯಿಗಳ ಬೆಲೆ ಇದೆ ಎಂದು ಹೇಳುತ್ತಾರೆ. ಆದರೆ, ಮಾರ್ಕೆಟ್‌ನಲ್ಲಿ ಅದೇ ಕೆ.ಜಿ. ತೂಕದ ಅದೇ cultivator ಅನ್ನು 20 ಸಾವಿರ ರೂಪಾಯಿಗಳಿಗೆ ಕಡಿಮೆ ಮಾಡಿ ಕೊಡುತ್ತೇವೆಂದು ಹೇಳುತ್ತಾರೆ. ಹಾಗಾದರೆ, ರೈತರಿಗೆ ಹೇಗೆ subsidy ಸಿಗುತ್ತದೆ? ಅವರಿಗೆ 4000 ರೂಪಾಯಿಗಳನ್ನು subsidy ಸಿಗುತ್ತದೆ. 50% subsidy ಎಂದರೆ 30 ಸಾವಿರ ರೂಪಾಯಿ ವಸ್ತುವಿಗೆ 4 ಸಾವಿರ ರೂಪಾಯಿ ಮಾತ್ರ subsidy ಸಿಗುತ್ತದೆ. 15 ಸಾವಿರ ರೂಪಾಯಿ ಸಿಗಬೇಕಾದ subsidy ಯಲ್ಲಿ ಕೇವಲ 4 ಸಾವಿರ ರೂಪಾಯಿ ಸಿಗುತ್ತದೆ. ಹಾಗಾದರೆ ಉಳಿದ 11000 ರೂಪಾಯಿ ಎಲ್ಲಿ ಹೋಯಿತು? ಇದರ ಹೊಡೆತ ಬೀಳುವುದು ರೈತರಿಗೆ ಅಲ್ಲವೇ? ಪ್ರತ್ಯೇಕವಾದ ಕೃಷಿ ಬಜೆಟ್, ಪ್ರತ್ಯೇಕವಾಗಿ ರೈತರಿಗೆ ಭೂಚೇತನ ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಸನ್ಮಾನ್ಯ ಕೃಷಿ ಸಚಿವರು, ಇಲ್ಲಿ ಏನು ಮೋಸ ನಡೆಯುತ್ತಿದೆ, ರೈತರಿಗೆ ಏನು ಅನ್ಯಾಯವಾಗುತ್ತಿದೆ, ಪರಿಕರಗಳನ್ನು ಕೊಳ್ಳುವ ವಿಚಾರದಲ್ಲಿ ಏನಾಗುತ್ತಿದೆ? ಕೆಲವು ಕಂಪನಿಗಳು ಏನು ಮೋಸ ಮಾಡುತ್ತಿವೆ, ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಆದರೆ, ಅವರು ಆ ಕೆಲಸ ಮಾಡುತ್ತಿಲ್ಲ. ಅವರು ಯಾವಾಗ ಬಂದರೂ ನಗಾಡಿಕೊಂಡು jokes ಮಾಡಿಕೊಂಡು

ಹೋಗುತ್ತಾರೆ. ಆಮೇಲೆ ನೀವು tractor ಗೆ subsidy ಕೊಡುತ್ತೇವೆಂದು ಹೇಳಿದ್ದಿರಿ. ಸುಮಾರು ಜನ ರೈತರು tractor ಕೊಂಡು ಊರು ಮುಂದೆ ನಿಲ್ಲಿಸಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರುವುದಿಲ್ಲವೆಂದು ಹೇಳುತ್ತೀರಿ. ಸನ್ಮಾನ್ಯ ಯಡಿಯೂರಪ್ಪನವರು ಎಷ್ಟು ಇಟ್ಟರು ಎಂಬುದು ದಾಖಲಾತಿಯಲ್ಲಿದೆ. ತೆಗೆದು ನೋಡಿ. 50 ಸಾವಿರ ರೂಪಾಯಿಗಳ subsidy ಅನ್ನು ಯಾವ ಕೇಂದ್ರ ಸರ್ಕಾರವೂ ಕೊಡಬೇಕಾಗಿಲ್ಲ. ನನ್ನ ರಾಜ್ಯ ಸರ್ಕಾರದಿಂದ ಭರಿಸುತ್ತೇನೆಂದು ಯಡಿಯೂರಪ್ಪನವರು ಘೋಷಣೆ ಮಾಡಿದ್ದರು. ಎಲ್ಲರಿಗೂ ಸೇರಿ 50 ಸಾವಿರ ರೂಪಾಯಿಯಂತೆ ಕೊಡುತ್ತೇವೆಂದು ಹೇಳಿದರು. ಆದರೆ, ಇವತ್ತಿನವರೆಗೂ ಯಾರಿಗಾದರೂ ಒಂದು ರೂಪಾಯಿಯಾದರೂ ಕೊಟ್ಟಿದ್ದಾರೆಯೇ? ಇವತ್ತು ಆ ಯೋಜನೆ ಏನಾಯಿತು? ಯಡಿಯೂರಪ್ಪನವರು ರೈತರ ಪರವಾದ ಯೋಜನೆ ಎಂದು ಹೇಳಿದರು. ಆದರೆ, ಅದು ಕಾರ್ಯಗತವಾಗಿದೆಯೇ? 50 ಸಾವಿರ ರೂಪಾಯಿಗಳ tractor subsidy ಕೊಡುತ್ತಿದ್ದೀರಾ? ಆ 50 ಸಾವಿರ ರೂಪಾಯಿ subsidy ಬರುತ್ತದೆಂದು ಆ ಕಂಪನಿ ಜೊತೆ ಸಾಲ ಮಾಡಿ tractor ತಂದು ಮನೆ ಮುಂದೆ ನಿಲ್ಲಿಸಿದ್ದಾನೆ. ಈಗ ಆ ಕಂಪನಿಯವರು ಅವೆಲ್ಲವನ್ನು ತೆಗೆದುಕೊಂಡು ಹೋಗಿ godown ಗೆ ಹಾಕಿದ್ದಾರೆ. ಏನು ಮಾಡಬೇಕು? ರೈತರಿಗೆ ಈ ಪರಿಸ್ಥಿತಿ ಬಂದಿದೆ? ಈ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳಲ್ಲಿ ರೈತರಿಗಾಗುತ್ತಿರುವ ಕೆಲವು ತೊಂದರೆಗಳ ವಿಚಾರಗಳಲ್ಲಿ ಸರ್ಕಾರ ತೀವ್ರ ಗಮನ ಹರಿಸಬೇಕು. ಇನ್ನು, ವಿಮಾ ಯೋಜನೆ ಬಗ್ಗೆ ಹೇಳುತ್ತೇನೆ. ಈ ಯೋಜನೆ ನಿಜವಾಗಿಯೂ ರೈತರಿಗೆ ವರದಾನವಾಗಿದೆ. ಸರ್ಕಾರ ಆ ಕೆಲಸವನ್ನು ಸರಿಯಾದ ರೀತಿಯಲ್ಲಿ ಸರಿಯಾದ ಸಮಯಕ್ಕೆ ಮಾಡಿಸುತ್ತಿಲ್ಲ. ಬೆಳೆ ಬಿತ್ತಿದ ಸಂದರ್ಭದಲ್ಲಿ ರೈತ ಬ್ಯಾಂಕಿಗೆ ಹೋಗುತ್ತಾನೆ. ಆ ಬ್ಯಾಂಕ್‌ನವರರು ಸರಿಯಾದ ರೀತಿಯ ವಿಮೆ ಕಟ್ಟಿಸಿಕೊಳ್ಳುವುದಿಲ್ಲ. ಸರಿಯಾದ ಸಮಯಕ್ಕೆ ಕಟ್ಟಿಸಿಕೊಳ್ಳದಿರುವುದರಿಂದ ವಿಮೆ ಹಣ ಬರುವುದಿಲ್ಲ. ಅದರಿಂದ ರೈತ ಸಂಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾನೆ. ಅದಕ್ಕೆ ಸರ್ಕಾರ ನಿಗಾವಹಿಸಿ ಪ್ರತಿ ವರ್ಷ ಬೆಳೆ ಬರಲಿ, ಬರದಿರಲಿ, ತಾವು ಸರ್ಕಾರದಲ್ಲಿ ಆವರ್ತನಿಧಿ ಇಟ್ಟಿದ್ದೀರಿ, ರೈತರ ಹಿತಕ್ಕೋಸ್ಕರ ಭವಿಷ್ಯಕ್ಕೋಸ್ಕರ ಇರುವ ಆ ನಿಧಿಯಿಂದ insurance ಹಣ ಕಟ್ಟಿ ಆ ಪರಿಪಾಠವನ್ನು ಬೆಳೆಸಿಕೊಳ್ಳಿ. ಆ ಹಣವನ್ನು ಕಟ್ಟಿದರೆ ರೈತರಿಗೆ

ಒಳ್ಳೆಯದಾಗುತ್ತದೆ. ಬೆಳೆ ಬಂದರೆ ಹಣ ಕೊಡಬೇಡಿ, ಸರ್ಕಾರದವರೇ ತೆಗೆದುಕೊಳ್ಳಿ. ಬೆಳೆ ಬಾರದೇ ಹೋದರೆ ಆ ಹಣವನ್ನು ರೈತನಿಗೆ ಕೊಡುವ ಪರಿಪಾಠ ಮಾಡುವುದು ಒಳ್ಳೆಯದೆಂಬುದು ನನ್ನ ಸಲಹೆ. ಇದನ್ನು ಬಜೆಟ್‌ನಲ್ಲಿ, ಇಲಾಖಾ ಬೇಡಿಕೆಗಳಲ್ಲಿ ಅಳವಡಿಸಿಕೊಳ್ಳಬೇಕು. ಇನ್ನು Appendix-E ಬಗ್ಗೆ ಹೇಳುತ್ತೇನೆ. PAC ಯಲ್ಲಿ ಈ ಬಗ್ಗೆ ನಾಲ್ಕಾರು ಸಲ ಚರ್ಚೆಯಾಗಿ Appendix-E ಗೆ ನಾವೆಲ್ಲ ಕಾರಣರಾಗಿದ್ದೇವೆ. ಸರ್ಕಾರ ಮತ್ತು ಮಂತ್ರಿಗಳೊಬ್ಬರನ್ನೇ ನಿಷ್ಠುರ ಮಾಡಲಿಕ್ಕೆ ಬಯಸುವುದಿಲ್ಲ. ನಾವೆಲ್ಲ ಹೋಗಿ ಕೆಲಸಗಳನ್ನು ಹೇಳಿರುತ್ತೇವೆ, ಸೇರಿಸಿಕೊಂಡಿರುತ್ತೇವೆ, ಅವರು ಮಾಡಿಕೊಟ್ಟಿರುತ್ತಾರೆ. Appendix-E ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. 2400 ಕೋಟಿ ರೂಪಾಯಿಗಳಿಗೂ ಅಧಿಕಾವಾಗಿರುವ Appendix-E ಸರ್ಕಾರದ ಮುಂದಿದೆ. ಬಜೆಟ್‌ನಲ್ಲಿ 75 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಆದರೆ, ಈಗ ಪೂರಕ ಬಜೆಟ್ ನೋಡಿದರೆ ಅದರಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಆದರೆ, ಅದು ಸಾಲದು. ಇವತ್ತು ರಸ್ತೆಗಳು ಯಾವ ರೀತಿಯಾಗಿವೆ ಎನ್ನುವುದನ್ನು ನೋಡಿದಾಗ ಬಹಳ ಹಿಂದೆ ಕಾಡು ಜಲ್ಲಿಯಿಂದ ಯಾವ ರಸ್ತೆ ಮಾಡಿದ್ದಾರೆ ಅವುಗಳನ್ನು strengthen ಮಾಡಿಲ್ಲವೆನ್ನುವುದು ಗೊತ್ತಾಗುತ್ತದೆ. ಅದೆ ಮೇಲೆ ಏನೇ ಡಾಂಬರು ಹಾಕಿದರೂ ಅವುಗಳು ಕಿತ್ತುಹೋಗುವ ಸ್ಥಿತಿ ಇದೆ. ಅದರಿಂದ ಸರಿಯಾದ ರೀತಿ feed ಮಾಡಿ ಗುಣಮಟ್ಟದ ರಸ್ತೆಗಳನ್ನು ಮಾಡಬೇಕಾದರೆ ಕ್ರಾಂತಿ ರೂಪದಲ್ಲಿ ಲೋಕೋಪಯೋಗಿ ಇಲಾಖೆಗೆ ಹಣವನ್ನು ಕೊಡಬೇಕು. ಒಂದು ಸಾರಿ ಆ ರಸ್ತೆಗಳನ್ನು strengthen ಮಾಡುವ ಕೆಲಸಕ್ಕೆ ಹೆಚ್ಚಿನ ಪ್ರಮಾಣದ ಹಣ ಒದಗಿಸಿ. ಆ ಇಲಾಖೆಗೆ ಪೂರ್ಣ ಪ್ರಮಾಣದಲ್ಲಿ ಒದಗಿಸಿ. ಆ ಇಲಾಖೆ ಸಧೃಢವಾದರೆ ಎಲ್ಲ ಶಾಸಕರ ಗೌರವ ಉಳಿಯುತ್ತದೆ. ಅದಕ್ಕೋಸ್ಕರ ಆ ಕೆಲಸ ಮಾಡಬೇಕಾಗುತ್ತದೆ. 18%, 22.5% ಹಣವನ್ನು ಸಂವಿಧಾನಬದ್ಧವಾಗಿ ಕೊಡಬೇಕಾದ ಹಣ ಖರ್ಚು ಮಾಡುವ ರೀತಿಯಲ್ಲಿ ಕೆಲವು ಜಿಜ್ಞಾಸೆ ಇದೆ. ಏನೆಂದರೆ, PWD ಯಲ್ಲಿ 22.5% ಹಣವನ್ನು State Highway ಗೆ ಕೊಟ್ಟಿದ್ದಾರೆ. State highway 22.5% ಹಣವನ್ನು ಒದಗಿಸಿಕೊಟ್ಟರೆ ಆ ಹರಿಜನ ಗಿರಿಜನ ಫಲಾನುಭವಿ ಏನಿದ್ದಾರೆ, ಅವನಿಗೆ ಈ 22.5% ಹಣದ ಸೌಲಭ್ಯವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಯೋಜನಾ ಪ್ರಾಧಿಕಾರಕ್ಕೂ, ಯೋಜನೆಯ ಮುಖ್ಯಸ್ಥರಿಗೂ ತಿಳಿಸಬೇಕಾಗುತ್ತದೆ.

ಹಣಕಾಸು ಇಲಾಖೆಗೂ ತಿಳಿಸಬೇಕಾಗುತ್ತದೆ ನಮ್ಮ concept ಏನಿದೆ, ಹರಿಜನ ಗಿರಿಜನ ಕೇರಿ, ಹರಿಜನರನ್ನು ಉದ್ಧಾರ ಮಾಡಬೇಕು, ಬಹಳ ವರ್ಷಗಳಿಂದ ಹಿಂದುಳಿದ್ದಿದ್ದಾರೆನ್ನುವ ಭಾವನೆಯಿಂದ 18.5% ಹಣವನ್ನು ಆಯವ್ಯಯದಲ್ಲಿ ಏನು ಖರ್ಚು ಮಾಡಬೇಕೆನ್ನುವ ಕಾನೂನು ಇದೆ, ಆ ಕಾನೂನು ಚೌಕಟ್ಟಿನಡಿಯಲ್ಲಿ ಇಬ್ಬರೂ ಸೇರಿ ಹರಿಜನ ಗಿರಿಜನರಿಗೆ 22.5% ಹಣವನ್ನು ಖರ್ಚು ಮಾಡುವ ದಿಕ್ಕಿನಲ್ಲಿ ಯೋಚಿಸಿ, ಆ ಹಣವನ್ನು Stat Highway, National Highway, Metro ಗೆ ಖರ್ಚು ಮಾಡಿ ಎಂದರೆ ಅದು ನಿಜವಾಗಿಯೂ ಒಳ್ಳೆಯದಾಗುವುದಿಲ್ಲ. ಅದಕ್ಕೋಸ್ಕರ ಒಂದು ನಿರ್ಣಯ ಮಾಡಬೇಕು. ಹಾಗೆ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. 22.5% ಹಣ ಹಿಂದೆ ಯಾವುದೋ ರೀತಿಯಲ್ಲಿ ಖರ್ಚಾಗುತ್ತಿತ್ತು. ಆದರೆ, ಇವತ್ತು ನೀವು ಅಲ್ಲಿ concrete ರಸ್ತೆಗಳನ್ನು, ಮೂಲಭೂತ ಸೌಕರ್ಯಗಳನ್ನು ಕೊಡುವ ದೃಷ್ಟಿಯಲ್ಲಿ ಪ್ರಾಮಾಣಿಕ ಹೆಜ್ಜೆ ಇಟ್ಟಿದ್ದೀರಿ. ಅದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದಿದೆ. ಆದರೆ, ಅರ್ಧ ಜನರಿಗೆ ಕೊಟ್ಟು ನಿಲ್ಲಿಸಿದರೆ ಒಳ್ಳೆಯದಾಗುವುದಿಲ್ಲ. State Highway ಗಳಿಗೆ ಕೊಡುವ ಎಲ್ಲಾ ಹಣವನ್ನು ಪುನ: ಹರಿಜನ ಗಿರಿಜನ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡುವ ದೃಷ್ಟಿಯಿಂದ ಸರ್ಕಾರ ಪ್ರಾಮಾಣಿಕ ಕೆಲಸ ಮಾಡಬೇಕು. ಇನ್ನು, ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ನಡೆಯುತ್ತಿವೆ. ಸಮಾಜ ಕಲ್ಯಾಣ ಇಲಾಖೆ ಎಂದರೆ ಬೇಸರದ ಸಂಗತಿ ಎಂದಿತ್ತು. ಆದರೆ, ಇವತ್ತು ಹಾಗಿಲ್ಲ. ಶಾಸಕರಿಗೆ ಗೌರವ ತಂದುಕೊಡುವ ಪ್ರಾಮಾಣಿಕವಾದ ಇಲಾಖೆ ಇದೆ ಎಂದರೆ ಅದು ಸಮಾಜ ಕಲ್ಯಾಣ ಇಲಾಖೆ. ಆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರುವ ಕೆಲವು ಕಾಮಗಾರಿಗಳು ನಮ್ಮೆಲ್ಲ ಶಾಸಕರಿಗೆ ಗೌರವ ತಂದು ಕೊಟ್ಟಿದೆ. ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡು ನಿಜವಾಗಲೂ ಆ ಕೆಲಸ ಮಾಡಬೇಕೆಂದು ಹೇಳುತ್ತಾ ಈ ಬಂಜಾರ ತಾಂಡಗಳ ಬಗ್ಗೆ ಹೇಳುವುದಾದರೆ, ಬಂಜಾರ ನಿಗಮ ಸ್ಥಾಪಿಸಿದ್ದೀರಿ. ಆದರೆ, ಅದಕ್ಕೆ 20–30 ಕೋಟಿ ಕೊಡುತ್ತೇವೆಂದು ಹೇಲಿದರೆ ಎಲ್ಲಿ ಸಾಕಾಗುತ್ತದೆ? ದಯವಿಟ್ಟು ಬಂಜಾರ ನಿಗಮಕ್ಕೆ 150 ಕೋಟಿ ರೂಪಾಯಿಗಳನ್ನು ಚುನಾವಣಾ ವರ್ಷ ದಯಮಾಡಿ ಕೊಡಿ ನಿಮಗೂ ಒಳ್ಳೆಯ ಹೆಸರು ಬರುತ್ತದೆ. 150 ಕೋಟಿ ಕೊಟ್ಟು ಎಲ್ಲಾ ಬಂಜಾರ ತಾಂಡಗಳಲ್ಲಿ

ಮೂಲಭೂತ ಸೌಕರ್ಯಗಳಾಗಬೇಕು. ಭೋವಿ ಸಮಾಜದ ನಿಗಮ ಮಾಡುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಅದು ಏನಾಯಿತು ಎಂಬುದು ಗೊತ್ತಿಲ್ಲ. ಅದು ಏನಾಗಿದೆ ಯಾವ ರೀತಿ ಕಾರ್ಯಾಚರಣೆ ಆಗಿದೆ, ಮುಗಿದ ಮೇಲೆ ಮಾಡುತ್ತೀರೋ ಇಲ್ಲವೋ ನನಗೆ .ಗೊತ್ತಿಲ್ಲ. ದಯವಿಟ್ಟು ತಾವೇನು ಈಗಾಗಲೇ ಆ ಭೋವಿ ನಿಗಮ ಸ್ಥಾಪಿಸುತ್ತೇವೆಂದು ಘೋಷಣೆ ಮಾಡಿದ್ದೀರಿ, ಏತಕ್ಕಾಗಿ ಹಣ ಕೊಡುತ್ತಿಲ್ಲ? ದಯವಿಟ್ಟು ಅದನ್ನು ಕಾರ್ಯಾಚರಣೆಗೆ ತಂದು ನಿಗಮ ಸ್ಥಾಪಿಸಿ ಕೂಡಲೇ ಅದಕ್ಕೆ ಹಣ ಬಿಡುಗಡೆ ಮಾಡಿ. ಈಗಲೂ ಸಹ ಅಲ್ಲಿ ಕಲ್ಲು ಹೊಡೆದುಕೊಂಡು, ಮಣ್ಣು ಕೆತ್ತಿಕೊಂಡು ಇದ್ದಾರೆ. ಅವರೆಲ್ಲಾ ಶ್ರಮ ಜೀವಿಗಳಾಗಿದ್ದಾರೆ. ಅವರಲ್ಲೂ ನಾಗರೀಕತೆಯನ್ನು ಮೂಡಿಸಬೇಕು ಅದರ ಜೊತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆನ್ನುವ ಭಾವನೆ ಇದ್ದರೆ ಕೂಡಲೇ ಆ ಭೋವಿ ಸಮಾಜದ ನಿಗಮ ಸ್ಥಾಪಿಸುತ್ತೇವೆಂದು ಹಿಂದಿನ ಮುಖ್ಯಮಂತ್ರಿಗಳು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು. ದಯವಿಟ್ಟು ಅದನ್ನು ಕಾರ್ಯಾಚರಣೆ ಮಾಡಬೇಕು. ನಮ್ಮ ಅರವಿಂದ ಲಿಂಬಾವಳಿಯವರು ಮಿನಿಸ್ಟರ್ ಆಗಿರುವುದನ್ನು ನೋಡಿದ್ದೇನೆ. ಇನ್ನೂ ಬಹಳ ಜನ ಆಗಿದ್ದಾರೆ. ಇವರೊಂದು 4 ಜನ ಮಂತ್ರಿಗಳಿದ್ದರು, ಪಾಪ ಅವರು ಮನೆಗೆ ಹೋಗಿದ್ದಾರೆ. ಅವರೆಲ್ಲ ಹೋರಾಟ ಮಾಡುತ್ತಿದ್ದರು, ಅವರ ಕೈಯಲ್ಲಿ ಆಗಲಿಲ್ಲ. ಸದಾನಂದಗೌಡರವರನ್ನು ಹಿಡಿದು ಏನೋ ಮಾಡಿಸಿದರು, ಆದರೆ ಅದು ಆಗಲಿಲ್ಲ. ಆದ್ದರಿಂದ ಈಗ ತಾವೇನು ಅನೌನ್ಸ್ ಮಾಡಿದಿರಿ ಅದು ಕಾರ್ಯಾಚರಣೆಗೆ ಬಂದಿಲ್ಲ, ದಯವಿಟ್ಟು ಆ ನಿಗಮ ಸ್ಥಾಪಿಸಿ ಕಾರ್ಯಾಚರಣೆಗೆ ತಂದರೆ ಎಲ್ಲಾ ದೃಷ್ಠಿಯಿಂದ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ವಿದ್ಯುತ್ ಬಗ್ಗೆ ನಮ್ಮ ನಾಯಕರಾದ ರೇವಣ್ಣನವರು ನಿನ್ನೆ ದಿವಸ ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಈ ರಾಜ್ಯದ ಹಿತದೃಷ್ಠಿಯಿಂದ ಈ ರಾಜ್ಯದ ಮುಂದಿನ ಭವಿಷ್ಯದ ಹಿತದೃಷ್ಠಿಯಿಂದ ಒಂದೇ ಒಂದು ಮಾತನ್ನು ಹೇಳುತ್ತೇನೆ. Hi tech current ಅನ್ನು ಕೊಳ್ಳತಕ್ಕಂಥದ್ದನ್ನು ನಿಲ್ಲಿಸಬೇಕಾದರೆ ಅದು high cost current ಅಲ್ಲ A class current ಅನ್ನು ಕೊಳ್ಳುವುದನ್ನು ನಿಲ್ಲಿಸಬೇಕು. ನಿಲ್ಲಿಸಬೇಕೆಂದರೆ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂಬುದು ಗೊತ್ತಿದೆ. ಆದರೆ, ನೀವು ಇದೇ ರೀತಿಯಾಗಿ

ಇದನ್ನೇ ಮುಂದುವರೆಸಿಕೊಂಡು ಹೋದರೆ ರಾಜ್ಯ ಸರ್ಕಾರ 8–10 ಸಾವಿರ ಈ ಸಾರಿ ಬಜೆಟ್‌ನಲ್ಲಿ ಕೊಟ್ಟಿದೆ. ಅದಕ್ಕೆ ಕರೆಂಟ್‌ನ್ನು ಕೊಂಡುಕೊಂಡು ಸುಮ್ಮನಾಗಿಬಿಡುವುದು. ಹಿಂದೆ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಕಂಪನಿಗಳನ್ನು ಮಾಡಿದ್ದು ಏಕೆ? ಆ ವಿದ್ಯುಚ್ಛಕ್ತಿ ಇಲಾಖೆಯನ್ನು ವಿಭಾಗಿಸಿ ವಿಕೇಂದ್ರೀಕರಣ ಮಾಡಿ, ಏನಾದರೂ ಮಾಡಿ, ಈ ರಾಜ್ಯದ ಈ ದೇಶದ ಭವಿಷ್ಯದ ದೃಷ್ಠಿಯಿಂದ ಬಹಳ ಪ್ರಾಮಾಣಿಕವಾದ ಸಂಸ್ಥೆ, ಈ ಆಧುನಿಕ ಯುಗದಲ್ಲಿ ವಿದ್ಯುತ್ತಿನ ಸಮಸ್ಯೆ ಬಗೆಹರಿಯದೇ ಹೋದರೆ ಈ ರಾಷ್ಟ್ರದ ಭವಿಷತ್ತು ಸರಿ ಹೋಗುವುದಿಲ್ಲವೆನ್ನುವ ಭಾವನೆಯಿಂದ ಆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬೇಕು ಎನ್ನುವ ದೃಷ್ಠಿಯಿಂದ ವಿಕೇಂದ್ರೀಕರಣ ಮಾಡಿ ಕಂಪನಿಗಳನ್ನು ಮಾಡಿದರು. ಅವು ಏನಾಯಿತು? ಆ ಕಂಪನಿಗಳು ವಿದ್ಯುತ್ತನ್ನು ಉತ್ಪಾದಿಸುವಲ್ಲಿ ನಾವು ಏನಾಗಿದ್ದೇವೆ? ಇದನ್ನು ಪಕ್ಷಬೇಧ ಮರೆತು ಮಾತನಾಡೋಣ. ಒಬ್ಬರ ಮೇಲೆ ಆಪಾದನೆ ಮಾಡುವುದಿಲ್ಲ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸದಿದ್ದರೆ ಈ ದೇಶವನ್ನು ಕತ್ತಲಿನಲ್ಲಿ ತೆಳ್ಳುತ್ತೇವೆ. ಈ ಭಾವನೆಯನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ದೇಶ ಕತ್ತಲಿಗೆ ಹೋಗುತ್ತದೆ, ಈ ರಾಜ್ಯ ಅಭಿವೃದ್ಧಿ ಪಥದಲ್ಲಿ ಹಿಂದಕ್ಕೆ ಹೋಗುತ್ತದೆ. ಆ ದೃಷ್ಠಿಯಿಂದ ನಾವು ಬಹಳ ಪ್ರಾಮಾಣಿಕವಾಗಿರುವ ಕೆಲಸ ಮಾಡಬೇಕಾಗಿದೆ. ಎಲ್ಲವನ್ನೂ ಮರೆತು ಯಾವುದೋ ರೂಪದಲ್ಲಿ ಹಣ ತನ್ನಿ, ನೀವು 23 ಸಾವಿರ ಕೋಟಿ ಸಾಲ ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದಿರಿ. ಇನ್ನೊಂದು 20 ಸಾವಿರ ಕೋಟಿ ಮಾಡಿ ನಾವು ಕೇಳುವುದಿಲ್ಲ. ಆದರೆ, ಯಾವುದು ಈ ದೇಶದ ಈ ರಾಜ್ಯದ ಭವಿಷತ್ತಿಗಾಗಿ ಬಹಳ ಪ್ರಮುಖವಾಗಿ ವಿದ್ಯಚ್ಛಕ್ತಿಯನ್ನು ನೀವು ತಯಾರು ಮಾಡುವುದರಲ್ಲಿ ಹಿಂದೆ ಹೋಗಬೇಡಿ ಮುಂದೆ ಬನ್ನಿ. ವಿದ್ಯುಚ್ಛಕ್ತಿ ಉತ್ಪಾದಿಸಿ. ಇದರಿಂದ ಮಾತ್ರ ಈ ರಾಜ್ಯದ ಭವಿಷ್ಯ ಅಡಗಿದೆ. ಅದಕ್ಕಾಗಿ ನೀವು ಹಿಂದೆ ಹೋಗಬೇಡಿ ಎನ್ನುವ ಒಂದು ಸೂಕ್ಷ್ಮ ವಿಚಾರ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇನ್ನು ವಸತಿ ಇಲಾಖೆಯಲ್ಲಿ ನಮ್ಮ ಸೋಮಣ್ಣನವರು ಬಹಳ ಒಳ್ಳೆಯ ಗಿಲೀಟು ಮಾಡಿದ್ದಾರೆ. ಪ್ರತಿಯೊಬ್ಬ ಎಂಎಲ್‌ಎ ಗಳನ್ನು ಒಪ್ಪಿಸಿದ್ದಾರೆ. ಆದರೆ, ಅದರಲ್ಲಿ ಏನು ಅಡಗಿದೆ ಎಂದು ನನಗೆ ಗೊತ್ತಿದೆ. ಇಲ್ಲಿ ಅವರು ಒನ್‌ಥರ್ಡ್ ಅಮೌಂಟ್ ಇಟ್ಟುಕೊಂಡುಬಿಟ್ಟು ಎಲ್ಲರಿಗೂ ಮನೆ ಕೊಟ್ಟಿದ್ದಾರೆ. ನಾವು ಎಲ್ಲಾ ಮನೆ ಕಟ್ಟಿಸುತ್ತಿದ್ದೇವೆ. ಇಲ್ಲಾ ಎಂದು ಹೇಳಬಾರದು. ಈ ಕಟ್ಟಿಸುವ ಸಂದರ್ಭದಲ್ಲಿ ಆನ್‌ಲೈನ್‌ನಲ್ಲಿ ಹಣ ಕೊಡಬೇಕು ಎನ್ನುವ

ಸಮಸ್ಯೆ ಬಂದಾಗ, ಇಲ್ಲಿ ಬಜೆಟ್‌ನಲ್ಲಿ ಹಣ ಇಲ್ಲವೆಂಬುದು ನನಗೆ ಆ ಕಥೆ ಗೊತ್ತಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಾನು ಇಲ್ಲ ಅಂಕಿಸಂಖ್ಯೆ ಹೇಳುವುದಕ್ಕೆ ಹೋಗುವುದಿಲ್ಲ, ದಯವಿಟ್ಟು ವಸತಿ ಇಲಾಖೆಗೆ ಉತ್ತಮವಾದ ಹಣವನ್ನು ಈ ಪೂರಕ ಬಜೆಟ್‌ನಲ್ಲಿ ಒದಗಿಸಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲಾ ಇಲಾಖೆಗಳನ್ನು ಕವರ್ ಮಾಡಬೇಕಾಗಿರುವುದರಿಂದ ನಾನು ಒಂದೊಂದೇ ವಿಚಾರ ಕವರ್ ಮಾಡಿಕೊಂಡು ಹೋಗುತ್ತೇನೆ. ಇಲ್ಲಾಂದ್ರೆ ಎಲ್ಲಾ ಅಂಕಿ–ಸಂಖ್ಯೆ ಹೇಳಿಕೊಂಡು ಹೋದರೆ ಸಮಯವಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: ಈಗ ಇವರು ಅಂಕಿ–ಸಂಖ್ಯೆ ಇಲ್ಲವೆಂದು ಹೇಳಿದರು. ಇಲ್ಲಿ ಏನಾಗಿದೆ ಎಂದರೆ, ನೀವು ಕೃಷಿ ಮತ್ತು ಸಾಮಾನ್ಯ ಬಜೆಟ್‌ಗಳೆಂದು ಎರಡು ಬಜೆಟ್ ಮಾಡಿದಿರಿ. ಕೃಷಿ ಬಜೆಟ್‌ನಲ್ಲಿ ಒಟ್ಟಾರೆಯಾಗಿ ಘೋಷಣೆ ಮಾಡಿದ್ದು 64, GO Issue ಆಗಿದ್ದು, 43. Action ತೆಗೆದುಕೊಂಡಿರುವುದು 17. on going 4. General budjet ನಲ್ಲಿ ನೀವು ಅನೌನ್ಸ್ ಮಾಡಿದ್ದು 176. ಇಷ್ಟು ಸ್ಕೀಂಗಳಲ್ಲಿ GO Issue ಆಗಿದ್ದು 102. Action ತೆಗೆದುಕೊಂಡಿರುವುದು, Under process ಇರುವುದು 28. ನೀವು ಬಜೆಟ್‌ನಲ್ಲಿ ಬರೀ ಅನೌನ್ಸ್ ಮಾಡುತ್ತೀರಿ. ಆದರೆ ಇನ್ನೂ GO Issue ಆಗಿಲ್ಲ. ಇನ್ನು ಮುಗಿದು ಹೋಯಿತು. ಇನ್ನು ಯಾವಾಗ GO Issue ಆಗುವುದು? ಅದು ಯಾವಾಗ ಕಾರ್ಯರೂಪಕ್ಕೆ ಬರುವುದು? ಯಾವಾಗ ಕೆಲಸ ಆಗಬೇಕು? ಜುಲೈ ಮುಗಿದು ಹೋಯಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನಾಡಗೌಡರವರು ಹೇಳುವ ಅಂಕಿಸಂಖ್ಯೆಗಳು ನಮ್ಮ ಹತ್ತಿರ ಇವೆ. ಅವುಗಳನ್ನು ಹೇಳಿಕೊಂಡು ಹೋದರೆ ಅಲ್ಲಿ ಕುಳಿತುಕೊಳ್ಳಿ ಎಂದು ಬೆಲ್ ಹೊಡೆಯುತ್ತಾರೆ. ಈ ಸಂದರ್ಭದಲ್ಲಿ ಅಂಕಿಸಂಖ್ಯೆಗಳು ಈ ವಿಚಾರಗಳನ್ನು ಈ ಸರ್ಕಾರಕ್ಕೆ ಏನು ಸಲಹೆ ಕೊಡಬೇಕು, ಸಾರ್ವಜನಿಕರ ಹಿತಾಸಕ್ತಿಯಿಂದ ಏನು ಬೇಡಿಕೆ ಇದೆ, ಈ ಬೇಡಿಕೆಯನ್ನು ದಯವಿಟ್ಟು ಇದಕ್ಕೆ ಹೆಚ್ಚಿನ ಹಣ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ ನಾವೆಲ್ಲಾ ಬರದ ಬಗ್ಗೆ ಬಹಳ ಮಾತನಡಿದೆವು. ಇಂಡಸ್ಟ್ರೀಸ್ ಬಗ್ಗೆ ಮಾತನಾಡಿದೆವು. ಸಮಾವೇಶಗಳೆಲ್ಲಾ ನಡೆದಿವೆ ಅದರ ಬಗ್ಗೆ ನಾನು ಚರ್ಚೆಗೆ

ಹೋಗುವುದಿಲ್ಲ. ಆದರೆ, ಗ್ರಾಮೀಣ ಪ್ರದೇಶದ ಜನಗಳನ್ನು ವಲಸೆ ಬರುವುದನ್ನು ತಪ್ಪಿಸತಕ್ಕಂಥ ಸದ್ಭಾವನೆ ನಿಮ್ಮ ಸರ್ಕಾರಕ್ಕೆ ಇದ್ದರೆ, ನಿಮಗೇನಾದರೂ ಇದ್ದರೆ ಒಂದು ಕಾರ್ಯಕ್ರಮವನ್ನು ನೀವು ಮಾಡಬೇಕು ಏನೆಂದರೆ, ಯಾರು ಗುಳೇ ಬರುತ್ತಿದ್ದಾರೆ ಅವರೆಲ್ಲಾ ಅಲ್ಲಿ ಕೂಲಿ ಹುಡುಕಿಕೊಂಡು ಗಾರ್ಮೆಂಟ್ಸ್‌ಗೆ ಬರುತ್ತಿದ್ದಾರೆ. ಗಾರ್ಮೆಂಟ್ಸ್‌ಗೆ ಬಂದು ಬೆಂಗಳೂರಿನ ಹೊರ ವಲಯದಲ್ಲಿ ಶೇಡ್‌ಗಳಲ್ಲಿ ಕರ್ಮದ ಜೀವನ ಅವರು ನಡೆಸುತ್ತಿದ್ದಾರೆ. ಆದ್ದರಿಂದ, ಅವರನ್ನು ಯಾವುದಕ್ಕೋಸ್ಕರ ಇಲ್ಲಿಗೆ ಕರೆಸುತ್ತೀರಿ? ಆ ಗಾರ್ಮೆಂಟ್ಸ್ ಕೈಗಾರಿಕೆಗಳೇನಿವೆ ಅವಳಿ ಇಲಾಖೆ ಏನಿದೆ, ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಕಟ್ಟಲಿಕ್ಕೆ ಒಂದು ನೂರು ಕಿ.ಮೀ ದೂರದಲ್ಲಿ ಯಾರಿಗೂ ಅವಕಾಶ ಕೊಡಬೇಡಿ. ದಯವಿಟ್ಟು ತಾಲ್ಲೂಕು ಕೇಂದ್ರಗಳಿಗೆ ಕೊಡಿ. ಅಲ್ಲಿ ಅವರಿಗೆ ಭೂಮಿ ಕೊಡಿ. ಅಲ್ಲಿ ಅವರಿಗೆ ಸಕಲ ಸವಲತ್ತು ಕೊಡಿ., ಅಗ ಅವರು ಬೆಳಿಗ್ಗೆ ಎದ್ದು ಅವರ ಮನೆಯಿಂದ ತಿಂಡಿ ತಿಂದು ಅವರು ಕಳುಹಿಸುವ ಬಸ್ಸಿನಲ್ಲಿ ಫ್ಯಾಕ್ಟರಿಗೆ ಬರಲಿ. ಅಲ್ಲಿಂದ ಸಂಜೆ ಮನೆಗೆ ಹೋಗಿ ಬಿಸಿ ಊಟ ಮಾಡಲಿ. ಆಗ ಅವರು ಒಂದು ಸಾವಿರ ರೂಪಾಯಿ ಖರ್ಚಿನಲ್ಲಿ ಜೀವನ ಮಾಡುತ್ತಾರೆ. ಆದರೆ, ಇವತ್ತು ಯಾವ ಸ್ಥಿತಿ ಇದೆ ಎಂದು ನಾನು ಅನೇಕ ಬಾರಿ ಹೇಳಿದ್ದೇನೆ. ಯಾವ ಸ್ಥಿತಿ ಇದೆ ಎಂದರೆ, 5–6 ಜನ ಹೆಣ್ಣು ಮಕ್ಕಳನನ್ನು ಕಟ್ಟಿಕೊಂಡು ಇಲ್ಲಿಗೆ ವಲಸೆ ಬರುತ್ತಾರೆ. ಬಂದು ಆ ಪಾಪದ ಕೂಪದಲ್ಲಿ ಆ ಶೆಡ್‌ಗಳಲ್ಲಿ ತಗಡು ಶೀಟ್‌ಗಳಲ್ಲಿ ಇರುತ್ತಾರೆ. ಅವರಿಗೆ ಸರಿಯಾಗಿ ನೀರು ಇರುವುದಿಲ್ಲ; ವಾಸಕ್ಕೆ ಮನೆ ಇರುವುದಿಲ್ಲ, ಅಂಥ ಸಂದರ್ಭದಲ್ಲಿ ಇವರಿಗೆ ಬರುವ ಸಂಬಳ ಎಷ್ಟು ಎಂದರೆ, ಫ್ಯಾಕ್ಟರಿಯವರು ಕೇವಲ 3 ರಿಂದ 5 ಸಾವಿರ ಸಂಬಳ ಕೊಡುತ್ತಾರೆ. ಅದರಲ್ಲಿ ಅವರ ಜೀವನಕ್ಕೆ ಅಷ್ಟೆ ಆಗುತ್ತದೆ. ಆದರೆ, ಅದೇ ಜನ ನಮ್ಮ ತಾಲ್ಲೂಕು ಕೇಂದ್ರಗಳಲ್ಲಿ MM ಇಂಥ ಗಾರ್ಮೆಂಟ್ಸ್‌ಗಳನ್ನು ತೆರೆದರೆ, ಒಂದು ಲೋಡ್ ಬಟ್ಟೆ ಇಲ್ಲಿಂದ ಹೋದರೆ ಒಂದು ಸಾವಿರ ಜನ ಅಲ್ಲಿ ಕುಳಿತುಕೊಂಡು ಹೊಲಿಯುತ್ತಾರೆ. ಅದೇ ಒಂದು ಲೋಡ್ ಬಟ್ಟೆಯನ್ನು ಹೊಲಿಯುವುದಕ್ಕೆ ಸಾವಿರ ಜನ ಇಲ್ಲಿಗೆ ವಲಸೆ ಬರಬೇಕು. ಇದನ್ನು ತಪ್ಪಿಸಬೇಕು ಇದು ಸರ್ಕಾರದ ಚಿಂತನೆ ಆಗಬೇಕು. ಸಮಾವೇಶಗಳನ್ನು ಮಾಡತಕ್ಕಂಥದ್ದಲ್ಲ ಚಿಂತನೆ.

ಶ್ರೀ ವೈ.ಎನ್.ರುದ್ರೇಶ್ ಗೌಡ : – ಅವರು ಒಳ್ಳೆಯ ಸಲಹೆ ಕೊಡುತ್ತಿದ್ದಾರೆ.

ಅಧ್ಯಕ್ಷರು : – ತಾವು ದಯವಿಟ್ಟು ಕುಳಿತುಕೊಳ್ಳಿ. ಕೇಳುತ್ತಿದ್ದೇವೆ ಕೇಳಿ. ನೀವು ಅನುಮತಿ ಇಲ್ಲ ಏನೂ ಇಲ್ಲ ಎದ್ದು ನಿಂತು ಹೇಳಿದರೆ ಹೇಗೆ? NO, NO, ಅದು ಯಾವುದು ದಾಖಲೆಗೆ ಹೋಗಬಾರದು. ನಾನು ದಾಖಲೆಗೆ ಹೋಗಬಾರದು ಎಂದು ಹೇಳಿದ್ದೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : – ಗ್ರಾಮೀಣ ಪ್ರದೇಶದ ಜನ ಇವತ್ತು ಗುಳೆ ಬರುವುದು ನಿಲ್ಲಿಸಬೇಕಾದರೆ, ಈ ಕೈಗಾರಿಕೆ ಮುಕ್ತವಾಗಿರುವ ಪ್ರದೇಶಗಳನ್ನು ಅಲ್ಲಿ ಯಾವುದೇ ರೀತಿಯ ಸೌಲಭ್ಯಗಳನ್ನು ಕೊಟ್ಟು ಅವರಿಗೆ ಟ್ಯಾಕ್ಸ್ ಇಲ್ಲದ ಹಾಗೆ ಮಾಡಿ,. ನಿಜವಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಜವಳಿ ಪಾರ್ಕನ್ನು ಆ ಕೈಗಾರಿಕೆಗಳನ್ನು ಪ್ರಾರಂಭಿಸಿದರೆ ಮಾತ್ರ ಜನರು ಗುಳೆ ಬರುವುದನ್ನು ತಪಿಸಬಹುದು.

ಅದಕ್ಕೋಸ್ಕರ ಈ ಒಂದು ಕೆಲಸವನ್ನು ಸರ್ಕಾರ ಪ್ರಾಮಾಣಿಕವಾಗಿ ಮಾಡಬೇಕು ಎಂಬುದು ನನ್ನ ಭಾವವನೆ. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿ ಇಲಾಖೆ ರಾಜ್ಯದ ಭವಿಷ್ಯದ ದೃಷ್ಟಿಯಿಂದ ಮತ್ತು ರೈತರ ಭವಿಷ್ಯದ ದೃಷ್ಟಿಯಿಂದ ನಿಜವಾಗಲೂ ಕೂಡ ಬಹಳ ಪ್ರಮುಖವಾದಂಥವುದು. ಮತ್ತೆ ಜನಪ್ರತಿನಿಧಿಗಳು ನಿಜವಾಗಿಯೂ ಗೌರವದಿಂದ ಇರಬೇಕೆಂದರೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೆಚ್ಚು ಒತ್ತನ್ನು ಸರ್ಕಾರ ಕೊಡತಕ್ಕಂಥ ಅವಶ್ಯಕತೆ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. PWD ಯೊಂದ 30% ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತೇವೆ. ಅಲ್ಪಸ್ವಲ್ಪ ಗ್ರಾಂಟ್ಸ್ ಕೊಡುತ್ತಾರೆ ಇಲ್ಲವೆಂದು ಹೇಳಬಾರದು. ಆದರೆ, ನಿಮ್ಮ ಸರ್ಕಾರ ಬಂದ ಮೇಲೆ ಜಿಲ್ಲಾ ಪಂಚಾಯತ್‌ನ ಸ್ಥಿತಿ ಏನಾಗಿದೆ? ಜಿಲ್ಲಾ ಪಂಚಾಯತ್‌ನ ಮೆಂಬರ್ಸ್ ಅನ್ನು ಹಿಡಿದುಕೊಂಡು ಹೊಡೆಯುವ ಸ್ಥಿತಿಗೆ ತಂದಿದ್ದೀರಿ. ಒಬ್ಬೊಬ್ಬಜಿಲ್ಲಾ ಪಂಚಾಯತ್ ಸದಸ್ಯನ ಕ್ಷೇತ್ರದಲ್ಲಿ ಸುಮಾರು 200 ರಿಂದ 500 ಕಿ.ಮೀ ರಸ್ತೆ ಇರುತ್ತದೆ. ಆದರೆ, ಅವರು ಸಮಾನ್ಯವಾದ ಕಚ್ಚಾ ರಸ್ತೆಯನ್ನು ಮಾಡಿಸುವುದಕ್ಕೆ ಆಗದೇ ಇರುವಂಥ ಸ್ಥಿತಿ ಇದೆ. ಏಕೆಂದರೆ, ಒಬ್ಬ ಜಿಲ್ಲಾ ಪಂಚಾಯತ್ ಸದಸ್ಯನಿಗೆ ಇವತ್ತು 10 ರಿಂದ 15 ಲ್ಕಕ್ಷ ರೂಪಾಯಿ ಮಾತ್ರ ಹಣ ಬರುತ್ತಿದೆ. ಈ ರೀತಿಯಾದರೆ ಆತನ ಸ್ಥಿತಿ ಏನಾಗಬೇಕು? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ಜಿಲ್ಲಾ ಪಂಚಾಯಿತಿ ರಸ್ತೆಗಳ ದುರಸ್ಥಿಗೆ ದಯವಿಟ್ಟು ಹೆಚ್ಚು ಹಣವನ್ನು ಕೊಡತಕ್ಕಂಥ

ಕೆಲಸವನ್ನು ಈ ಪೂರಕ ಬಜೆಟ್‌ನಲ್ಲಿ ಮಾಡಬೇಕೆಂಬ ಮಾತನ್ನು ಈ ಸಂದರ್ಭಧಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಸಾರಿ ನಮ್ಮ ಗ್ರಾಮ ನಮ್ಮ ರಸ್ತೆ ಎಂಬ ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ಮಾಡಿತ್ತು. ಇದರಿಂದ ಶಾಸಕರೆಲ್ಲರಿಗೂ ಒಂದು ಒಳ್ಳೆಯ ಗೌರವವನ್ನು ತಂದುಕೊಟ್ಟಿದ್ದೀರಿ ನಾನು ಇಲ್ಲವೆಂದು ಹೇಳುವುದಿಲ್ಲ. CMGSY ಯಿಂದ ಒಳ್ಳೆಯ ಕೆಲಸವಾಗಿದೆ. ಇವತ್ತಿನ ದಿವಸ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಿಂದ ನಮ್ಮ ಶಾಸಕರಿಗೆ ಒಳ್ಳೆಯ ಗೌರವ ಬಂದಿದೆ. ಆ ಕೆಲಸವನ್ನು 30. ಕಿ.ಮೀ ವರೆಗೆ ಏರಿಸುತ್ತೇವೆಂದು ಮಾನ್ಯ ಜಗದೀಶ್ ಶೆಟ್ಟರ್‌ರವರು ಹಿಂದೆ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರಾಗಿದ್ದಾಗ ಉತ್ತರ ಕೊಟ್ಟಿದ್ದರು. ಇದಕ್ಕೆ ಪಟ್ಟಿಯನ್ನೂ ಸಹ ತೆಗೆದುಕೊಂಡಿದ್ದೀರಿ. ಇನ್ನೇನು 10 ತಿಂಗಳಿನಲ್ಲಿ ಚುನಾವಣೆ ಆಟವಾಡಿದಾಂಗೆ ಬರುತ್ತದೆ. ಅಷ್ಟು ಹೊತ್ತಿಗೆ ಆ ರಸ್ತೆಗಳು ಆಗಿದ್ದರೆ ನಿಮಗೂ ಸ್ವಲ್ಪ ಓಟು ಬೀಳುತ್ತದೆ ಮತ್ತೆ ನಮಗೂ ಸಹ ಸ್ವಲ್ಪ ಓಟು ಬೀಳುತ್ತದೆ. ಆದ್ದರಿಂದ ಈ ಕೆಲಸವನ್ನು ಅತೀ ಜರೂರಾಗಿ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಸಹ ಬರುತ್ತದೆ. ಆದ್ದರಿಂದ ಆ ದುಡ್ಡನ್ನು ಬಿಡುಗಡೆ ಮಾಡಿ. ಮಾನ್ಯ ಸದಾನಂದಗೌಡರು ನನ್ನ ಹೆಸರನ್ನು ಪ್ರಸ್ತಾಪ ಮಾಡಿ ಮಾನ್ಯ ಶಿವಲಿಂಗೇಗೌಡರೆ ಬೆಂಗಳೂರು ಅಲ್ಲದೆ ನಿಮಗೂ ಸಹ ಕೊಡುತ್ತಿದ್ದೇವೆಂದು ಬಜೆಟ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದ್ದರು. ನಿಮಗೂ ಸಹ ಕೊಡುತ್ತಿದ್ದೇನೆಂದು ಹೇಳಿದ ಕಾರ್ಯಕ್ರಮ ಇವತ್ತಿನವರೆಗೆ ಅನುಷ್ಠನಕ್ಕೆ ಬಂದಿಲ್ಲ. ದಯವಿಟ್ಟು ಆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತೆಗೆದುಕೊಂಡು ಬನ್ನಿ. ಏಕೆಂದರೆ, ಮಾನ್ಯ ಮುಖ್ಯಂತ್ರಿಗಳ ಕನಸಿನ ಕೂಸು ಅದಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಜೆಡಿ(ಎಸ್) ನವರು ಮಾನ್ಯ ಸದಾನಂದಗೌಡರಿಗೆ ಏನೊಂದು ಮಾಡಿದ್ದಾರೆಂಬ ಆರೋಪವನ್ನು ನಾವು ಹೊತ್ತುಕೊಂಡಿದ್ದೇವೆ. ಇದು ಕುಂಬಳಕಾಯಿ ಕಳ್ಳನ ಕಥೆ ಅಲ್ಲ. ಇವತ್ತಿನ ಸಭೆಯಲ್ಲಿ ನಾನು ಹೇಳುವುದೇನೆಂದರೆ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕೆಲವು ಗ್ರಾಂಟ್ಸ್ ನಮಗೆ ಸಿಕ್ಕಿದೆ, ಇಲ್ಲ ಎಂದು ನಾವು ಹೇಳುವುದಿಲ್ಲ. ಮಾನ್ಯ ಸದಾನಂದಗೌಡರ ಕಾಲದಲ್ಲಿ ನಮಗೆ ಸುಮ್ಮನೆ ಬರೆದುಕೊಟ್ಟರೆ ಹೊರತು ನಮಗೆ ಏನೂ ಸಿಕ್ಕಿಲ್ಲ. ನೀವು ಆ ಪತ್ರಗಳನ್ನು ತೆಗೆದುಕೊಂಡು ಹೋಗಿ ಹೈ ಕಮಾಂಡ್‌ಗೆ ಕೊಟ್ಟು ಅವರನ್ನು ತೆಗೆಸಿದರೆ

ನಾವೇನು ಮಾಡೋಣ. ಹಾಸನ ಜಿಲ್ಲೆಗೆ ಪ್ಯಾಕೇಜ್ ಮಾಡಿದ್ದಾರೆ, ಆಲೂಗಡ್ಡೆ ಕೇವಲ ಹಾಸನ ಜಿಲ್ಲೆಯಲ್ಲಿ ಮಾತ್ರ ಬೆಳೆಯುತ್ತಿಲ್ಲ, ಇವತ್ತಿನ ದಿವಸ 5 ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದಾರೆ. ಆದರೆ, ಮಾನ್ಯ ದೇವೇಗೌಡರಿಗೋಸ್ಕರ ಕೇವಲ ಹಾಸನಕ್ಕೆ ಪ್ಯಾಕೇಜ್ ಮಾಡಿಕೊಟ್ಟಿದ್ದಾರೆ ನೋಡಿ ಎಂದು ಹೈ ಕಮಾಂಡ್ ತೋರಿಸಿ ಮಾನ್ಯ ಸದಾನಂದಗೌಡರನ್ನು ತೆಗೆದೆವೆಂದು ಮಾನ್ಯ ಉಮೇಶ್ ಕತ್ತಿಯವರು ಇಲ್ಲಿ ಹೇಳುತ್ತಿದ್ದರು. ಈ ರೀತಿಯಾದ ಭಾವನೆಯನ್ನು ಇಟ್ಟುಕೊಂಡರೆ ಹೇಗೆ? ನಾವು ಹೇಳಿದಂಥ ಒಬ್ಬ ತಹಸೀಲ್ದಾರ್‌ರವರನ್ನೂ ಸಹ ಅವರು ಹಾಕಿಕೊಟ್ಟಿಲ್ಲ. ಒಕ್ಕಲಿಗ ಜನಾಂಗದ, ಮುಖ್ಯ ಇಂಜಿನಿಯರ್, ಇಂಜಿನಿಯರ್‌ಗಳನ್ನು ಅಲ್ಲೆಲ್ಲಿಗೋ ಹಾಕಿದ್ದಾರೆಂದು ಯಾರೋ ಹೇಳಿದ್ದನ್ನು ಕೇಳಿ, ಮಾನ್ಯ ಸದಾನಂದಗೌಡರನ್ನು ಕೆಳಗಿಳಿಸಿದ್ದೀರಿ. (ಜೆ.ಡಿ.ಎಸ್)ನವರು ಹೇಳಿದ ಹಾಗೆ ಬರೆದುಕೊಡುತ್ತಾರೆಂದು ಇವತ್ತಿನ ದಿವಸ ಎಲ್ಲಾ ಮಾಧ್ಯಮದಲ್ಲಿ ತೋರಿಸುತ್ತಿದ್ದಾರೆ. ಏನು ಬರೆದುಕೊಟ್ಟಿದ್ದಾರೆ ಹೇಳಿ ಸ್ವಾಮಿ? ನನ್ನ ಕ್ಷೇತ್ರಕ್ಕೆ ಕೇವಲ 500 ರೂಪಾಯಿ ಬರೆದುಕೊಟ್ಟಿರುವ ಯಾವುದಾದರೊಂದು ದಾಖಲಾತಿ ತೋರಿಸಿ? ಏನಾದರೊಂದು ದಾಖಲಾತಿ ಬೇಕಲ್ಲವೆ? ಇವರಿಗೆ ಕೊಟ್ಟು ಸುಮ್ಮನೆ ದೂರು ಹೊರೆಸಿಕೊಂಡೆವಲ್ಲ ಎಂದು ನಮಗೆ ಹೊಟ್ಟೆ ಉರಿಯುತ್ತದೆ. ಏನಾದರೂ ಬರೆಸಿಕೊಂಡಿದ್ದರೆ ದೂರು ತೆಗೆದುಕೊಳ್ಳೋಣ. ಜನತಾದಳದವರು ಅವರಿಂದ ಏನು ಕೇಳಿದ್ದಾರೆ? ಅದರ ಬಗ್ಗೆ ಇರುವ ನಮ್ಮ ನೋವನ್ನು ಹೇಳಿಕೊಂಡೆವಷ್ಟೆ. ವಿಷಯಾಂತರ ಮಾಡುವುದಕ್ಕೆ ನಾನು ಯಾವತ್ತೂ ಸಹ ಹೋಗುವುದಿಲ್ಲ. ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ಎಲ್ಲಾ ವಿಷಯಗಳ ಬಗ್ಗೆ ಮಾತನಾಡುತ್ತಾರೆ. ಆದರೆ, ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಉದ್ಯೋಗಖಾತ್ರಿ ಯೋಜನೆ ಒಂದು ಒಳ್ಳೆಯ ಯೋಜನೆ ಎಂದು ಎಲ್ಲರೂ ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ ಮತ್ತೆ ಈ ಬಗ್ಗೆ ಬರ ಪರಿಹಾರದಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಆದ್ದರಿಂದ, ಈ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಅಲ್ಲಿ ಒಂದು ತಪ್ಪು ಗ್ರಹಿಕೆಯಾಗಿದೆ. ದುಡ್ಡಿದೆ ಎಂಬ ಭಾವನೆ ಇದೆ. ಆದರೆ, ಪಂಚಾಯಿತಿಯಲ್ಲಿ ದುಡ್ಡು ಇಲ್ಲ, ಏಕೆಂದರೆ, ಕಳೆದ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರ ಸರಿಯಾದ ಸಮಯಕ್ಕೆ ಹಣವನ್ನು ಬಿಡಗಡೆ ಮಾಡದೆ ಎಲ್ಲಾ ಹಣವನ್ನು ಮುಂದುವರಿದ ಕಾಮಗಾರಿಗಳಿಗೆ ಕೊಟ್ಟು ಇವತ್ತು 2,3 ಲಕ್ಷ ರೂಪಾಯಿ ಮಾತ್ರ ಒಂದೊಂದು

ಪಂಚಾಯಿತಿಯಲ್ಲಿದೆ. ಈ ಎರಡು ಮೂರು ಲಕ್ಷ ರೂಪಾಯಿಯಲ್ಲಿ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. Due ಇರುವಂಥವುಗಳಿಗೆ ಅವರು ಈ ಹಣ ಕೊಟ್ಟಿದ್ದಾರೆ. ಆದ್ದರಿಂದ, ಅಲ್ಲಿ ಏನಾದರೊಂದು ವಿಶೇಷವಾಗಿ ಮಾಡಬೇಕಾಗಿದೆ. ಇನ್ನೊಂದು ವಿಚಾರ ಏನೆಂದರೆ ಇದರಲ್ಲಿ ನಮ್ಮದು, ಅಧಿಕಾರಿಗಳದು ಮತ್ತು ಎಲ್ಲರದ್ದೂ ತಪ್ಪಿದೆ. ಅದೇನೆಂದರೆ, ಜಾಬ್ ಕಾರ್ಡ್‌ನ್ನು ಕ್ರಿಯೇಟ್ ಮಾಡದೆ ಯಾವುದೇ ಕಾರಣದಿಂದ ಬಜೆಟ್ ಅನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಆ ಜಾಬ್ ಕಾರ್ಡ್ ಅನ್ನು ಕ್ರಿಯೇಟ್ ಮಾಡುವುದಕ್ಕೆ ಪಿಡಿಓ ಮತ್ತು ಇತರರಿಗೆ ಸೂಚನೆ ಕೊಟ್ಟಿ ಕೇಂದ್ರದಿಂದ ಅನೇಕ ಯೋಜನೆಗಳಿಗೆ ಹಣ ಬರುತ್ತಿರುವುದರಿಂದ ಅದನ್ನು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಜಾಬ್ ಕಾರ್ಡ್ ಅನ್ನು ಕ್ರಿಯೇಟ್ ಮಾಡಿ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ತರಿಸಿ ಕ್ರಾಂತಿಕಾರಿ ರೂಪದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಉಪಯೋಗಿಸಿಕೊಳ್ಳುವುದರಿಂದ ಕರ್ನಾಟಕ ರಾಜ್ಯದ ರೈತರಿಗೆ, ಸರ್ಕಾರಕ್ಕೆ, ನಮಗೆಲ್ಲರಿಗೂ ಒಳ್ಳೆಯದಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ರಾಜೀವ್‌ಗಾಂಧಿ ಸಬ್‌ಮಿಷನ್‌ನಲ್ಲಿ Multi-villages Schemes ಮಾಡಲಾಗಿದೆ. ಇದು ನಿಜವಾಗಿಯೂ ಕೂಡ ಕೇಂದ್ರ ಸರ್ಕಾರದ ಒಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಕೇಂದ್ರ ಇದಕ್ಕೆ ಹಣ ಕೊಡುತ್ತದೆ, ಆದರೆ, ರಾಜ್ಯ ಸರ್ಕಾರ ಬಳಸಿಕೊಳ್ಳಬೇಕು, ನನ್ನ ಕ್ಷೇತ್ರದಲ್ಲಿನ ಯೋಜನೆಗೆ 2010 ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದಾರೆ. ಆದರೆ, ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿಲ್ಲ. ಸುಮ್ಮನೆ ನಾಟಕ ಮಾಡಿಕೊಂಡು ಪಿಎಸ್‌ಆರ್ ಮಾಡಿಸುತ್ತೇವೆ, ಅದು ಮಾಡಿಸುತ್ತೇವೆಂದು ನಾಟಕ ಮಾಡುತ್ತಿದ್ದಾರೆ. ಈಗ DBOT ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ, ಕೇಂದ್ರದಿಂದ ಪುಕ್ಕಟೆಯಾಗಿ ಬರುವಂತಹ ಇಂಥ ಅನುದಾನಗಳನ್ನು ನೀವು ಸಮರ್ಪಕವಾಗಿ ಉಪಯೋಗಿಸಿಕೊಳ್ಳದಿದ್ದರೆ ಹೇಗೆ? ಇದರಲ್ಲಿ ನೀವು ಎಷ್ಟು ಯೋಜನೆಗಳನ್ನು ಪೂರ್ಣವಾಗಿ ಮಾಡಿದ್ದೀರಿ? ಈ ಒಂದು ಸ್ಕೀಂ ನಿಂದ ಸರ್ಕಾರಕ್ಕೆ ಮತ್ತು ನಮಗೂ ಸಹ ಒಳ್ಳೆಯ ಹೆಸರು

ಬರುತ್ತಿತ್ತು. ಆದರೆ, ಈ ಕಾರ್ಯಕ್ರಮವನ್ನು ನೀವು ಅನುಷ್ಠಾನಕ್ಕೆ ತರುತ್ತಿಲ್ಲ. ಇದನ್ನು ಅನುಷ್ಠಾನಕ್ಕೆ ತರುವುದರಲ್ಲಿ ನೀವು ವಿಫಲರಾಗಿದ್ದೀರಿ ಬಹಳ ಹಿಂದೆ ಉಳಿದ್ದಿದ್ದೀರಿ. ಇದರಲ್ಲಿ ಏನು ತಾಂತ್ರಿಕ ದೋಷ ಇದೆಯೋ ನನಗಂತೂ ಸಹ ಗೊತ್ತಿಲ್ಲ. ನಿಜವಾಗಿಯೂ ಇದರಲ್ಲಿ ಬಹಳ ಹಿಂದೆ ಉಳಿದಿದ್ದೀರಿ. ಈ ಕೆಲಸ ಆಗದೆ ಹೋದರೆ ಸರ್ಕಾರಕ್ಕೆ ಮತ್ತು ಶಾಸಕರಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ಈ ಕೆಲಸ ಅತೀ ಜರೂರಾಗಿ ಆಗಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಆರೋಗ್ಯ ಇಲಾಖೆಯ ಆಸ್ಪತ್ರೆ ಕಟ್ಟಡಗಳ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ರಕ್ಷಾ ಕಮಿಟಿಯಲ್ಲಿ ಶಾಸಕರು ಅಧ್ಯಕ್ಷರಾಗಿದ್ದೇವೆ. ಅಲ್ಲಿ 2–3 ಲಕ್ಷ ರೂಪಾಯಿ ಇರುತ್ತದೆ. ಇದರಿಂದ ಅಲ್ಲಿನ ಕಟ್ಟಡಕ್ಕೆ ಸುಣ್ಣ–ಬಣ್ಣ ಬಳಿಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಕಟ್ಟಡಗಳನ್ನು ದುರಸ್ಥಿ ಮಾಡುವುದಕ್ಕೆ ಸಮರೋಪಾದಿಯಲ್ಲಿ ರಕ್ಷಾ ಕಮಿಟಿಗೆ ಹಣವನ್ನು ಒದಗಿಸಬೇಕು. ಆನಂದರಾವ್ ಸರ್ಕಲ್‌ನಲ್ಲಿರುವ ಡೈರೆಕ್ಟರ್ ಕಛೇರಿಗೆ ಸುಮಾರು 10 ಸಾರಿ ಹತ್ತಿ ಇಳಿದಿದ್ದು ಆಗಿದೆ. ಆಸ್ಪತ್ರೆ ಕಟ್ಟಡಗಳಿಗೆ ಮೂರು ವರ್ಷಗಳಿಂದ ಸುಣ್ಣ–ಬಣ್ಣ ಇಲ್ಲ. ಇವತ್ತಿನ ದಿವಸ ಆಸ್ಪತ್ರೆಗಳು ನಿಜವಾಗಿಯೂ ಕೂಡ ಬಹಳ ಸಂಕಷ್ಟದಲ್ಲಿವೆ. ಆದ್ದರಿಂದ, ಈ ಒಂದು ಇಲಾಖಾ ಬೇಡಿಕೆಯಲ್ಲಿ ಕಟ್ಟಡಗಳ ದುರಸ್ಥಿಗೋಸ್ಕರ ವಿಶೇಷವಾದಂತಹ ಅನುದಾನವನ್ನು ಕೊಟ್ಟು ಆ ಕೆಲಸವನ್ನು ಮಾಡಿಸಬೇಕು. ಇನ್ನೊಂದು ವಿಷಯ ಏನೆಂದರೆ, ಅದರಲ್ಲೊಂದು ಇಂಜಿನಿಯರಿಂಗ್ ಸೆಲ್ ಇದೆ. ಅವರು ಶಾಸಕರನ್ನು ಕೇಳಿ ಕೆಲಸ ತೆಗೆದುಕೊಳ್ಳುವುದಿಲ್ಲ. ಅವರು ಇಲ್ಲಿ ಕುಳಿತುಕೊಂಡು ಪ್ಯಾಕೇಜ್ ಕೊಟ್ಟಿರುತ್ತಾರೆ. ಅಂದರೆ, ಇಡೀ ರಾಜ್ಯದ ಗುತ್ತಿಗೆಯನ್ನು ಯಾರೊಬ್ಬ ಗುತ್ತಿಗೆದಾರ ತೆಗೆದುಕೊಂಡಿರುತ್ತಾನೆ. ಅಲ್ಲಿ ಏನಾಗುತ್ತಿದೆ ಎಂದರೆ, ಹಿಟ್ಟು ಇಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಎನ್ನುವ ಹಾಗೆ ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿರುವುದಿಲ್ಲ. ಆದರೆ, ಅಲ್ಲಿ ಗ್ಲ್ಯಾಸ್ ಟೈಲ್ಸ್ ಹಾಕಿಸಿರುತ್ತಾರೆ. ಅಂದರೆ, ಯಾವುದನ್ನು ಹಾಕಿಸಬೇಕಾಗಿದೆಯೋ ಅದನ್ನು ಇಂಜಿನಿಯರ್ ಸೇರಿಸಿಕೊಂಡು ಅದನ್ನು ಬೆಂಗಳೂರಿನಿಂದ ತೆಗೆದುಕೊಂಡು ಬಂದು ಹಾಕಿಸಿರುತ್ತಾರೆ. ಅದನ್ನು ತಪ್ಪಿಸಿ ಅಲ್ಲಿನ ಜನ ಪ್ರತಿನಿಧಿಗಳು ಏನು ಕೆಲಸ ಹೇಳುತ್ತಾರೆಯೋ ಆ ಕೆಲಸ ಮಾತ್ರ ಆಗಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಶಿಕ್ಷಣ ಇಲಾಖೆ ಬಗ್ಗೆ ಹೇಳುವುದಾದರೆ, ಸ್ಥಳೀಯರಿಗೆ

ದಾನ ಕೊಡುವ ರೀತಿಯಲ್ಲಿ ನರ್ಸರಿ ಶಾಲೆಗಳು ಪ್ರಾರಂಭವಾಗುತ್ತಿವೆ. ಆದ್ದರಿಂದ, ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಮಾಡಬೇಡಿ. ಖಾಸಗಿಯವರ ಮೇಲೆ ಪೈಪೋಟಿ ಮಾಡಬೇಕಾದರೆ ಈಗಿನಿಂದಲೇ ಸರ್ಕಾರಿ ನರ್ಸರಿ ಶಾಲೆಗಳನ್ನು ಪ್ರಾರಂಭ ಮಾಡಿದರೆ ಮಾತ್ರ ಮುಂದಿನ ದಿನಗಳಲ್ಲಿ ಖಾಸಗಿಯವರಿಗೆ ಪೈಪೋಟಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರಿ ನರ್ಸರಿ ಶಾಲೆಗಳನ್ನು ತೆಗೆಯಬೇಕು. ಶಿಶುವಿಹಾರದಿಂದ ಐದು ವರ್ಷ ನಾಲ್ಕು ವರ್ಷಕ್ಕೆ ಮೇಲ್ಪಟ್ಟು ಮಕ್ಕಳನ್ನು convent ಗೆ ಕಳುಹಿಸುವುದರ ಬದಲು, ಸರ್ಕಾರಿ ನರ್ಸರಿ ಶಾಲೆಗಳನ್ನು ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳಿ, ಹಿಂದುಳಿದ ವರ್ಗಗಳಿಗೆ ಒಂದು secretariat ಮಾಡುತ್ತೇವೆಂದು ಹೇಳಿ ಘೋಷಣೆ ಆಯಿತು, ಅದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಸಾವಿರ ಕೋಟಿ ಎಂದು ಹೇಳಿದಿರಿ, ಆ ಸಾವಿರ ಕೋಟಿ ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ದಯವಿಟ್ಟು ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಬೇಡಿ. ದಯವಿಟ್ಟು ಆ ಕೆಲಸವನ್ನು ಅತೀ ಜರೂರಾಗಿ ಮಾಡಿ, ಅದರ ಜೊತೆಗೆ ನಿಮ್ಮಲ್ಲಿ ಬಹಳ ಬೋರ್ಡ್‌ಗಳನ್ನು ಸ್ಥಾಪನೆ ಮಾಡಿದ್ದೀರಿ. ಬಯಲು ಸೀಮೆ ಅಭಿವೃದ್ಧಿ ಮಂಡಳಿ ಎಂದು ಮಾಡಿದ್ದೀರಿ. ಅದಕ್ಕೆ ಒಬ್ಬ MLA ಗೆ ನಾಲ್ಕು ಲಕ್ಷ ಕೊಡುತ್ತೀರಿ. ಅದರ ಆಡಳಿತಾತ್ಮಕ ವೆಚ್ಚ ಎಷ್ಟು ಎಂದು ದಯಮಾಡಿ ತಿಳಿದುಕೊಂಡರೆ ಗೊತ್ತಾಗುತ್ತದೆ. ಅಲ್ಲಿ ಒಬ್ಬರು KAS officer, ಒಬ್ಬ MD, ಒಬ್ಬರು ಬೋರ್ಡ್ ಛೇರ್ಮನ್ ಅವರಿಗೆ ಕಾರು ಇದೆಲ್ಲಾ ವೆಚ್ಚ ಎಷ್ಟು? ನೀವು ಕೊಡುವ ದುಡ್ಡು ಎಷ್ಟು? ರಾಜಕೀಯ ಇಚ್ಛಾಶಕ್ತಿಯಿಂದ ಕರ್ನಾಟಕ ರಾಜ್ಯದಲ್ಲಿ ಬೋರ್ಡ್ ಹಾಗೂ ನಿಗಮಗಳ ಸಂಖ್ಯೆ ಬಹಳ ಅಧಿಕವಾಗಿ ಮಾಡಿ ಹಣಕಾಸಿನ ಹೊರೆಯನ್ನು ಮಾಡಿ ಆರ್ಥಿಕ ಮುಗ್ಗಟ್ಟನ್ನು ತಂದು ಇಡುತ್ತಿದ್ದೀರಿ. ದಯವಿಟ್ಟು ಅವಶ್ಯಕತೆ ಇಲ್ಲದೆ ಇರುವಂತಹ ಎಲ್ಲಾ ನಿಗಮಗಳನ್ನು ಮೊದಲು ರದ್ದು ಮಾಡುವುದನ್ನು ಈ ಸರ್ಕಾರ ಕಲಿಯಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭಧಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಆಹಾರ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದೇನೆ. ಮತ್ತೆ ಚರ್ಚೆ ಮಾಡುವುದಕ್ಕೆ ಹೋದರೆ ಏನಪ್ಪ ಈ ಶಿವಲಿಂಗೇಗೌಡ ಎಂದು ಹೇಳುತ್ತೀರಿ. ಅದು ಬೇಡ. ಅಬಕಾರಿ ಬಗ್ಗೆ ಹೇಳಬೇಕೆಂದರೆ, ಅಬಕಾರಿಯನ್ನು ಒಂದು ಆದಾಯ ಎಂದು ಪರಿಗಣಿಸಬೇಡಿ. ಇವತ್ತು ನಿಜವಾಗಿಯೂ ಅಬಕಾರಿ ಇಲಾಖೆಯಿಂದ ಆಗುತ್ತಿರತಕ್ಕಂತಹ ಅನ್ಯಾಯ ನಾನು ಸದನದಲ್ಲಿ ನಿಂತು

ಹೇಳಿದ್ದೇನೆ. ಮುಂದೆ ಅದು ನಮಗೆ ಒಂದು ಶಾಪವಾಗಿ ಪರಿಣಮಿಸದೆ ಹೋದರೆ, ನನ್ನ ಹೆಸರು ಆಗ ಜ್ಞಾಪನ ಮಾಡಿಕೊಳ್ಳಿ. ಹಳ್ಳಿಗಾಡಿನಲ್ಲಿ ಏನಾಗಿದೆ ಎಂದು ನೋಡಿ. ಗ್ರಾಮೀಣ ಸ್ತ್ರೀ ಶಕ್ತಿ ಸಂಘದವರು ಎದ್ದುಬಿಟ್ಟಿದ್ದಾರೆ. ಅವರು ಬಹಳ strong ಆಗಿದ್ದಾರೆ. ಅಲ್ಲಲ್ಲೇ ವಿರೋಧ ಮಾಡುತ್ತಿದ್ದಾರೆ, ನಿಮಗೆ ಇನ್ನೂ ಅರ್ಥವಾಗಿಲ್ಲ. ಇದು ಒಂದು ದಿನ ದಂಗೆ ಎದ್ದೇ ಏಳುತ್ತದೆ. ಇದರಿಂದ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬಂದೇ ಬರುತ್ತದೆ. ಶಾಸಕರ ನಿವೇಶನಗಳ ಬಗ್ಗೆ ಮೊನ್ನೆ ಪೇಪರ್‌ನಲ್ಲಿ ಓದಿದೆ. ಇದು ಯಾವ ಧರ್ಮ? ಒಂದು ಅಷ್ಟು ಜನ ಶಾಸಕರು ಬಂಗಲೆ ಕಟ್ಟಿಕೊಂಡಿದ್ದಾರೆ. ನಾವೂ ಶಾಸಕರಾಗಿ ಏನೋ ಒಂದು ಬಂಗಲೆ ಕಟ್ಟಿಕೊಳ್ಳಬಹುದು, ನಮಗೆ ಒಂದು ಅಡಿ ಜಾಗ ಇಲ್ಲ. ಏನೋ ತೆಗೆದುಕೊಳ್ಳೋಣ ಎಂದು ಇಲ್ಲಿ ಬಂದರೆ, ಅವರು ಹೇಳಿದರು, ಇವರು ಹೇಳಿದರು ಎಂದು ಹೇಳಿ ಮೊದಲನೆಯವರಿಗೆಲ್ಲಾ ಕೊಟ್ಟು ನಮಗೆ ಕೊಡುವುದಿಲ್ಲವೆಂದರೆ ಇದು ಯಾವ ಧರ್ಮ? ಅವರಿಗೂ ರದ್ದು ಮಾಡಿ. ಸೈಟು ತೆಗೆದುಕೊಂಡವರು ಇಲ್ಲಿ ಕೂತಿರಬಹುದು. ಅವರ ಸೈಟ್‌ಗಳನ್ನೂ ರದ್ದು ಮಾಡಿ. ಇಲ್ಲವೆಂದರೆ ನಮಗೂ ಕೊಡಿ. ಕಾನೂನು ತೆಗೆದುಕೊಂಡು ಬನ್ನಿ. ನೋಡೋಣ ನೀವು ಅದನ್ನು ಏನಾದರೂ ಮಾಡದೇ ಇದ್ದರೆ, ಅದು ಚೆನ್ನಾಗಿರುವುದಿಲ್ಲ. ಎಷ್ಟು ಜನ ಶಾಸಕರು ಹೊಸದಾಗಿ ಗೆದ್ದು ಬರುವವರು, ಸೈಟು ಇದೆ ಮಾರಿ ಏನಾದರೂ ಮಾಡಬಹುದು ಎಂದು ಬರುತ್ತಾರೆ. ನಾವು ಇಲ್ಲಿ ಬಂದು ಲಂಚ ಹೊಡೆಯುವುದಕ್ಕಗುತ್ತಾ? ಅದು ಏನೋ ಒಂದು ಆಧಾರ ಎಂದು ನಾವು ಇಟ್ಟುಕೊಂಡಿದ್ದರೆ ಎಲ್ಲೋ ದೂರದೂರದಲ್ಲಿ ಕೊಡುತ್ತಿದ್ದಾರೆ, ಹತ್ತಿರದಲ್ಲಿ ನೋಡೋಣ ಎಂದು ಸುಮ್ಮನೆ ಕೂತಿದ್ದರೆ ಈಗ ಇಲ್ಲವೇ ಇಲ್ಲವೆಂದು ಹೇಳುತ್ತಾರೆ. ಇದನ್ನು ಯಾವುದೇ ಕಾರಣದಿಂದ ನಾವು ಒಪ್ಪುವುದಿಲ್ಲ. ಹೊಸದಾಗಿ ಗೆದ್ದಿರತಕ್ಕಂತಹ ಶಾಸಕರು ಯಾರು ನಿವೇಶನ ತೆಗೆದುಕೊಂಡಿಲ್ಲ ಅವರಿಗೆ ನಿವೇಶನ ಕೊಡುವುದು, ನೀವೇನಾದರೂ ಕೈ ಬಿಟ್ಟರೆ, ಅನ್ಯಾಯವಾಗುತ್ತದೆ. ನಮಗೆ ಒಂದು ಸೈಟ್ ಕೊಡಬೇಕು ಇಲ್ಲದಿದ್ದರೆ ಕೊಟ್ಟಿರುವುದನ್ನೆಲ್ಲಾ cancel ಮಾಡಿ. ಮನೆ ಕಟ್ಟಿಕೊಂಡಿದಾರೋ ಇಲ್ಲವೋ ಗೊತ್ತಿಲ್ಲ. ಅವರಿಗೆಲ್ಲಾ cancel ಮಾಡಿ. ಇಲ್ಲವೆಂದರೆ ನಮಗೂ ಕೊಡಿ. ಅದೇನು ಒಬ್ಬರಿಗೊಂದು ಕಾನೂನು ಇನ್ನೊಬ್ಬರಿಗೊಂದು ಕಾನೂನಾ? ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಇಲಾಖೆ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಬಹಳ ಮಟ್ಟಿಗೆ

ನೆಮ್ಮದಿ ಶಾಸಕರದ್ದೂ ಕೆಟ್ಟು ಹೋಗಿದೆ. ಜನಗಳದ್ದೂ ಕೆಟ್ಟು ಹೋಗಿದೆ, ಎಲ್ಲರದ್ದೂ ನೆಮ್ಮದಿ ಕೆಟ್ಟು ಹೋಗಿದೆ. ಅದನ್ನು ವಿಶೇಷವಾಗಿ ಚರ್ಚೆಗೆ ತೆಗೆದುಕೊಂಡು ರೆವಿನ್ಯೂ ಇಲಾಖೆಯಲ್ಲಿರತಕ್ಕಂತಹ ತಾಲ್ಲೂಕು ಕಛೇರಿಯ ವಾತಾವರಣವನ್ನು ಅಲ್ಲಿರತಕ್ಕಂತಹ ಪದ್ಧತಿಗಳನ್ನು ಸರಿಪಡಿಸದೆ ಹೋದರೆ, ಅಂಕಿ ಅಂಶಗಳ ಸಮೇತ ಅಲ್ಲಿ ಏನು ಕಷ್ಟ ಸುಖ ಇದೆ, ಆ ರೈತನ ಬವಣೆ ಏನು, ಎಂದು ಹೇಳಬೇಕೆಂದು ಇದ್ದೆ, ಪ್ರತ್ಯಕ್ಷವಾಗಿ ಅಲ್ಲಿಯೇ ಎರಡು ದಿನ ಇದ್ದೆ, ನಾನು ನೋಡಿದ್ದೆ. ಅದನ್ನು ಹೇಳಭೇಕೆಂದರೆ ಅವಕಾಶವಿಲ್ಲ. ಆದ್ದರಿಂದ ದಯವಿಟ್ಟು ರೆವಿನ್ಯೂ ಮಂತ್ರಿಗಳು ನಾಲ್ಕಾರು ಕಡೆ ತಾಲ್ಲೂಕು ಕಛೇರಿಗಳಿಗೆ ಭೇಟಿ ಕೊಟ್ಟು ಅಲ್ಲಿರತಕ್ಕಂತಹ ಸನ್ನಿವೇಶವನ್ನು ಅರಿತು ನಿಜವಾಗಿಯೂ MLA ಗಳ ಜನ ಪ್ರತಿನಿಧಿಗಳ ಮಾನ ಮರ್ಯಾದೆ ಉಳಿಸುವ ಕೆಲಸ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸಣ್ಣ ನೀರಾವರಿ ಇಲಾಖೆಯಲ್ಲಿಯೂ ಸಹ 22% ಹಣ ಉಪಯೋಗಿಸುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಕಳೆದ ಸಾರಿ ಒಂದಷ್ಟು ಚೆಕ್‌ಡ್ಯಾಮ್‌ಗಳನ್ನು SC/ST ಕಾಲೊನಿಗಳಲ್ಲಿ ಕೊಟ್ಟಿದ್ದೀರಿ. ಈ ಸಾರಿ ಅಲ್ಲಿ 35 ಕೋಟಿ ಹಣ ಉಪಯೋಗಿಸುವ ಹಾಗೆಯೇ ಇಲ್ಲ. ಅದೆಲ್ಲವನ್ನೂ AIDB Scheme ಗೆ convert ಮಾಡಿ ಎಂದರೆ ಕಟ್ಟೆ ಹಿಂದೆ ಹರಿಜನರ ಜಮೀನು 100 ಎಕರೆ ಇರಬೇಕು. ಇದನ್ನು ನಮ್ಮ ಹಣಕಾಸು ಇಲಾಖೆಯವರು ಸ್ವಲ್ಪ ತಿಳಿದುಕೊಳಬೇಕು. ಯೋಜನಾ ಇಲಾಖೆಯವರೂ ತಿಳಿದುಕೊಳ್ಳಬೇಕು. ಹರಿಜನರಿಗೇ ಕೊಡಬೇಕೆಂದು ಹೇಳುತ್ತೀರಿ. 100 ಎಕರೆ ಜಮೀನು ಹರಿಜನರದ್ದು ಇರುವುದಿಲ್ಲ. ಎಲ್ಲಿ ಹುಡುಕಿಕೊಂಡು ಹೋಗುವುದು? ನಮ್ಮ ಇಡೀ ಕ್ಷೇತ್ರ ಹುಡುಕಿದರೆ ಮೂರು ಜನ ಸಿಗುವುದಿಲ್ಲ. ಇಡೀ ರಾಜ್ಯದಲ್ಲಿ ಸಿಗುವುದಿಲ್ಲ. ಇದನ್ನು ದಯವಿಟ್ಟು ಈ ಹಣ ಹಿಂದೆ ಹೇಗಿತ್ತು ಹಾಗೆ SC/STಗೆ ಖರ್ಚಾಗಬೇಕು. ಬೈಫರ್ಕೇಷನ್ ಮಾಡತಕ್ಕಂತಹ ಕೆಲಸ ಆಗಬೇಕೆಂದು ಹೇಳುತ್ತೇನೆ. 22% ನಲ್ಲಿ ದಯವಿಟ್ಟು ಆರ್ಥಿಕ ಇಲಾಖೆಯವರು ಸ್ವಲ್ಪ ದಯೆಯನ್ನು ತೋರಿ ಆ ಸಮುದಾಯಕ್ಕೆ ಒಳ್ಳೆಯ ಕೆಲಸ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಕೊನೆಯದಾಗಿ, ಮಾನ್ಯ ಯಡಿಯೂರಪ್ಪನವರು ಕಳಕಳಿಯ ಭಾಷಣ ಮಾಡಿದರು. ಈ ರಾಜ್ಯದ ಹಿತದೃಷ್ಟಿಯಿಂದ 10,000 ಕೋಟಿ ರೂ.ಗಳನ್ನು ಈ

ರಾಜ್ಯಕ್ಕೆ ಬರ ಪರಿಹಾರದ ಕೊಡುಗೆಯಾಗಿ ಕೊಡಬೇಕು ಎನ್ನತಕ್ಕಂತಹ ಬಹಳ ಉತ್ತಮವಾದ ಭಾಷಣ ಮಾಡಿದರು. ಆದರೆ, ಅವರು ಮಾಡಿದಂತಹ ಭಾಷಣದ ಹಿನ್ನೆಲೆಯಲ್ಲಿ ಇವತ್ತು ನಾನು ಅವತ್ತೇ ಹೇಳಿದೆ ಬರದ ಬಗ್ಗೆ ಮಾತನಾಡುವಾಗ ಮೂರು ಜನ ಸೇರಿಕೊಂಡು ಮಾತನಾಡಿಕೊಂಡು ಬಂದು ಅನೌನ್ಸ್ ಮಾಡಿದ್ದಾರೆ ಎಂದು, ಅದು ಒಂದಾಯಿತು. ಭಾಗ್ಯಲಕ್ಷ್ಮೀ ಬಾಂಡ್‌ಗಳು ಹಿಂದೆ ಇರಲಿಲ್ಲವಾ? ಅದು ಸರ್ಕಾರದ ಬಜೆಟ್‌ನಲ್ಲಿ ಇರಲಿಲ್ಲವಾ? ಯೋಜನೆಗಳು ಆಗಿರಲಿಲ್ಲವಾ? ಅವುಗಳಿಗೆ ವಿಶೇಷವಾದ ಹಣ ಎಲ್ಲಿ ಕೊಟ್ಟರು? ಆ ಬಾಂಡ್‌ಗಳಿಗೆ ಉಳಿದಂತಹ ಬಾಕಿ ಕೊಡುತ್ತೇವೆ ಎಂದರೆ, ಅದು ಬರಪರಿಹಾರಕ್ಕೆ ಕೊಟ್ಟಿದ್ದಾರಾ? ನಿಮ್ಮ ಕಮಿಟ್‌ಮೆಂಟ್ ಅದು. ಸರ್ಕಾರದ ಕಮಿಟ್ಮೆಂಟ್ ಪೂರೈಸುವುದಕ್ಕೆ ನಾವು 10,000 ಪುಕ್ಕಟೆಯಾಗಿ ಕೊಡುತ್ತೇವೆಂದು ಹೇಳಿ ಪುಕ್ಕಟೆ ಪ್ರಚಾರ ತೆಗೆದುಕೊಳ್ಳುತ್ತೀರಾ? ಅದರ ಜೊತೆ ಇನ್ನೊಂದು ಹೇಳಿದರು. ವೃದಾಪ್ಯ ವೇತನವು ಸರ್ಕಾರದ ಕಮಿಟ್‌ಮೆಂಟ್. ಇನ್ನೊಂದು ಆರು ತಿಂಗಳು ನೀವು ಕೊಡದೆ ಮುಂದಿನ ಸಾರಿ ಚುನಾವಣೆಗೆ ಹೋಗಿ, ಅದರ ಹಣೆ ಬರಹ ಏನೆಂದು ಗೊತ್ತಾಗುತ್ತದೆ. ಕುಂಟರು, ಕುರುಡರು, ಇವರು ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಬಹಳ ಹಿಂದಿದ್ದಾರೆ. ಯೋಚನೆ ಮಾಡುವುದಾದರೆ ಅವರ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ. ಅವರದ್ದೆಲ್ಲಾ ನೀವು ನಿಲ್ಲಿಸಿಕೊಂಡು ಕೂತಿದ್ದೀರಿ. ಅವೆಲ್ಲಾ ಕೊಡದೆ ನೀವು ಮುಂದೆ ಚುನಾವಣೆಗೆ ಹೋಗಿ ಗೊತ್ತಾಗುತ್ತದೆ. ಬರ ಪರಿಹಾರಕ್ಕೋಸ್ಕರ ಇಟ್ಟಿರುವ 10,000 ವಿಶೇಷ ಪ್ಯಾಕೇಜ್‌ನಲ್ಲಿ ಕೊಡುತ್ತೇವೆಂದರೆ ಹೇಗೆ? ಕೆರೆಗಳಿಗೆ ಹೂಳೆತಕ್ಕಂತಹ ಕಾರ್ಯಕ್ರಮ, ಅದು ಮೊದಲೇ ಇದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಅವತ್ತು ಒಂದೊಂದು ಕ್ಷೇತ್ರಕ್ಕೆ ಐದೈದು ಕೋಟಿ ಕೊಟ್ಟಿದ್ದರು ಇಲ್ಲವೆಂದು ಹೇಳುವುದಿಲ್ಲ ಅದರಿಂದ ಒಳ್ಳೆಯ ಕೆಲಸಗಳು ಆಗಿವೆ. ಆದರೆ ಆ ಕೆಲಸದ ಬಾಕಿ ತೀರಿಸುತ್ತೇವೆಂದು ಹೇಳಿದರೇ ಹೊರತು ನೀವು ವಿಶೇಷವಾಗಿ 2,000 ಕೋಟಿ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಲ್ಲ ಅದನ್ನು ಕೊಡುತ್ತೀರ ಈಗ? ಬಾಕಿ ತೀರಿಸುವುದು ನಿಮ್ಮ ಕಮಿಟ್‌ಮೆಂಟ್ ಅದು. 2,000 ಕೋಟಿ ರೂ. ಕೊಡಬೇಕೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರೆ ನೀವು ಬಾಕಿ ತೀರಿಸುತ್ತೇವೆಂದು ಹೇಳುತ್ತೀರಿ. ಇದು ನಿಮ್ಮ ಕಮಿಟ್‌ಮೆಂಟ್ ಅಲ್ಲವಾ? ಈ ಕಮಿಟ್‌ಮೆಂಟ್ ತೀರಿಸುವುದನ್ನು ನೀವು ವಿಶೇಷ ಯೋಜನೆ ಎಂದು ಪರಿಗಣಿಸಿ

ಕರ್ನಾಟಕ ರಾಜ್ಯದ ಜನತೆಗೆ ನೀವು ತಪ್ಪು ಸಂದೇಶ ಕೊಡಬಾರದು. ದಯವಿಟ್ಟು ಈ ತರಹ ಮಾಡಬಾರದು ಎನ್ನತಕ್ಕಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಸುವರ್ಣ ಭೂಮಿ ಬಗ್ಗೆ ಹೇಳಿದಿರಿ. ಏನು ಇವತ್ತು ಲಾಟರಿ ಹಾಕಿದ್ದೀರಿ ಆ ಲಾಟರಿಯಿಂದ ಉಳಿದಿರುವ ಜನರಿಗೆಲ್ಲಾ 30 ಲಕ್ಷ ಜನರಿಗೆ ಸೈಟು ಕೊಡುತ್ತೇವೆಂದು ಹೇಳಿದಿರಿ. ಅದು ಏನಾಯಿತು? ಅನೌನ್ಸ್ ಮಾಡಿದ್ದೀರಾ? ಅನೌನ್ಸ್ ಮಾಡುತ್ತೀರಾ? ಅದನ್ನೂ ಕೇಳುತ್ತೇನೆ. ಸಾಲ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಅದರಲ್ಲಿ ಕೆಲವೊಂದು ತರ್ಕದ ಮಾತುಗಳಿವೆ. ಅದನ್ನು ಯಾವ ರೀತಿ ಮಾಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಲಿ. ಅದರ ಜೊತೆಯಲ್ಲಿ ಒಂದೇ ಒಂದು ವಿಚಾರ ಯಾವ ಮೂಲದಿಂದ ಅದನ್ನು ಭರಿಸುತ್ತೀರಿ ಎಂದು statement ಅನ್ನು ಈ ಸದನದ ಸದಸ್ಯರಿಗೆ ಕೊಡಬೇಕಾದುದು ನಿಮ್ಮ ಕರ್ತವ್ಯ. ಎಲ್ಲಿಂದ ಭರಿಸುತ್ತೀರಿ, ಇವತ್ತು ಮುಖ್ಯ ಬಜೆಟ್‌ನಲ್ಲಿ ಇಲ್ಲ. ನಿಮಗೆ ಪೂರಕ ಬಜೆಟ್ ಇದೆ. ಆದರೆ ಈ ಮಧ್ಯದಲ್ಲಿ 3,500 ಕೋಟಿ ರೂ.ಗಳನ್ನು ಕರ್ನಾಟಕ ರಾಜ್ಯದ ರೈತರಿಗೆ ಕೊಡುತ್ತೀರಿ. ನಾವು ಸ್ವಾಗತ ಮಾಡುತ್ತೇವೆ. ಆದರೆ ಹಣದ ಮೂಲ ಯಾವುದು? ವಿಶೇಷವಾಗಿ ಏನಾದರೂ ತೆರಿಗೆ ವಿಧಿಸುತ್ತೀರಾ? ಯಾವ ಮೂಲದಿಂದ ನೀವು ಅದನ್ನು ಖರ್ಚು ಮಾಡುತ್ತೀರಿ? ಬರೀ ಅನೌನ್ಸ್ ಮಾಡುವುದು ಮುಖ್ಯವಲ್ಲ. ಆ ಸ್ಟೇಟ್‌ಮೆಂಟ್‌ಅನ್ನು ದಯಮಾಡಿ ಈ ಸದನದ ಸದಸ್ಯರಿಗೆ ಕೊಡಬೇಕು, ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : – ನಾನು ಈಗ ಬೇರೆಯವರನ್ನು ಕರೆಯುತ್ತೇನೆ ಅಷ್ಟೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : – ಮಾನ್ಯ ಅಧ್ಯಕ್ಷರೆ, ನಾನು ಎಲ್ಲರ ರೀತಿ ಮಾಡುವುದಿಲ್ಲ. ತಾವು ಮಾತನ್ನು ಮುಗಿಸಿ ಎಂದು ಹೇಳುತ್ತಿದ್ದೀರಿ. ನನ್ನ ಮಾತನ್ನು ಮುಗಿಸುತ್ತಿದ್ದೇನೆ. ನೀವು ನನಗೆ ಮಾತನಾಡಲು ಒಂದು ಗಂಟೆ ಕಾಲಾವಕಾಶ ಕೊಟ್ಟಿದ್ದೀರಿ. ಇನ್ನೂ ಸ್ವಲ್ಪ time ಇದೆ.

ಅಧ್ಯಕ್ಷರು : – ಒಂದು ಗಂಟೆ ಅಲ್ಲ. 1.15 ಗಂಟೆ ಆಯಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ : – ಎಲ್ಲಾ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಏನಾದರೂ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಎನ್ನುವುದನ್ನು ನಿಜವಾಗಿಯೂ ಸ್ವಾರಸ್ಯಪೂರಕವಾಗಿ ಮಾಬೇಕೆಂದರೆ 5

ಗಂಟೆ time ಬೇಕಾಗುತ್ತದೆ. ತಾವು ಕಾಲಾವಕಾಶ ಕೊಡುವುದಿಲ್ಲ. ನಾವು ಮಾತನಾಡುವುದಕ್ಕಾಗುವುದಿಲ್ಲ. ಅದನ್ನು ನೋಡೋಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ. ಇವತ್ತು ಎಷ್ಟೆಲ್ಲಾ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದು ಇವೆಲ್ಲಾ ಮಾಡಿಕೊಡುತ್ತೀರಿ ಎನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸರ್ಕಾರಕ್ಕೆ ನನ್ನ ಒತ್ತಾಯವನ್ನು ಸಲ್ಲಿಸಿ, ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : – ಮಾನ್ಯ ಹೆಚ್.ಕೆ.ಕುಮಾರಸ್ವಾಮಿಯವರು ಮಾತನಾಡುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : – ಮಾನ್ಯ ಅಧ್ಯಕ್ಷರೆ, ತಾವು ಬೇಡಿಕೆಗಳ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ಈಗಾಗಲೇ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಪ್ರಕಟ ಮಾಡಿದೆ. ಯಾವುದೇ ಸರ್ಕಾರ ಇರಲಿ, ಕಾರ್ಯಕ್ರಮಗಳನ್ನು ಪ್ರಕಟಣೆ ಮಾಡುತ್ತದೆ. ಮಾಡಿದ ನಂತರ, ಆ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಜಾರಿಯದವು, ಜನರಿಗೆ ತಲುಪಿವೆಯೋ ಇಲ್ಲವೋ ಎನ್ನುವುದನ್ನು ನಾವು ವಿಮರ್ಶೆ ಮಾಡಬೇಕಾಗುತ್ತದೆ. ಆ ವಿಮರ್ಶೆ ಮಾಡುವಾಗ, ನಾವು ಹಾಕಿಕೊಳ್ಳುವಂತಹ ಕಾರ್ಯಕ್ರಮಗಳು, ಯೋಜನೆಗಳು, ಯಾವಾಗ, ಯಾವ ಹಂತದಲ್ಲಿ ಜನರಿಗೆ ತಲುಪುತ್ತದೆ ಎನ್ನುವುದನ್ನೂ ನೋಡಬೇಕು. ಅದಕ್ಕಾಗಿ ನಮ್ಮಲ್ಲಿ ಎಷ್ಟರಮಟ್ಟಿಗೆ ಸಿಬ್ಬಂದಿ ಇದ್ದಾರೆ, ಆ ಸಿಬ್ಬಂದಿ ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಕಾಲಮಿತಿಯೊಳಗೆ ಕೆಲಸಗಳು ಆಗುತ್ತಿದೆಯೋ ಇಲ್ಲವೋ, ತ್ವರಿತವಾಗಿ ಕೆಲಸಗಳು ಆಗುತ್ತಿದೆಯೇ ಇಲ್ಲವೋ ಎನ್ನುವುದನ್ನೂ ನೋಡಬೇಕು. ಇದು ಆಗದೇ ಇದ್ದರೆ, ಸರ್ಕಾರಗಳು ಎಷ್ಟೇ ಯೋಜನೆಗಳನ್ನು ಹಾಕಿಕೊಂಡರೂ ಕೂಡ ಅದು ಫಲಪ್ರದವಾಗುವುದಿಲ್ಲ. ವಿಫಲವಾಗುತ್ತವೆ. ಜನಸಾಮಾನ್ಯರು ಬೇಸರವಾಗುತ್ತಾರೆ. ಅದಕ್ಕಾಗಿಯೇ ಬಹುಶ: ಹಾರ್ನಳ್ಳಿ ರಾಮಸ್ವಾಮಿಯವರ ನೇತೃತ್ವದಲ್ಲಿ ಹಿಂದೆ ಒಂದು ಆಡಳಿತ ಸುಧಾರಣಾ ಆಯೋಗ ರಚಿಸಿದರು. ಅವರು ಆಯೋಗದಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದರು. ಅದೇನೆಂದರೆ, ಎಲ್ಲಾ ಇಲಾಖೆಗಳಿಗಿಂತ ಅದರಲ್ಲೂ ಕೂಡ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಕಂದಾಯ

ಇಲಾಖೆ ಮೊದಲು ಸುಧಾರಣೆ ಆಗಬೇಕು. ಆ ಇಲಾಖೆಗಳ ಮೂಲಕ ಆಡಳಿತ ಬರಬೇಕು ಎನ್ನತಕ್ಕಂಥ ಶಿಫಾರಸ್ಸು ಮಾಡಿದರು. ಅದರ ಪ್ರಕಾರ ನನಗೆ ಗೊತ್ತಿರುವ ಹಾಗೆ, ಈಗ ಏನು ಕಂದಾಯ ಇಲಾಖೆಯಲ್ಲಿ 5-tier system ಇದೆ, ಐದು ಹಂತದ ಆಡಳಿತ ಇದೆ. ಒಂದು ತಹಶೀಲ್ದಾರ್ ಹಂತ, ಉಪ ವಿಭಾಗಾಧಿಕರಿಗಳು, ಒಂದು ಡಿ.ಸಿ. ನಂತರ ಡಿ.ವಿ.ಸಿ.ಯವರು ಮತ್ತೊಂದು Government ಅವರು ಇದನ್ನೆಲ್ಲಾ ತೆಗೆದು ಮೂರು ಹಂತದ ಆಡಳಿತ ಇರಲಿ ಎಂದು ಶಿಫಾರಸ್ಸು ಮಾಡಿದರು. ಒಂದು Assistant Commissioner, ಒಂದು D.C.ಯವರು, ಮತ್ತೊಂದು ಸರ್ಕಾರ. ಬಹುಶ: ಇದು ಅತ್ಯುತ್ತಮವಾದಂತಹ ಸೂಕ್ತ ಶೀಫಾರಸ್ಸು ಎಂದು ನಾನು ಭಾವಿಸಿದ್ದೇನೆ. ಮಾನ್ಯ ಬಂಗಾರಪ್ಪನವರು ಇದನ್ನು ಮಾಡುತ್ತೇನೆ ಎಂದು ಅವರು ಹಿಂದೆ ತೀರ್ಮಾನ ಮಾಡಿದ್ದರು. ಆದರೆ ಅನೇಕ ಕಾರಣಗಳಿಗಾಗಿ, ನೌಕರರ ಒತ್ತಡಕ್ಕೆ, ಬೇರೆ ಬೇರೆ ರಾಜಕೀಯ ಒತ್ತಡಕ್ಕೆ ಅದು ನಿಂತಿತ್ತು ಎಂದು ನಾನು ಭಾವಿಸುತ್ತೇನೆ. ಸರ್ಕಾರ ದಕ್ಷವಾದ ಆಡಳಿತ ಕೊಡಬೇಕು ಎನ್ನುವ ಹಾಗೆ ಇದ್ದರೆ, ಈ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕು. ಎಲ್ಲಿಯವರೆಗೆ ನಾವು ಆಡಳಿತದಲ್ಲಿ ಹಂತಗಳನ್ನು ಹೆಚ್ಚು ಮಾಡುತ್ತಿರುತ್ತೇವೆ ಅಲ್ಲಿಯವರೆಗೆ ಜನಸಾಮಾನ್ಯರ ಕೆಲಸಗಳು ಆಗುವುದಿಲ್ಲ. ಇವತ್ತು ಕಛೇರಿಗಳಲ್ಲಿ ಏನಾಗುತ್ತಿದೆ ಎಂದರೆ, ಯಾವುದಾದರೂ ಒಂದು ಪೇಪರ್ ಹೋದರೆ, ಆ ಪೇಪರ್ ಸುತ್ತಿ ಬರುವಷ್ಟರೊಳಗೆ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು time ತೆಗೆದುಕೊಳ್ಳುತ್ತದೆ. ಅಂದರೆ ಇಲ್ಲಿ ಹಂತಗಳನ್ನು ಕಡಿಮೆಮಾಡಬೇಕು. ಗುಮಾಸ್ತರಿಗೆ ಹೋಗಬೇಕು, Section Officer, Under Secretary, Deputy Secretary, Additional Secretary, Joint Secretary, Secretary, Princial Secretary, ಹೀಗೆ 7–8 ಹಂತಗಳಾದವು. ಎಲ್ಲರೂ ಮಾಡತಕ್ಕಂಥದ್ದು ಅದೇ ಕೆಲಸ ಒಂದು initialಗೆ ಹೋಗಿ ಆಡಳಿತದಿಂದ ವಾಪಾಸ್ಸು ಬರಬೇಕಾದರೆ ಸುಮಾರು 3–4 ತಿಂಗಳಾಗುತ್ತದೆ. ಜನಸಾಮಾನ್ಯರು ಕಛೇರಿಯಲ್ಲಿ ಎಷ್ಟು ಸುತ್ತಬೇಕಾಗುತ್ತದೆ? ಆ ದೃಷ್ಠಿಯಲ್ಲಿ ಸರ್ಕಾರ ಇವತ್ತು ಈ ಹಂತಗಳನ್ನೆಲ್ಲಾ ಕಡಿಮೆ ಮಾಡಬೇಕು. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ

ವರದಿಯನ್ನು ಒಪ್ಪಿಕೊಂಡು ಇದನ್ನು ಮಾಡಿ. ಅದರಲ್ಲೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಕೆಳ ಹಂತದ ಆಡಳಿತ, ಇವತ್ತು ತಹಶೀಲ್ದಾರರ ಬದಲಿಗೆ A,C ಯವರನ್ನು, D.C.ಯವರು ಆದ ಮೇಲೆ ಸರ್ಕಾರ ಸಾಕು. D.V.C ಯವರಿಗೆ ಏನು ಕೆಲಸವಿದೆ? Regional Commissioner post office ಕೆಲಸ ಮಾಡುತ್ತಿದ್ದಾರೆ. ಏನು ಮಾಡುತ್ತಿದ್ದಾರೆ? ಅವರಿಗೆ ಏನು ಕೆಲಸವಿದೆ? ನೀವು ಏಕೆ Regional Commissioner Office ಅನ್ನು ಇಟ್ಟಿದ್ದೀರಿ? ಉನ್ನತ ಅಧಿಕಾರಿಗಳು ನೀವು ಸರ್ಕಾರಕ್ಕೆ ಎಲ್ಲಾ suggestion ಮಾಡುತ್ತೀರಿ, ಈ ಸಲಹೆಯನ್ನು ಏಕೆ ಕೊಡುವುದಿಲ್ಲ? ಇವತ್ತು ತಹಶೀಲ್ದಾರ್ post ಅಥವಾ Assistant Commissioner post ಕೆಳ ಭಾಗದಲ್ಲಿ ಅವರಿಗೆ ಇಂತಿಂಥ ಕೆಲಸ ಎಂದು ನಿಗದಿ ಮಾಡಿ ಆಡಳಿತ ಕೊಟ್ಟರೆ ಅವರು ಸ್ವತಂತ್ರವಾಗಿ ಮಾಡುತ್ತಾರೆ. ತಹಶೀಲ್ದಾರರಿಂದ appellate A.C., ಗೆ ಹೋಗಬೇಕು. A.C. ಯವರಿಂದ D.C ಯವರಿಗೆ ಬರಬೇಕು. D.C.ಯವರಿಂದ D.V.C.ಯವರಿಗೆ ಬರಬೇಕು ಮತ್ತೆ ಅವರಿಂದ Government ಗೆ ಬರಬೇಕು. ಯಾವ ಪುರುಷಾರ್ಥಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದೀರಿ? ಆ ದೃಷ್ಟಿಯಿಂದ ಸರ್ಕಾರಕ್ಕೆ ಆಡಳಿತ ಸುಧಾರಣೆಯನ್ನು ಮಾಡಬೇಕೆಂದು ಹೇಳಿ, ಇವತ್ತು ನಾವು ಮಾಡತಕ್ಕಂಥ ಕೆಲಸಗಳು, ಅದರಲ್ಲೂ ಕೂಡ ಇವತ್ತು ಯಾವುದೇ ಒಂದು ಗುರಿ ಮುಟ್ಟಬೇಕಾದರೆ, ಸರ್ಕಾರ ಭೌತಿಕ ಗುರಿಗಳನ್ನು ಹಾಕಿಕೊಳ್ಳುತ್ತದೆ. ನಂತರ ಆರ್ಥಿಕ ಗುರಿಯನ್ನು ಹಾಕಿಕೊಳ್ಳುತ್ತದೆ. ಆದರೆ ಇವತ್ತು ನಾವು ಎಷ್ಟು ಹಣವನ್ನು ನಿಗದಿ ಮಾಡಿದ್ದೇವೆ ಎನ್ನುವುದು ಮುಖ್ಯವಲ್ಲ. ನಿಗದಿಯಾದಂತಹ ಹಣ ಎಷ್ಟು ಬಿಡುಗಡೆಯಾಯಿತು? ಬಿಡುಗಡೆಯಾದಂತಹ ಹಣ ಎಷ್ಟು ವೆಚ್ಚ ಆಯಿತು? ವೆಚ್ಚವಾದಂತಹ ಹಣದಲ್ಲಿ ಎಷ್ಟರಮಟ್ಟಿಗೆ ಆ ವ್ಯಕ್ತಿಯ, ಫಲಾನುಭವಿಗೆ ಅವನ ಆರ್ಥಿಕ ಮಟ್ಟ ಹೆಚ್ಚಾಯಿತು? ಈಗ ತಾವು 1 ಲಕ್ಷ 2 ಸಾವಿರ ಕೋಟಿ ರೂಪಾಯಿ ಬಜೆಟ್ ಅನ್ನು ಮಂಡಿಸಿದ್ದೀರಿ. ಆದರೆ 1 ಲಕ್ಷ 2 ಸಾವಿರ ಕೋಟಿ ರೂಪಾಯಿ ಹಣ ಈ ವರ್ಷದಲ್ಲಿ ನಿಗದಿಯಾಗಿದ್ದು ಬಿಡುಗಡೆ ಮಾಡದೇ ಇದ್ದರೆ, ಖರ್ಚು ಮಾಡದೇ ಇದ್ದರೆ, ಫಲಾನುಭವಿಗಳಿಗೆ ಅದು ತಲುಪದೇ ಇದ್ದರೆ, ನಾವೇಕೆ ಲಕ್ಷ ಕೋಟಿ ರೂಪಾಯಿ ಎಂದು ಹೇಳಬೇಕು?

ಪ್ರಚಾರಕ್ಕೆ, ಮಾಧ್ಯಮಗಳಲ್ಲಿ ಕರ್ನಾಟಕ ಸರ್ಕಾರ ಇಷ್ಟು ಮಾಡಿದೆ ಎಂದು ಹೆಗ್ಗಳಿಕೆ ಬರುವ ದೃಷ್ಟಿಯಲ್ಲಿ ಮಾಡತಕ್ಕಂಥ ಅಗತ್ಯ ಇದೆಯೇ? ಆ ದೃಷ್ಟಿಯಿಂದ ಇವತ್ತು ಶ್ರೀಸಾಮಾನ್ಯನ ಆರ್ಥಿಕ ಮಟ್ಟ ಹೆಚ್ಚಾಗಬೇಕಾದರೆ, ನಾವು ಖರ್ಚು ಮಾಡಿದಂತಹ ಹಣ ಅವರಿಗೆ ತಲುಪಬೇಕು. ಆ ನಿಟ್ಟಿನಲ್ಲಿ per-capita income ಅವನಿಗೆ ಎಷ್ಟು ತಲುಪುತ್ತದೆ ಎನ್ನುವುದೂ ಕೂಡ ಇವತ್ತು ಗಮನಿಸಬೇಕಾಗುತ್ತದೆ.

ಇನ್ನು ಕಂದಾಯ ಇಲಾಖೆಯಲ್ಲಿ 'ಆರಾಧನಾ' ಎಂಬ ಯೋಜನೆ ಇದೆ. ನಾವು ಶಾಸಕರಾದ ಹೊಸ ವರ್ಷದಲ್ಲಿ 2008–09 ರಲ್ಲಿ ಮೊದಲ ವರ್ಷದಲ್ಲಿ ಏಳೂವರೆ ಲಕ್ಷ ಹಣ ಕೊಟ್ಟಿದ್ದರು. ಅದಾದನಂತರ, ಇಲ್ಲಿವರೆಗೂ ಹಣ ಬಿಡುಗಡೆಯಾಗಿಲ್ಲ. 1 ಲಕ್ಷ, ಒಂದೂವರೆ ಲಕ್ಷ, 60,000, 70,000 ರೂಪಾಯಿ ಬಿಡುಗಡೆಯಾಗಿದೆ. ಇವತ್ತು ತಮಗೆ ಗೊತ್ತು ಪ್ರತಿ ಹಳ್ಳಿಗಳಲ್ಲಿ ಖಾಸಗಿ ದೇವಾಲಯಗಳಿವೆ. ಒಂದೊಂದು ಹಳ್ಳಿಯಲ್ಲಿ 4–5 ದೇವಾಲಯ, ಜಾತಿಗೊಂದು, ಉಪಪಂಗಡಕ್ಕೊಂದು, ಗ್ರಾಮಕ್ಕೆ ಹತ್ತು, ಈ ರೀತಿಯ ದೇವಾಸ್ಥಾನಗಳನ್ನು ಇವತ್ತು ನಾವು ನೋಡುತ್ತೇವೆ. ಆ ದೃಷ್ಟಿಯಿಂದ ಸರ್ಕಾರ ಇವತ್ತು ಏನು 'ಆರಾಧನಾ' ಯೋಜನೆಗೆ ಹಣ ಬಿಡುಗಡೆ ಮಾಡುತ್ತಿದೆ, ಅದು ಎಳ್ಳಷ್ಟೂ ಕೂಡ ಸಾಲದು ಎನ್ನುವ ಮಾತನ್ನು ಹೇಳಿ, ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಜೊತೆಗೆ ಇವತ್ತು ಆರೋಗ್ಯ ಇಲಾಖೆ, ಆರೋಗ್ಯ ಇಲಾಖೆಯಲ್ಲಿ ತಾವು ನೋಡಿದ್ದೀರಿ, ಅದು ಆರೋಗ್ಯ ಇಲಾಖೆ ಇರಬಹುದು, ಶಿಕ್ಷಣ ಇಲಾಖೆ ಇರಬಹುದು, ಪಶು ಸಂಗೋಪನಾ ಇಲಾಖೆ ಇರಬಹುದು, ತೋಟಗಾರಿಕೆ ಇಲಾಖೆ ಇರಬಹುದು, ರೇಷ್ಮೆ ಇಲಾಖೆ ಇರಬಹುದು, ಸಮಾಜ ಕಲ್ಯಾಣ ಇಲಾಖೆ ಇರಬಹುದು, ಅದರಲ್ಲೂ ಕೂಡ ಜನ ಸಾಮಾನ್ಯರನ್ನು ತಲುಪತಕ್ಕಂಥ ಈ ಇಲಾಖೆಗಳಲ್ಲಿ ಶೇ.50–70 ಭಾಗ ಸಿಬ್ಬಂದಿಯ ಕೊರತೆ ಇದೆ. ಸರ್ಕಾರ ಇವತ್ತು ಏಕೆ ಸಿಬ್ಬಂದಿಗಳನ್ನು ತುಂಬುತ್ತಿಲ್ಲ? ಕೇಳಿದರೆ ಸಾರ್, ಇವತ್ತು computer ಬಂದಿದೆ. computer work ಮಾಡುತ್ತಿದೆ. computer ಇರುವುದರಿಂದ ಹೆಚ್ಚು ಸಿಬ್ಬಂದಿ ಬೇಕಾಗಿಲ್ಲ ಎನ್ನುವ ಮಾತನ್ನು ನೀವು

ಹೇಳುತ್ತೀರಿ. ಹಿಂದೆ ಕಾರ್ಯಕ್ರಮಗಳು ಕಡಿಮೆ ಇದ್ದವು. ಇವತ್ತು ಆಯಾಯ ಪಕ್ಷದ ಸರ್ಕಾರ ಬಂದಾಗ ತಮ್ಮ ಸರ್ಕಾರದ ಹೆಸರನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ಅದರ ಪ್ರಖ್ಯಾತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಇಲ್ಲದ್ದೆಲ್ಲಾ scheme ಹೆಸರಿಡುತ್ತೀರಿ, ಆದರೆ ಅವುಗಳಿಗೆ ತಕ್ಕಂತೆ ಜಾರಿ ಮಾಡಲು ಸಿಬ್ಬಂದಿಯನ್ನು ಎಲ್ಲಿ ಕೊಟ್ಟಿದ್ದೀರಿ? ಇವತ್ತು ಇನ್ನೂ ಕೂಡ ಶಾಲಾ ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲ. ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲ. ಮೊನ್ನೆ ಏನು ತಾವು KPSC ಯಲ್ಲಿ 600 ಚಿಲ್ಲರೆ ತಜ್ಞವೈದ್ಯರುಗಳನ್ನು ಕರೆದಿದ್ದೀರಿ, ಅದರಲ್ಲಿ ಅರ್ಜಿ ಹಾಕಿರುವಂಥವರು 275 ಜನ. ಆಯ್ಕೆ ನೇಮಕಾತಿ ಆದೇಶ ಕೊಟ್ಟರೆ ಬಂದಿರತಕ್ಕಂಥವರು 170 ಜನ. ಹೀಗೆ ನಮ್ಮ process ನಡೆಯುವಾಗ, ಯಾವ ರೀತಿಯಲ್ಲಿ ನೀವು ಶ್ರೀಸಾಮಾನ್ಯನಿಗೆ ಆರೋಗ್ಯ ಸೇವೆಯನ್ನು ಕೊಡುತ್ತೀರಿ? ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ನೀವು ಈ ವೈದ್ಯರನ್ನು ಕೊಟ್ಟರೆ ಯಾರೂ ಕೂಡ ಇವತ್ತು ಬೆಂಗಳೂರಿನ ಕಡೆಬರುವುದಿಲ್ಲ. ಇವತ್ತು Ambulance ಗಳು ಪ್ರತಿ ರೋಡ್‌ನಲ್ಲಿ ಎಷ್ಟು ಶಬ್ದ ಮಾಡಿಕೊಂಡು ಎಷ್ಟು ಆಸ್ಪತ್ರೆಗೆ ಬರುತ್ತಿರುತ್ತಾರೆ ಎನ್ನುವುದನ್ನು ತಾವು ನೋಡಿರುತ್ತೀರಿ. ಉನ್ನತ ವ್ಯಾಸಂಗ ಮಾಡಿರತಕ್ಕಂಥವರನ್ನು, ಪರಿಣಿತ ವೈದ್ಯರನ್ನು ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಕರೆದಾಗ, ಇವೆಲ್ಲವೂ ಕೂಡ ಕಡಿಮೆಯಾಗುತ್ತದೆ. ಆರೋಗ್ಯ ಇಲಾಖೆಯಲ್ಲಿ ಏನು ತಪ್ಪಾಗಿದೆ ಎಂದರೆ, ಮೊದಲು ನಿಯೋಜನೆ ಇತ್ತು. ನರ್ಸ್‌ಗಳನ್ನು ಮತ್ತು ಡಾಕ್ಟರ್‌ಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜನೆ ಮಾಡುತ್ತಿದ್ದರು, ಇವತ್ತು ಆ ನಿಯೋಜನೆ ಆದೇಶವನ್ನು ತಾವು ವಾಪಾಸ್ಸು ತೆಗೆದುಕೊಂಡಿದ್ದೀರಿ. ವಾಪಾಸ್ಸು ತೆಗೆದುಕೊಂಡಿತರತಕ್ಕಂಥ ಪರಿಣಾಮ ಇವತ್ತು DHO ಇರಬಹುದು, ಸ್ಥಳೀಯ DS ಇರಬಹುದು, ಯಾರೂ ಕೂಡ ವೈದ್ಯರನ್ನು deputation ಮಾಡುವುದಕ್ಕಾಗುತ್ತಿಲ್ಲ. ಸರ್ಕಾರ ಮೊಟ್ಟಮೊದಲನೆಯದಾಗಿ ಈ ಆದೇಶವನ್ನು ವಾಪಾಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಜೊತೆಗೆ ಮಾನ್ಯ ಸುರೇಶ್ ಕುಮಾರ್‌ರವರು ಒಂದು ಹೇಳಿಕೆ ಕೊಟ್ಟಿರುವುದನ್ನು ನೋಡಿದೆ. ನಮಗೆ ಅಬಕಾರಿ ಇಲಾಖೆಯಿಂದ ಈ ವರ್ಷ 10 ಸಾವಿರ ಕೋಟಿ ರೂಪಾಯಿ

ಆದಾಯ ಬಂದಿದೆ ಎಂದು ಹೇಳಿದರು. ಅದೇ ಆರೋಗ್ಯ ಇಲಾಖೆಗೆ ನಾವು 22,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೇವೆಂದು ಅವರೇ ಒಂದು ಕಾರ್ಯಕ್ರಮದಲ್ಲಿ ಭಾಷಣ ಮಾಡುವಾಗ ಹೇಳಿದ್ದರು. ಬಹುಶ:ಇದು ಎಂತಹ ವಿಪರ್ಯಾಸವೆಂದರೆ ಆದಾಯವು 10,000 ಕೋಟಿ ರೂಪಾಯಿಗಳು, ಆರೋಗ್ಯಕ್ಕೆ ಮಾಡುತ್ತಿರುವುದು 25,000 ಕೋಟಿ ರೂಪಾಯಿಗಳು, ಮಾನ್ಯ ಶಿವಲಿಂಗೇಗೌಡರು ಹೇಳಿದ ಹಾಗೆ ಇವತ್ತು ಹಳ್ಳಿಹಳ್ಳಿಗಳಲ್ಲಿ ಸ್ತ್ರೀ ಶಕ್ತಿ ಸಂಘಗಳು ಮತ್ತು ಯುವಕರು ಜಾಗೃತರಾಗಿದ್ದಾರೆ. ಇವತ್ತು ಎಲ್ಲೂ ಕೂಡ ಮದ್ಯಪಾನ ಇರಬಾರದು ಮತ್ತು ನಿಷೇಧವಾಗಬೇಕೆನ್ನುವಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಇವತ್ತು ನಾವು ಷರಾಬಿಗೆ 10 ರೂಪಾಯಿ ಕೊಡುತ್ತಿದ್ದು ಇವತ್ತು ಅದು 50–60 ರೂಪಾಯಿಗಳಾಗಿದೆ. ಇವತ್ತು ಹಳ್ಳಿಹಳ್ಳಿಗಳಲ್ಲಿ ಮದ್ಯವನ್ನು ಮ್ತಾರಾಟ ಮಾಡುವಂತಹ ಸ್ಥಿತಿ ಬಂದಿದೆ. ಅದಕ್ಕಾಗಿ ಇಲ್ಲಿ ನನ್ನ ಒತ್ತಾಯವೆಂದರೆ ಜನರ ಆರೋಗ್ಯವು ಸರಿಯಾಗಬೇಕಾದರೆ ಸರ್ಕಾರವು ಇವತ್ತು ಅಬ್ಕಾರಿ ಇಲಾಖೆಯಿಂದ ಮಾತ್ರ ಸರ್ಕಾರವನ್ನು ನಡೆಸುತ್ತಿದ್ದೇವೆನ್ನುವಂತಹ ಭಾವನೆಯು ಬರಬಾರದು. ಆ ದೃಷ್ಟಿಯಿಂದ ಇವತ್ತು ಕರ್ನಾಟಕದಲ್ಲಿ ಮಾದರಿಯಾಗಿ ಇಡೀ ದೇಶದಲ್ಲಿ ಮೊಟ್ಟಮೊದಲನೆಯ ಬಾರಿಗೆ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ನಾನು ಈ ನಿಟ್ಟಿನಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದೇ ರೀತಿಯಾಗಿ ನಮ್ಮ ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೇಳಬೇಕೆಂದರೆ ನಾನು ನಿನ್ನೆ ದಿನ ಕನ್ನಡಪ್ರಭ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಅನ್ನು ಓದಿದೆ. "ಶೌಚಾಲಯಕ್ಕಿಂತ ಮೊಬೈಲ್ ಹೊಂದಿರುವವರೆ ಹೆಚ್ಚು" "ಜನಗಣತಿಯ ಸಮೀಕ್ಷೆ ಪ್ರಕಾರ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಶೇಕಡ 51.2% ಮನೆಗಳಲ್ಲಿ ಮಾತ್ರ ಶೌಚಾಲಯದ ವ್ಯವಸ್ಥೆಯನ್ನು ಹೊಂದಿದೆ. ನಗರ ಪ್ರದೇಶದಲ್ಲಿ 84.9% ಮನೆಗಳಲ್ಲಿ ಶೌಚಾಲಯಗಳು ಇವೆ. ಕೇಂದ್ರ ಸರ್ಕಾರವು ಮೊನ್ನೆ ಒಂದು ಯೋಜನೆಯನ್ನು announce ಮಾಡಿದೆ. ಅದರಿಂದ ತುಂಬಾ ಖುಷಿಯಾಗಿದೆ. ಪ್ರತಿ ಮನೆಯಲ್ಲಿ ಯಾರು ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ ಅವರಿಗೆ ನಾವು 10,000 ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತೇವೆನ್ನುವಂತಹ ಘೋಷಣೆಯನ್ನು ಮಾಡಿದ್ದಾರೆ. ಸರ್ಕಾರ ಹಳ್ಳಿಗಳಲ್ಲಿ ಇರಬಹುದು, ನಗರ

ಪ್ರದೇಶಗಳಲ್ಲಿ ಇರಬಹುದು, ಶೌಚಾಲಯವನ್ನು ಕಟ್ಟತಕ್ಕಂಥದ್ದು mandatary ಮಾಡಬೇಕು, ಇದನ್ನು ಕಡ್ಡಾಯ ಮಾಡಬೇಕು. ಇವತ್ತು option ಕೊಟ್ಟರೆ ನಮ್ಮ ಜನರು ಅಲುಗಾಡುವುದಿಲ್ಲ. ಇವತ್ತು ಆರೋಗ್ಯದ ದೃಷ್ಟಿಯಿಂದ ಹಳ್ಳಿಗಳಲ್ಲಿ ಶೌಚಾಲಯವನ್ನು ಕಡ್ಡಾಯ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಶಿಕ್ಷಣದಲ್ಲಿಯೂ ಕೂಡ ಇದನ್ನು ತಿಳಿಸಿ ಹೇಳಬೇಕು,. ಇವತ್ತು ಯಾವ ಯಾವ ಜಿಲ್ಲೆಗಳಲ್ಲಿ ಅದರಲ್ಲಿಯೂ ಮಹಿಳಾ ಶಿಕ್ಷಣದ ಪ್ರಗತಿ ಎಷ್ಟು ಹಿಂದೆ ಬಿದ್ದಿದೆ ಎನ್ನುವುದಕ್ಕೆ ಒಂದು ಅಂಕಿ ಅಂಶವನ್ನು ಅವರು ಕೊಡುತ್ತಾರೆ. ರಾಯಚೂರಿನಲ್ಲಿ ಶೇಕಡ 43 ಇದೆ. ಯಾದಗಿರಿಯಲ್ಲಿ ಶೆಕಡ 35 ಇದೆ. ಬಳ್ಳಾರಿಯಲ್ಲಿ ಶೇಕಡ 51 ಇದೆ. ಬಾಗಲಕೋಟೆಯಲ್ಲಿ ಶೇಕಡ 50ಕ್ಕೆ ಮಾತ್ರ ಸೀಮಿತವಾಗಿದೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಇವತ್ತು ಕೊಳವೆ ಬಾವಿಯನ್ನು ಉಪಯೋಗಿಸಿಕೊಳ್ಳುತ್ತಿದಾರೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ಶೇಕಡ 30% ಜನ 500 ಮೀಟರ್ ದೂರದಿಂದ ನೀರನ್ನು ತರುವಂತಹ ಬವಣೆಯು ತಪ್ಪಿಲ್ಲವೆನ್ನುವಂತಹ ಅಂಕಿ ಅಂಶವನ್ನು ಅವರು ಹೇಳುತ್ತಿದ್ದಾರೆ. ಅವೆಲ್ಲವನ್ನು ನಾವು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ವ್ಯವಸ್ಥಿತವಾಗಿ ಮಾಡಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಿಮ್ಮ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರು ಇಲ್ಲಿ ಇಲ್ಲ. 2011-12 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಇಲಾಖೆಯಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗದಮದಿಂದ ಒಂದೇ ಒಂದು ಕೊಳವೆ ಬಾವಿಯನ್ನು ಕೊರೆದಿರುವುದಿಲ್ಲ. ಅವರನ್ನು ಏತಕ್ಕಾಗಿ ಕೊರೆದಿಲ್ಲವೆಂದು ಪ್ರಶ್ನೆ ಕೇಳಿದರೆಹಿಂದಿನ ಕೊಳವೆ ಬಾವಿಯನ್ನು ಕೊರೆದಿರುವುದಕ್ಕೆ ವಿದ್ಯುತ್ ಸಂಪರ್ಕವನ್ನು ಕೊಟ್ಟಿರುವುದಿಲ್ಲ, ಈಗ ಕೊಳವೆ ಬಾವಿಯನ್ನು ಕೊರೆದರೆ ವಿದ್ಯುತ್ ಸಂಪರ್ಕ ಕೊಡುವುದಕ್ಕೆ ಕಷ್ಟವಾಗುತ್ತದೆ ಎಂದು ಅವರು ಹೇಳುತ್ತಾರೆ. ಸುಮಾರು 5-6 ವರ್ಷಗಳಿಂದ ಕೊರೆದಿರುವಂತಹ ಬೋರ್‌ವೆಲ್‌ಗಳು ಹಾಗೆಯೇ ಇವೆ. ಈಗ Water table ಕೆಳಗಡೆ ಹೋಗಿದೆ. ಕೊರೆದಿರುವಂತಹ ಬೋರ್‌ವೆಲ್‌ಗಳಲ್ಲಿ ಇವತ್ತು ನೀರು ಸಂಪೂರ್ಣವಾಗಿ ಬತ್ತಿ ಹೋಗಿದೆ. ಇವರು ಮತ್ತೆ ಎಲ್ಲಿ ವಿದ್ಯುತ್ ಸಂಪರ್ಕವನ್ನು ಕೊಡುತ್ತಾರೆ. ಇನ್ನು ಕಳೆದ 4

ವರ್ಷಗಳಿಂದ ಬೋರ್‌ವೆಲ್ ಕೊರೆದಿರುವುದಕ್ಕೆ ವಿದ್ಯುತ್ ಸಂಪರ್ಕ ಕೊಡುವುದು ಬಾಕಿ ಇದೆ. ಅದರ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಬಗ್ಗೆ ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಂಡು ತಕ್ಷಣ ಇವತ್ತು ವಿದ್ಯುತ್ ಇಲಾಖೆಯನ್ನು ಸಂಪರ್ಕ ಮಾಡಿ ಆದಷ್ಟು ಬೇಗ ಮಾಡಿಕೊಡಬೇಕು.

ಶ್ರೀ ಕೆ.ಸುರೇಶ್‌ಗೌಡ : – ತಾವು ಯಾರಿಗೆ ಹೇಳುತ್ತಿದ್ದೀರೆಂದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : – ಈಗ ಇಲ್ಲಿ ಇಬ್ಬರು ಸಚಿವರು ಇದ್ದಾರೆ. ಇಲ್ಲಿ ಉಪ ಮುಖ್ಯಮಂತ್ರಿಗಳು ಒಬ್ಬರು ಇದ್ದಾರೆ. ಇಲ್ಲಿ ಪೌರಾಡಳಿತ ಸಚಿವರು ಒಬ್ಬರು ಇದ್ದಾರೆ. ಆರೋಗ್ಯ ಸಚಿವರು ಅಲ್ಲಿಗೆ ಹೋಗಿದ್ದಾರೆ. ತಾವು ದಯಮಾಡಿ ಇಲ್ಲಿಗೆ ಬನ್ನಿ ಸಾರ್. ಎಲ್ಲಿ? ಅವರವರದ್ದು ಮಾತುಕತೆಯೇ ಆಗಿದೆ. ಅವರು ಎಲ್ಲಿ ಬರೆದುಕೊಳ್ಳುತ್ತಾರೆ? ಅಲ್ಲಿ ಕೆಲವು ಸಚಿವರು ಬೇರೆ ಕಡೆ ಕುಳಿತುಕೊಂಡು ಮಾತನಾಡುತ್ತಿರುತ್ತಾರೆ. ಅವರು ಕನಿಷ್ಠ ಅವರ ಸೀಟಿನಲ್ಲಿ ಕುಳಿತುಕೊಳ್ಳಬೇಕಲ್ಲವೇ? ನಮ್ಮ ಬಾಲಚಂದ್ರ ಜಾರಕಿಹೊಳಿ ಸಾಹೇಬರು ಮಾತ್ರ ಕರೆಕ್ಟಾಗಿ ಕುಳಿತುಕೊಂಡಿದ್ದಾರೆ. ಇಲ್ಲಿ ಉಪ ಮುಖ್ಯಮಂತ್ರಿಗಳು ಇದ್ದಾರೆ. ಈಗ ಆರೋಗ್ಯ ಸಚಿವರು ಬಂದರು. ಆಯಿತು, ತಾವಾದರೂ ಬರೆದುಕೊಂಡು ಅವರಿಗೆ ಹೇಳಿ. . .ಇವತ್ತು ವಿದ್ಯುತ್ ಸಂಪರ್ಕ ಏನಾಗಿದೆ? Materials ಸಿಗುತ್ತಿಲ್ಲವೋ ಅಥವಾ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವೋ? ಇವತ್ತು ಸರ್ಕಾರವು ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದೆ. ಲೋಕೋಪಯೋಗಿ ಇಲಾಖೆಯಿಂದ ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ SCP/TSP ಹಣವನ್ನು ಕೊಟ್ಟು ಕೆಲಸವನ್ನು ಮಾಡಿಸುತ್ತಿದ್ದಾರೆ. ಕೊಳವೆ ಬಾವಿ ಕೊರೆದಿರುವುದಕ್ಕೆ, ಅಲ್ಲಿ water table ಕೆಳಗಡೆ ಹೋಗಿದೆ ಕೊರೆದಂತಹ ಬಾವಿಗಳು ಬತ್ತಿ ಹೋಗುತ್ತಿವೆ. ಏತಕ್ಕಾಗಿ ಸರ್ಕಾರವು ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ? ಪರಿಶಿಷ್ಟ ಜಾತಿ: ವರ್ಗಗಳ ಬಗ್ಗೆ ಸರ್ಕಾರವು ಉದಾಸೀನ ಧೋರಣೆಯನ್ನು ತೋರುತ್ತಿದೆ. ಏತಕ್ಕಾಗಿ ಈ ಕಡೆಗೆ ಸರ್ಕಾರವು ಗಮನ ಕೊಡುತ್ತಿಲ್ಲ. ಒಂದು ಸಾರಿ ನೀರು ಡ್ರೈ ಆದ ಮೇಲೆ ಪುನ: ಬೋರ್‌ವೆಲ್ ಕೊರೆಯಬೇಕಾಗುತ್ತದೆ. Turn-key basis ಮೇಲೆ ಒಂದು ಸಾರಿ ನೀವು declare ಮಾಡಿದ್ದೀರಿ. ಅದರ ಪ್ರಕಾರವೂ ಸಹ

ಕೆಲಸಗಳು ಆಗುತ್ತಿಲ್ಲ. ಇವತ್ತು ಇಡೀ ನಿಗಮ ಇಡೀ ಇಲಾಖೆಯು ಇವತ್ತು contractor ಗಳ ವಶವಾಗಿದೆ. ಇವರು contractor ಗಳು ಏನು ಹೇಳುತ್ತಾರೆ ಅದನ್ನು ಕೇಳುತ್ತಾರೆ ಇನ್ನೂ ಕೂಡ 2011-12 ನೇ ಸಾಲಿನದ್ದು ಮತ್ತು ಹಿಂದಿನ ವರ್ಷದ್ದು ಕೂಡ ಬೋರ್‌ವೆಲ್ ಕೊರೆದಿರುವುದಿಲ್ಲ. ಈ ತರಹದ ಆಡಳಿತ ನಡೆಸುವುದು ಸರಿಯಲ್ಲ. ನಾವು ಪರಿಶಿಷ್ಟಜಾತಿ ವರ್ಗದವರು 25,000 ರೂಗಳವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆನ್ನುವಂತಹ ಮಾತನ್ನು ಮೊನ್ನೆ ದಿನ ಬಜೆಟ್‌ನಲ್ಲಿ ಹೇಳಿದ್ದೀರಿ. ಅದು ಇನ್ನೂ ಕೂಡ ಜಾರಿಗೆ ಬಂದಿರುವುದಿಲ್ಲ. ನಮ್ಮ ಪರಿಶಿಷ್ಟ ಜಾತಿ ಹೆಣ್ಣುಮಕ್ಕಳು ನಿರುದ್ಯೋಗಿ ಯುವಕರು ಇವತ್ತು ಅನೇಕ ರೀತಿಯಲ್ಲಿ ಸಾಲಗಳನ್ನು ಮಾಡಿದ್ದಾರೆ. ಆ ಸಾಲವನ್ನು ಮನ್ನಾ ಮಾಡತಕ್ಕಂತಹ ಆದೇಶವನ್ನು ಹೊರಡಿಸಬೇಕೆಂದು ಹೇಳುತ್ತೇನೆ. ಮೊನ್ನೆ 1347 Assistant Engineer ಮತ್ತು Junior Engineers ಗಳ ನೇಮಕಾತಿಯಲ್ಲಿ ಅಕ್ರಮವಾಗಿದೆ ಎಂದು ಕೆಎಟಿಯಲ್ಲಿ ಹೇಳಿತ್ತು. ಇವತ್ತು ಹೈಕೋರ್ಟ್ ಕೂಡ ಅದನ್ನು ಒಪ್ಪಿದೆ. ಆದರೆ ಈ ಸ್ಥಿತಿ ಏತಕ್ಕಾಗಿ ಬಂತು? ಸರ್ಕಾರ ಇದರ ಬಗ್ಗೆ ಏಕೆ ತೀಕ್ಷ್ಣವಾಗಿ ಕೆಲಸವನ್ನು ಮಾಡಲಿಲ್ಲ? ಇವತ್ತು ಸುಪ್ರೀಂಕೋಟಿಗೆ ಅಪೀಲು ಹೋಗುತ್ತಾರೋ ಏನೋ ಎನ್ನುವುದು ಗೊತ್ತಿಲ್ಲ. ಆದರೆ ಸರ್ಕಾರದ ಜವಾಬ್ದಾರಿ ಇದೆ. ನೀವು ಪರಿಶಿಷ್ಟ ಜಾತಿ ಇಂಜಿನಿಯರಿಂಗ್ ನಿರುದ್ಯೋಗಿಗಳ ಕಣ್ಣಿಗೆ ಗುರಿಯಾಗಬೇಡಿ. ನೀವು ಆ ಬಗ್ಗೆ ಸುಪ್ರೀಂಕೋರ್ಟ್‌ಗೆ ಹೋಗುತ್ತೀರೋ ಇಲ್ಲವೋ ಗೊತ್ತಿಲ್ಲ., ಹೊಸದಾಗಿ ನೇಮಕಾತಿ ಮಾಡಿಕೊಳ್ಳುವುದಕ್ಕೆ 6 ತಿಂಗಳು, ಒಂದು ವರ್ಷ ಟೈಮ್ ಕೊಟ್ಟಿದ್ದಾರೆ. ಅದರ ಬಗ್ಗೆ ಹುಡುಗಾಟಿಕೆಯನ್ನು ಆಡಬೇಡಿ. ತಕ್ಷಣ ಆ ನಿಟ್ಟಿನಲ್ಲಿ ತಾವು ನೇಮಕಾತಿಯನ್ನು ಮಾಡಿಕೊಳ್ಳುವ ಬಗ್ಗೆ ಮತ್ತು ಅವರನ್ನು ಖಾಯಂ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ.

ಅದೇ ರೀತಿಯಾಗಿ ನೇರ ನೇಮಕಾತಿಯ ಒಂದು ಕಾರ್ಯಕ್ರಮ, ಹಿಂದಿನ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ನಮ್ಮ ಜನತಾದಳ ಸರ್ಕಾರ 1985 ರಲ್ಲಿ ಇದ್ದಾಗ ಅದನ್ನು ಜಾರಿಗೆ ತಂದಂತಹ ಯೋಜನೆಯಾಗಿದೆ. ಇವತ್ತು ಯಾರು ಪರಿಶಿಷ್ಟಜಾತಿ;ವರ್ಗಗಳಲ್ಲಿ ಮೊದಲ ದರ್ಜೆಯಲ್ಲಿ ಒಂದೇ ಸಾರಿಗೆ ಪಾಸಾಗುತ್ತಾರೆ ಅಂತಹವರಿಗೆ ಎಲ್ಲಾ

ಇಲಾಖೆಗಳಲ್ಲಿ ನೇರ ನೇಮಕಾತಿ ಮಾಡುವಂತಹ ಒಂದು ಯೋಜನೆಯು ಬಂದಿತ್ತು. ಇವತ್ತು ಆ ಯೋಜನೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಆಗುತ್ತಿಲ್ಲ. ಈಗ ಅದು ನಿಂತಿದೆ. ಆ ಬಗ್ಗೆ ಇಲಾಖೆಯವರು ಮಾಡಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ತಮಗೆಲ್ಲಾ ಗೊತ್ತಿದೆ. ಇವತ್ತು ಕಾಡಾನೆ ಹಾವಳಿ ನಮ್ಮ ಮಲೆನಾಡು ಭಾಗದಲ್ಲಿ ಜಾಸ್ತಿ ಇದೆ. ಬಹುಶ: ನನಗೆ ಮತ್ತು ನಿಮಗೆ ನಮ್ಮ ಶಿವಮೊಗ್ಗ ಈ ಭಾಗದವರಿಗೆಲ್ಲಾ ಇವತ್ತು ಕಾಡಾನೆ ಹಾವಳಿ ಒಂದು ದುಸ್ವಪ್ನ ಆಗಿದೆ ಎಂದು ಭಾವಿಸುತ್ತೇನೆ. ನಾವು ಮತ್ತು ತಾವು ಜನಪ್ರತಿನಿಧಿಗಳು ಮತ್ತು ಸಂಘ ಸಂಸ್ಥೆಗಳು, ಜನರು ಎಲ್ಲರ ಒತ್ತಡದಮೇರೆ ಕೇಂದ್ರ ಸರ್ಕಾರವು 25 ಆನೆಗಳನ್ನು ಹಿಡಿಯುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ಇದನ್ನು ಕೊಟ್ಟಾದ ಮೇಲೆ ಯಾರೋ ಒಬ್ಬರು ಪರಿಸರವಾದಿಗಳ ಹೆಸರಿನಲ್ಲಿ ಕೋರ್ಟಿಗೆ IPL ಹಾಕಿ ಇವತ್ತು ಒಂದು ವರ್ಷದಿಂದ ಅದು ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ. ನ್ಯಾಯಾಲಯವು ಕೂಡ ಒಂದು ಸಮಿತಿಯನ್ನು ಮಾಡಿತ್ತು. ಆ ಸಮಿತಿ ನಮ್ಮ ಮತ್ತು ನಿಮ್ಮ ಜಿಲ್ಲೆಗಳಿಗೆಲ್ಲಾ ಸಂಚರಿಸಿ ಅವರು ವರದಿ ಏನು ಕೊಟ್ಟಿದ್ದಾರೆಂದು ನಮಗೆ ಗೊತ್ತಿಲ್ಲ. ಜುಲೈ 15 deadline ಹೇಳಿದ್ದಾರೆ. ಆದರೆ ಈ ಸಮಸ್ಯೆಯು ನಮಗೆ ಯಾವಾಗ ಕಾಡುತ್ತದೆ ಅಂದರೆ. . ..

ಅಧ್ಯಕ್ಷರು : – ವರದಿಯಲ್ಲಿ ಆನೆ ಹಿಡಿಯುವ ಬಗ್ಗೆ ಮತ್ತು ಸಾವಿನ ಬಗ್ಗೆ ಏನೂ ಇಲ್ಲ. ಎಲ್ಲಾ ಬೇಡವಾಗಿರುವುದನ್ನೇ ಅವರು ಕೊಟ್ಟಿದ್ದಾರೆ. ನಮ್ಮ ವಿರುದ್ದವೇ ಕೊಟ್ಟಿದ್ದಾರೆ. ನೋಡಿ ತಿಳಿದುಕೊಳ್ಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : – ಅಲ್ಲಿ ನಮಗೆ ಸಮಸ್ಯೆಯು ಯಾವಾಗ ಬರುತ್ತದೆ ಅಂದರೆ ಒಬ್ಬ ಅಮಾಯಕನಿಗೆ ತೊಂದರೆಯಾದಾಗ. ಅಲ್ಲಿ ಬೇರೆಯವರು ಸಾಯುವುದಿಲ್ಲ. ಕೂಲಿ ಕಾರ್ಮಿಕರು ಸಾಯುತ್ತಾರೆ. ಇವತ್ತು ಈ ಸಂದರ್ಭದಲ್ಲಿ ಆ ಜಾಗದಲ್ಲಿ ಯಾವ ರೀತಿಯಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬುದು ನನಗೆ, ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಮಾನ್ಯ ಸಚಿವರಾದ ಶ್ರೀ ಅಪ್ಪಚ್ಚುರಂಜನ್‌ರವರಿಗೆ ಗೊತ್ತಿದೆ. ಬೇರೆ ಯಾರು ಇಲ್ಲಿ ಇದ್ದಾರೆ ಅವರಿಗೆ ಮಾತ್ರ ಅರ್ಥವಾಗುತ್ತದೆ. ಆದ್ದರಿಂದ ಇವತ್ತು ನನ್ನ ಪ್ರಕಾರ ಹೇಳುವುದಾದರೆ ಇಲ್ಲಿ ಅರಣ್ಯ ಸಚಿವರು ಇಲ್ಲ. ಸಮರ್ಪಕವಾಗಿ ಹೈಕೋರ್ಟಿನ

ಮುಂದೆ ವಾದವನ್ನು ಮಂಡಿಸಬೇಕು. ಯಾವ ಕಾರಣಕ್ಕಾಗಿ ಆನೆಯನ್ನು ಹಿಡಿಯಬೇಕು? ಆನೆಯನ್ನು ಹಿಡಿದ ಮೇಲೆ ಅದನ್ನು ಎಲ್ಲಿಗೆ ಸ್ಥಳಾಂತರಿಸುತ್ತೀರಿ? ಸ್ಥಳಾಂತರಿಸಿದ ಮೇಲೆ ಹೇಗೆ ಮಾಡುತ್ತೀರಿ? ಪ್ರಾಣಿ ಸಂಪತ್ತು, ಆನೆ ಸಂಪತ್ತು, ಅದು ಬೇಕು. ಅದನ್ನು .ಬೇಡವೆಂದು ನಾವು ಹೇಳುತ್ತಿಲ್ಲ. ಅದಕ್ಕೆ ನೀವು ಸರ್ಕಾರ ಹೈಕೋರ್ಟಿನಲ್ಲೋ ಅಥವಾ ಸುಪ್ರೀಂಕೋರ್ಟಿನಲ್ಲಿಯೋ ಈ ಬಗ್ಗೆ ಸರಿಯಾದಂತಹ ವಾದವನ್ನು ಮಾಡಬೇಕು, ಇನ್ನೊಂದು ವಾದ ಇದೆ. ಆನೆ ಕಾರಿಡಾರ್ ಸ್ಥಾಪಿಸಬೇಕೆಂದು ಸಲಹೆ ನನ್ನ ಕ್ಷೇತ್ರದಲ್ಲೇ ಬಂದಿದೆ. ರೈತರು ಸ್ವಯಂಪ್ರೇರಿತರಾಗಿ ನಮ್ಮ ಜಮೀನನ್ನು ನೀವು ಸ್ವಾಧೀನಪಡಿಸಿಕೊಳ್ಳಿ, ನಾವು ಮಾರಾಟಕ್ಕೆ ಕೊಡುತ್ತೇವೆಂದು ಇರುವಾಗ ನೀವು ಏಕೆ ಇದನ್ನು ವಿಳಂಬ ಮಾಡುತ್ತಿದ್ದೀರಿ? ಇವತ್ತು ನ್ಯಾಯಾಲಯಗಳಿಗೆ ಎಲ್ಲರಿಗೂ ಬೇಕು, ಪ್ರಾಣಿಗಳ ರಕ್ಷಣೆ, ಅದೇ ರೀತಿಯಲ್ಲಿ ಮನುಷ್ಯನಿಗೂ ಬದುಕು ಬೇಕು. ಮನುಷ್ಯನ ರಕ್ಷಣೆ ಕೂಡ ಮಾಡಬೇಕಲ್ಲವೇ? ಆ ನಿಟ್ಟಿನಲ್ಲಿ ಸರ್ಕಾರ ಏನು ಮಾಡುತ್ತಿದೆ? ಅಲ್ಲೊಮ್ಮೆ, ಇಲ್ಲೊಮ್ಮೆ ಸತ್ತಾಗ ಹೋಗಿ ಅಲ್ಲಿ ಕಣ್ಣೀರು ಸುರಿಸುವುದು, ಅವರಿಗೆ ಸಾಂತ್ವನ ಹೇಳುವ ಕೆಲಸ ಮಾಡುವುದನ್ನು ಬಿಟ್ಟರೆ ಬೇರೆ ಏನೂ ಕೂಡ ಸರ್ಕಾರ ಮಾಡುತ್ತಿಲ್ಲ. ಜೊತೆಗೆ ಆನೆಗಳು, ಬೇರೆ ಬೇರೆ ಪ್ರಾಣಿಗಳು, ಚಿರತೆಗಳು ಎಲ್ಲಾ ಕಡೆ ಎಲ್ಲೆಂದರಲ್ಲಿ ಇವತ್ತೆಲ್ಲಾ ಸುತ್ತಾಡಿ ಮನುಷ್ಯನ ಜೀವವನ್ನು ತೆಗೆಯುವಂಥ ಕೆಲಸ ಮಾಡುತ್ತಿದೆ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತೇನು ಬೆಳೆಯನ್ನು ಹಾಳು ಮಾಡಿದರೆ ಅಥವಾ ಹಾಳು ಮಾಡುವಂಥ ಏರಿಯಾ ಯಾವುದು ನಿಗದಿಯಾಗಿದೆ, ಉದಾ: ಈಗ ನಮ್ಮ ಸಕಲೇಶಪುರ ತಾಲ್ಲೂಕು, ಆಲೂರು ತಾಲ್ಲೂಕು ಇಂಥ ಭಾಗದಲ್ಲಿ, ಕೊಡಗಿನಲ್ಲೇ ತಿರುಗುತ್ತವೆ. ಹಾಳು ಮಾಡುತ್ತವೆ ಎಂದು ಗೊತ್ತಿದೆ. ನಿಜ ಅದಕ್ಕೆ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ದಯವಿಟ್ಟು ನೀವು ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಿ ಅಥವಾ ನೀವು ಕ್ರಯಕ್ಕಾದರೂ ತೆಗೆದುಕೊಳ್ಳಿ ಅಥವಾ ನಮ್ಮ ರೈತ ಆ ವರ್ಷದಲ್ಲಿ ಏನು ಬೆಳೆ ತೆಗೆಯುತ್ತಿದ್ದ, ಆ ಬೆಳೆಯಿಂದ ಬರತಕ್ಕಂಥ ಆದಾಯ ಏನಿತ್ತು, ಮಾಡಿದ ಖರ್ಚು ಏನಿದೆ, ಆ ಖರ್ಚನ್ನು ಕೊಟ್ಟುಬಿಡಿ. ನಾವು ಯಾರ ತಂಟೆಗೂ ಬರುವುದಿಲ್ಲ. ಇಲ್ಲವೆಂದರೆ ಜನ ಇವತ್ತು ಆ ಭಾಗದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವಂಥ ದಿನಗಳು ದೂರ ಇಲ್ಲ. ನಾವ್ಯಾರೂ ಕೂಡ ಜನರನ್ನು

ಹೋಗಿ ತಡೆಯಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಹೋದಾಗ ನಾವು ಕೇಳತಕ್ಕಂಥ ಮಾತು, ನಾವು ಅನುಭವಿಸುವಂಥ ಯಾತನೆ ಸರ್ ಯಾರಾದರೂ ದುರ್ಬಲ ಮನಸ್ಸಿನವರಾದರೇ ಏನಾಗುತ್ತಿತ್ತು ಎಂದು ಹೇಳುವುದಕ್ಕೆ ಬರುವುದಿಲ್ಲ. ಜನರ ಆಕ್ರೋಶವನ್ನು ಯಾರ ಕೈಯಲ್ಲಿಯೂ ತಡೆಯಲ್ಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅರಣ್ಯ ಇಲಾಖೆ ಈ ಕಡೆ ಹೆಚ್ಚು ಗಮನವನ್ನು ಹರಿಸಬೇಕೆಂಬ ಮಾತನ್ನು ಹೇಳಿ ಹಾಗೆ ಪ್ರವಾಸೋದ್ಯಮ ಇಲಾಖೆ ಕೆಲವು ಸಾರಿ ನಿರ್ದಿಷ್ಟವಾಗಿ ಯಾರೋ ಎಲ್ಲೋ ಏನೋ ಕೇಳುತ್ತಾರೆ ಅಷ್ಟು ಮಾತ್ರ ಕೆಲಸ ಮಾಡುತ್ತಾರೆ. ನೀವು ಸ್ವಿಡ್ಜರ್‌ಲ್ಯಾಂಡ್‌ಗೆ ಹೋಗಿ ಬಂದಿರಬಹುದು. ಇವತ್ತು ನೀವು ಸಕಲೇಶಪುರ ತಾಲ್ಲೂಕಿಗೆ ಬನ್ನಿ. ನಮ್ಮ ಕೊಡಗಿಗೆ ಹೋಗಿ ನೋಡಿ. ಇವತ್ತು ಸ್ವಿಡ್ಜರ್‌ಲ್ಯಾಂಡ್‌ನಲ್ಲಿ, ಅಂಥ ಸ್ಥಳಗಳಲ್ಲಿ ರೋಪ್‌ವೇ ಮಾಡಿ ಜನರಿಗೆ ಅಲ್ಲಿ ಕರೆದುಕೊಂಡು ಹೋಗಿ ಅದರ ಸೌಂದರ್ಯವನ್ನು ತೋರಿಸುವಂಥದ್ದು ಬೇರೆ ಬೇರೆ ವ್ಯವಸ್ಥೆ ಮಾಡುತ್ತಿರಬೇಕಾದರೆ ನಮಗೆ ಏನು ಬಂದಿದೆ? ಏಕೆ ಪ್ರವಾಸೋದ್ಯಮ ಇಲಾಖೆಯವರು ಸುಲಭವಾಗಿ ಆಗುವಂಥದ್ದು, ಹೆಚ್ಚು ಖರ್ಚು ಬಾರದಿರುವಂಥದ್ದನ್ನು ಮಾಡುವುದಿಲ್ಲ? ನಮ್ಮ ಸಕಲೇಶಪುರ ಪಟ್ಟಣದಲ್ಲಿ ಟಿಪ್ಪು ಸುಲ್ತಾನ್ ಕಟ್ಟಿಸಿದ ಮುಜಿರಾಬಾದ್ ಕೋಟೆ ಇದೆ. ತುಂಬಾ ಚೆನ್ನಾಗಿದೆ. ಆ ಕೋಟೆ ಅಭಿವೃದ್ಧಿಪಡಿಸುವುದು, ಸ್ವಿಡ್ಜರ್‌ಲ್ಯಾಂಡ್ ಮಾದರಿಯಲ್ಲಿ ನಮ್ಮ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಆ ವ್ಯವಸ್ಥೆಯನ್ನು ಕಲ್ಪಿಸುವಂಥ ಕೆಲಸವನ್ನು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ನಮ್ಮ ಸುವರ್ಣ ಗ್ರಾಮ ಯೋಜನೆಗೆ ಸರ್ಕಾರ 2008-09 ರಲ್ಲಿ ಕೊಟ್ಟಿದ್ದು ಬಿಟ್ಟರೆ ಈಗ ಕೊಟ್ಟಿಲ್ಲ. ಈಗ ಮಂಜೂರು ಮಾಡಿದ್ದೀರಿ ಅದಕ್ಕೆ ನಿಮಗೆ ಕೃತಜ್ಞತೆಗಳನ್ನು ಹೇಳುತ್ತಾ ಜೊತೆಗೆ ಲೋಕೋಪಯೋಗಿ ಇಲಾಖೆ ಬಗ್ಗೆ ನಮ್ಮ ಹಿಂದಿನ ಮುಖ್ಯಮಂತ್ರಿಗಳು ಸದಾನಂದಗೌಡರು ಹೇಳಿದ್ದರು. ಜನವರಿ 15 ರೊಳಗೆಒಂದು ಗುಂಡಿ ಇರಲ್ಲ. ಕರೆಕ್ಟ್ ಒಂದು ಗುಂಡಿ ಇಲ್ಲ, ಈಗ,ಸಾವಿರಾರು ಗುಂಡಿಗಳು ಇವೆ. ಒಂದು ಹೊಂಡ ಇರುವುದಿಲ್ಲ ಎಂದು ಹೇಳಿದ್ದರು. ಜನವರಿ 15ಕ್ಕೆ ಒಂದು ಹೊಂಡ ಇರುವುದಿಲ್ಲವೆಂದು ಹೇಳಿದ್ದರು. ಲಕ್ಷಾಂತರ, ಸಾವಿರಾರು ಹೊಂಡಗಳಿವೆ. ನಾನು ಲೋಕೋಪಯೋಗಿ ಸಚಿವರಿಗೆ ಬಹಳ ಹೇಳಿದ್ದೇನೆ. ಅವರು ಕುಳಿತಿದ್ದರು. ಈಗ ಹೋಗಿದ್ದಾರೆ. ಇವತ್ತು ಇನ್ನೂ ಕೂಡ ಶೇಕಡ 50 ರಷ್ಟು ಗುಂಡಿಗಳು ನನ್ನ ಸಕಲೇಶಪುರ ಕ್ಷೇತ್ರದಲ್ಲಿವೆ. ಜೊತೆಗೆ ನಮ್ಮ ದುರಂತ

ಏನೆಂದರೆ ಅಲ್ಲಿ ಈ ನಮ್ಮ ಭೌಗೋಳಿಕ ವಿಸ್ತೀರ್ಣದ ಬಗ್ಗೆ ಪರಿಚಯ ಮಾಡಿಸಬೇಕು. ಕಿಮ್ಮನೆ ರತ್ನಾಕರ್‌ರವರು, ಎಲ್ಲೋ ಹೊರಗಡೆ ಹೋದರು. ಈಗ ಅವರು ನಾವು ಮಾತನಾಡಿಕೊಂಡು ಒಂದು ನಿರ್ಣಯವನ್ನು ತರುತ್ತಿದ್ದೇವೆ. ಅದನ್ನು ಮುಂದಿನ ಅಧಿವೇಶನದಲ್ಲಿ ಅಥವಾ ಯಾವಾಗಲಾದರೂ ಸಾಧ್ಯವಾದರೆ ತರುತ್ತೇವೆ. ನಮಗೆ ಕೊಡತಕ್ಕಂಥ ಅನುದಾನ ನೀವು ಜನಸಂಖ್ಯೆಯಾಧಾರದ ಮೇಲೆ ಕೊಡುತ್ತೀರಿ. ಜನಸಂಖ್ಯೆ ಆಧಾರದ ಮೇಲೆ ಅನುದಾನ ಕೊಟ್ಟರೆ ಯಾವುದೇ ಕಾರಣಕ್ಕೂ ನಮ್ಮ ಮಲೆನಾಡಿನ ಜನ ಅವರು ಆರ್ಥಿಕವಾಗಿ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ. ಇದು ಮಾನ್ಯ ಹಾಲಪ್ಪನವರಿಗೂ ಗೊತ್ತು ಎಂದು ನಾನು ಭಾವಿಸುತ್ತೇನೆ. ನನ್ನ ಕ್ಷೇತ್ರ ಈಗ 173 ಕಿ.ಮೀ ಉದ್ದ ಬರುತ್ತದೆ. 120 ಕಿ.ಮೀ ಅಗಲ ಬರುತ್ತವೆ. 906 ಹಳ್ಳಿಗಳು ಬರುತ್ತದೆ. ನನಗೂ ಒಂದೆ. ನನಗೂ ನೀವು CMGSY ನಲ್ಲಿ 30 ಕಿ.ಮೀ ಕೊಡುವುದು. 3000 ಚಿಲ್ಲರೆ ಕಿ..ಮೀ ಜಿಲ್ಲಾ ಪಂಚಾಯತ್ ರಸ್ತೆ ಬರುತ್ತದೆ. ನನಗೂ ಕೊಡುವುದು 30 ಕಿ.ಮೀ ನಮ್ಮ ಪ್ರಕಾಶ್‌ರವರಿಗೆ ಹಾಸನದಲ್ಲಿ ಒಂದೇ ಹೋಬಳಿ ಬರುವುದು. ಅವರಿಗೂ 30 ಕಿ.ಮೀ ಬರುತ್ತದೆ. ರಸ್ತೆಯೇ ಇಲ್ಲ. ಈ ರೀತಿಯ ತಾರತಮ್ಯ ಇದೆ. ಭೌಗೋಳಿಕ ವಿಸ್ತೀರ್ಣ ಮತ್ತೆ ಸಮಸ್ಯೆ ಆಧಾರದ ಮೇಲೆ ತಾವು ಅನುದಾನವನ್ನು ಬಿಡುಗಡೆ ಮಾಡಬೇಕೆಂಬ ಮಾತನ್ನು ಹೇಳಿ ಲೋಕೋಪಯೋಗಿ ಇಲಾಖೆಯಿಂದ ಇನ್ನೂ ಅನೇಕ ಕೆಲಸಗಳು ಆಗಬೇಕಾಗಿವೆ. ನನ್ನ ಕ್ಷೇತ್ರದಲ್ಲಿಯೇ 12.00 ಕೋಟಿ ರೂಪಾಯಿಗಳಿಗೆ ಇನ್ನು ಬಿಲ್‌ಗಳು ಬರಬೇಕು. LOC release ಆಗಿಲ್ಲ. ಶೇಕಡ 10% ಕೊಡುತ್ತೀರಿ. ದಯವಿಟ್ಟು ತಾರತಮ್ಯ ಮಾಡಬೇಡಿ. ಬರೀ ಶಿವಮೊಗ್ಗ, ಹಾವೇರಿಗೆ ಮಾತ್ರ ನೀವು LOC ಕೊಡುವುದಲ್ಲ. ಬಿಲ್ ಕೊಡುವುದಲ್ಲ. ಈ ಕಡೆಗೂ ಸ್ವಲ್ಪ ಗಮನ ಇರಲಿ ಎಂಬ ಮಾತನ್ನು ಹೇಳುತ್ತೇನೆ. ಇನ್ನು Irrigation Department ನಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ ನಮ್ಮ HRP, HNL ಇರಬಹುದು, ಇವತ್ತು contractors ಮಾತನ್ನು ಕೇಳಿ ಅವರಿಗೆ ಎಲ್ಲಿ ಸುಲಭವಾಗುತ್ತದೋ ಅಲ್ಲಿ ಕಾಮಗಾರಿಗಳನ್ನು ಸೇರಿಸಿಕೊಳ್ಳುವಂಥ ಕೆಟ್ಟ ಪದ್ದತಿ ಬಂದಿದೆ. Actually ಎಲ್ಲಿ ಕೆಲಸ ಆಗಬೇಕೋ ಅಲ್ಲಿ ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ಈ ಪ್ರಥಮದರ್ಜೆ ಕಾಲೇಜುಗಳು ಮತ್ತು ಕಿರಿಯ ಕಾಲೇಜುಗಳಿಗೆ ಇನ್ನೂ ಕಟ್ಟಡಗಳನ್ನು ಮಂಜೂರು ಮಾಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಹೆತ್ತೂರು, ಆಲೂರಿನಲ್ಲಿ ಪ್ರಥಮ

ದರ್ಜೆ ಕಾಲೇಜಿದೆ. ಹೆತ್ತೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿದೆ. ಇನ್ನೂ ಕೂಡ ಅಲ್ಲಿಗೆ ಕಟ್ಟಡಗಳು ಮಂಜೂರಾಗಿಲ್ಲ. ಕಟ್ಟಡಗಳನ್ನು ಮಂಜೂರು ಮಾಡಬೇಕೆಂಬ ಮಾತನ್ನು ಹೇಳುತ್ತಾ ಜೊತೆಗೆ ಅನೇಕ ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಕೊನೆಯದಾಗಿ ಕಾಫಿ ಮತ್ತು ಏಲಕ್ಕಿ ಬೆಳೆ ಬಗ್ಗೆ ಹೇಳುತ್ತೇನೆ. ಮೊನ್ನೆಯಿಂದ ಮಳೆ ಬರುತ್ತಿದೆ. ಮಾಮೂಲಿ ಮಳೆ ಮಲೆನಾಡಿನಲ್ಲಿ ಪ್ರಾರಂಭವಾಗಿದೆ. ಈಗ ಕಾಫಿ ಗಿಡವನ್ನು ಶೇಕಡ 30 ರಷ್ಟು ತೆಗೆಯತಕ್ಕಂಥ ಸ್ಥಿತಿ ಬಂದಿದೆ. ಏಲಕ್ಕಿ ಬಗ್ಗೆ ಹೇಳುವ ಹಾಗೆ ಇಲ್ಲ. 150 ಇಂಚು ಮಳೆ ಆ ಭಾಗದಲ್ಲಿ ಆಗಬೇಕಾಗಿತ್ತು.ಕೇವಲ 40–50 ಇಂಚು ಮಳೆಯಾಗಿದೆ. ಇವತ್ತೇನು ಏಲಕ್ಕಿ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ರೋಗಪೀಡಿತರಾಗಿ ಬೆಳೆ ಹಾಳಾಗುತ್ತಿದೆ. ಸುಮಾರು ನಾಲ್ಕು ಜಿಲ್ಲೆಗಳಿಂದ ಹಾಸನ, ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಿಗೆ 11,00 ಕೋಟಿ ರೂಪಾಯಿಗಳ ಸಾಲ ಮಾಡಿದ್ದಾರೆ. ಆ ಸಾಲ ಮನ್ನಾ ಮಾಡಿ ಎಂದು ಭಾರಿ ಒತ್ತಡ ಹಾಕುತ್ತಿದ್ದೇವೆ. ಮಾನ್ಯ ಸದಾನಂದಗೌಡರು ಹೇಳಿ, ಹೇಳಿ, ನೋಡೋಣ, ಮಾಡೋಣ ಎಂದು ನಿರ್ಗಮಿಸಿದರು. ಜಗದೀಶ್‌ಶೆಟ್ಟರ್ ಬಂದಿದ್ದಾರೆ. ಅವರಿಗೆ ನಮ್ಮ ಕಡೆಯೂ ಸ್ವಲ್ಪ ಗಮನ ಇರಲಿ. ಸಾಲ ಮನ್ನಾ ಮಾಡಬೇಕೆಂದು ಹೇಳಿ ಕೊನೆಯದಾಗಿ ನಮ್ಮ ಸಕಲೇಶಪುರ ಪಟ್ಟಣ ಇದೆ. ಆ ಪಟ್ಟಣದ actual length ಇರುವುದು 800 ಮೀಟರ್. ತಾವು ಆಶ್ಚರ್ಯ ಪಡುತ್ತೀರಿ, ನಾಲ್ಕು ವರ್ಷಗಳಲ್ಲಿ ಪಟ್ಟಣದ ಸರಹದ್ದಿನಲ್ಲಿ 154 accidents ಆಗಿವೆ. ಏಕೆಂದರೆ ತಮಗೆ ಗೊತ್ತು ನಮ್ಮ ರೈ ಅವರು ಅಲ್ಲೇ ದಿನ ಹೋಗುವುದು, ನಮ್ಮ ಮಂಗಳೂರು ಸ್ನೇಹಿತರು ಎಲ್ಲಾ ಅಲ್ಲೇ ಹೋಗುವುದು. ಕೇವಲ 9 ರಿಂದ 14 ಮೀಟರ್ ಅಷ್ಟೇ ಅಗಲ ಇರುವುದು. ಎರಡೂ ಕಡೆ vehicles ನಿಂತರೆ ಬಹಳ ಕಷ್ಟವಾಗುತ್ತದೆ. ನಾಲ್ಕು ವರ್ಷಗಳಲ್ಲಿ 154 accidents ಆಗಿವೆ. 154 ರಲ್ಲಿ 15 ಜನ ಸತ್ತಿದ್ದಾರೆ. ಮೊನ್ನೆ 5ನೇ ತಾರೀಖು ಜುಲೈ ಒಂದು, 15ನೇ ತಾರೀಖು ಮತ್ತೊಂದು ಎರಡು ಅಪಘಾತಗಳು ಆಗಿವೆ. ಅಲ್ಲಿ ಪ್ರಯಾಣ ಮಾಡುವುದಕ್ಕೆ ಭಯವೇ ಆಗುತ್ತದೆ. ದೊಡ್ಡ ದೊಡ್ಡ ಲಾರಿಗಳು, ಟ್ಯಾಂಕರ್‌ಗಳು ತಿರುಗುತ್ತಿರುತ್ತವೆ. ಇವತ್ತು ಅದರ ಪರಿಣಾಮವಾಗಿ accident ಆಯಿತು. ಮೊದಲನೆ accident ನಲ್ಲಿ ಒಬ್ಬರು ಅಂಗನವಾಡಿ ಸಹಾಯಕಿ ಗೌರಮ್ಮನವರು ತೀರಿ ಹೋದರು. ನಾವು ರಾಜಿ ಮಾಡಿ ಜನರನ್ನು ಸಮಾಧಾನ ಮಾಡಿದ್ದೇವೆ. ಎರಡನೆ ಬಾರಿ accident ಆದಾಗ ನಾವು ಜನರನ್ನು

ತಡೆಯಲಿಕ್ಕೆ ಆಗಲಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಪ್ರಶ್ನೆ ಬಂತು. ಅಲ್ಲಿ ಸುಮಾರು ಐದಾರು ಸಾವಿರ ಜನ 15ನೇ ತಾರೀಖು ನೆರೆದಿದ್ದಾರೆ. ಅವತ್ತು 23 ಮನೆಗಳು ಜಖಂ ಆಗಿವೆ. 18 ವಾಹನಗಳು ಜಖಂ ಆಗಿವೆ. ಪ್ರಚೋದಿತ ಅಸಾಧಾರಣ ಹೊಗೆ ತೀಕ್ಷ್ಣವಾಗಿ ಜನ ತಡೆದುಕೊಳ್ಳಲಾರದೆ ತೊಂದರೆ ಅನುಭವಿಸುತ್ತಿದ್ದಾರೆ. ಹಾಗಾಗಿ ಮಾನ್ಯ ಲೋಕೋಪಯೋಗಿ ಸಚಿವರನ್ನು ನಾನು ಮನವಿ ಮಾಡುತ್ತಿದ್ದೇನೆ. ಆ ರಸ್ತೆಯನ್ನು ನಾವು ಅಗಲೀಕರಣ ಮಾಡಬೇಕಾಗಿದೆ. ಕಾನೂನು ಪ್ರಕಾರ ಸ್ವಾಧೀನಪಡಿಸಿಕೊಳ್ಳಲಿ. ಜೊತೆಗೆ ಅವತ್ತು ಆದಂಥ ಗಲಾಟೆಯಲ್ಲಿ ಕೆಲವರು ಆರೋಪಿಗಳು ಇದ್ದಾರೆ. ಆದರೆ ಅನಾವಶ್ಯಕವಾಗಿ ಅಮಾಯಕರನ್ನು ಬಂಧಿಸತಕ್ಕಂಥ ಕೆಲಸ ಆಗುತ್ತಿದೆ. ಅದೂ ಕೂಡ ಆಗಬಾರದು. ರಸ್ತೆ ಅಗಲೀಕರಣ ಆಗಬೇಕು. ಅದಕ್ಕೆ 10,00 ಕೋಟಿ ರೂಪಾಯಿಗಳ ಒಂದು ಅಂದಾಜುಪಟ್ಟಿಯನ್ನು ಮಾಡಿದ್ದೇವೆ. ಅದಕ್ಕೆ ಮಾನ್ಯ ಲೋಕೋಪಯೋಗಿ ಸಚಿವರು ಹಣವನ್ನು ಬಿಡುಗಡೆ ಮಾಡಬೇಕು .ಎಂದು ಹೇಳುತ್ತೇನೆ. ಇನ್ನೂ ಕೂಡ ಮಾತನಾಡತಕ್ಕಂಥ ವಿಷಯಗಳು ಬಹಳ ಇವೆ. ಇವತ್ತು ಮಾನ್ಯ ಗೃಹ ಸಚಿವರಿಗೆ ಸದನದಲ್ಲಿ ಉಪ ಮುಖ್ಯಮಂತ್ರಿಗಳಿಗೆ ಒಂದು ಮಾತು. ನಾನು ಒಬ್ಬ ಗನ್‌ಮ್ಯಾನ್ ಕೇಳಿದ್ದೆ. ಸರ್ಕಾರ ಎಷ್ಟು ವೇಗವಾಗಿ ಹೋಗುತ್ತಿದೆ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನಾನು ಒಬ್ಬ ಗನ್‌ಮ್ಯಾನ್ ಕೇಳಿದೆ. ಇವರಿಗೆ ಅಂಗರಕ್ಷಕರನ್ನು ನೀಡಿ ಎಂದು ತಾವು ಆ ಪತ್ರದ ಮೇಲೆ ಬರೆದಿರಿ. ಕಮೀಷನರ್ ಬಿದರಿಯವರಿಗೆ ಹೋಗಿ ಐದಾರು ತಿಂಗಳುಗಳಾಗಿವೆ. ಅಲ್ಲಿ ಹಾಗೆ ಇತ್ತು. ಆಮೇಲೆ ಅದು ಹೊರಗೆ ಬಂದಿರಲಿಲ್ಲ. ನಾನು ಮಿರ್ಜಿ ಸಾಹೇಬರ ಹತ್ತಿರ ಹೋದೆ. ಅವರು ಕಳುಹಿಸುತ್ತೇವೆಂದು ಹೇಳಿದರು. ಅದು ಸುಮಾರು ನಿಮ್ಮ VIP DCPಗೆ ಹೋಗಬೇಕು. ಆಮೇಲೆ Intelligenceಗೆ ಬರಬೇಕು. ಇಲ್ಲೆಲ್ಲಾ ಸುತ್ತಿಕೊಂಡು ಹೋಗಿದೆ. ಹೋದರೆ ಅಲ್ಲಿ ನಾನೇ ಎರಡು ಸಾರಿ ಹೋಗಿದ್ದೇನೆ. ನನ್ನ PA ಅವರನ್ನು ಏಳೆಂಟು ಸಾರಿ ಕಳುಹಿದ್ದೇನೆ. ಶಾಸಕರು ಕೊಟ್ಟಿರುವ ಪತ್ರಗಳೇ ಇರುವುದಿಲ್ಲ. ಹೀಗಾದರೆ ಶ್ರೀಸಾಮಾನ್ಯನ ಕೆಲಸ ಹೇಗಾಗುತ್ತದೆ ತಿಳಿಸಿ. ಕನಿಷ್ಠ ಒಬ್ಬ ಶಾಸಕರು ಬರೆದಿರುವ ಈ ಪತ್ರವನ್ನು ಗೃಹ ಸಚಿವರು ಕಳುಹಿಸಿದ್ದಾರೆ. ನೋಡೋಣ, ಒಂದೇ ದಿವಸದಲ್ಲಿ ನೀವೇನು ಮಾಡಬೇಡಿ. ವಾರ ಆಗಲಿ ತೊಂದರೆ ಇಲ್ಲ. ತಕ್ಷಣ ಅದನ್ನು ಅಲ್ಲಿಗೆ ಕಳುಹಿಸುವುದು. ನೀವು ನನಗೆ ಕೊಡದಿದ್ದರೆ ಏನೂ

ಆಗುವುದಿಲ್ಲ. ನಾವು ಗನ್‌ಮ್ಯಾನ್ ಇಟ್ಟುಕೊಳ್ಳದಿದರೆ ಏನೂ ಆಗುವುದಿಲ್ಲ. ನಮ್ಮದು ನಕ್ಸಲ್‌ಪೀಡಿತ ಪ್ರದೇಶ ಎಂದು ನಮಗೆ ಗೊತ್ತು. ಆದರೆ ನಾವು ಇಷ್ಟಪಟ್ಟು ಕೇಳುತ್ತಿಲ್ಲ. ಆದರೂ ಒಬ್ಬ ಗನ್‌ಮ್ಯಾನ್ ಇರಲಿ ಸಂದರ್ಭಕ್ಕೆ ಬೇಕಾಗುತ್ತದೆಂದು ಕೇಳಿದ್ದೇವೆ. ಅಲ್ಲಿ ಸಕಲೇಶಪುರ ಕೊಡಗು ಭಾಗದ ಪರಿಸ್ಥಿತಿ ಹೇಗಿದೆ ಎಂದು ತಮಗೆ ಗೊತ್ತಿದ್ದು ಇಷ್ಟೊಂದು ಉದಾಸೀನ ಮಾಡಿದರೆ ಆಮೇಲೆ ಏನಾದರೂ ಹೆಚ್ಚು ಕಡಿಮೆ ಆದರೆ ಬಿಡಿ ಅದಕ್ಕೆ ಶಾಸ್ತ್ರ ಇದ್ದೇ ಇದೆ. ಶಾಸ್ತ್ರ ಮಾಡುವುದಕ್ಕೆ ಬರಬಾರದು. ದಯವಿಟ್ಟು ನಮ್ಮ ಉನ್ನತ ಮಟ್ಟದ ಅಧಿಕಾರಿಗಳು ಗಮನಿಸಲಿ. ನೀವು ಹೇಳಿಸಿಕೊಳ್ಳಬಾರದು. ಬಹಳ ನೊಂದು ಹೇಳುತ್ತಿದ್ದೇನೆ. ವಿಳಂಬ ಹಾಗೂ ಉದಾಸೀನಕ್ಕೆ ಒಂದು ಮಿತಿಯಿರಬೇಕು. ಮಾನ್ಯ ಗೃಹ ಸಚಿವರು ಬರೆದಿರುವಂತಹ ಆದೇಶ ಒಬ್ಬ ಶಾಸಕರ ಪತ್ರ ಬಂದಾಗ ಎಲ್ಲದರ ಜೊತೆಯಲ್ಲಿ ಮೂಲೆಗೆ ಎಸೆಯುವುದಾದರೆ ಜನ ಸಾಮಾನ್ಯರಿಗೆ ಏನು ರಕ್ಷಣೆ ಕೊಡುತ್ತೀರಿ ನೀವು? ಪರವಾಗಿಲ್ಲ ನನ್ನ ಪತ್ರವನ್ನು ನೀವು ಮೂಲೆಗೆಸೆಯಿರಿ, ಸಾಮಾನ್ಯ ಜನರ ಕೆಲಸವನ್ನು ತುರ್ತು ಮಾಡಿಕೊಡಿ. ಶಾಸಕರ ರಕ್ಷಣೆಯಲ್ಲಿ ಹೆಚ್ಚುಕಡಿಮೆಯಾದರೆ ನೀವು ನಂತರ ಬರುತ್ತೀರಾ? ದಯಮಾಡಿ ಉದಾಸೀನ ಮನೋಭಾವದ ಆಡಳಿತವನ್ನು ಬಿಡಿ ಕೆಲಸವನ್ನು ಮಾಡಿ. ಉತ್ತಮ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕೆಂದು ಹೇಳಿ ನನಗೆ ಸಮಯ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : – ಮಾನ್ಯ ಕೃಷ್ಣಬೈರೇಗೌಡ ರವರು ಮಾತನಾಡಿ.

ಶ್ರೀ ಕೃಷ್ಣಬೈರೇಗೌಡ(ಬ್ಯಾಟರಾಯನಪುರ) : – ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು ಈಗಾಗಲೇ ಸಾಕಷ್ಟು ಮಾನ್ಯ ಶಾಸಕರುಗಳು ನಾನಾ ಇಲಾಖೆಗಳ ಬಗ್ಗೆ ಮಾತನಾಡಿರುವುದರಿಂದ ಆ ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗದೆ ಸಂಕ್ಷಿಪ್ತವಾಗಿ ಕೃಷಿ, ಕೈಗಾರಿಕೆ, ಬೆಂಗಳೂರು ಹಾಗೂ ಆಡಳಿತ ಇಷ್ಟು ಮಾತ್ರ ಮಾತನಾಡುವುದಕ್ಕೆ ಬಯಸುತ್ತೇನೆ. ಕೃಷಿ ಆಯವ್ಯಯವನ್ನು ಪ್ರತ್ಯೇಕವಾಗಿ ಸರ್ಕಾರ ಮಂಡಿಸಿದೆ. ಮಂಡಿಸಿ ಕೃಷಿ ಕ್ಷೇತ್ರದಲ್ಲಿ ನಾವು ಬಹಳ ಪರಿಣಾಮಕಾರಿಯಾಗಿ ಕೃಷಿ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯನ್ನು ಈ ಸರ್ಕಾರ ತಂದಿದೆಯೆಂದು ಹೇಳಿ ಸಾಕಷ್ಟು ಪ್ರಚಾರವನ್ನು ಪಡೆದುಕೊಳ್ಳುತ್ತಿದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೃಷಿ ಆಯವ್ಯಯದಲ್ಲಿ ಬಹಳ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ ಕೃಷಿ ಆಯವ್ಯಯದ ಪ್ರಮುಖ ಸಾಧನೆಗಳು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. 2010–11ನೇ ಸಾಲಿನಲ್ಲಿ ಇವರ ಸಾಧನೆ ಏನೆಂದರೆ 140 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳ ಉತ್ಪಾದನೆಯಾಗಿದೆ. 2011–12 ನೇ ಸಾಲಿನಲ್ಲಿ ಇವರ ಸಾಧನೆ ಏನೆಂದರೆ ಉತ್ಪಾದನೆಯಲ್ಲಿ ಶೇ.10% ರಷ್ಟು ಕುಂಠಿತ ಮಾಡಿರುವುದೇ ಈ ಸರ್ಕಾರದ ಸಾಧನೆಯಾಗಿದೆ. ಇದು ನಾನು ಹೇಳುತ್ತಿರುವುದಲ್ಲ. ಆಯವ್ಯಯದಲ್ಲಿ ಇರುವುದನ್ನು ನಾನು ಹೇಳುತ್ತಿದ್ದೇನೆ. 140 ಇದ್ದುದು 124 ಲಕ್ಷ ಟನ್‌ಗಳಿಗೆ ಬಂದಿದೆ. ನಾನು ಕಳೆದ ಹತ್ತು ವರ್ಷಗಳಿಂದ ನೋಡಿದ ಹಾಗೆ ಅವರು ಏನು ಗುರಿಯನ್ನು ಇಟ್ಟುಕೊಂಡಿದ್ದರೋ ಆ ಗುರಿಯನ್ನು ಮೀರುವುದು ಇತ್ತೀಚಿನ ದಿನಗಳಲ್ಲಿ ವಾಡಿಕೆಯಾಗಿದೆ. ಆದರೆ ಗುರಿಯಲ್ಲಿ ಕೇವಲ 92% ರಷ್ಟು ಸಾಧನೆಯಾಗಿದೆ. 10% ರಷ್ಟು ಕುಂಠಿತವಾಗಿದೆ.

ಉಪಾಧ್ಯಕ್ಷರು : – ಅದು ಬರದಿಂದ ಆಗಿರುವುದು

ಶ್ರೀ ಕೃಷ್ಣಭೈರೇಗೌಡ : – ಏನು ಬೇಕಾದರೂ ಹೇಳಬಹುದು. ಸಬೂಬು ಕೊಡುವುದಕ್ಕೆ ಕಳೆದ ವರ್ಷ ಈ ವರ್ಷದಷ್ಟು ಭೀಕರ ಬರಗಾಲ ಇರಲಿಲ್ಲ. ಕಳೆದ ವರ್ಷ ಫೀ–ಮಾನ್‌ಸೂನ್ ಮತ್ತು ಮಾನ್–ಸೂನ್ ಸುಮಾರಾಗಿತ್ತು. ಕೇವಲ ಹಿಂಗಾರು ಮಳೆ ಸ್ವಲ್ಪ ಮಟ್ಟಿಗೆ ಕೈಕೊಟ್ಟಿತ್ತು. ಆದರೆ ಈ ವರ್ಷ ಆರಂಭದಿಂದಲೇ ನಮಗೆ ಹೊಡೆತ ಬೀಳುತ್ತಿದೆ. ಕೇವಲ ಆಹಾರ ಧಾನ್ಯಗಳಾದರೆ ಪರವಾಗಿಲ್ಲ. ಆದರೆ ಕೃಷಿ ಕ್ಷೇತ್ರದ ಬೆಳವಣಿಗೆಯೇ 2.9% ರಷ್ಟು ಕುಂಠಿತವಾಗಿದೆ. ಇಡೀ ಕ್ಷೇತ್ರದ ಬೆಳವಣಿಗೆ ನಾವೇನು ಕೃಷಿ GDP ಎಂದು ಹೇಳುತ್ತೇವೆಯೋ ಅದು 2.9% negative growth ಇದೆ. ನಾವೇನು ಕೃಷಿ ಕ್ಷೇತ್ರವನ್ನು ಉದ್ಧಾರ ಮಾಡಿದ್ದು? ನಾನೇನು ಕೇವಲ ಈ ಸರ್ಕಾರವನ್ನಷ್ಟೆ ದೂಷಣೆ ಮಾಡುವುದಕ್ಕೆ ಬಯಸುವುದಿಲ್ಲ. ಇದು ಕೃಷಿ ಕ್ಷೇತ್ರದ ಬಗ್ಗೆ ನಾವೇನೋ ಮಾಡುತ್ತೇವೆಂದು ಹೇಳಿ ಕೃಷಿ ಬಜೆಟ್ ಜೊತೆಗೆ ಕೊಟ್ಟಿರುವ estimate ಅನ್ನು ತೆಗೆದು ನೋಡಿದೆ. ಇದರಲ್ಲಿ 325 ಲೈನ್ item ಇದೆ. ಹಿಂದೆ ಕೋಲಾರದಲ್ಲಿ ಶಾಸಕನಾಗಿದ್ದ ಸಂದರ್ಭದಲ್ಲಿ ಕೃಷಿ ಇಲಾಖೆಯಿಂದ ಏನೇನು ಯೋಜನೆಗಳಿದೆಯಂಬ ಬಗ್ಗೆ ಒಂದು ಪಟ್ಟಿಯನ್ನು ತರಿಸಿದೆ. ಅದರಲ್ಲಿ ಅವರು 48 ಪುಟಗಳ ಪಟ್ಟಿಯನ್ನು

ತಂದುಕೊಟ್ಟರು. ನೀವು ಈ ಪಟ್ಟಿಯನ್ನು ಓದಿದರೆ ಇದರಲ್ಲಿ ನಾವೇ ಕಳೆದುಹೋಗುತ್ತೇವೆ. ಅಷ್ಟು ಯೋಜನೆಗಳನ್ನು ಮಾಡಿದ್ದಾರೆ. 20–30 ವರ್ಷಗಳ ಹಿಂದೆ ಆರಂಭ ಮಾಡಿದ ಯೋಜನೆಗಳು ಇವತ್ತಿಗೂ ವರ್ಷ ವರ್ಷಕ್ಕೆ ಏನಾದರೊಂದು ಟೋಕನ್ ಅಲೋಕೇಷನ್ ಕೊಡುವಂತಹದು. ಅದು ಇವತ್ತಿಗೆ ಅವಶ್ಯಕತೆಯಿದೆಯೇ ಇಲ್ಲವೋ ಎಂಬ ಬಗ್ಗೆ ವಿಚಾರ ಮಾಡುವುದಿಲ್ಲ. 30 ವರ್ಷಗಳ ಹಿಂದೆ ನಮಗೆ ತಿನ್ನುವುದಕ್ಕೆ ಊಟ ಕೂಡ ಇರಲಿಲ್ಲ. ಅಂತಹ ಕಾಲದಲ್ಲಿ ಆರಂಭವಾದ ಯೋಜನೆಗಳನ್ನು ಇವತ್ತಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. 325 ಲೈನ್ ಐಟಂ ಇದೆ. ರೈತನಿಗೆ ಇವತ್ತು ನಾವು ಕೃಷಿ ಕ್ಷೇತ್ರವನ್ನು ಸುಧಾರಣೆ ಮಾಡಬೇಕು. ಅವನಿಗೆ ಬೇಕಾಗಿರುವುದು ನೀರಾವರಿ ಸೌಲಭ್ಯ, ಮಾರುಕಟ್ಟೆ ಸೌಲಭ್ಯ, ವಿದ್ಯುತ್ ಸೌಲಭ್ಯ ಹಾಗೂ ಕೃಷಿಗೆ ಪೂರಕವಾದಂತ ಸಲಕರಣೆಗಳು ಅಂದರೆ ಒಂದು ಒಳ್ಳೆಯ ಕೃಷಿ ವಿಶ್ವವಿದ್ಯಾಲಯ, ಒಳ್ಳೆಯ ಬೀಜ ಉತ್ಪಾದನೆಗೆ ಬೀಜಗಳು ಮತ್ತು ಸಾಲ ಸೌಲಭ್ಯಗಳು ಬೇಕು. ಇಷ್ಟನ್ನು ಕೊಟ್ಟರೆ ರೈತ ತನ್ನ ಸ್ವಂತ ಕಾಲ ಮೇಲೆ ತಾನು ನಿಲ್ಲುತ್ತಾನೆ. ನಾವು ಅದನ್ನು ಮಾಡುವುದಿಲ್ಲ. ನಾವೇನು ಮಾಡುತ್ತೇವೆಂದರೆ, ಇದಕ್ಕೆ ತೆಗೆದುಕೋ ಒಂದು ಸಾವಿರ ರೂ.ಗಳನ್ನು ಕೊಡುತ್ತೇವೆ. ನಾವು ಹೀಗೆ ಕೊಡುತ್ತಿರಬೇಕು ಅವನು ಕೈ ನೀಡುತ್ತಿರಬೇಕು. ಅವನು ಸ್ವಂತ ಕಾಲ ಮೇಲೆ ನಿಲ್ಲುವ ಹಾಗಿಲ್ಲ. ನಾವು ಅವನಿಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅವನು ತನ್ನ ಸ್ವಂತ ಕಾಲ ಮೇಲೆ ನಿಲ್ಲುವಂತಹ ಶಕ್ತಿ ನಮ್ಮ ನಾಡಿನ ರೈತರಿಗಿದೆ. ಆ ಸೌಲಭ್ಯ ಕೊಡುವ ಕಡೆ ನಾವು ಚಿಂತನೆ ಮಾಡುತ್ತಿಲ್ಲ. ಸಣ್ಣಪುಟ್ಟ ಸಹಾಯ ಧನಗಳನ್ನು ಕೊಟ್ಟು ಅವನು ಯಾವತ್ತೂ ನಮ್ಮ ಮೇಲೆ ಅವಲಂಬನೆಯಾಗಿರಬೇಕೆಂಬುದಷ್ಟಕ್ಕೆ ಸೀಮಿತವಾಗಿದೆ. General ಆಗಿ ಹೇಳುತ್ತಿದ್ದೀರಿ, ಇದಕ್ಕೆ ಉದಾಹರಣೆ ಏನೆಂದು ತಾವು ಕೇಳಬಹುದು. ಇವತ್ತು ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ನೀರಾವರಿಗೆ ಹೆಚ್ಚಿನ ಅನುದಾನವನ್ನು ಇಟ್ಟಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ನೀವು ಎಷ್ಟೇ ಹೆಚ್ಚು ಅನುದಾನವನ್ನು ಇಟ್ಟರೂ plan size ನಲ್ಲಿ ಇಟ್ಟಿರುವ ಕೇವಲ 18%. ನಮ್ಮ ರಾಜ್ಯದ ನಿದರ್ಶನವನ್ನು ಕೇವಲ 7–8 ವರ್ಷಗಳ ಹಿಂದೆ ತೆಗೆದುಕೊಂಡರೆ plan ನಲ್ಲಿ ನೀರಾವರಿಗೆ ಕೇವಲ 29% ಇಟ್ಟಿದ್ದೀರಿ, ಕೆಲವು ಸಂದರ್ಭಗಳಲ್ಲಿ 30% ಕ್ಕಿಂತ ಹೆಚ್ಚು plan size ನಲ್ಲಿ irrigation ಗೆ ಹಣವನ್ನು ಇಡುತ್ತಿದ್ದರು,

ಆದರೆ ಇವತ್ತು 18% ರಷ್ಟು ಹಣವನ್ನು ಇಟ್ಟಿದ್ದೀರಿ. ಅದರ ಅರ್ಥ ಏನು? ಒಂದು ನೀರಾವರಿ ಸೌಲಭ್ಯವನ್ನು ನಮ್ಮ ರಾಜ್ಯದಲ್ಲಿ ಸೃಷ್ಟಿ ಮಾಡುವುದಕ್ಕೆ ಅವಕಾಶವೇ ಇಲ್ಲ. ಏನೆಲ್ಲಾ ನೀರಾವರಿಯನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯ ಅದೆಲ್ಲಾ ಆಗಿದೆ. ಇನ್ಯಾವುದೂ ಉಳಿದಿಲ್ಲ. ಅದು ಅಲ್ಲವೆಂದರೆ ನಿಮಗೆ ನೀರಾವರಿ ಮಾಡಬೇಕೆಂಬ ಆಸಕ್ತಿ ಇಲ್ಲವೆಂದ ಹಾಗೆ ಆಯಿತು. ಅದೇ ಕೃಷಿ ಆಯವ್ಯಯದಲ್ಲಿ ನೀರಾವರಿಯನ್ನು ಇಷ್ಟು ಮಾಡಬೇಕಾಗಿದೆ ಅಷ್ಟು ಮಾಡಬೇಕಾಗಿದೆಯೆಂದು ಹೇಳುತ್ತಾರೆ. ಕೃಷ್ಣಾ ಕಣಿವೆಯಲ್ಲಿ ಮಾಡುವುದಕ್ಕೆ ಇನ್ನೂ ಸಾಕಷ್ಟು ಅವಕಾಶಗಳಿವೆ. ಅದಕ್ಕೆ ಏಳು ವರ್ಷದ ಯೋಜನೆಗಳನ್ನು ತಾವು ಹಾಕಿಕೊಂಡಿದ್ದೀರಿ. ಆ ಏಳು ವರ್ಷದಲ್ಲಿ ಮಾಡುವ ಕೆಲಸವನ್ನು ಮೂರು ವರ್ಷದಲ್ಲಿ ಮಾಡಿದರೆ 13 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕೊಡಬಹುದೆಂದು ಹೇಳಿ ನಿಮ್ಮ ಕೃಷಿ ಬಜೆಟ್‌ನಲ್ಲಿಯೇ ಇದೆ. ಏಕೆ ಮಾಡುತ್ತಿಲ್ಲ? ಹೋದ ವರ್ಷ ಕೂಡ ನೋಡಿ. irrigation ಗೆ ಬಜೆಟ್‌ನಲ್ಲಿ ಇಷ್ಟು ಹಣವೆಂದು ಇಡುತ್ತಾರೆ. ಅಷ್ಟು ಖರ್ಚಾಗುವುದಿಲ್ಲ. ಎಂಟು ಸಾವಿರ ಕೋಟಿ ಈ ಬಾರಿ ಹೇಳಿದ್ದೀರಿ. ಆದರೆ ಎಷ್ಟು ಖರ್ಚಾಗಿದೆಯೆಂದು ಗೊತ್ತಿಲ್ಲ. ಕೃಷ್ಣಾ ಕಣಿವೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಏಳು ವರ್ಷ ಏಕೆ ಬೇಕು ನಿಮಗೆ? ಅದಕ್ಕೆ ಬೇಕಾದಂತಹ ಹಣವನ್ನು ಮೂರು ವರ್ಷದಲ್ಲಿ ಇಡಿ. ಮಾನ್ಯ ವೈ.ಎಸ್.ರಾಜಶೇಖರ್ ರೆಡ್ಡಿಯವರನ್ನು ಆಂಧ್ರ ಪ್ರದೇಶದಲ್ಲಿ ಇವತ್ತು ಏಕೆ ಸ್ಮರಿಸುತ್ತಾರೆಂದರೆ ಅವರು ಇದ್ದಂತಹ ಐದು ವರ್ಷದಲ್ಲಿ 50,000 ಕೋಟಿ ರೂ.ಗಳಿಗಿಂತ ಹೆಚ್ಚು ನೀರಾವರಿಗೆ ಖರ್ಚು ಮಾಡಿದರು. ಬರಡು ಭೂಮಿಗೆಲ್ಲಾ ನೀರನ್ನು ಹರಿಸಿದರು. ಅದಕ್ಕೆ ಇವತ್ತು ಮಾನ್ಯ ವೈ.ಎಸ್.ರಾಜಶೇಖರ ರೆಡ್ಡಿಯವರ ಪ್ರತಿಮೆ ಇಡೀ ಆಂಧ್ರ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಕಾಣುತ್ತದೆ. ನಾವೇನಾದರೂ ನಿಮಗೆ ನೀರಾವರಿಗೆ ಕಡಿಮೆ ಮಾಡಿ ಎಂದು ಹೇಳಿದ್ದೇವೆಯೇ? ನೀರಾವರಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ನೀವು ಖರ್ಚು ಮಾಡುವುದಕ್ಕೆ ತಯಾರಿಲ್ಲ. ನೀರಾವರಿ ಸೌಲಭ್ಯವನ್ನು ಒದಗಿಸಿದರೆ ರೈತ ತನ್ನ ಸ್ವಂತ ಕಾಲ ಮೇಲೆ ನಿಲ್ಲುತ್ತಾನೆ. ನಂತರ ಸಬ್ಸಿಡಿ ಕೊಟ್ಟು ಅವನಿಂದ ಓಟು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವನಿಗೆ ಯಾವುದೇ ಕಾರಣಕ್ಕೂ ಸ್ವಾಯತ್ತತೆಸಿಗಬಾರದು, ಅವನು ನಿರಂತರವಾಗಿ ನಮ್ಮನ್ನೇ ಅವಲಂಬಿಸಿರಬೇಕು.

ಹಾಗಾಗಿ ತಾವೇನು ನೀರಾವರಿಗೆ ಸುಮ್ಮನೆ ತೋರಿಸುವುದಕ್ಕೆ ಹಣವನ್ನು ಕೊಡುತ್ತೀರಿ, ಇದನ್ನು ಬಿಟ್ಟು ಯೋಜನೆಗಳನ್ನು ಪೂರೈಸುವುದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡುವಂತಹ ಕೆಲಸ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ಬಯಲು ಸೀಮೆ ಪ್ರದೇಶಗಳ ಎತ್ತಿನ ಹೊಳೆ ಯೋಜನೆಗೆ ಮಂಜೂರಾತಿ ಕೊಟ್ಟಿದ್ದು, 400 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಬಹುಶ: ಅದರಿಂದ ಈ ಭಾಗದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎತ್ತಿನ ಹೊಳೆ ಯೋಜನೆಯಲ್ಲಿ ಕುಡಿಯುವ ನೀರಿನ ಅವಶ್ಯಕತೆಯನ್ನು ಸಮರ್ಪಕವಾಗಿ ಪೂರೈಸಬಹುದು. ಇನ್ನೊಂದು ಕಡೆ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಮಳೆಗಾಲದಲ್ಲಿ ಹೆಚ್ಚುವರಿ ನೀರು ಹರಿದು ಸಮುದ್ರವನ್ನು ಸೇರುತ್ತದೆ. ಕೆಲವರು ಅದಕ್ಕೆ ನದಿ ತಿರುಗಿಸುವಂತಹ ತಪ್ಪು ವ್ಯಾಖ್ಯಾನ ಮಾಡಿ ಅದರ ಬಗ್ಗೆ ಎಲ್ಲರಿಗೂ ಆತಂಕವನ್ನು ಸೃಷ್ಠಿ ಮಾಡಿದ್ದಾರೆ. ನದಿ ತಿರುಗಿಸುವಂತಹ ಪರಿಸರದ ವಿರುದ್ದ ಹೋರಾಟ ಮಾಡುವಂತಹ ಕೆಲಸವನ್ನು ಮನುಷ್ಯ ಯಾವತ್ತೂ ಮಾಡಬಾರದು. ಆದರೆ ಮಳೆಗಾಲದಲ್ಲಿ ಸಮುದ್ರಕ್ಕೆ ನೇರವಾಗಿ ಹೋಗುವ ನೀರನ್ನು ಸ್ವಲ್ಪಮಟ್ಟಿಗೆ ತೆಗೆದುಕೊಂಡು ಬಯಲುಸೀಮೆ ಪ್ರದೇಶದಲ್ಲಿರುವ ನೀರಿನ ದಾಹವನ್ನು ತಣಿಸಿ ಎಂದು ಬಹಳ ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ಅದರ ಬಗ್ಗೆ ವರದಿ ಬಂದಿದೆಯೆಂದು ಕೃಷಿ ಆಯವ್ಯಯದ 97 ನೇ ಐಟಂನಲ್ಲಿ ಹೇಳಿದ್ದಾರೆ. ನಮಗೇಕೆ ವರದಿಯನ್ನು ಕೊಡುವುದಿಲ್ಲ? ಅದರ ಬಗ್ಗೆ ವೈಜ್ಞಾನಿಕವಾದ ಚರ್ಚೆಯಾಗಬೇಕಾಗಿದೆ. ಹೈದರಾಬಾದ್ ಸಂಸ್ಥೆಗೆ ವರದಿಯನ್ನು ತಯಾರು ಮಾಡುವುದಕ್ಕೆ ಕೊಟ್ಟಿದ್ದರು, ಅದು ಈಗ ಬಂದಿದೆಯೆಂದು ಹೇಳುತ್ತಿದ್ದೀರಿ. ಆದರೆ ಸಾರ್ವಜನಿಕವಾಗಿ ಅದು ಯಾರಿಗೂ ಸಿಕ್ಕಿಲ್ಲ ಅದು ಏನಾಗಿದೆ? ಅದರ ಸಾಧಕ ಬಾಧಕಗಳೇನು? ನಾವು ಆಗಲೇಬೇಕೆಂದು ಹೇಳುವುದಿಲ್ಲ. ವೈಜ್ಞಾನಿಕವಾಗಿ ಸಾಧ್ಯವಿದ್ದರೆ ಮಾಡಿಯೆಂದು ಹೇಳುವಂತಹವರು. ಕನಿಷ್ಠ ಅದರ ಬಗ್ಗೆ ನಿಷ್ಪಕ್ಷವಾದ ಚರ್ಚೆಯಾಗಬೇಕೆಂದು ಹೇಳಿದರೆ, ಅವರೇನು ವರದಿ ಕೊಟ್ಟಿದ್ದಾರೆಂಬ ಮಾಹಿತಿಯನ್ನು ನಮಗೆ ಒದಗಿಸಿದರೆ, ಮುಂದೆ ಏನೆಂದು ನಾವು ನೋಡಬಹುದು. ಆದರೆ ಅದರ ಮೇಲೆ detail ವರದಿಯನ್ನು ತಯಾರು ಮಾಡುವುದಕ್ಕೆ ದಯವಿಟ್ಟು ನಮ್ಮಂತಹ ಜನ ಪ್ರತಿನಿಧಿಗಳಿಗೆ ಹಾಗೂ

ಅದರ ಬಗ್ಗೆ ಹೋರಾಟ ಮಾಡಿದಂತಹವರಿಗೆ ಕೊಟ್ಟರೆ ಮುಂದೆ ಸಾಧ್ಯವೋ ಅಥವಾ ಇಲ್ಲವೋ ಎಂಬ ಬಗ್ಗೆ ತೀರ್ಮಾನ ಮಾಡಬಹುದು. ನಮ್ಮ ಕಣ್ಣನ್ನು ಒರೆಸುವುದಕ್ಕೋಸ್ಕರ ಅದನ್ನು ಬಜೆಟ್‌ನಲ್ಲಿ mention ಮಾಡಿ, ಈ ರೀತಿಯಾಗಿ ಮಾಡುವುದು ಒಳ್ಳೆಯದಲ್ಲ. ನಿಮಗೆ ಅದರ ಬಗ್ಗೆ ಕಾಳಜಿ ಇದ್ದರೆ ದಯಮಾಡಿ ಅದನ್ನು ಒದಗಿಸಿಕೊಡಿ. ನಾವು ಆ ನದಿಗಳನ್ನು ಈ ಕಡೆ ತಿರುಗಿಸಿ ಎಂದು ಹೇಳುವಂತಹವರಲ್ಲ. ಕರಾವಳಿ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಅದನ್ನು ಪರಿಹರಿಸಬೇಕು ಜೊತೆಗೆ ಬಯಲು ಸೀಮೆ ಪ್ರದೇಶದಲ್ಲಿ ನಮಗೇನು ಸಮಸ್ಯೆಯಿದೆ ಅದನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವಂತಹ ಯೋಜನೆಗಳನ್ನು ನಾವು ಹಾಕಿಕೊಳ್ಳಬೇಕು. ಇನ್ನು ಕೃಷಿಯಲ್ಲಿ ತೋಟಗಾರಿಕೆ, ನಮ್ಮ ರಾಜ್ಯದಲ್ಲಿನ ತೋಟಗಾರಿಕೆ ವಿಷಯಕ್ಕೆ ಬಂದರೆ ಇರುವುದೇ ಕೆಲವೊಂದು ಪ್ರಮುಖವಾದ ಬೆಳೆಗಳು. ದ್ರಾಕ್ಷಿ, ಮಾವು, ಅಡಿಕೆ ಮತ್ತು ದಾಳಿಂಬೆ. ಮಾವು ಬಹಳ ವರ್ಷದಿಂದ ನಾವು ಬೆಳೆಯುತ್ತಿದ್ದೇವೆ. ಇವತ್ತಿನವರೆಗೆ ಯಾವುದೇ ಸರ್ಕಾರಗಳು ಆ ಮಾವಿಗೆ ಒಳ್ಳೆಯ ಮಾರುಕಟ್ಟೆಯನ್ನು ಒದಗಿಸುವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಸರ್ಕಾರ ಬಂದು ನಾಲ್ಕು ವರ್ಷಗಳಾಯಿತು. ಜಪಾನ್ ಮತ್ತು ಅಮೇರಿಕಾದಂತಹ ದೇಶಗಳು ಮಾವನ್ನು ಆಮದು ಮಾಡಿಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾವೆ. ಮೊದಲಿಗೆ ಅವರು ಒಪ್ಪಿರಲಿಲ್ಲ. ಇವತ್ತಿಗೂ ಸಹ ದೊಡ್ಡ ಪ್ರಮಾಣದಲ್ಲಿ ಮಾವನ್ನು ಆ ದೇಶಗಳಿಗೆ ರಫ್ತು ಮಾಡತಕ್ಕ ವ್ಯವಸ್ಥೆಯನ್ನು ನಮ್ಮಿಂದ ಮಾಢುವುದಕ್ಕಾಗಿಲ್ಲ. ದಾಳಿಂಬೆಗೆ ಅದೇನೋ ಒಂದು ರೋಗ ಬಂದು ಬಿಜಾಪುರ ಹಾಗೂ ಬಾಗಲಕೋಟೆ ಭಾಗದಲ್ಲಿದ್ದ ದಾಳಿಂಬೆ ತೋಟಗಳೆಲ್ಲಾ ಹಾಳಾಗಿದೆ. ಏನು ರೋಗ ಬಂದಿದೆಯೆಂದು ನೋಡುವುದಕ್ಕೆ ತಮ್ಮಿಂದ ಆಗಿಲ್ಲ. ಇನ್ನೂ ತಮಗೆ ಗೊತ್ತಿರುವ ಹಾಗೆ ಅಡಿಕೆಗೆ ಹಳದಿ ಎಲೆ ರೋಗ ಬಂದು ಅದಕ್ಕೂ ಸಹ ಇಲ್ಲಿಯವರೆಗೆ ಪರಿಹಾರ ಕೊಡುವುದಕ್ಕಾಗಿಲ್ಲ. ಆದರೆ ನಮ್ಮ ಕೃಷಿ ಬಜೆಟ್‌ನಲ್ಲಿ 325 ಲೈನ್ ಐಟಂ ಇದೆ. ಕೃಷಿಕನಿಗೆ ಏನು ಸಮಸ್ಯೆ ಇದೆ ಅದಕ್ಕೆ ಪರಿಹಾರ ಕೊಡುವಂತಹ ಸಾಧನ ನಮ್ಮ ಹತ್ತಿರ ಇಲ್ಲ. ಕೃಷಿ ವಿಶ್ವವಿದ್ಯಾಲಯಗಳಿದ್ದಾವೆ. ಇದು ಬಹಳ ಸ್ವಾರಸ್ಯಕರ, ಮಾನ್ಯ ಅಧ್ಯಕ್ಷರೆ, ಹೊಸದಾಗಿ ರಾಯಚೂರು ಹಾಗೂ ಬಾಗಲಕೋಟೆಯಲ್ಲೊಂದು ಕೃಷಿ ವಿಶ್ವವಿದ್ಯಾಲಯಗಳನ್ನು ತೆರೆದರು. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಈ ರೈತರ

ಬದುಕು ತಮಗೂ ಗೊತ್ತಿದೆ. ನಾನೇನು ಒಬ್ಬ ರೈತನ ಮಗನೆಂದು ಹೇಳಿಕೊಳ್ಳುವುದಕ್ಕೆ ಬಯಸುವುದಿಲ್ಲ. ಆದರೂ ನಾನು ಕಂಡ ಹಾಗೆ ನನ್ನ ಅನುಭವದಲ್ಲಿ ರೈತ ಎಂದರೆ ಅವನು ತೋಟಗಾರಿಕೆ ರೈತ, ಅವನು ಹೈನುಗಾರಿಕೆ ರೈತ ಅಥವಾ ಕೇವಲ ಕೃಷಿ ರೈತ ಈ ರೀತಿ ರೈತನ ಬದುಕಿನಲ್ಲಿ ಯಾವುದೇ ಬೇರ್ಪಡಿಕೆಯಿಲ್ಲ. ಯಾವ ರೈತ ಇದ್ದಾನೆ ಅವನು ಹಾಲನ್ನು ಉತ್ಪಾದನೆ ಮಾಡುತ್ತಾನೆ, ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಾನೆ ಹಾಗೂ ಬೇರೆ ಬೇರೆ ಕೃಷಿ ಬೆಳೆಗಳನ್ನೂ ಸಹ ಬೆಳೆಯುತ್ತಾನೆ, ರೈತನ ಬದುಕಿನಲ್ಲಿ ಯಾವುದೇ ಬೇರ್ಪಡಿಕೆಗಳಿಲ್ಲ. ಆದರೆ ಇವರು ವಿಶ್ವವಿದ್ಯಾಲಯಗಳನ್ನು ಮಾಡುವಾಗ ತೋಟಗಾರಿಕೆಗೆ ಒಂದು ಪ್ರತ್ಯೇಕವಾದ ವಿಶ್ವವಿದ್ಯಾಲಯ ಮಾಡಿದ್ದೀರಿ. ನಾನು ಕೇವಲ ತೋಟಗಾರಿಕೆ ರೈತ ಎಂದು ಹೇಳಿಕೊಳ್ಳುವ ಯಾವುದಾದರೂ ಒಬ್ಬ ರೈತನನ್ನು ತೋರಿಸಿ. ವೆಟರ್ನರಿಗೆ ಒಂದು ಪ್ರತ್ಯೇಕವಾಗಿ ಮಾಡಿದ್ದಾರೆ. ಯಾವುದಾದರೂ ಒಂದನ್ನು ತೋರಿಸಿ ನೀವು? ಯಾವ ರೈತ ಕೃಷಿ ಮಾಡುತ್ತಾನೋ ಅವನು ಹೈನುಗಾರಿಕೆಯನ್ನೂ ಮಾಡುತ್ತಾನೆ. ಬರೀ ಹೈನುಗಾರಿಕೆ ಮಾಡುವಂತಹವರು ಯಾರೂ ಇಲ್ಲ. ನಾನು ಸರ್ಕಾರಕ್ಕೆ ಸವಾಲನ್ನು ಹಾಕುತ್ತೇನೆ. ತೋಟಗಾರಿಕೆ, ಕೃಷಿ ಮತ್ತು ವೆಟರ್ನರಿ ಈ ಮೂರು ಸಹ ಬೆರೆತು ನಾವು ರೈತರಾಗಿರುವುದು. ರೈತನ ಬದುಕಲ್ಲಿ ಇಲ್ಲದಿರುವ ಕೃತಕವಾದವುಗಳನ್ನು ನೀವು ಸೃಷ್ಟಿ ಮಾಡಿ ಅದರ ಆಧಾರದ ಮೇಲೆ ಪ್ರತ್ಯೇಕವಾದ ವಿಶ್ವವಿದ್ಯಾಲಯಗಳನ್ನು ಮಾಡಿದ್ದೀರಿ. ಕೃಷಿ ತಜ್ಞರನ್ನ ನಾವು ಕೇಳಿದರೆ ಅವರು ನಗುತ್ತಾರೆ. ಇದು ಕೇವಲ ರಾಜಕೀಯಕ್ಕೋಸ್ಕರ ಮಾಡಿಕೊಂಡಿರುವುದೆಂದು ಹೇಳುತ್ತಾರೆ. ಯಾರೋ ಒಬ್ಬನನ್ನು ವೈಸ್ ಚಾನ್ಸಲರ್ ಮಾಡುವ ದೃಷ್ಟಿಯಿಂದ ಕೃಷಿ ವಿಶ್ವ ವಿದ್ಯಾಲಯವನ್ನು ಮಾಡಿ ಎಂದು ಹೇಳುವುದು ಬಾಗಲಕೋಟೆಯಲ್ಲಿ ಮಾಡಿರುವ Horticulture University ಯನ್ನು Upgrade ಮಾಡಿ. comprehensive Agriculture University ಎಂದು ಅದನ್ನು upgrade ಮಾಡಿ ರಾಯಚೂರಿನಲ್ಲಿ ಮಾಡಿರುವ ವಿಶ್ವವಿದ್ಯಾಲಯವನ್ನು agriculture ಎಂದು ಏಕೆ ಸೀಮಿತ ಮಾಡಿದ್ದೀರಿ? ಎಲ್ಲವನ್ನೂ combine ಮಾಡಿ, ಇಲ್ಲಿಂದ ಯಾರಾದರೂ Horticulture ವಿಷಯವನ್ನು ಓದಬೇಕಾದರೆ ಬಾಗಲಕೋಟೆಗೆ ಹೋಗಬೇಕು. ವೆಟರ್ನರಿ ಓದಬೇಕೆಂದರೆ ಬೀದರ್‌ಗೆ ಹೋಗಬೇಕು. ಕೃಷಿ ಬಗ್ಗೆ ಓದಬೇಕೆಂದರೆ

ಧಾರವಾಡಕ್ಕೆ ಹೋಗಬೇಕು, ಇಲ್ಲ ಬೆಂಗಳೂರಿಗೆ ಬರಬೇಕು. ರೈತರ ಬದುಕನ್ನು ಯಾವತ್ತಾದರೂ ತಾವು ನೋಡಿದ್ದೀರಾ? ನೀವು ಕೃಷಿ ಮಾಡಬೇಕಾದರೆ ಈ ಕಡೆ ಹೋಗು, ತೋಟಗಾರಿಕೆ ಮಾಡಬೇಕಾದರೆ ಆ ಕಡೆ ಹೋಗು ಎನ್ನುವಂಥದ್ದು ಸರಿಯಿಲ್ಲ. ರೈತರ ಬದುಕಿಗೂ ಮತ್ತು ನೀವು ಮಾಡತಕ್ಕಂತಹ ಯೋಜನೆಗಳಿಗೂ ಸಂಬಂಧವೇ ಇಲ್ಲ. ಯಾರನ್ನೋ ಪುಷ್ಠೀಕರಣ ಮಾಡುವುದಕ್ಕೋಸ್ಕರ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿ, ಅದರಿಂದ ನಾವು ಏನನ್ನು ನಿರೀಕ್ಷೆ ಮಾಡುವ ಹಾಗೂ ಇಲ್ಲ. ದಾಳಿಂಬೆ ಹಾಗೂ ಅಡಿಕೆ ಬೆಳೆ ಹಾಳಾಗಿದೆ. ಈ ಕಡೆ ನಮಗೆ ಮಾವಿಗೆ ಮಾರುಕಟ್ಟೆ ಬೆಲೆ ಕೊಡುವುದಕ್ಕಾಗಿಲ್ಲ. ನಿಮ್ಮ ವಿಶ್ವವಿದ್ಯಾಲಯಗಳಿಗೆ ಅದಕ್ಕೆ ಸ್ಪಂದಿಸುವಂತಹ ಆಲೋಚನೆಗಳು ಇಲ್ಲ. ಏಕೆಂದರೆ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ನೀವು ತೆಗೆದುಕೊಂಡು ಹೋಗಿ ಬಾಗಲಕೋಟೆಗೆ ಹಾಕಿದ್ದೀರಿ. ಇಲ್ಲಿ ಮಾವನ್ನು ಬೆಳೆಯುವವರನ್ನು ಕೇಳುವವರ್ಯಾರಿದ್ದಾರೆ? ದಯವಿಟ್ಟು ಈ ನೀತಿಯನ್ನು ಬೇರ್ಪಡಿಸಿ, ಈ ನೀತಿಯನ್ನು ಕೈಬಿಟ್ಟು ಏನು ಕೃಷಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿವೆ ಎಲ್ಲವನ್ನೂ ಸಹ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳೆಂದು ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ರೈತರಿಗೆ ಸಮಸ್ಯೆಯಿರುವುದು ಮಾರುಕಟ್ಟೆ, ತಮ್ಮ ಬಜೆಟ್‌ನಲ್ಲಿ ಪಾರದರ್ಶಕವಾದ ಮಾರುಕಟ್ಟೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ನೇರ ಖರೀದಿ ಕೇಂದ್ರಗಳನ್ನು ಹಾಗೂ ರೈತ ಹಾಗೂ ಗ್ರಾಹಕ ಮಾರುಕಟ್ಟೆಗಳನ್ನು ಮಾಡುತ್ತೇವೆ. ಇ–ಕಾಮರ್ಸ್‌ನ್ನು ಮಾಡುತ್ತೇವೆಂದು ಹೇಳಿದ್ದಾರೆ. Contract farmingಗೆ ಕೂಡ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. Global Investors Meet ಬೇರೆ ಮಾಡಿದ್ದೀರಿ. ಇಲ್ಲಿ ಇದನ್ನೆಲ್ಲಾ ಮಾಡುತ್ತೀರಿ. ಆದರೆ ಅಲ್ಲಿ agriculture retail ನಲ್ಲಿ FDI ಕೊಡಬೇಕೆಂದರೆ ಅದಕ್ಕೆ ವಿರೋಧ ಮಾಡುತ್ತಾರೆ. ಇದು ಏನು ಪಾಲಿಸಿ? ನಿಮ್ಮ ಬಜೆಟ್‌ನಲ್ಲಿ ಒಂದು ರೀತಿ ಇದೆ. ಹೊರಗಡೆ FDI retail ಮಾಡಬೇಕೆಂದರೆ ಅದಕ್ಕೆ ತಕ್ಕಂತೆ ಮಾರುಕಟ್ಟೆ ಸೌಲಭ್ಯವನ್ನು ಸೃಷ್ಠಿ ಮಾಡಬೇಕಾದರೆ ಖಾಸಗಿ ಬಂಡವಾಳಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಅದಕ್ಕೆ ಸಪೋರ್ಟ್ ಮಾಡಿ. ಅದು ಇಲ್ಲದೆ ನೀವು ಹೇಗೆ Agriculture Investors Meet ಮಾಡುತ್ತೀರಿ? ಖಾಸಗಿ investors ಅನ್ನು ಕರೆಸಿ agriculture ನಲ್ಲಿ invest ಮಾಡಬೇಕೆಂದು ಇಲ್ಲಿ

ಹೇಳುತ್ತೀರಿ. ಅಲ್ಲಿ ಹೋಗಿ FDI ಅವರಿಗೆ ವಿರೋಧ ಮಾಡುತ್ತೀರಿ. ಇದು ನಿಮ್ಮ ದ್ವಂದ್ವ ನಿಲುವು ತಾವು ಹೇಳುವುದೊಂದು ಮಾಡುವುದೊಂದು ಎಂದು ಹೇಳುವುದಕ್ಕೆ ಇದೊಂದು ನಿದರ್ಶನ ಎಂಬುದು ಸ್ಪಷ್ಟವಾಗುತ್ತದೆ. ಹಳ್ಳಿಗಳ ಕಡೆ ಇವತ್ತಿನ ಯುವಕರಿಗೆ ಕೃಷಿ ಕಡೆ ಆಸಕ್ತಿ ಕಡಿಮೆಯಾಗಿದೆ. ನೀವು ಅವರುಗಳಿಗೆ ಉದ್ಯೋಗವನ್ನು ದೊರಕಿಸಿಕೊಡಬೇಕು. ಆದ್ದರಿಂದ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭ ಮಾಡಿ. ಯಾರಿಗೆ ಕೃಷಿಯಲ್ಲಿ ಆಸಕ್ತಿ ಇಲ್ಲ ಅಂತ ಯುವಕರಿಗೆ ಉದ್ಯೋಗ ಕೊಡಲಿಲ್ಲವೆಂದರೆ ನಾಳೆ ದಿನ ಅವನು ಕೃಷಿಯನ್ನು ಮಾಡುವುದಿಲ್ಲ. ಬೇರೆ ಉದ್ಯೋಗ ಕೂಡ ಇಲ್ಲ. ನಾಳೆ ಎಲ್ಲೋ ಒಂದು ಕಡೆ ಸಮಾಜಕ್ಕೆ ಅವನ ಶಕ್ತಿ ತಿರುಗಿ ಬೀಳುವ ಸಾಧ್ಯತೆಯಿರುತ್ತದೆ. ಹಾಗಾಗಿ ಹಳ್ಳಿಗಳ ಕಡೆ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತಾ, ಬೆಂಗಳೂರಿನ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡುವುದಕ್ಕೆ ಬಯಸುತ್ತೇನೆ. ಬೆಂಗಳೂರಿಗೆ 1,000 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಏಕೆ ಸ್ವಾಗತ ಮಾಡುತ್ತೀರಿ? ಬಜೆಟ್‌ನಲ್ಲಿ ಏಕೆ special allocation ಕೊಡಬೇಕೆಂದು ತಾವು ಕೇಳಬಹುದು. ಇವತ್ತು ರಾಜ್ಯದಲ್ಲಿ ಉತ್ಪಾದನೆಯಾಗುವ ಆದಾಯ ಏನಿದೆ, ಬಹುತೇಕ ಹೆಚ್ಚಿನ ಆದಾಯ ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿದೆ. ಅದನ್ನು ಹಾಗೆ ಮುಂದುವರೆಸಿಕೊಂಡು ಹೋಗುವುದು ರಾಜ್ಯದ ದೃಷ್ಟಿಯಿಂದ ಬಹಳ ಅವಶ್ಯಕ. ಮನೆಯಲ್ಲಿ ಮೂರು ಹಸುಗಳಿರುತ್ತದೆಂದು ತಿಳಿದುಕೊಳ್ಳಿ ಒಂದು ಹಸು 40 ಲೀಟರ್ ಹಾಗು ಮತ್ತೊಂದು ಹಸು 10 ಲೀಟರ್ ಹಾಲನ್ನು ಕೊಡುತ್ತದೆ. ಇನ್ನೊಂದು ಕರು ಇರುತ್ತದೆ ಇದು ಹಾಲನ್ನು ಕೊಡುವುದಿರಲಿ ನಾವು ಅದಕ್ಕೆ ಹಾಲನ್ನು ಕುಡಿಸಬೇಕಾಗುತ್ತದೆ. ಈ 40 ಲೀಟರ್ ಹಾಲನ್ನು ಕೊಡುತ್ತಿರುವ ಹಸುವನ್ನು neglect ಮಾಡಿದರೆ ಬೆಳೆಯುತ್ತಿರುವ ಕರುವಿಗೆ ಎಲ್ಲಿಂದ ಹಾಲನ್ನು ತಂದು ಕೊಡುತ್ತೀರಿ? ಇದೇ ರೀತಿ ಬೆಂಗಳೂರು ಇವತ್ತು ನಮ್ಮ ರಾಜ್ಯಕ್ಕೆ, ರಾಜ್ಯದ ಬೊಕ್ಕಸಕ್ಕೆ ಒಳ್ಳೆಯ ಆದಾಯವನ್ನು ಕೊಡುತ್ತಿದೆ. ಆ ಆದಾಯವನ್ನು ನಾವು ಕಾಪಾಡಿಕೊಳ್ಳಬೇಕಾದರೆ ನಾವೂ ಸಹ ಬೆಂಗಳೂರಿಗೆ ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. ಹಾಗಾಗಿ, revenue generation ಆಗುತ್ತಿರುವ ದೃಷ್ಟಿಯಿಂದ ನಾವು ಯೋಚನೆ ಮಾಡಿದಾಗ ಬೆಂಗಳೂರಿನ ಅಭಿವೃದ್ಧಿ ಬಹಳ ಮುಖ್ಯ. ಅದರಲ್ಲೂ ಹೊಸ ಪ್ರದೇಶಗಳು ಬೆಂಗಳೂರಿಗೆ ಸೇರ್ಪಡೆಯಾಗಿವೆ.

ಸುಮಾರು 7 CMCಗಳು, 110 ಗ್ರಾಮಗಳು ಬೆಂಗಳೂರಿಗೆ ಸೇರ್ಪಡೆಯಾಗಿವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಬಾಂಬೆಯನ್ನು expand ಮಾಡಿ Greater Bombay ಮಾಡಿದ್ದರು. Greater Bombay ಯನ್ನು ಮಾಡಿದಾಗ ಏನು ಮಾಡಿದ್ದರೆಂದರೆ, ಮಹಾರಾಷ್ಟ್ರ ಸರ್ಕಾರ ನೇರವಾಗಿ ಏಳು ವರ್ಷಗಳ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿತ್ತು. ಹೊಸದಾಗಿ ಸೇರ್ಪಡೆಯಾದಂಥ ಪ್ರದೇಶಗಳು ಸಹ ಬಾಂಬೆ ನಗರದಂತೆ ಅವರಿಗೆ ಮೂಲಭೂತ ಸೌಕರ್ಯವನ್ನು ಕೊಡಬೇಕಾದರೆ ಬಾಂಬೆಯಲ್ಲಿ ಏಳು ವರ್ಷಗಳ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಅಭಿವದ್ಧಿಪಡಿಸಿದರು. ನಮ್ಮ ಬೆಂಗಳೂರಿಗೆ ಏನು ಮಾಡಿದ್ದೀರಿ? 110 ಹಳ್ಳಿಗಳು 7 CMC ಗಳು ಸೇರಿ ಕೇವಲ 200 ಕೋಟಿ ರೂಪಾಯಿ ಕೊಟ್ಟು ಸರ್ಕಾರ ಕೈ ತೊಳೆದುಕೊಂಡಿದೆ. ಇವತ್ತು ಹೊಸದಾಗಿ ಸೇರ್ಪಡೆಯಾದಂಥ ಪ್ರದೇಶಗಳ ಪರಿಸ್ಥಿತಿ ಏನಿದೆ ಎಂದರೆ, ಹಳ್ಳಿಗಳಿಗಿಂತ ಕೆಟ್ಟ ಪರಿಸ್ಥಿತಿ ಇದೆ. ಹೆಸರಿಗೆ ಮಾತ್ರ ಬೆಂಗಳೂರು ಮಹಾನಗರ ಪಾಲಿಕೆಯಾದರೂ ಬೆಂಗಳೂರಿಗೆ ಹಾಗೂ ಹೊಸದಾಗಿ ಸೇರ್ಪಡೆಯಾದಂಥ ಅನೇಕ ಪ್ರದೇಶಗಳಿಗೂ ಯಾವ ಸಂಬಂಧನೂ ಸಹ ಇಲ್ಲ. ಅದಕ್ಕಾಗಿ ನಾವು ಸರ್ಕಾರವನ್ನು ಒತ್ತಾಯ ಮಾಡುವಂಥದ್ದು, ಬೆಂಗಳೂರು ನಗರಕ್ಕೆ ಹೊಸದಾಗಿ ಸೇರ್ಪಡೆಯಾದಂಥ ಪ್ರದೇಶಕ್ಕೆ ವಿಶೇಷವಾದಂಥ ಅನುದಾನವನ್ನು ಕೊಟ್ಟು ಅಲ್ಲಿಯೂ ಸಹ ಮೂಲಭೂತ ಸೌಕರ್ಯಗಳನ್ನು ಬೆಂಗಳೂರು ಮಟ್ಟಕ್ಕೆ ತರುವುದು ಅವಶ್ಯಕವಿದೆ. ಸರ್ಕಾರ ವಿಶೇಷ ಅನುದಾನವನ್ನು ಹೊಸದಾಗಿ ಸೇರ್ಪಡೆಯಾದಂಥ ಪ್ರದೇಶಗಳಿಗೆ ದಯವಿಟ್ಟು ಕೊಡಬೇಕು. ನಮ್ಮ ಕ್ಷೇತ್ರದಲ್ಲಿ ಹೊಸದಾಗಿ ಸೇರ್ಪಡೆಯಾದ ಪ್ರದೇಶವಿದೆ. ಕೆಲವು ಜಾಗಗಳಿಗೆ four wheeler ನಲ್ಲಿ ಹೋಗಬೇಕು. Two wheeler ನಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಏಕೆಂದರೆ ಅಲ್ಲಿ ಅಷ್ಟೊಂದು ಹಳ್ಳ-ಕೊಳ್ಳಗಳಿವೆ. ನನ್ನ ಕ್ಷೇತ್ರದಲ್ಲಿರುವ ಹಳ್ಳಿಗಿಂತ ಕೆಟ್ಟ ಪರಿಸ್ಥಿತಿ ಅಲ್ಲಿದೆ. ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳಲ್ಲಿ ಇನ್ನೂ UGD ಆಗಿಲ್ಲ, ಕಾವೇರಿ ನೀರು ಬಂದಿಲ್ಲ, ಅನುದಾನದ ಲಭ್ಯತೆ ಎಂದು ಏನು ಹೇಳುತ್ತಿದ್ದಾರೆ ಅದಕ್ಕೆ ಕಾಯ್ದುಕೊಂಡು ಕುಳಿತ್ತಿದ್ದರೆ ಆಗುವುದಿಲ್ಲ, ತಾವು ವಿಶೇಷವಾದಂತಹ ಪ್ಯಾಕೇಜ್ ಅನ್ನು ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳಿಗೆ ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಸಮಯ ಕಡಿಮೆ

ಇರುವುದರಿಂದ ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಸಾಲಿನ ಬಜೆಟ್‌ನಲ್ಲಿ ನಾನು ನೋಡುತ್ತಿದ್ದೆ. ಮಾನ್ಯ ಡಿ.ವಿ.ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದರು. ನಂತರ ಈಗ ಮಾನ್ಯ ಜಗದೀಶ್ ಶೆಟ್ಟರ್ ರವರು ಮುಖ್ಯಮಂತ್ರಿಗಳಾಗಿದ್ದಾರೆ. ಆ ಸಾಲಿನ ಬಜೆಟ್‌ಗೂ ಈ ಸಾಲಿನ ಬಜೆಟ್‌ಗೂ ಸಂಬಂಧವಿದೆಯೋ ಏನೋ ಗೊತ್ತಿಲ್ಲ. ಆ ಬಜೆಟ್‌ನಲ್ಲಿ ಪ್ರಾರಂಭದಲ್ಲಿ ಗೋಪಾಲಕೃಷ್ಣ ಅಡಿಗ ಅವರ ಒಂದು ಕವನವನ್ನು quote ಮಾಡಿದ್ದಾರೆ. ಅದು "ಹೊಸ ಹಾದಿಯನ್ನು ಹಿಡಿದು ನಡೆಯಣ್ಣ ಮುಂದೆ, ಹೊಸ ಜೀವ, ಹೊಸ ಭಾವ, ಹೊಸ ವೇಗದಿಂದ, ಜಗಕ್ಕೊಂದು ಯುಗಕ್ಕೊಂದು ಹೊಸ ಹೆಸರು ಬೇಕು, ನಗೆಗೊಂದು ಬಗೆಗೊಂದು ಹೊಸ ಕುಸುರು ಬೇಕು, ಹೊಸತನವೇ ಜೀವನದ ಪ್ರಗತಿಯ ರಹಸ್ಯ, ಹೊಸತನವೇ ಮನುಜತೆಯ ಮೈಸಿರಿಯ ಲಾಸ್ಯ" ಇವತ್ತಿನ ನಮ್ಮ ಯುಗಕ್ಕೆ ಈ ಕವನ ಬಹಳ ಪ್ರಾಪ್ತವಾಗಿದೆ. ನಾವು 21 ನೇ ಶತಮಾನದಲ್ಲಿದ್ದೇವೆ. ಇವತ್ತು ನಮ್ಮ ದೇಶ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ನಮ್ಮ ಸಮಾಜ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ಆದರೆ ನಮ್ಮ ಸರ್ಕಾರ ಏನಿದೆ 19ನೇ ಶತಮಾನದಲ್ಲಿ ಬ್ರಿಟಿಷರು ತಯಾರು ಮಾಡಿದಂಥ ಆಡಳಿತ ವ್ಯವಸ್ಥೆಯನ್ನು ಇಟ್ಟುಕೊಂಡು 21ನೇ ಶತಮಾನದ ಸಮಾಜವನ್ನು ಕಟ್ಟತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆ ಆಡಳಿತಕ್ಕೂ ಇವತ್ತಿನ ನಮ್ಮ ಆಡಳಿತದ ರೀತಿ, ನೀತಿ, ಶೈಲಿಗೂ, ಜನಗಳ ನಿರೀಕ್ಷೆಗೂ ಸಂಬಂಧನೇ ಇಲ್ಲ. ನಮ್ಮ ಆಡಳಿತ ವ್ಯವಸ್ಥೆ ಇನ್ನೂ 19 ನೇ ಶತಮಾನದಲ್ಲಿ ಸಿಕ್ಕಿಹಾಕಿಕೊಂಡಿದೆ. 21ನೇ ಶತಮಾನದ ಸವಾಲುಗಳನ್ನು ಎದುರಿಸತಕ್ಕಂಥ ಸಾಮರ್ಥ್ಯವು ಸಹ ನಮ್ಮ ಆಡಳಿತ ವ್ಯವಸ್ಥೆಗೆ ಇಲ್ಲ. ಉದಾಹರಣೆಗೆ ಹೇಳುವುದಾದರೆ, ನೀವು ನೋಡಿದ ಹಾಗೆ ರೇಷನ್ ಕಾರ್ಡ್ ಬಗ್ಗೆ ಹೇಳಬಹುದು. ನಾನು ಶಾಸಕನಾಗಿ ಹೆಚ್ಚು ಕಡಿಮೆ ಒಂಬತ್ತು ವರ್ಷವಾಯಿತು. ನಾನು ಶಾಸಕನಾಗಿದ್ದಾಗಿನಿಂದ ನಾನು ನೋಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವತ್ತಿಗೂ ಬಿ.ಪಿ.ಎಲ್., ಕಾರ್ಡ್ ಅನ್ನು ಒಬ್ಬ ಬಡವನಿಗೆ ಸರಿಯಾಗಿ ಕೊಡುವುದಕ್ಕೆ ಆಗಲಿಲ್ಲ. ವರ್ಷ ವರ್ಷ revise ಮಾಡುತ್ತಾ ಇದ್ದೇವೆ, temporary ಕಾರ್ಡಿನಲ್ಲಿ ನಡೆಸುತ್ತಿದ್ದೇವೆ ಹೊರತು ಒಂಭತ್ತು ವರ್ಷದಿಂದ ಒಬ್ಬ ಬಡವನಿಗೆ ಬಿ.ಪಿ.ಎಲ್.ಕಾರ್ಡ್ ಅನ್ನು ಸರಿಯಾಗಿ ಸೂಕ್ತವಾಗಿ ಕೊಡುವುದಕ್ಕೆ ಆಗಲಿಲ್ಲ. ಇದು ನಮ್ಮ ಆಡಳಿತ ವ್ಯವಸ್ಥೆಗೆ

ಹಿಡಿದಿರತಕ್ಕಂಥ ಕನ್ನಡಿ. ಈ ಸರ್ಕಾರವನ್ನು ಟೀಕೆ ಮಾಡಿ ಮಾತನಾಡುತ್ತಿಲ್ಲ. ನಮ್ಮ ಕಾಂಗ್ರೆಸ್ ಆಡಳಿತದಲ್ಲಿ ಪ್ರಾರಂಭವಾಗಿದ್ದು, ತದನಂತರ ಜನತಾದಳ ಸರ್ಕಾರದ ಆಡಳಿತವನ್ನು ನೋಡಿದ್ದೇವೆ. ಇವತ್ತು ನಾಲ್ಕು ವರ್ಷ ಬಿ.ಜೆ.ಪಿ. ಸರ್ಕಾರವನ್ನು ನೋಡಿದ್ದೇವೆ. ಒಂಭತ್ತು ವರ್ಷವಾಯಿತು ಇವತ್ತಿಗೂ ಬಿ.ಪಿ.ಎಲ್. ಕಾರ್ಡ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಘನ ಕರ್ನಾಟಕ ಸರ್ಕಾರದಲ್ಲಿ ಆಗಲಿಲ್ಲ. ವಯಸ್ಸಾದಂತೆ ಬಡವರಿಗೆ, ವೃದ್ಧರಿಗೆ, ಅಂಗವಿಕಲರಿಗೆ ವೇತನವನ್ನು ಕೊಡುತ್ತೇವೆ. ಆ ವೇತನದಲ್ಲಿ ಅರ್ಧ ಜನ ಬೋಗಸ್ ಇದ್ದಾರೆಂದು ಸರ್ಕಾರ claim ಮಾಡುತ್ತಿದೆ. ಸ್ವಲ್ಪ ಮಟ್ಟಿಗೆ ಬೋಗಸ್ ಇದ್ದಾರೆ ಇಲ್ಲ ಅಂಥ ಅಲ್ಲ. ಅದನ್ನು ಪರಿಷ್ಕರಣೆ ಮಾಡುವುದಕ್ಕೆ ನಮ್ಮ ಸರ್ಕಾರ ಹತ್ತು ತಿಂಗಳ ಸಮಯ ತೆಗೆದುಕೊಂಡಿದೆ. ಹತ್ತು ತಿಂಗಳ ಸಮಯ ತೆಗೆದುಕೊಂಡು ಪರಿಷ್ಕೃತ ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಅದರಲ್ಲಿ ಬೋಗಸ್‌ನವರೆಲ್ಲರೂ ಉಳಿದುಕೊಂಡಿದ್ದಾರೆ. ನಿಜವಾಗಿ ಇರುವವರು ಬಿಟ್ಟುಹೋಗಿದ್ದಾರೆ. ಇದು ನಮ್ಮ ಆಡಳಿತ ವ್ಯವಸ್ಥೆ. ಇದನ್ನು ಇಟ್ಟುಕೊಂಡು ತಾವು 21ನೇ ಶತಮಾನದ ಭಾರತವನ್ನು ಕಟ್ಟುತ್ತೀರಾ? ಕಟ್ಟುವುದಕ್ಕೆ ಸಾಧ್ಯವೇ? ಇವತ್ತಿನ ಸವಾಲುಗಳನ್ನು ಎದುರಿಸುವುದಕ್ಕೆ ನಾವು ಸಮರ್ಥರಿದ್ದೇವಾ, ಅಧ್ಯಕ್ಷರೆ? ಈ ಕವನ ಓದಿದಾಗ ನನಗೆ ಜ್ಞಾಪಕಕ್ಕೆ ಬಂತು. ಯುಗ ಬದಲಾಗಿದೆ, ಆದರೆ ನಮ್ಮ ಆಡಳಿತ ವ್ಯವಸ್ಥೆ 19ನೇ ಶತಮಾನದಲ್ಲಿ ಸಿಕ್ಕಿಹಾಕಿಕೊಂಡಿದೆ. ನೀವು ಸಕಾಲ ತಂದಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ. 21ನೇ ಶತಮಾನಕ್ಕೆ ಸೂಕ್ತವಾದಂಥ ಕಾನೂನನ್ನು ತಂದಿದ್ದೀರಿ. ಸಕಾಲ ಯೋಜನೆಯನ್ನು ಇನ್ನಷ್ಟು ಬಲಪಡಿಸಬೇಕಾಗಿದೆ. ಶಿಕ್ಷಣ ಇಲಾಖೆಯಲ್ಲಿ ಹಿಂದೆ ಸನ್ಮಾನ್ಯ ಹೊರಟ್ಟಿ ಯವರು ಇದ್ದಾಗ ಅದಕ್ಕೆ ಮೊದಲು M.L.A ಗಳಹತ್ತಿರ ಪ್ರತಿ ವರ್ಷ ಈ season ಬಂತು ಎಂದರೆ, ಟೀಚರ್‌ಗಳ transfer ಒಂದು ದೊಡ್ಡ ಸಮಸ್ಯೆಯಾಗುತ್ತಿತ್ತು. ಟೀಚರ್‌ಗಳ transfer ಗಳನ್ನು ಬಂದ್ ಮಾಡಿ ಅದಕ್ಕೊಂದು ಕೌನಸಿಲಿಂಗ್ ಸಿಸ್ಟಮ್ ಮಾಡಿ ಇವತ್ತು ಅದರ ಪಾಡಿಗೆ ಅದು ನಡೆದುಕೊಂಡು ಹೋಗುತ್ತಿದೆ. ನಿಮಗೆ ಏನಾದರೂ ತೊಂದರೆಯಾಗುತ್ತಿದೆಯಾ? ನನಗಂತೂ ಏನೂ ತೊಂದರೆಯಾಗಿಲ್ಲ. ಇಲ್ಲದಿದ್ದರೆ, ನಾನು ಮೇಷ್ಟ್ರುಗಳ transfer letter ಇಟ್ಟುಕೊಂಡು ವಿಧಾನ ಸೌಧದ ಕಂಬ ಸುತ್ತಬೇಕಾಗಿತ್ತು. ಶಾಸಕನಾಗಿ ನಾನು ನೆಮ್ಮದಿಯಿಂದ ಬದುಕುತ್ತಿದ್ದೇನೆ. ಬೇರೆ ಶಾಸಕರು ಎಷ್ಟರ ಮಟ್ಟಿಗೆ ನೆಮ್ಮದಿಯಿಂದ ಇದ್ದಾರೋ

ನನಗಂತೂ ಗೊತ್ತಿಲ್ಲ. ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಆಗಿಲ್ಲದಿರುವುದನ್ನು ನಾನು ಒಪ್ಪುತ್ತೇನೆ. ಸರ್ಕಾರ ಅಭಿವೃದ್ಧಿಯನ್ನು ಮಾಡಬೇಕಾಗಿತ್ತು. ಆದರೆ, ಅಭಿವೃದ್ಧಿಯನ್ನು ಮಾಡಿಲ್ಲ. ಇವತ್ತು ಇನ್ನೊಂದು ವಿಚಾರವೆಂದರೆ, ಸಮಾಜದಲ್ಲಿ ಯಾರನ್ನಾದರೂ ಜನ ಹೆಚ್ಚಿಗೆ ದೂಷಣೆ ಮಾಡುತ್ತಾರೆಂದರೆ, ಒಂದು ಖಾದಿ, ಇನ್ನೊಂದು ಖಾಕಿ. ಖಾಕಿ ಇಲಾಖೆ ಯಾವುದು ಎಂದು ನಿಮಗೆ ಗೊತ್ತಿದೆ. ಅದರಲ್ಲೂ ವರ್ಗಾವಣೆಗಳಲ್ಲಿ ಎಷ್ಟರಮಟ್ಟಿಗೆ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದೂ ಸಹ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಇವತ್ತು ಆ ಸರ್ಕಾರ ಇದೆ ಅವರಿಗೆ ಇಷ್ಟ ಬಂದಹಾಗೆ ವರ್ಗಾವಣೆ ಮಾಡುತ್ತಾರೆ. ನಾಳೆ ನಮ್ಮ ಸರ್ಕಾರ ಬರುತ್ತದೆ, ನಮಗೆ ಇಷ್ಟ ಬಂದ ಹಾಗೆ ನಾವು ಮಾಡುತ್ತೇವೆ. ಆದರೆ, ಅದರಿಂದ ಆಗುವ ತೊಂದರೆಯಂತೂ ಯಾರಿಗೂ ತಪ್ಪಿಲ್ಲ. ಸುಪ್ರೀಂಕೋರ್ಟ್ ಆದೇಶ ನೀಡಿದೆ. ಮಾನ್ಯ ಸಭಾಧ್ಯಕ್ಷರೆ, ಪೋಲೀಸ್ ಇಲಾಖೆಯಲ್ಲಿ ವರ್ಗಾವಣೆಯನ್ನು ಅವರದ್ದೇ ಆದಂಥ ಸ್ವಾಯತ್ತ ಬೋರ್ಡ್ ಅನ್ನು ಮಾಡಿ up to A.C.P. level, DY.S.P. level ಅವರಿಗೆ ವರ್ಗಾವಣೆ ಮಾಡಲಿಕ್ಕೆ ಮಾಡಬೇಕೆಂದು ಹೇಳಿ, ಆ ಕಾನೂನನ್ನು ಹೆಸರಿಗೆ ಮಾತ್ರ ಅಳವಡಿಸಿ ಎಲ್ಲಾ control ಅನ್ನು ನಮ್ಮಲ್ಲಿ ಇಟ್ಟುಕೊಂಡು ಇವತ್ತು ಕಷ್ಟ ಅನುಭವಿಸುವ ಹಾಗೆ ಆಗಿದೆ. ತಾವು ಅದನ್ನು ಮಾಡಿ, ಶಿಕ್ಷಣ ಇಲಾಖೆಯಲ್ಲಿ ಏನು ಪ್ರಯೋಗ ಮಾಡಿದ್ದೀರಾ ಅದನ್ನು ಗೃಹ ಇಲಾಖೆಯಲ್ಲೂ ಆ ಪ್ರಯೋಗ ಮಾಡಿ. ಇವತ್ತು ಈ ಸರ್ಕಾರ, ನಾಳೆ ನಮ್ಮ ಸರ್ಕಾರ. ನೀವು ಮಾಡಿದಾಗ ನಮ್ಮ ಸರ್ಕಾರ ಬಂದಾಗ ನಿಮಗೂ ಅನುಕೂಲವಾಗುತ್ತದೆ. ಎಲ್ಲರಿಗೂ ಅನುಕೂಲವಾಗುತ್ತದೆ. ನಾವು ಏಕೆ ಅದರಲ್ಲಿ ಹಸ್ತಕ್ಷೇಪ ಮಾಡಬೇಕು? ಪೋಲೀಸರ ಕಾರ್ಯಕ್ಷಮತೆ ಕಡಿಮೆ ಇದೆ. ಅವರನ್ನು ಏನೇ ಕೇಳಿದರೂ ವರ್ಗಾವಣೆ ಮೇಲೆ ಅವರು ದೂಷಣೆ ಮಾಡುತ್ತಾರೆ. ಅದಕ್ಕೋಸ್ಕರ ಪೋಲೀಸ್ ಇಲಾಖೆಯಲ್ಲೂ ಆ ಪ್ರಯೋಗ ಮಾಡಿ. ಆದರೆ ನೀವು ಕೇವಲ ಅವರಿಗೆ transferನಲ್ಲಿ independence ಕೊಟ್ಟರೆ ಸಾಕಾಗುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಅಂದರೆ ಈಗ ಪೋಲೀಸ್‌ರು ಬಂದು ಕುಳಿತುಕೊಂಡು ರಿಯಲ್ ಎಸ್ಟೇಟ್ ದಂಧೆದಾರರಾಗಿದ್ದಾರೆ. ಪೋಲೀಸ್ ಕೆಲಸ ಮಾಡುವುದನ್ನು ಬಿಟ್ಟು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದಾರೆ. ಆ ತರಹವಾದರೆ ಸುಧಾರಣೆ ಆಗುವುದಿಲ್ಲ. ನೀವು ತಾಲ್ಲೂಕು ಮಟ್ಟದಲ್ಲಿ ಅದಕ್ಕೆ grievance cell ಇಡಬೇಕೆಂದು ಸುಪ್ರೀಂ

ಕೋರ್ಟ್ recommendation ಮಾಡಿದೆ. ತಾಲ್ಲೂಕು ಮಟ್ಟದಲ್ಲಿ grievance cells set up ಮಾಡಿ, ಅವರಿಗೆ transfer autonomous ಮಾಡಿ, grievance cells ಗೆ empower ಮಾಡಿ. Inspector ಮೇಲೆ ಅಥವಾ ಯಾರ ಮೇಲಾದರೂ complaint ಬಂದರೆ, ಅವರ ಮೇಲೆ action ತೆಗೆದುಕೊಳ್ಳುವುದಕ್ಕೆ grievance cellsಗೆ empower ಮಾಡಿ. ಅದರ ಪಾಡಿಗೆ ಅದು ನಡೆದುಕೊಂಡು ಹೋಗುತ್ತದೆ. ಅದನ್ನು ನಾವು ಇಟ್ಟುಕೊಂಡು ನೀವು recruitment ಮಾಡುತ್ತೇವೆಂದರೆ, ಯಾವ recruitment ಮಾಡಿ ಎಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ನಮ್ಮ ಕೈಯಲ್ಲಿ ಆಗಿದೆ? ಸಾಧ್ಯನೇ ಇಲ್ಲ. ಹಾಗಾಗಿ ಇವತ್ತು ನಮ್ಮ ಕರ್ನಾಟಕ ವಿಧಾನ ಸಭೆ 60 ವರ್ಷಗಳನ್ನು ಪೂರೈಸಿದೆ. ಇಂತಹ ಸಂದರ್ಭದಲ್ಲಿ ನಾವು ಹೊಸ ಆಲೋಚನೆಯನ್ನು ಮಾಡಿಲ್ಲ. 19ನೇ ಮತ್ತು 20ನೇ ಶತಮಾನದ ಐಡಿಯಾಗಳನ್ನು ಇಟ್ಟುಕೊಂಡು 21ನೇ ಶತಮಾನದಲ್ಲಿ ಆಡಳಿತ ನಡೆಸುತ್ತೇವೆಂದರೆ, ಜನ ಇವತ್ತು ನಮ್ಮ ಮೇಲೆ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಶಾಸಕರುಗಳು ನಾವು ಏನಾಗಿದ್ದೇವೆಂದರೆ, ಶಾಸಕರುಗಳಾಗಿಲ್ಲ. ನಾವು ಗುಮಾಸ್ತರಾಗಿದ್ದೇವೆ. ರಸ್ತೆಯಲ್ಲಿ ಗುಂಡಿ ಆದರೂ ಶಾಸಕ ಮಾಡಬೇಕು. ಲೈಟ್ ಇಲ್ಲ ಅಂಥ ಹೇಳಿದರೆ ಶಾಸಕ ಹಾಕಿಸಬೇಕು. ಆ ಗುಮಾಸ್ತರ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ಸಂವಿಧಾನವನ್ನು ಸೃಷ್ಠಿ ಮಾಡಿದಂಥವರು, ಈ ಭವನವನ್ನು ಕಟ್ಟಿದಂಥ ಶ್ರೀ ಕೆಂಗಲ್ ಹನುಮಂತಯ್ಯನವರು ನಮ್ಮ ಬಗ್ಗೆ ಏನು ನಿರೀಕ್ಷೆ ಇಟ್ಟುಕೊಂಡಿದ್ದರೋ, ಆ ಕೆಲಸವನ್ನು ನಾವು ಸಂಪೂರ್ಣವಾಗಿ ಬಿಟ್ಟು ಬಿಟ್ಟಿದ್ದೇವೆ. ಆಡಳಿತ ವ್ಯವಸ್ಥೆ ಅಧಿಕಾರಿಗಳ ನಿಷ್ಕ್ರಿಯತೆ ಏನಿದೆ ಕಾರ್ಯಾಂಗ ಅಂತ ನಾವು ಏನು ಕರೆಯುತ್ತೇವೆ, ಅವರು ಮಾಡಬೇಕಾಗಿರುವ ಕೆಲಸವನ್ನು ಅವರು ಮಾಡುತ್ತಿಲ್ಲವೆಂದು ನಾವು ಮಾಡುತ್ತಿದ್ದೇವೆ. ನಮ್ಮ ಕೆಲಸ ಯಾರು ಮಾಡುತ್ತಿದ್ದಾರೆ, ಎದುರುಗಡೆ ಇರುವ ನ್ಯಾಯಾಂಗ ಮತ್ತು ಮಾಧ್ಯಮದವರು ನಮ್ಮ ಕೆಲಸ ಮಾಡುತ್ತಿದ್ದಾರೆ. ನಾವಾಗಿ ನಾವು ಅವರಿಗೆ ಬಿಟ್ಟು ಕೊಟ್ಟಿದ್ದೇವೆ. ಏಕೆಂದರೆ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಅದನ್ನು ಸರಿ ಮಾಡುವುದನ್ನು ಬಿಟ್ಟು, ಕುಸಿದಿದೆ ಎಂದು ಆಗುತ್ತಿರುವ ತೊಂದರೆಗಳನ್ನು ಬಗೆಹರಿಸುವುದಕ್ಕೆ ನಾವು ಹೊರಟಿದ್ದೇವೆ. ನೀವು ಕಾನೂನು ಮಾಡಿ ಶಾಸಕರು ಯಾರೂ ಒಪ್ಪುವುದಿಲ್ಲ. ಕಾರ್ಯಾಂಗದಲ್ಲಿ ಯಾವ ಶಾಸಕರು ಸಹ ಹಸ್ತಕ್ಷೇಪ

ಮಾಡಲೇಬಾರದು, ಶಾಸಕರಾಗಿ ನೀವು ಶಾಸಕರ ಕೆಲಸ ಮಾಡಿ ಆಗ ನಾವು ಈ ರಾಜ್ಯದ ಸಮಸ್ಯೆಗಳನ್ನು ಪರಿಹಾರ ಮಾಡುವುದರ ಬಗ್ಗೆ ಚಿಂತನೆ ಮಾಡುತ್ತೇವೆ. ಇಲ್ಲವೆಂದರೆ ಯಾವುದೋ ಒಂದು ಕೆಟ್ಟಿರುವ ವ್ಯವಸ್ಥೆಯ ಬಾಲವನ್ನು ಹಿಡಿದುಕೊಂಡು ನಾವು ಹೋಗುತ್ತಿದ್ದೇವೆ. ಆದರೆ ಮುಂದೆ ಹೋಗುವ ಪ್ರಯತ್ನವನ್ನು ನಾವು ಮಾಡುತ್ತಿಲ್ಲ. ಇವತ್ತು ಆ ಅವಶ್ಯಕತೆ ಬಂದಿದೆ. ನಾವು ಯಾವಾಗ ಶಾಸಕರಾಗಿ ಶಾಸಕಾಂಗದ ಕೆಲಸ ಮಾಡುತ್ತೇವೆ. ಅವತ್ತು ಬೇರೆ ಎಲ್ಲಾ ಅಂಗಗಳು ಸರಿಯಾಗಿ ಕೆಲಸವನ್ನು ಮಾಡುತ್ತವೆ. ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕು. ಶಾಸಕಾಂಗದ ಕೆಲಸ ಶಾಸಕರು ಮಾಡಬೇಕೇ ಹೊರತು ನ್ಯಾಯಾಂಗ ಮತ್ತು ಮಾಧ್ಯಮ ಮಾಡುವುದರಿಂದ ಇಡೀ ವಯವಸ್ಥೆ ಕುಸಿಯುತ್ತದೆ ಎನ್ನುವಂಥ ನನ್ನ ಆತಂಕವನ್ನು ಸಹ ಈ ಸಂದರ್ಭ್ಯದಲ್ಲಿ ಹೇಳುತ್ತಾ, ಇವತ್ತು ಏನು ಈ ಆಯವ್ಯಯ ಬೇಡಿಕೆಗಳನ್ನು ತಂದಿದ್ದಾರೆ, ದಯವಿಟ್ಟು ನೀರಾವರಿಗೆ ಆದ್ಯತೆ ಕೊಡಿ, ಇನ್ನೂ ಹೆಚ್ಚಿನ ಆದ್ಯತೆ, ಸಣ್ಣ ನೀರಾವರಿಗೆ ಕೊಡಿ. ಏಕೆಂದರೆ ಬೃಹತ್ ನೀರಾವರಿ ರಾಜ್ಯದ ಎಲ್ಲಾ ಕಡೆಯೂ ಮಾಡುವುದಕ್ಕೆ ಆಗುವುದಿಲ್ಲ. ಸಣ್ಣ ನೀರಾವರಿ ಎಲ್ಲಾ ಕಡೆ ಮಾಡಬಹುದು ಮತ್ತು ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಅಲ್ಲಿ land acquisition ಏಕೆ ಸಮಸ್ಯೆಯಾಗುತ್ತಿದೆ ಎಂದರೆ same problem, ಇವತ್ತು ನಮ್ಮ ಆಡಳಿತ ವ್ಯವಸ್ಥೆ ಎಷ್ಟು ಕೆಟ್ಟಿದೆ ಎಂದರೆ ಜನ land acquisition ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ನಮ್ಮ ಜಮೀನು ತಗೊಂಡು ಇವರು ವ್ಯಾಪಾರ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಭಾವನೆ ಜನರ ಮನಸ್ಸಿನಲ್ಲಿದೆ. ಅದಕ್ಕೋಸ್ಕರ ಅದೂ ಸಹ ಕೆಟ್ಟಿದೆ. ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು, ಬೆಂಗಳೂರಿನ ಅಭಿವೃದ್ಧಿ ಈ ರಾಜ್ಯದ ಅಭಿವೃದ್ಧಿಗೆ ಬಹಳ ಅವಶ್ಯಕತೆಯಿದೆ. ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ, ಹೊಸದಾಗಿ ಬೆಂಗಳೂರಿಗೆ ಸೇರ್ಪಡೆಯಾಗಿರುವ ಪ್ರದೇಶಗಳನ್ನು ಬೆಂಗಳೂರಿನ ಮಟ್ಟಕ್ಕೆ ತರಬೇಕಾದರೆ ಬೇರೆ ರಾಜ್ಯಗಳಲ್ಲಿ ಮಾಡಿರುವ ತರಹ ವಿಶೇಷ ಅನುದಾನವನ್ನು ಒಂದು 5 ವರ್ಷ ನಿರಂತರವಾಗಿ ಕೊಟ್ಟು ಅಲ್ಲಿರುವ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಬೇಕು ಮತ್ತು 110 ಹಳ್ಳಿಗಳಿಗೆ ಕಾವೇರಿ ನೀರು ಕೊಡುವಂಥದ್ದು, ಒಳಚರಂಡಿ ಯೋಜನೆ ಸರ್ಕಾರದ ಮುಂದೆ ಈಗಾಗಲೇ ಇದೆ. ಎಲ್ಲಿಂದ ಹಣ ಬರುತ್ತದೋ ಇಲ್ಲವೋ, ದಯವಿಟ್ಟು ತಾವು

ತತ್‌ಕ್ಷಣ ಕೈಗೆತ್ತಿಕೊಳ್ಳಬೇಕೆಂದು ಒತ್ತಾಯ ಮಾಡಿ, ಈ ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ, ವಿರಾಮ ಕೊಡುತ್ತಾನೆ, ಧನ್ಯವಾದಗಳು.

ಉಪಾಧ್ಯಕ್ಷರು : – ಸ್ಪಷ್ಟೀಕರಣ ಕೇಳಬಹುದಲ್ಲ? ಅವಕಾಶ ಕೊಡುತ್ತೇನೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ : – 2 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ : – 2 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : – ಸ್ಪಷ್ಟೀಕರಣ ಕೇಳಿ, ನಾನು ಅವಕಾಶ ಕೊಡುತ್ತೇನೆ.

ಶ್ರೀ.ಪಿ.ಎಂ.ನರೇಂದ್ರ ಸ್ವಾಮಿ : – ನಾನು ಹೆಚ್ಚು ಸಮಯ ತೆಗದುಕೊಳ್ಳುವುದಿಲ್ಲ. ಸುತ್ತೋಲೆ ಬಂದಿರುವ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಸಿದ್ದರಾಮಯ್ಯ : – ಸ್ವಲ್ಪ Liberal ಆಗಿ, independent ಸದಸ್ಯರು ಮಾತನಾಡಲಿ. 5 ನಿಮಿಷ ನಿಗದಿ ಮಾಡಿದ್ದಾರೆ.

ಉಪಾಧ್ಯಕ್ಷರು : – ಕೇವಲ 5 ನಿಮಿಷಗಳು ಮಾತ್ರ.

ಶ್ರೀ.ಪಿ.ಎಂ.ನರೇಂದ್ರ ಸ್ವಾಮಿ : – ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಎಲ್ಲರ ಮಾತುಗಳನ್ನು ಕೇಳಿದೆ, ಅದನ್ನೇ repeat ಮಾಡುವ ಬದಲು ವಸ್ತುಸ್ಥಿತಿಯನ್ನು ಅರಿತು ಸರ್ಕಾರದಲ್ಲಿ ಬೇಡಿಕೆಗಳ ಮೇಲಿನ ಚರ್ಚೆಗೆ ಪೂರಕವಾಗಿ ಸಲಹೆ ರೂಪದಲ್ಲಿ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. 1 ಲಕ್ಷ 3 ಸಾವಿರ ಕೋಟಿ ಬಜೆಟ್‌ನಲ್ಲಿ 50% ಗಿಂತ ಹೆಚ್ಚಿಗೆ ಸಾರಿಗೆ ಸಂಬಳಕ್ಕೆ ಹೋಗುತ್ತದೆ. ಇದರಲ್ಲಿ 7200 ಕೋಟಿ ಇವತ್ತು SCP/TSP ಯೋಜನೆಗಳಿಗೆ ಆರ್ಥಿತ ಇಲಾಖೆ ಮುಖಾಂತರ ನಿಗದಿಗೊಳಿಸಲಾಗಿದೆ. ಅದೇ ಜವಾಬ್ದಾರಿಯಲ್ಲಿ ಇವತ್ತು ಬರ ಬಂದಿರುವ ಸಂದರ್ಭದಲ್ಲಿ ನಾವು ಗ್ರಾಮೀಣ ಪ್ರದೇಶದ ಜನ, ಸರ್ಕಾರದ ಗಮನ ಸೆಳೆಯುವುದೇನೆಂದರೆ ಕುಡಿಯುವ ನೀರಿಗೆ ಶಾಶ್ವತವಾದ ಯೋಜನೆಗೆ ನೀವು ಕಾರ್ಯಕ್ರಮ ರೂಪಿಸಿಕೊಳ್ಳಿ, ಅದರಿಂದ ಪದೇ ಪದೇ ನಮ್ಮ ಶಾಸಕರ ಅನುದಾನ ಇರಲಿ, ಮತ್ತು ಬರ ಪರಿಹಾರ ನಿಧಿಯಿಂದ ನಾವು ಖರ್ಚು ಮಾಡುವಂಥ ಹಣ ನಿಮಗೆ ಮುಂದಿನ ದಿನಗಳಲ್ಲಿ ಉಳಿತಾಯವಾಗುತ್ತದೆ. ಆ ಸಂದರ್ಭದಲ್ಲಿ surplus water ಎಲ್ಲಿ ಸಿಗುತ್ತಿದೆ? ಉದಾಹರಣೆಗೆ ನಮ್ಮ ಕಾವೇರಿ ಭಾಗದಲ್ಲಿ surplus water ಸಿಗುತ್ತಿದ್ದರೂ ಆ

ಪ್ರದೇಶ ಪೂರ್ತಿ ತೀವ್ರತರದ ಬರದಲ್ಲಿ ಸುಮಾರು 300ಕ್ಕೂ ಹೆಚ್ಚು ಬೋರ್‌ವೆಲ್‌ಗಳು ನನ್ನ ಕ್ಷೇತ್ರದಲ್ಲಿ ಇವತ್ತು ನಿಷ್ಕ್ರಿಯವಾಗಿರುವುದನ್ನು ಸರ್ಕಾರದ ಗಮನಕ್ಕೆ ನಾನು ತರಲಿಚ್ಛಿಸುತ್ತೇನೆ. ಅಂಥ ಜಾಗಗಳಲ್ಲಿ ನೀರಿನ ಲಭ್ಯತೆಯೂ ಹತ್ತಿರದಲ್ಲಿದ್ದು ಶಾಶ್ವತ ಯೋಜನೆಯನ್ನು ಕಲ್ಪಿಸುವ ಅವಕಾಶವಿರುವುದರಿಂದ, ಇಂಥ ಯೋಜನೆಗಳತ್ತ ನೀವು ಗಮನಹರಿಸಿ ಎನ್ನುವ ಸಲಹೆಯನ್ನು ಕೊಡುತ್ತಾ, ಆ ಭಾಗದಲ್ಲಿ ಏತ ನೀರಾವರಿ ಈಗಾಗಲೇ ಬೆಳಿಗ್ಗೆ ಶ್ರೀಶಿವಲಿಂಗೇಗೌಡರು ಮಾತನಾಡಬೇಕಾದರೆ ಮಧ್ಯದಲ್ಲಿ ಒಂದು ವಿಚಾರವನ್ನು ನೀರಾವರಿ ಸಚಿವರ ಗಮನಕ್ಕೆ ತಂದೆನು. ಸುಪ್ರೀಂ ಕೋರ್ಟ್ ಮತ್ತು ನಮ್ಮ ಅಂತರ ರಾಜ್ಯ disputeಗಳಲ್ಲಿ ನಾವು ತಗಲಾಕಿಕೊಂಡು ತಮಿಳುನಾಡಿನ ವ್ಯಾಜ್ಯದಲ್ಲಿ ನಾವು ಒದ್ದಾಡುತ್ತಿದ್ದೇವೆ, ಶಾಶ್ವತ ನೀರಾವರಿ ಯೋಜನೆ ಮಾಡುವಂಥ ಸಂದರ್ಭದಲ್ಲಿ ಕೋರ್ಟ್‌ನ್ನು ಮಧ್ಯದಲ್ಲಿಟ್ಟು ನಾವು ಕಾರಣಗಳು ಹೇಳುವುದನ್ನು ಬಿಟ್ಟು ಇಚ್ಛಾ ಶಕ್ತಿಯಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಎಂದು ಹೇಳುತ್ತಾ ನಮ್ಮ ಭಾಗದಲ್ಲಿರುವಂಥ ನಿಜವಾದ ಬವಣೆಯ ಸಂದರ್ಭದಲ್ಲಿ ಪ್ರಮುಖವಾದ ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತೇನೆ.

ದಿನಾಂಕ:23-04-2012 ರಂದು ಆರ್ಥಿಕ ಇಲಾಖೆಯಿಂದ ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಇದರಲ್ಲಿ 4 ಲೈನ್ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಚೆ ಪಡುತ್ತೇನೆ. ಇದನ್ನು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆಯವರಾದ ಶ್ರೀ ಅಜಯ್ ಸೇಠ್ ಸುತ್ತೋಲೆಯನ್ನು ಎಲ್ಲಾ ಇಲಾಖೆಗಳಿಗೆ ಕಳುಹಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿರುವಂಥ ಒಂದು ಅಂಶವೇನೆಂದರೆ, " SCP/TSP ಕಾರ್ಯಕ್ರಮಗಳು ಈ ಎಲ್ಲಾ ಹಂಚಿಕೆಗಳು ಯಾವಾಗಲೂ ಪರಸ್ಪರ ಹೊರತಾಗಿರದೇ ಹೆಚ್ಚಿನ ಸಂದರ್ಭದಲ್ಲಿ ಒಂದರಲ್ಲೊಂದು ಅಡಕಗೊಂಡಿರುವ ಪ್ರಕರಣಗಳಲ್ಲಿ ಸಮಗ್ರ ಯೋಜನಾ ಸೂತ್ರಗಳ ಅನುಸಾರ ನಿಧಿ ಬಳಕೆಯನ್ನು ಮಾಡಬೇಕಾಗುತ್ತದೆ. ಸಮಗ್ರ ಯೋಜನಾ ವೆಚ್ಚದ ಪರಿಮಿತಿಯಲ್ಲಿ ಪ್ರತಿಯೊಂದು ಮೀಸಲಿರಿಸಿದ ಹಂಚಿಕೆಗಳಿಗೆ ಪ್ರತ್ಯೇಕ ಯೋಜನಾ ಕ್ರಮಗಳನ್ನು ಸಿದ್ದಪಡಿಸಿದರೆ ಸಾಕಾಗುವುದು. ಲೆಕ್ಕಾಚಾರದ ಉದ್ದೇಶಕ್ಕಾಗಿ ಮಾತ್ರವೇ ಸಮಗ್ರ ಯೋಜನಾ ವೆಚ್ಚದ ಪರಿಮಿತಿಯಲ್ಲಿ ಮೀಸಲಿರಿಸುವಿಕೆಯನ್ನು ಸೂಚಿಸಲಾಗಿದೆ". ಯಾರು ಸ್ವಾಮಿ ಆರ್ಥಿಕ ಇಲಾಖೆಗೆ ಈ ಅಧಿಕಾರವನ್ನು ಕೊಟ್ಟರು? ಸಂಪೂರ್ಣ

ಸರ್ಕಾರದ ಜವಾಬ್ದಾರಿಯನ್ನು ಸಂವಿಧಾನದ ಜವಾಬ್ದಾರಿಯನ್ನು ನಿರಾಕರಿಸುವಂಥ ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ. ಈ ಸುತ್ತೋಲೆ, ಪರಿಶಿಷ್ಟರ ಮೇಲೆ ದಬ್ಬಾಳಿಕೆ ಮಾಡುತ್ತಿರುವಂಥ ಈ ಸುತ್ತೋಲೆಗೆ ನಾನು ಈ ಸದನದಲ್ಲಿ ಧಿಕ್ಕಾರ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಕಾರಣ ನಾನು ಆ ಪರಿಶಿಷ್ಟ ವರ್ಗದಿಂದ ಬಂದವನಾಗಿದ್ದೇನೆ, ಈ ವರ್ಗಕ್ಕೆ ಮೀಸಲಿಟ್ಟಂಥ ಹಣ ಪ್ರಕಟಗೊಳಿಸಿದ ನಂತರ ನೀವು ಹೇಗೆ ಬೇಕಾದರೂ ಖರ್ಚು ಮಾಡಿ, ಆ ದುಡ್ಡು ಖರ್ಚು ಮಾಡಬಹುದು, ಯಾವ ರೂಪದಲ್ಲಿ ಬೇಕಾದರೂ ಖರ್ಚು ಮಾಡಬಹುದೆಂದು ಉದ್ಧಟತನದ ಸುತ್ತೋಲೆಯನ್ನು ಕೊಡುತ್ತಿದ್ದಾರಲ್ಲಾ, ಸರ್ಕಾರ ಇದನ್ನು ಗಮನಿಸಲಿ. ಪ್ರತಿಯೊಂದು ಇಲಾಖೆಗಳ SCP/STP ಅನುಷ್ಠಾನವನ್ನು ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸಬೇಕು ಎನ್ನುವುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ವಿಚಾರ, ಸಮಾಜ ಕಲ್ಯಾಣ ಇಲಾಖೆಯನ್ನು ಹೊರತುಪಡಿಸಿ ಆರ್ಥಿಕ ಇಲಾಖೆ ಯಾವ ಆಧಾರದ ಮೇಲೆ ಕೊಟ್ಟಿದೆ, ಇದಕ್ಕೆ ಈ ಸುತ್ತೋಲೆಯ ಕೆಳಭಾಗದಲ್ಲಿ ಒಂದು ಕಾರಣವನ್ನು ಹೇಳುತ್ತದೆ, ಏನೆಂದರೆ, "ಆಯಾ ಇಲಾಖೆಗಳಲ್ಲಿನ ಚಟುವಟಿಕೆ ಹಾಗೂ ಅಭಿವೃದ್ಧಿ ಅನುಸಾರ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ನಿಧಿಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಅಥವಾ ಪರಿಶಿಷ್ಟಜಾತಿ ಮತ್ತುಪಂಗಡದ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಮೀಸಲಿರಿಸಿದ ಮೂಲಭೂತ ಸೌಕರ್ಯಗಳ ಮೇಲೆ ಬಳಸುವಲ್ಲಿ ತೊಂದರೆಯಿದೆ ಎಂದು ಕೆಲವು ಇಲಾಖೆಗಳು ಸೂಚಿಸಿವೆ. ಇಂಥ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಒಳಗೊಂಡಂತೆ ಎಲ್ಲಾ ಸಮುದಾಯಗಳಿಗೂ ಉಪಯೋಗವಾಗುವಂಥ ಸಾರ್ವಜನಿಕ ಆಸ್ತಿ ಮತ್ತು ಮೂಲ ಸೌಕರ್ಯಗಳ ಸೃಜನೆಗಾಗಿ ನೀಧಿಯನ್ನು ಬಳಸಬಹುದಾಗಿದೆ. ಆದರೆ ಇಂಥ ಸಾರ್ವಜನಿಕ ಆಸ್ತಿ ಮತ್ತು ಮೂಲಭೂತ ಸೌಕರ್ಯಗಳ ಮೇಲೆ ಮಾಡಲಾದ ಒಟ್ಟು ವೆಚ್ಚದಲ್ಲಿ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳ ಸಾಧನೆಯನ್ನು ಕೆಲವು ಉದ್ದೇಶಿತ ಮಾಪನ ಮಟ್ಟದಿಂದ ಅಳಿಯಬೇಕಾಗಿದೆ." ದಯಮಾಡಿ ಈ ಉದ್ದೇಶಿತ ಮಾಪನ ಯಾವುದು? ಇವರ hidden agend ಈ ಆರ್ಥಿಕ ಇಲಾಖೆಯಲ್ಲಿ ಕುಳಿತುಕೊಂಡು ಹಣವನ್ನು ಖರ್ಚು ಮಾಡುವ ಮನಸ್ಥಿತಿಯಿಲ್ಲದೇ ಯಾವ ಯಾವ ವರ್ಗಗಳಿಗೆ

ಯಾವ ಯಾವ ಹಣ ಮೀಸಲಾಗಿದೆ ಎನ್ನುವುದನ್ನು ಅನುಷ್ಠಾನಗೊಳಿಸುವಂಥ ಒಂದು ವೈಫಲ್ಯತೆಯನ್ನು ಇವರು ತೋರಿಸುತ್ತಾ ಇಂಥ ಆದೇಶವನ್ನು ಹೊರಡಿಸುತ್ತಿದ್ದಾರೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದ ಜನರ ಪರವಾಗಿ ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ, ನೀವು ಇಟ್ಟಿರುವಂಥ ಅನುದಾನ ಕಡಿಮೆ, ಕೇವಲ 22.74% ನಿಗದಿಪಡಿಸಬೇಕಾದ ಜಾಗದಲ್ಲಿ ನೀವು 1 ಲಕ್ಷದ 3 ಸಾವಿರ ಕೋಟಿಗಳ ಬಜೆಟ್‌ನಲ್ಲಿ ನೀವು ನಿಗದಿಗೊಳಿಸಿರುವುದೇ 7200 ಕೋಟಿ. ಅದರಲ್ಲಿ ಈ ರೀತಿ ಸುತ್ತೋಲೆ ಹೊರಡಿಸಿದರೆ ತಪ್ಪು ಸಂದೇಶಗಳು ಹೋಗುತ್ತವೆ. ದಯಮಾಡಿ ಈ ವಿಚಾರವನ್ನು ಸರ್ಕಾರ ಗಮನಿಸಬೇಕು ಎಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮತ್ತೊಂದು ವಿಚಾರ ಮಾನ್ಯ ಉಪಾಧ್ಯಕ್ಷರೆ, ಈ ಒಂದು ಆಯುಷ್ ಇಲಾಖೆ. ಆ ಇಲಾಖೆಯವರು ಒಂದು ಸುತ್ತೋಲೆ ಕೊಟ್ಟಿದ್ದಾರೆ. ಇಲ್ಲಿಯವರೆಗೆ ಆಯುಷ್ ಇಲಾಖೆ, ಅಂದರೆ Healthe & Family welfare department ನಲ್ಲಿ ಬರುವ ಅಂಗ. ಅಲ್ಲಿ Director ನೇಮಕಾತಿಯ ವಿಚಾರದಲ್ಲಿ ಈವರೆಗೆ C & R Rules ನಲ್ಲಿ ಏನಿತ್ತು, ಅದನ್ನು ಈಗ ಬದಲಾವಣೆ ಮಾಡಲು ಹೊರಟಿದ್ದಾರೆ. ಇಲ್ಲಿ ಒಂದು hidden agenda ಅಡಗಿ ಕುಳಿತಿದೆ. ಏನೆಂದರೆ, ಇನ್ನು ಮುಂದಿನ ಮೂರು ಅವಧಿಗೆ seniority ನಲ್ಲಿ ಬರೇ SC ನವರೇ ಅಲ್ಲಿಗೆ director ಆಗುತ್ತಾರೆ. ಇದನ್ನು ತಡೆಯಬೇಕು ಎನ್ನುವುದಕ್ಕೋಸ್ಕರ ಈ C & R Rules ನಲ್ಲಿ change ತಂದು ಅಲ್ಲಿಗೆ IFS, IAS ಅಧಿಕಾರಿಯನ್ನು deputation ಮೇಲೆ ನೇಮಕ ಮಾಡಬಹುದು ಎಂದು ಈಗ ತರುತ್ತಿದ್ದಾರೆ. ಮೊದಲು ಇದು ಇರಲಿಲ್ಲ. ಇದರಲ್ಲಿ ದುರುದ್ದೇಶ ಎದ್ದು ಕಾಣುತ್ತಿದೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು, ಇದು ಇಲಾಖೆಯ ಕಾರ್ಯದರ್ಶಿಗಳು ಮಾಡಿರುವ ತಪ್ಪು ತಮ್ಮ ಮೇಲೆ reflect ಆಗಲು ಅವಕಾಶ ಕೊಡಬೇಡಿ. ಆ ವರ್ಗದ ಜನರಿಗೆ ನ್ಯಾಯ ದೊರಕಿಸಿಕೊಡುವ ಸಾಮರ್ಥ್ಯ ನಿಮ್ಮಲ್ಲಿದೆ. ದಯಮಾಡಿ ಇಂತಹುದನ್ನು ತಡೆಗಟ್ಟಬೇಕೆಂದು ಸಭಾಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಮತ್ತೊಂದು ಹಳ್ಳಿಗಾಡಿನ ಪ್ರದೇಶದಿಂದ ಬಂದಿರುವವನು ನಾನು. ಇಂದು ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಒಂದು ಪ್ರಕಟಣೆ ಮಾಡಿ ರೈತರಿಗೆ ಒಂದು ಕೊಡುಗೆಯನ್ನು ನೀಡಿದ್ದಾರೆ. ಅದಕ್ಕಾಗಿ ನಾನು ಅವರನ್ನು

ಅಭಿನಂದಿಸುತ್ತೇನೆ. ಇದೇ ಸಂದರ್ಭದಲ್ಲಿ ಇದರ ಜೊತೆ ಸಾಲ ಮನ್ನಾ ಮಾಡಿ, ಮುಖ್ಯವಾಗಿ ರೈತ ಸ್ವಾವಲಂಬಿಯಾಗಿ ಮಾಡುವ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ತಮ್ಮ ಅವಧಿಯಲ್ಲಿ ಇದಕ್ಕೆ ಹೆಚ್ಚು ಒತ್ತನ್ನು ನೀಡಬೇಕು. ಮಳೆಯಿಂದ ರೈತರಿಗೆ ತೊಂದರೆಯಾಗುವುದರಿಂದ ನೀರಾವರಿಯಲ್ಲಿ ಒಂದು ವಿಚಾರವನ್ನು ಅನುಷ್ಠಾನಗೊಳಿಸಿದರೆ ಒಳ್ಳೆಯದಾಗುತ್ತದೆ. Drip irrigation, ಮತ್ತು sprinkler IrrigationUÉ 100% subsidy ಕೊಡುವುದರಿಂದ ನೀರನ್ನು ಉಳಿತಾಯ ಮಾಡಿದ ಹಾಗಾಗುತ್ತದೆ. ರೈತರನ್ನು ಬದುಕಿಸಿದ ಹಾಗಾಗುತ್ತದೆ. ಸರ್ಕಾರ ಈ ದಿಕ್ಕಿನಲ್ಲಿ ಕೇಂದ್ರದ ಯೋಜನೆಗಳನ್ನು ಸೇರಿಸಿಕೊಂಡು ಮಾಡಲು ಅವಕಾಶವಾಗಿದೆ. ರೈತ ಬೆಳೆದ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಎಲ್ಲಿಯೂ ಕಲ್ಪಿಸಿಲ್ಲ. ಈ ಕಾನೂನಿನೊಳಗೆ ರೈತ ಪ್ರತಿಯೊಂದು ಸಂದರ್ಭದಲ್ಲಿಯೂ ಸರ್ಕಾರ ಅಥವಾ ಬ್ಯಾಂಕನ್ನು ಅವಲಂಬಿಸಬೇಕಾದ ಕೆಟ್ಟ ಪರಿಸ್ಥಿತಿಯನ್ನು ನಾವೆಲ್ಲರೂ ಅನುಭವಿಸುತ್ತಿರುವುದು ಗೊತ್ತಿದೆ. ಹಿಂದಿನ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸದಾನಂದಗೌಡರು ಮಾರುಕಟ್ಟೆ ವ್ಯವಸ್ಥೆ ಕಲಿಸುವ ಬಗ್ಗೆ ಬಜೆಟ್ ಭಾಷಣದಲ್ಲಿ ಮಾತನಾಡಿದ್ದಾರೆ. ಆದರೆ ಇನ್ನೂ ಜಾರಿಯಾಗಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಾ ಇಂತಹ ವಿಚಾರದಲ್ಲಿ ಹೆಚ್ಚು ಒತ್ತು ಕೊಡುತ್ತಾ ಗ್ರಾಮೀಣ ಭಾಗದ ಜನರ ಬದುಕಿಗೆ ಹೆಚ್ಚು ಒತ್ತು ಕೊಡಬೇಕು. Backlog ವಿಚಾರವಾಗಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಹಿಂದೆ 14–16 ವರ್ಷದ ಹಿಂದೆ Backlog ತುಂಬಿದ್ದ ವಿಚಾರದಲ್ಲಿ ಕೋರ್ಟ್ ಒಂದು ನಿರ್ದೇಶನ ನೀಡಿದೆ. ಆದರೆ, ಒಂದು ಮಾನವೀಯ ಕಳಕಳಿಯಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಿ ಕೋರ್ಟಿನಲ್ಲಿ ವಾದ ಮಂಡಿಸಿ, ಆ ಸಂಸಾರಗಳಿಗೆ ಅಗಿರುವ ಅನ್ಯಾಯನ್ನು ಸರಿಪಡಿಸಿ ಆ ವರ್ಗದಜನರಿಗೆ ನ್ಯಾಯ ಕೊಡಿಸಬೇಕೆಂದು ತಮ್ಮ ಮುಖಾಂತರ ಬೇಡಿಕೆಯನ್ನು ಇಟ್ಟು ನನಗೆ ಅವಕಾಶ ಕಲ್ಪಿಸಿದ ಸನ್ಮಾನ್ಯ ಉಪಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ಶಿವರಾಜ ಎಸ್. ತಂಗಡಗಿ (ಕನಕಗಿರಿ) : – ಮಾನ್ಯ ಉಪಾಧ್ಯಕ್ಷರೆ, ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ಬಹಳಷ್ಟು ಶಾಸಕರು ಈಗಾಗಲೇ ಎಲ್ಲಾ

ವಿಷಯಗಳನ್ನು ಹೇಳಿದ್ದಾರೆ. ನಮ್ಮ ಭಾಗದ ಸಮಸ್ಯೆಗಳ ಬಗ್ಗೆ ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಕೆಲಸವನ್ನು ಮಾಡುತ್ತೇನೆ. ಈಗಾಗಲೇ NREG ಯೋಜನೆಯ ಬಗ್ಗೆಎಲ್ಲರೂ ಬಹಳಷ್ಟು ಮಾತನಾಡಿದ್ದಾರೆ. ಏನಾಗಿದೆ ಎಂದರೆ, ವಿಶೇಷವಾಗಿ ನಮ್ಮ ಭಾಗದ ಕೊಪ್ಪಳ ಜಿಲ್ಲೆಯಲ್ಲಿ ಇವತ್ತಿಗೂ ಇಲ್ಲ. ಹೋದ ವರ್ಷ ಮಾಡಿದ ಕೆಲಸಕ್ಕೆ ಇನ್ನೂ ಬಿಲ್ ಕೊಟ್ಟಿಲ್ಲ. ಮೊನ್ನೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಕೊಪ್ಪಳಕ್ಕೆ ಬಂದಾಗ ಇನ್ನು 3–4 ದಿನದೊಳಗೆ ಅದನ್ನು ಸರಿ ಮಾಡುತ್ತೇವೆ ಎಂದರು. ಆದರೆ, ಒಂದು ವಾರವಾದರೂ ಸರಿಯಾಗಿಲ್ಲ. ಏನಾಗಿದೆ ಎಂದರೆ, ಈಗ ಟಿ.ವಿ.ಯಲ್ಲಿ ಬರುತ್ತಿದೆ. ಒಂದು ಹಳ್ಳಿಯಲ್ಲಿ ಕನಿಷ್ಠ 600–700 ಜನ ವಾಸಿಸುವ ತಾಂಡ. ಆ ಗ್ರಾಮದ ಜನರು 7 ಲಾರಿಗಳನ್ನು ಮಾಡಿಕೊಂಡು ಎಲ್ಲರೂ ಒಂದೇ ದಿನದಲ್ಲಿ ಬೇರೆ ಬೇರೆ ಊರುಗಳಿಗೆ ಹೋಗುವ ಕೆಲಸ ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಇಲಾಖೆಯನ್ನು ನಿರ್ವಹಿಸಿರುವವರು. ನಾನು ಅವರನ್ನು ವಿನಂತಿ ಮಾಡುತ್ತೇನೆ. NREG ಕೇಂದ್ರ ಸರ್ಕಾರ ತಂದಿರುವ ಒಂದು ದೊಡ್ಡ ಯೋಜನೆ. ಆದರೆ ಅದನ್ನು implementation ಮಾಡಲು ಅಧಿಕಾರಿಗಳಿಂದಲೇ ತೊಂದರೆಯಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಶಾಸಕರುಗಳು ಎಷ್ಟೇ ಹೇಳಿದರೂ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಜೊತೆಗೆ ನಮ್ಮ ಭಾಗದಲ್ಲಿನೀರಾವರಿ ಒಂದು ಕಡೆ. ಇನ್ನೊಂದು ಕಡೆ ಒಣ ಬೇಸಾಯ ಇದೆ. ನೀರಾವರಿ ಬೇಸಾಯಕ್ಕೆ check dam ನಿರ್ಮಾಣ ಮಾಡಬೇಕು. NREG ಒಳಗೆ ನೀರಾವರಿ ಭಾಗದಲ್ಲಿ check dam ನಿರ್ಮಾಣ ಮಾಡಿದರೆ ಅರ್ಥವಿಲ್ಲ. NREG ವಿಚಾರದಲ್ಲಿ ಕೆಲವೊಂದು ಬದಲಾವಣೆ ಮಾಡಬೇಕು. ಗ್ರಾಮ ಪಂಚಾಯಿತಿಯನ್ನು ಗಟ್ಟಿಗೊಳಿಸಬೇಕು, ಗ್ರಾಮ ಪಂಚಾಯಿತಿಗೆ ಹೆಚ್ಚು ಅಧಿಕಾರ ಕೊಡಬೇಕೆಂದು ನಾವು ಭಾಷಣ ಮಾಡುತ್ತೇವೆ. ಆದರೆ ನಮಗೆ ಅಧಿಕಾರಿಗಳ ಕೊರತೆ ಇದೆ. PDO ಗಳಿಲ್ಲ, ಕಾರ್ಯದರ್ಶಿಗಳಿಲ್ಲ. ಒಂದೊಂದು PDO, ಕಾರ್ಯದರ್ಶಿಗಳಿಗೆ ಎರಡು ಮೂರು ಗ್ರಾಮ ಪಂಚಾಯಿತಿ ಕೊಡುವ ಕೆಲಸ ಆಗುತ್ತಿದೆ. ಇದು ಇಡೀ ರಾಜ್ಯದಲ್ಲಿ ಆಗುತ್ತಿದೆ. ಇದರ ಜೊತೆಗೆ ಇಂಧನ ಇಲಾಖೆ, Madam ನವರು ನಿಜವಾಗಿಯೂ ಇಂಧನ ಇಲಾಖೆಯ ಮಂತ್ರಿಗಳಾದ ಮೇಲೆ 3–4 ಬಾರಿ ಈ ಅಧಿವೇಶನದಲ್ಲಿ ಅವರ ಗಮನ ಸೆಳೆದಿದ್ದೇನೆ. ನಮ್ಮಲ್ಲಿ ಟಿ.ಸಿ. ಗಳ ತೊಂದರೆ.

ಟಿ.ಸಿ ಸುಟ್ಟಿತು ಎಂದರೇನೆ, ಕನಿಷ್ಠ 15–20 ದಿನ ಆ ಗ್ರಾಮಕ್ಕೆ ಟಿ.ಸಿ. ತೊಂದರೆ ಬರುವುದಿಲ್ಲ. ಮತ್ತೆ ಕುಡಿಯುವ ನೀರು ಹೇಗೆ? ನಾವು ಕೇಳಿದರೆ, ನಮ್ಮ ಒಂದು station ಇದೆ. ರಿಪೇರಿ centre ಮಾಡಿದ್ದೇವೆಂದು ಹೇಳುತ್ತಾರೆ. ಆದರೆ Repair centre ನಲ್ಲಿ ಒಂದೊಂದು ತಿಂಗಳಾದರೂ ಟಿ.ಸಿ.ಗಳು ಬರುತ್ತಿಲ್ಲ. ನಮ್ಮ ಕೊಪ್ಪಳದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದೆ. ನಾನು 4–5 ಬಾರಿ ಮಂತ್ರಿಗಳ ಗಮನಕ್ಕೆ ತಂದರೂ ಇವತ್ತಿನವರೆವಿಗೂ ಚರ್ಚೆ ಮಾಡುತ್ತಿಲ್ಲ. ಅಧಿಕಾರಿಗಳಿಗೆ ಕೇಳಿದರೆ ನಮಗೆ ಟಿ.ಸಿ.ಇಲ್ಲ. ಟಿ.ಸಿಗಳನ್ನು ಹಳ್ಳಿಗಳಿಂದ ಸುಟ್ಟ ಮೇಲೆ ತರಬೇಕು. ರೆಡಿ ಮಾಡಿ ಹಾಕುವಷ್ಟರಲ್ಲಿ 15–20 ದಿನವಾಗುತ್ತದೆ. ವಿದ್ಯುತ್ ಸರಿಯಾದ ಸಮಯಕ್ಕೆ ಕೊಡುವುದಿಲ್ಲ. ವಿದ್ಯುತ್ ಸಮಸ್ಯೆ ಹೆಚ್ಚಾಗಿದೆ. 6 ತಾಸು, ಹನ್ನೆರಡು ತಾಸು, III phase, single phase ಕೊಡುತ್ತೇವೆ ಎನ್ನುತ್ತಾರೆ. ಅಷ್ಟನ್ನು ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ. ಮಾನ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ನಾನು ಅವರನ್ನು ವಿನಂತಿ ಮಾಡುತ್ತೇನೆ. ನೀವು ಯಾವ ವೇಳೆಗೆ ಕೊಡುತ್ತೀರೋ ಅಷ್ಟೇ ಕೊಡಿ. ಹೆಚ್ಚು ಬೇಡ. ರೈತರು ನಮ್ಮ ಭಾಗದಲ್ಲಿ ಬಹಳ ತೊಂದರೆಯಲ್ಲಿದ್ದಾರೆ. ಇದರ ಜೊತೆಗೆ ನಮ್ಮ ಭಾಗದಲ್ಲಿ ಬಹಳ ಮುಖ್ಯವಾಗಿ ಶಿಕ್ಷಣ ಇಲಾಖೆಯಲ್ಲಿ ಹೈದರಾಬಾದ್–ಕರ್ನಾಟಕ ಭಾಗದಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಾಗ ಬೇರೆ ಬೇರೆ ಜಿಲ್ಲೆಯವರು ನಮ್ಮ ಹೈದರಾಬಾದ್–ಕರ್ನಾಟಕ ಭಾಗಕ್ಕೆ ಬರುತ್ತಾರೆ. ಬಂದಾದ ಮೇಲೆ transfer timeಗೆ ಎಲ್ಲರೂ ಹೋಗುತ್ತಾರೆ. 50% ಶಿಕ್ಷಕರು ನಮ್ಮಲ್ಲಿಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಅದಕ್ಕೆ ಏನಾದರೂ ಕಾನೂನು ಮಾಡಿ. ಆ ಭಾಗದಲ್ಲಿ ಶಿಕ್ಷಕರ ಕೊರತೆ ನೀಗಿಸಬೇಕು. ಮೊದಲೇ ಹಿಂದುಳಿದ ಪ್ರದೇಶ. ಶಿಕ್ಷಣರಹಿತವಾದ ಪ್ರದೇಶವೆಂಬ ಹಣೆಪಟ್ಟಿ ಇದೆ. ಆದರೆ ಶಿಕ್ಷಕರೇ ಇಲ್ಲವೆಂದರೆ ನಾವು ಹೇಗೆ ಮುಂದುವರೆಯಲು ಸಾಧ್ಯ? ಸರ್ಕಾರ ಎಲ್ಲೋ ಒಂದು ಕಡೆ ಹೈದರಾಬಾದ್ – ಕರ್ನಾಟಕಕ್ಕೆ ವಿಶೇಷವಾಗಿ ಶಿಕ್ಷಣವನ್ನು ಸರಿಪಡಿಸಬೇಕಾದ ಕೆಲಸ ಮಾಡಬೇಕು. ಇದರ ಜೊತೆಗೆ ನಮ್ಮ ಭಾಗದ ಜೀವ ನದಿ ತುಂಗಭದ್ರಾ. ಹೂಳು ತುಂಬಿಕೊಂಡು ಕನಿಷ್ಠ 34 ಟಿ.ಎಂ.ಸಿ ನೀರು shortage ಆಗುತ್ತಿದೆ. ಇದೇ ಮುಂದುವರೆದರೆ ತುಂಗಭದ್ರಾ ಭಾಗದಲ್ಲಿರುವ ಕೊಪ್ಪಳ, ಬಳ್ಳಾರಿ, ರಾಯಚೂರು

ಜಿಲ್ಲೆ ಇರಬಹುದು, ಮುಂದಿನ ದಿನಗಳಲ್ಲಿ ಎರಡು ಬೆಳೆ ಅಲ್ಲ, ಒಂದು ಬೆಳೆ ಬೆಳೆಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕಾಗಿ ಹೂಳೆತ್ತುವ ಕೆಲಸ ಆಗಬೇಕು. ಮೊನ್ನೆ ಇಲಾಖೆಯ ಮಂತ್ರಿಗಳು ಉತ್ತರ ಕೊಟ್ಟರು. ಒಂದು ಟಿ.ಎಂ.ಸಿ ಹೂಳು ಎತ್ತಬೇಕೆಂದರೆ, ಕನಿಷ್ಠ 25 ಲಕ್ಷ ಲಾರಿಗಳು ಬೇಕು. ಎತ್ತಬೇಕಾದರೆ ಬಹಳ ಕಷ್ಟವಿದೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ, ಒಂದು ಕಡೆ ನೀವು ಹೇಳುತ್ತೀರಿ, ಹೂಳು ಎತ್ತುವುದಕ್ಕೆ ಸರ್ಕಾರ ಯೋಜನೆ ರೂಪಿಸುತ್ತೇವೆಂದು, ಇನ್ನೊಂದು ಕಡೆ ನಾವು ಉತ್ತರ ಕೇಳಿದಾಗ ಈ ರೀತಿ ಹೇಳುತ್ತೀರಿ. ಇದನ್ನು ಹೇಳುವುದರಿಂದ ನಮ್ಮ ಭಾಗದ ರೈತರು ಬಹಳ ತೊಂದರೆಗೀಡಾಗುತ್ತಾರೆ. ಹೂಳು ಎತ್ತಲೇ ಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಒಂದೇ ಬೆಳೆಯನ್ನು ಬೆಳೆಯಬೇಕಾಗುತ್ತದೆ. ಮುಂದಿನ ತಲೆಮಾರಿಗೆ ಒಂದು ಬೆಳೆಯನ್ನೂ ಬೆಳೆಯಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೆ ಹೂಳೆತ್ತುವ ಕೆಲಸ ಮಾಡಬೇಕು. ಇದರ ಪರ್ಯಾಯವಾಗಿ ನಾನು ಮಂತ್ರಿ ಇದ್ದಾಗ ಗುಲ್ಬರ್ಗಾದಲ್ಲಿ ನಡೆದ ಸಚಿವ ಸಂಪುಟದಲ್ಲಿ ಒಂದು ಆದೇಶ ಮಾಡಿದೆ. ತುಂಗಭದ್ರಾ ನಮ್ಮ ಮಲೆನಾಡಿನಿಂದ ಬರುವ ನದಿ. ಬಹಳಷ್ಟು ನೀರು ಬರುತ್ತದೆ. ಈ ವರ್ಷ ಬಂದಿಲ್ಲ. ಪ್ರತಿ ವರ್ಷ ಕನಿಷ್ಠ 100 ಟಿ.ಎಂ.ಸಿ ನೀರು ಬರುತ್ತದೆ. ಮಳೆ ಬಂದಾಗ 100 ಟಿ.ಎಂ.ಸಿ. ನೀರು ಸಮುದ್ರ ಸೇರುವ ಕೆಲಸ ಆಗುತ್ತಿದೆ. ಆದರೆ flood ಬಂದಂತಹ ಸಮಯದಲ್ಲಿ ಕನಿಷ್ಠ 100 ರಿಂದ 150 ಟಿ.ಎಂ.ಸಿ ನೀರು, unnecessary ಯಾಗಿ ಪೋಲಾಗಿ ಹೋಗುತ್ತಿದೆ. ಅದಕ್ಕೆ ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಸಾಹೇಬರಲ್ಲಿ ನಾನು ವಿನಂತಿಯನ್ನು ಮಾಡಿಕೊಂಡಿದ್ದೆ. ಗುಲ್ಬರ್ಗಾದಲ್ಲಿ ಒಂದು flood flow canal ಅನ್ನು ಮಾಡಬೇಕು, ಅದನ್ನು ಮಾಡುವುದರಿಂದ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಆ ಒಂದು ವಿಚಾರದಲ್ಲಿ ನಿಜವಾಗಲೂ ಬಹಳ ಉತ್ಸಾಹಿ ನೀರಾವರಿ ಸಚಿವರಿದ್ದಾರೆ. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಇಂಜಿನಿಯರ್ ಆಗಿರುವುದರಿಂದ ಎಲ್ಲೋ ಒಂದು ಕಡೆ ಆ ಒಂದು ಡ್ಯಾಂ ರಕ್ಷಣೆ ಮಾಡಬೇಕು, ಆ ಭಾಗದ ರೈತರಿಗೆ ಅನುಕೂಲವಾಗಬೇಕೆನ್ನುವ ದೃಷ್ಟಿಕೋನವಿಟ್ಟುಕೊಂಡು ನಾವು ಅವರನ್ನು ಕೇಳಿಕೊಂಡಾಗ, ಒಂದನ್ನು ಮಾಡಿದ್ದಾರೆ, ಅದರ ಸರ್ವೇ ಕಾರ್ಯ ಈಗಾಗಲೇ ಆಗಿದೆ. ಅದಕ್ಕೆ 1 ಕೋಟಿ 10 ಲಕ್ಷ ರೂ. ದುಡ್ಡನ್ನು ಇಟ್ಟಿದ್ದಾರೆ. 1 ಕೋಟಿ 10 ಲಕ್ಷ ರೂ.ಗಳನ್ನು

ಈಗಾಗಲೇ ಒಂದು ಕಂಪನಿಗೆ ಕೊಟ್ಟು ಸರ್ವೆ ಮಾಡಲಾಗಿ, ಅದು ಈಗ ಸರ್ಕಾರದ ಮುಂದಿದೆ. ಮಾನ್ಯ ನೀರಾವರಿ ಸಚಿವರಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿಯನ್ನು ಮಾಡಿಕೊಂಡು, ಇದರಿಂದ ಆ ಭಾಗಕ್ಕೆ ಕನಿಷ್ಠ 2 ಲಕ್ಷ ಹೆಕ್ಟೇರ್ ನೀರಾವರಿ ಆಗುತ್ತದೆ. ಅಲ್ಲಿ ಕನಿಷ್ಠ 50 ರಿಂದ 60 ಕೆರೆಗಳು ನೀರನ್ನು ತುಂಬಿಕೊಂಡು, ಆ ಭಾಗದಲ್ಲಿ ನಮಗೆ ಫ್ಲಡ್ ಬಂದಾಗ ಮಾತ್ರ ಆ ನೀರನ್ನು ಬಿಡಬೇಕು, ಫ್ಲಡ್ ಬರದೇ ಇರುವಂತಹ ಸಮಯದಲ್ಲಿ ಆ ನೀರನ್ನು ಬಿಡುವ ಅವಶ್ಯಕತೆಯಿರುವುದಿಲ್ಲ. ಎಲ್ಲೋ ಒಂದು ಕಡೆ ಆಂಧ್ರ ಮತ್ತು ಕರ್ನಾಟಕದಲ್ಲಿ ನೀರಿನ ಸಮಸ್ಯೆಯಾಗುತ್ತದೆಂದು ಹೇಳಬಹುದು, ಆದರೆ, ಆ ಸಮಸ್ಯೆಯಾಗುವುದು ಬೇಡ, ನಾವು ಪ್ರತಿ ಸಲ ನೀರು ಬಿಡಿ ಎಂದು ಹೇಳುವುದಿಲ್ಲ. ಫ್ಲಡ್ ಯಾವಾಗ ಬರುತ್ತದೆ, ಆ ಸಮಯದಲ್ಲಿ ನಾವು ಎಲ್ಲಾ ಕೆರೆ ಕಟ್ಟೆಗಳನ್ನು ತುಂಬಿಸಿಕೊಳ್ಳುತ್ತೇವೆ. ಅದರ ಜೊತೆಗೆ ಆ ಸರ್ವೇ ಕಾರ್ಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. Left bank canal ಅನ್ನು ನಾವು ಮುಂದೆ ರಾಯಚೂರಿಗೆ ನೀರಿನ ಲೆವೆಲ್‌ಗೆ ಕೊಡುವುದಕ್ಕೆ ಆಗುವುದಿಲ್ಲ. ಅದನ್ನೂ ಅದರ ಜೊತೆಯಲ್ಲಿ ಸೇರಿಸಿದರೆ ಅಲ್ಲಿ ನಾವು ನೀರಿನ ಲೆವೆಲ್‌ನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನೀರಾವರಿ ಸಚಿವರು ಬಹಳ ಉತ್ಸಾಹಕರಿದ್ದಾರೆ, ಅವರು ಆ ಕೆಲಸವನ್ನು ಮಾಡುತ್ತಾರೆ. ನಮ್ಮ ಉತ್ತರ ಕರ್ನಾಟಕದ ಭಾಗದೊಳಗೆ ಆ ಕೆರೆಗಳನ್ನು ತುಂಬಿಸುವುದರಿಂದ ಕುಡಿಯುವ ನೀರಿನ ಸಮಸ್ಯೆ ಕೂಡ ಬಂದ್ ಆಗುತ್ತದೆ. ಇವತ್ತು ಬರದಲ್ಲಿ ಬೋರ್‌ವೆಲ್ ಹಾಕಿದರೂ, ಹಾಕಿದ ಒಂದು ತಿಂಗಳಲ್ಲಿ ಅಲ್ಲಿ ನೀರು ಬರುತ್ತಿಲ್ಲ. ಅದಕ್ಕೆ ನಾನು ನೀರಾವರಿ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯಮಾಡಿ ಅದನ್ನು ಟಿ.ಎಲ್.ಸಿ.ಯೊಳಗೆ ತಂದು ಅದನ್ನು approvaal ಮಾಡಿಸಿ ಆದಷ್ಟು ಬೇಗನೆ ಕೆಲಸ ಪ್ರಾರಂಭ ಮಾಡುವುದರಿಂದ ಆ ಭಾಗದ ರೈತರು ನಮ್ಮ ನೀರಾವರಿ ಮಂತ್ರಿಗಳ ಫೋಟೋವನ್ನು ಹಾಕಿಕೊಳ್ಳುತ್ತೇವೆ. ಏಕೆಂದರೆ, ನಾವು ಅಷ್ಟು ನೀರಿನ ವಿಚಾರದಲ್ಲಿ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಬರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : – ಈಗಾಗಲೇ ಅದರ ಬಗ್ಗೆ ತಾವು ಹೇಳಿದ್ದೀರಿ.

ಶ್ರೀ ಶಿವರಾಜ ಎಸ್.ತಂಗಡಗಿ : – ಮಾನ್ಯ ಅಧ್ಯಕ್ಷರೆ, ನಮಗೆ ಮೇವಿನ ಸಮಸ್ಯೆಯಿದೆ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬರುತ್ತೇನೆಂದು ಹೇಳಿದ್ದಾರೆ.

ನಮ್ಮ original ಸಮಸ್ಯೆಯನ್ನು ನಾವು ಅವರಿಗೆ ತಿಳಿಹೇಳುತ್ತೇವೆ. ಆದರೆ, ಡಿ.ಸಿ.ಗಳಿಗೆ, ಅಧಿಕಾರಿಗಳಿಗೆ ನಾವು ಕುಡಿಯುವ ನೀರಿನ ಸಮಸ್ಯೆ ಮತ್ತು ಮೇವಿನ ಸಮಸ್ಯೆ ಹೇಳಿದಾಗ ಅವರು ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಗೋಶಾಲೆ ತೆಗೆಯುವಂತಹ ಕೆಲಸ ಕೂಡ ಆಗುತ್ತಿಲ್ಲ. ದಯಮಾಡಿ ಅದರ ಬಗ್ಗೆ ನಾಳೆಯೇ ಆದೇಶ ಮಾಡಬೇಕು. ಏಕೆಂದರೆ ಬರ, ಬರ ಎಂದು ಮಾತನಾಡುವುದಕ್ಕಿಂತ ಅದು ಕಾರ್ಯರೂಪದಲ್ಲಿ ಆಗಬೇಕು. ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಅದರ ಜೊತೆಯಲ್ಲಿ ನಮ್ಮ ಜಿಲ್ಲೆಯ ಬಗ್ಗೆಯೂ ಲಕ್ಷ್ಯವನ್ನು ಕೊಡಲಿ ಎಂದು ಹೇಳುತ್ತಾ, ಮಾತನಾಡಲು ಅವಕಾಶವನ್ನು ಕೊಟ್ಟಂತಹ ತಮಗೂ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : – ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಳೆದ ಎರಡು ದಿನಗಳಿಂದ ಬೇಡಿಕೆಗಳ ಮೇಲೆ ಚರ್ಚೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುವುದು ಬಹಳ ಕಡಿಮೆಯಾಗಿ ಬಿಟ್ಟಿದೆ. ಭಾರತೀಯ ಜನತಾ ಪಕ್ಷದ ಸರ್ಕಾರ ಕರ್ನಾಟಕದಲ್ಲಿ ಬಂದ ಮೇಲೆ ಬೇಡಿಕೆಗಳ ಮೇಲೆ ಚರ್ಚೆ ನಡೆದಿರುವುದು ಬಹಳ ಕಡಿಮೆ. ಇದನ್ನು ನಾನು ಉದ್ದೇಶಪೂರ್ವಕವಾಗಿ ಹೇಳುತ್ತಿಲ್ಲ. ಅಂಕಿ ಅಂಶಗಳು ಕೂಡ ಇವೆ. ಕಳೆದ ನಾಲ್ಕು ವರ್ಷದ್ದು ತೆಗೆದು ನೋಡಿದಾಗ, ಹೆಚ್ಚಾಗಿ guillotine ಹಾಕಿಕೊಂಡು ಎಲ್ಲವನ್ನು ಪಾಸ್ ಮಾಡಿಕೊಳ್ಳುವಂತಹದ್ದನ್ನು ಮಾಡುತ್ತಿದ್ದಾರೆ. ಇದು ಒಂದು, ಎರಡನೆಯ ವಿಚಾರ.

ಅಧ್ಯಕ್ಷರು : – Please, ದಯಮಾಡಿ ಅಲ್ಲಲ್ಲಿ ಮಾತನಾಡಬೇಡಿ.

ಶ್ರೀ ಸಿದ್ದರಾಮಯ್ಯ: ಎರಡನೆಯದಾಗಿ, ಎಲ್ಲಾ ಇಲಾಖೆಗಳನ್ನೂ ಒಟ್ಟಿಗೆ ಹಾಕಿ ಚರ್ಚೆ ಮಾಡುವುದು ಒಳ್ಳೆಯ ಪದ್ಧತಿಯಲ್ಲ. 1983 ಕ್ಕಿಂತ ಹಿಂದಿನದ್ದು ನನಗೆ ಗೊತ್ತಿಲ್ಲ. 1983 ರಲ್ಲಿ ನಾನು ಇಲ್ಲಿಗೆ ಶಾಸಕನಾಗಿ ಬಂದ ಮೇಲೆ 1984 ರಲ್ಲಿ ಒಂದು ವರ್ಷದಲ್ಲಿಯೇ ಮಂತ್ರಿಯಾದೆ. ನಾನು ಸುಮಾರು ಇಲಾಖೆಗಳನ್ನು ನಿಭಾಯಿಸಿದ್ದೇನೆ. Sericuture, Animal Husbandry, Transport, Finance, Labour, Planning, ಹೀಗೆ ಸುಮಾರು ಇಲಾಖೆಗಳನ್ನು ನಿಭಾಯಿಸಿದ್ದೇನೆ. ಆ ಅವಧಿಯಲ್ಲಿ ಅಂದರೆ, 1983 ರಿಂದ 1989 ರವರೆಗಿನ

ದಾಖಲೆಗಳನ್ನು ತೆಗೆದು ನೋಡಿದರೆ ನಿಮಗೆ ಗೊತ್ತಾಗುತ್ತದೆ. 1984 ರಿಂದ 1989 ರವರೆಗೆ ಹಾಗೂ 2004 ರಿಂದ 2005 ಮೇ ವರೆಗೆ ನಾನು ಮಂತ್ರಿಯಾಗಿದ್ದೆ. 2004–05 ರಲ್ಲಿ ಅಬಕಾರಿ ಇಲಾಖೆಯನ್ನೂ ಸಹ ನಾನೇ ನೋಡಿಕೊಳ್ಳುತ್ತಿದ್ದೆ. ಹಾಗಾಗಿ ನನಗೆ ಅನೇಕ ಇಲಾಖೆಗಳ ಅನುಭವವಿದೆ. ಪ್ರತಿ ಇಲಾಖೆ ಮೇಲೆ ಹಿಂದೆ ಚರ್ಚೆ ನಡೆಯುತ್ತಿತ್ತು. ಆಮೇಲೆ ಅದು ಬಹಳ ವರ್ಷಗಳ ಕಾಲ ನಡೆದುಕೊಂಡು ಬಂದಂತಹ ಪದ್ಧತಿ ಆಗಿತ್ತು. ಪ್ರತಿ ಇಲಾಖೆ ಮೇಲೆ ಚರ್ಚೆಯಾಗುವುದು, ಅದು ದೊಡ್ಡ ಇಲಾಖೆಯಾದರೆ, ಇಡೀ ದಿನ ಚರ್ಚೆಯಾಗಿ ಸಾಯಂಕಾಲದ ಹೊತ್ತು ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ಕೊಡುತ್ತಿದ್ದರು. ಸ್ವಲ್ಪ ಸಣ್ಣ ಇಲಾಖೆಯಾದರೆ, ಅವರು ಮಧ್ಯಾಹ್ನದವರೆಗೆ ಚರ್ಚೆಯಾಗಿ ಮಧ್ಯಾಹ್ನದ ಹೊತ್ತಿಗೆ ಉತ್ತರ ಕೊಡುತ್ತಿದ್ದರು, ಇಲ್ಲದಿದ್ದರೆ 2 ಇಲಾಖೆಗಳನ್ನೂ ಸೇರಿಸಿ ಇಬ್ಬರೂ ಮಂತ್ರಿಗಳೂ ಕೂಡ ಉತ್ತರ ಕೊಡುವಂತಹ ಪದ್ಧತಿ ಇತ್ತು. ಈಗ ಆ ಪದ್ಧತಿ ಹೋಯಿತು. ಸ್ವಲ್ಪ ದಿನಗಳ ಕಾಲ ಈ subject committee ಎನ್ನುವುದನ್ನು ತೆಗೆದುಕೊಂಡು ಬಂದರು. ನಾನು ಆ ಸಮಯದಲ್ಲಿ ಶಾಸಕನಾಗಿರಲಿಲ್ಲ. ಜನರು ನನ್ನನ್ನು ಸೋಲಿಸಿದ್ದರು. ಆಗ 1999 ರಿಂದ 2004 ರವರೆಗೆ ನಾನು ಸದನಕ್ಕೆ ಬಂದಿರಲಿಲ್ಲ. subject committee ಗಳು 5 ವರ್ಷ ನಡೆದವು. ಆಮೇಲೆ ಮತ್ತೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾದ ಮೇಲೆ Coalition Government ಬಂತು. ಅದರಲ್ಲಿ ನಾನೂ ಕೂಡ ಉಪಮುಖ್ಯಮಂತ್ರಿ ಆಗಿದ್ದೆ. ಉಪ ಮುಖ್ಯಮಂತ್ರಿ ಎಂದು political reasonಗೋಸ್ಕರ ಕರೆಯುತ್ತಿದ್ದರು. ಆಗ ನಾನು ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿ ಆಗಿದ್ದೆ. ಆಗ ಮತ್ತೆ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವುದನ್ನು ಏಕೆ ಮಾಡಿದೆವು ಅಂದರೆ regular committee ಗಳಿಗೆ ಸಮಯ ಸಿಗುವುದಿಲ್ಲ ಎನ್ನತಕ್ಕದ್ದು ಒಂದು. ಎರಡನೆಯದು subject committeeಯಲ್ಲಿ ಚರ್ಚೆ ಮಾಡಿ ಕೊಟ್ಟಿರುವಂತಹ ವರದಿಗಳು ಜಾರಿ ಆಗುತ್ತಿರಲಿಲ್ಲ ಎನ್ನುವ ಕಾರಣಕ್ಕೋಸ್ಕರ ಇದೆಲ್ಲಾ ನಿಮ್ಮ ಗಮನಕ್ಕೆ ಬಂದಿದೆ. ಈಗಲೂ ಕೂಡ ಅತ್ಯುತ್ತಮ, ಬಹಳ ಪ್ರಾಮುಖ್ಯವಾದಂತಹ ಕಮಿಟಿಗಳೆಂದರೆ, public Accounts Committee, Public Undertakings Committee. ಈ ತರಹದ ಕಮಿಟಿಗಳು ಕೊಟ್ಟಂತಹ reports ಕೂಡ ಇಲ್ಲಿ ಚರ್ಚೆಯೂ ಆಗುವುದಿಲ್ಲ. ಅವು ಜಾರಿನೂ ಆಗುವುದಿಲ್ಲ. ಅನೇಕ ಜನ ಅಧಿಕಾರಿಗಳು ಆ

ರಿಪೋರ್ಟ್‌ಗಳನ್ನು ನೋಡುತ್ತಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಹಾಗಾಗಿ ಈ ರಿಪೋರ್ಟ್‌ಗಳನ್ನು implement ಮಾಡುವುದಿಲ್ಲವೆಂದು ಹೇಳಿ, ಮತ್ತೆ ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಲಿ ಎಂದು ಮತ್ತೆ ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗತಕ್ಕಂತಹ ಪದ್ಧತಿ re-introduce ಆಯಿತು. ಮಾನ್ಯ ಅಶೋಕ್‌ರವರು 4 ವರ್ಷಗಳಿಂದ ಮಂತ್ರಿಯಾಗಿದ್ದಾರೆ. ಬಹುಶ: ಅವರು ತಮ್ಮ ಹೋಮ್ ಇಲಾಖೆ ಮೇಲೆ ಉತ್ತರ ಕೊಟ್ಟಿರುವುದು ನನಗೆ ಜ್ಞಾಪಕವಿಲ್ಲ. ಅವರು ಕೊಟ್ಟೇ ಇಲ್ಲ. ಒಂದು ದಿನವೂ ಕೊಟ್ಟಿಲ್ಲ. ಅದು ಚರ್ಚೆನೂ ಆಗಲಿಲ್ಲ. ಅವರ ಇಲಾಖೆಯಲ್ಲಿರತಕ್ಕ ದೋಷಗಳನ್ನು ಗುರುತಿಸುವವರು ಯಾರು? ಅವರು ಯಾವತ್ತು ಮಂತ್ರಿಯಾಗಿದ್ದಾರೋ ಅವತ್ತಿನಿಂದ ಇವತ್ತಿನವರೆಗೆ ಅವರು ಇಲಾಖೆ ಮೇಲೆ ಉತ್ತರವನ್ನು ಕೊಟ್ಟಿಲ್ಲ. ಚರ್ಚೆಗೆ ಉತ್ತರ ಕೊಡಲು ಅವರಿಗೆ ಅವಕಾಶವೇ ಸಿಕ್ಕಿಲ್ಲ. ಚರ್ಚೆಯೂ ಆಗಿಲ್ಲ ಅಂದರೆ ನಾವು ಎಷ್ಟರಮಟ್ಟಿಗೆ ನ್ಯಾಯವನ್ನು ಒದಗಿಸಿದ್ದೇವೆ? (ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ನಾವು ಎಷ್ಟರಮಟ್ಟಿಗೆ ನ್ಯಾಯವನ್ನು ಒದಗಿಸಿದ್ದೇವೆ?) ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ನಾವು ಎಷ್ಟರಮಟ್ಟಿಗೆ ಚರ್ಚೆ ಮಾಡಿದ್ದೇವೆ? ಇಲ್ಲಿ ಒಪ್ಪಿಗೆ ಕೊಟ್ಟಿರತಕ್ಕಂತಹ ಹಣ ಇಲ್ಲಿ ಎಷ್ಟರ ಮಟ್ಟಿಗೆ ಖರ್ಚಾಗಿದೆ ಎನ್ನುವುದನ್ನು ನಾವು ನೋಡಿದ್ದೇವೆ? ನಾವು ಅನ್ಯಾಯ ಮಾಡಿದ್ದೇವೆಂದಾಯಿತು. ನಾವು ನ್ಯಾಯವನ್ನು ಒದಗಿಸಲಿಲ್ಲ ಎನ್ನತಕ್ಕದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದೊಂದು ಇಲಾಖೆಗೆ 3 ಸಾವಿರ ಕೋಟಿ, 4 ಸಾವಿರ ಕೋಟಿ, 5 ಸಾವಿರ ಕೋಟಿ, 10 ಸಾವಿರ ಕೋಟಿಯವರೆಗೆ ಕೂಡ ಆಗುತ್ತದೆ. ಈಗ ಪವರ್ ಇಲಾಖೆಗೆ ಈ ವರ್ಷ 10 ಸಾವಿರ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ನೀರಾವರಿ ಇಲಾಖೆಗೆ ಸುಮಾರು 8,000 ಕೋಟಿ ಖರ್ಚು ಮಾಡುತ್ತೇವೆಂದು ಈ ವರ್ಷದ ಬಜೆಟ್‌ನಲ್ಲಿ ಹೇಳಿರುವುದು. ಕೃಷಿಗೆ ಸಂಬಂಧಿಸಿದ ಇಲಾಖೆಗಳಿಗೆ 19,600 ಕೋಟಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಈ ಹಣವನ್ನು ಇಲ್ಲಿ ನಾವು ಸುಮ್ಮನೆ ಕಣ್ಣು ಮುಚ್ಚಿಕೊಂಡು ಮಂಜೂರು ಮಾಡಿಕೊಡಲಾಗುವುದಿಲ್ಲ. ಅಲ್ಲಿ ಕಳೆದ ವರ್ಷ ಖರ್ಚಾಗಿದೆ. ಈ ವರ್ಷ ಅವರು ಹೇಗೆ ಖರ್ಚು ಮಾಡಬೇಕು, ಅಲ್ಲಿ ಕೊಟ್ಟಿರುವ ಹಣ ಕಡಿಮೆಯಾಗಿದೆಯೋ, ಹೆಚ್ಚಾಗಿದೆಯೋ ಇವತ್ತಿನ ಅಗತ್ಯಗಳಿಗೆ ಅನುಗುಣವಾಗಿ ಅಲೋಕೇಷನ್ ಮಾಡಿಕೊಂಡಿದ್ದಾರೋ ಇಲ್ಲವೋ ದುರುಪಯೋಗವಾದಗ ರೀತಿಯಲ್ಲಿ, ಅವ್ಯವಹಾರ ಆಗದಿರುವ ರೀತಿಯಲ್ಲಿ ಹಣ

ಖರ್ಚಾಗಿದೆಯೇ? ಸರ್ಕಾರದಿಂದ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಅವರು ಇಲ್ಲಿ ಅನೇಕ ಕಾರ್ಯಕ್ರಮಗಳನ್ನು ಪ್ರಕಟಣೆ ಮಾಡಿರುತ್ತಾರೆ, ಅವಕ್ಕೆ ಅಲೋಕೇಷನ್ ಕೂಡ ಕೊಟ್ಟಿರುತ್ತಾರೆ. ಬಹಳಷ್ಟು ಕಾರ್ಯಕ್ರಮಗಳು beneficiary-oriented programmeಗಳಾಗಿರುತ್ತವೆ.. ಅವನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸಬೇಕು. ಆ ಫಲಾನುಭವಿಗೆ ಆ ಸೌಲತ್ತು ತಲುಪಿದೆಯೋ ಇಲ್ಲವೋ ಅದನ್ನು ಮಧ್ಯವರ್ತಿಗಳು ಯಾರಾದರೂ ತಿಂದು ಹಾಕಿದ್ದಾರೋ ಇಲ್ಲವೋ ಅಧಿಕಾರಿಗಳು ತಿಂದು ಹಾಕಿದ್ದಾರೋ ಇಲ್ಲವೋ ಅಥವಾ ಮಂತ್ರಿಗಳು ಅವ್ಯವಹಾರ ಮಾಡಿದ್ದಾರೋ ಇಲ್ಲವೋ ಇದೆಲ್ಲವೂ ಕೂಡ ಸುಧೀರ್ಘವಾಗಿ ಚರ್ಚೆಯಾಗದೆ ಹೋದರೆ, ನಾವು ನ್ಯಾಯ ದೊರಕಿಸಿದಂತಾಗುವುದಿಲ್ಲ. ಅದಕ್ಕೆ ಬಹುಶ: ಈ ಹಿನ್ನೆಲೆಯಲ್ಲಿ ನಮ್ಮ ರೂಲ್ 178 ನಲ್ಲಿ 15 ದಿವಸಗಳು ಕನಿಷ್ಠ ಚರ್ಚೆಯಾಗಬೇಕೆಂದು ನಾವು ಬರೆದುಕೊಂಡಿರುವುದು, ಈ ಸದನದ ರೂಲ್ಸ್ ಕಮಿಟಿ ಮಾಡಿರುವುದು. ಕನಿಷ್ಠ 15 ದಿನ ಚರ್ಚೆಯಾಗಬೇಕು, ಅದಕ್ಕಿಂತ ಹೆಚ್ಚಿನ ದಿವಸಗಳಾದರೂ ಕೂಡ ವಿಧಾನಭಾ ಅಧ್ಯಕ್ಷರು, ನೀವು ಅದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವುದನ್ನು ರೂಲ್ 178 ರಲ್ಲಿ ನಾವು ಬರೆದುಕೊಂಡಿದ್ದೇವೆ. ನಾವು ಕಳೆದ ವರ್ಷ ಇದನ್ನು ಅಸೆಂಬ್ಲಿಯಲ್ಲಿ ಹೇಳಿದ್ದೇವೆ. ಇಲ್ಲಿ ಸದನದಲ್ಲಿ ಹೇಳಿದ್ದೇವೆ, ಮತ್ತೇ Business Advisory Committee meetings ನಲ್ಲಿ ಹೇಳಿದ್ದೇವೆ. ನಾವೇ 60 ದಿವಸ ಸದನ ನಡೆಸಬೇಕೆಂದು ಮಾಡಿಕೊಂಡಿದ್ದೇವೆ, ಕಾನೂನು ಮಾಡಿಕೊಂಡಿದ್ದೇವೆ. ಆದರೆ ಕಾನೂನು ಮಾಡುವುದಕ್ಕಿಂತ ಹಿಂದೆ 70 ದಿವಸ, 80 ದಿವಸ, 90 ದಿವಸ, 100 ದಿವಸ ಸದನ ನಡೆದಿರುವ ಬೇಕಾದಷ್ಟು ಉದಾಹರಣೆಗಳು ಅಸೆಂಬ್ಲಿನಲ್ಲಿದೆ. ಆದರೆ ಕಾನೂನು ಮಾಡಿಕೊಂಡ ಮೇಲೆ ಯಾವತ್ತೂ 60 ದಿವಸ ಸದನ ನಡೆದ ನಿದರ್ಶನವಿಲ್ಲ. ನೀವು ಅಧ್ಯಕ್ಷರಾಗಿ ನಮ್ಮ ಸದನಕ್ಕೆ ಈ ರೀತಿಯ ಗತಿ, ಪರಿಸ್ಥಿತಿ ಬರಬಾರದು ಎಂದು ನಾವು ಅಧ್ಯಕ್ಷರಾದ ನಿಮಗೆ ಹೇಳುತ್ತೇವೆ. ನಾವು ಅವರಿಗೆ ಹೇಳುವುದಕ್ಕಾಗುತ್ತದೆಯೇ? ಅವರು ಯಾವತ್ತೂ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನಿಮಗೆ ಹೇಳಬೇಕಲ್ಲವೇ? ಅದಕ್ಕೆ ನಾವು ನಿಮಗೆ ಹೇಳುತ್ತಿದ್ದೇವೆ. ಅವರಿಗೆ ಹೇಳಿದರೆ, ಅವರು ಒಪ್ಪಿಕೊಳ್ಳುವುದಕ್ಕೆ ತಯಾರೇ ಇಲ್ಲ, ಏಕೆಂದರೆ, ಅಷ್ಟರಮಟ್ಟಿಗೆ ಮೊಂಡು ಬಿದ್ದುಹೋಗಿದ್ದಾರೆ, ಏನು ಹೇಳಿದರೂ ಕೇಳುವುದಕ್ಕೂ ತಯಾರಿಲ್ಲ. They have become most

insensitive. ಇವರು insensitive ಆಗಿರುವುದಕ್ಕಿಂತ ಅಧಿಕಾರಿಗಳೇ insensitive ಆಗಿದ್ದಾರೆ, ಮೊದಲು ಹಾಗೆ ಇರಲಿಲ್ಲ, ಬಹಳ ಒಳ್ಳೆಯ ಅಧಿಕಾರಿಗಳಿದ್ದರು, ಈಗಲೂ ಕೆಲವು ಒಳ್ಳೆಯ ಅಧಿಕಾರಿಗಳಿದ್ದಾರೆ. ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾವಾಗ ಕುದುರೆ ಸವಾರ ಹೇಗಿರುತ್ತಾನೋ ಹಾಗೆ ಕುದುರೆಗಳು ಓಡುತ್ತವೆ. ಕುದುರೆ ಸವಾರನೇ ಸರಿಯಿಲ್ಲದೇ ಹೋದರೆ, ಹುಚ್ಚು ಹಿಡಿದುಕೊಂಡು ಅವು ಎತ್ತೆತ್ತೋ ಓಡುತ್ತವೆ. ಇದು ಇವತ್ತು ಆಗಿರುವ ಪರಿಸ್ಥಿತಿ. ಹಾಗಾಗಿ ಇವತ್ತು ಸರ್ಕಾರ ಲಂಗುಲಗಾಮು ಇಲ್ಲದೆ ನಡೆಯುತ್ತಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು ಅಥವಾ ರಾಜಕೀಯ ಹೇಳಿಕೆಯಾಗಲಾರದೆನ್ನುವುದು ನನ್ನ ಭಾವನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೋಡಿ ಇದನ್ನು ಇವತ್ತು ನಿಮ್ಮ ಗಮನಕ್ಕೆ ತೆಗೆದುಕೊಂಡು ಬಂದೆ, 2-3 ಸಾರಿ ಅಸೆಂಬ್ಲಿಯಲ್ಲೂ ಕೂಡ ಪ್ರಸ್ತಾಪ ಮಾಡಿದ್ದೆ, ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಕೂಡ 2-3 ಸಾರಿ ಪ್ರಸ್ತಾಪ ಮಾಡಿದ್ದರು. ಸುಮಾರು 8 ಇಲಾಖೆಗಳು ಬೆಳಿಗ್ಗೆವರೆಗೆ ಆಡಳಿತ ವರದಿಯನ್ನು ಕೊಟ್ಟಿರಲಿಲ್ಲ, ಆಮೇಲೆ 2-3 ಇಲಾಖೆಯವರು ಕೊಟ್ಟರೆಂದು ಹೇಳುತ್ತಾರೆ. 8 ಇಲಾಖೆಗಳು annual report ಕೊಡಲಿಲ್ಲವೆಂದರೆ, 13 ಇಲಾಖೆಗಳಲ್ಲಿ performance budget ಕೊಡಲಿಲ್ಲವೆಂದರೆ, ಸರ್ಕಾರ ನಡೆಯುತ್ತದೆಯೇ ಅಥವಾ ಈ ಸರ್ಕಾರ ಜೀವಂತವಾಗಿದೆಯೇ ಅಥವಾ ಈ ಸರ್ಕಾರಕ್ಕೆ ಜವಾಬ್ದಾರಿ ಇದೆಯೇ ಎನ್ನುವ ಈ ಪ್ರಶ್ನೆಗಳು ಸ್ವಾಭಾವಿಕವಾಗಿ ತಾನಾಗಿಯೇ ಉದ್ಭವವಾಗುತ್ತವೆ. ಅಧ್ಯಕ್ಷರೆ, ಏನೋ ಇವತ್ತು ಒಂದು ತೀರ್ಮಾನ ಮಾಡಿದ್ದೀರಿ, ನಾವು ಅದರ ಮೇಲೆ ಆಶಾಭಾವನೆಯನ್ನಿಟ್ಟುಕೊಂಡು ಮುಂದುವರೆಯುತ್ತೇವೆ. ಏಕೆಂದರೆ, ನಾವು pessimistic ಆಗುವುದಕ್ಕಾಗುವುದಿಲ್ಲ, optimistic ಆಗಿಯೇ ಇರಬೇಕು. ಪ್ರಜಾಪ್ರಭುತ್ವದಲ್ಲಿ ಯಾವತ್ತೂ ಕೂಡ pessimistic ಆಗಬಾರದು, ಆಶಾವಾದಿಗಳಾಗಿರಬೇಕು, ನಿರಾಶಾವಾದಿಗಳಾಗಬಾರದು. ನಾನು ಯಾವಾಗಲೂ ಆಶಾವಾದಿ. ಇನ್ನು ಮುಂದೆ ಟರ್ಮ್ ಮುಗಿದು ಹೋಗುತ್ತದೆ. ಬಜೆಟ್ ಮಂಡನೆ ಮಾಡುತ್ತೀರೋ ಬೇಡಿಕೆಗಳು ಚರ್ಚೆಗೆ ಬರುತ್ತದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ಏಕೆಂದರೆ, ಇವರ ಟರ್ಮ್ ಮುಗಿಯುತ್ತ ಬಂದುಬಿಟ್ಟಿತಲ್ಲ?

ಶ್ರೀ ಆರ್.ಅಶೋಕ್ : - ನೆಕ್ಸ್ಟ್ ಬರುತ್ತೇವೆ.

ಶ್ರೀ ಸಿದ್ದರಾಮಯ್ಯ : – ಬರ್ತಿ ಮಾರಾಯರೆ, ನಾವು ಬೇಡವೆಂದು ಹೇಳಿದ್ದೇವೆಯೇ? ಈಗ 5 ವರ್ಷಕ್ಕೆ ಮುಗಿಯಿತೋ ಇಲ್ಲವೋ? ಚುನಾವಣೆಗೆ ಹೋಗದೆ ಹಾಗೆ ಮುಂದುವರೆದುಬಿಡುತ್ತೀರಾ? ಚುನಾವಣೆಗೆ ಹೋಗಲೇ ಬೇಕು. ಜನರು ರಿನ್ಯೂವಲ್ ಮಾಡಬೇಕು. ಜನ ನಿಮಗೆ ರಿನ್ಯೂವಲ್ ಮಾಡುತ್ತಾರೋ ನಮಗೆ ರಿನ್ಯೂವಲ್ ಮಾಡುತ್ತಾರೋ ಯಾರಿಗೆ ಕೊಡುತ್ತಾರೋ ಏನೋ ಜನರ ಓಟುಗಳನ್ನು ಒತ್ತಿಕೊಂಡು ಜೇಬಿಗೆ ಹಾಕಿಕೊಂಡಿದ್ದೀರಾ? ನನಗೂ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ, ಮುಂದೆ ನಮಗೆ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೇವೆ, ನೀವು ಒಂದು ರೀತಿ ಭಂಡತನದಿಂದ ಪುನ: ನಾವೇ ಬರುತ್ತೇವೆಂದು ಅಂದುಕೊಂಡಿದ್ದೀರಿ, ಏನಾದರೂ ಅಂದುಕೊಳ್ಳಿ ನಮ್ಮದೇನೂ ತಕರಾರು ಇಲ್ಲ. ಆದರೆ ಅಂತಿಮವಾಗಿ ಈ ರಾಜ್ಯದ ಜನ ತೀರ್ಮಾನ ಮಾಡುವುದು, ಕಳೆದ 4 ವರ್ಷಗಳಲ್ಲಿ ಈ ಸರ್ಕಾರ ಹೇಗೆ ನಡೆದುಕೊಂಡು ಬಂದಿದೆ ಎನ್ನುವುದನ್ನು ರಾಜ್ಯದ 6 ಕೋಟಿ 20 ಲಕ್ಷ ಜನರು ನೋಡಿದ್ದಾರೆ. ನಾವು ವಿರೋಧ ಪಕ್ಷದವರು ಹೇಗೆ ಮಾಡಿದ್ದೇವೆನ್ನುವುದನ್ನು ನೋಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಇವರ ಕೈಗೆ ಹಣ ಕೊಟ್ಟಿದ್ದೇವೆ, ಇವರು ಹೇಗೆ ಖರ್ಚು ಮಾಡಿದ್ದಾರೆ ಎನ್ನುವುದನ್ನು ನೋಡಿದ್ದಾರೆ. ಜನರು ಕೊಡುವ ತೆರಿಗೆಯ ಒಂದೊಂದು ಪೈಸೆ ಸದುಪಯೋಗವಾಗಿದೆಯೋ ಇಲ್ಲವೋ ಎನ್ನುವುದನ್ನು ಜನ ನೋಡುತ್ತಿದ್ದಾರೆ, But it is our responsibility. ಇಡೀ ಸದನದ ಎಲ್ಲರ ಜವಾಬ್ದಾರಿ ಮತ್ತೇ ಸರ್ಕಾರದ ಜವಾಬ್ದಾರಿ. ಹಾಗಾಗಿ ಇನ್ನು ಮುಂದೆ ನಾನೇನು ಹೇಳುತ್ತೇನೆಂದರೆ, ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕಿಂತ ಮುಂಚೆ, ನಾವು ಯಾವತ್ತು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅಸೆಂಬ್ಲಿ ಕರೆಯುತ್ತೇವೆ ಅದರ ಹಿಂದಿನ ದಿವಸವೇ ಎಲ್ಲಾ ವಾರ್ಷಿಕ ವರದಿಗಳು ಬಂದಿರಬೇಕು, ಮತ್ತು performance budget ಬಂದಿರಬೇಕು. Then only ಬಹಳಷ್ಟು ಸದಸ್ಯರು ಹಳಬರು, ಹೊಸಬರಿದ್ದಾರೆ, ಅವರೆಲ್ಲರಿಗೂ ಮಾಹಿತಿ ಬೇಕಲ್ಲ, ಇಲ್ಲದಿದ್ದರೆ, ನಮ್ಮ ಮೈಸೂರಿನ ಕಡೆ ಕರೆಯುವ ಸುಬ್ಬರಾಯನ ಕೆರೆ ಭಾಷಣವಾಗುತ್ತದೆ. ಸುಬ್ಬರಾಯನ ಕೆರೆ ಭಾಷಣವೆಂದು ಕರೆಯುತ್ತಿದ್ದೆವು. ಈಗ ಅಲ್ಲಿ ಭಾಷಣ ನಡೆಯುತ್ತಿಲ್ಲ. ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬಂದ ಮೇಲೂ ಕೂಡ ಅಲ್ಲಿ ಭಾಷಣ ನಡೆಯುತ್ತಿತ್ತು, ಅಲ್ಲಿ ನಾನು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಸುಬ್ಬರಾಯನ ಕೆರೆಯನ್ನ ಪಾರ್ಕ್ ಮಾಡಿ,

ಅಲ್ಲಿ ಹುತಾತ್ಮರ ಬಿಲ್ಡಿಂಗ್ ಮಾಡಿದ್ದೇವೆ. ಮೊದಲು ನಾವು ಸುಬ್ಬರಾಯನ ಕೆರೆ ಭಾಷಣವೆನ್ನುತ್ತಿದ್ದೆವು. ಆ ರೀತಿ ಆಗುತ್ತದೆ, ಇಲ್ಲಿ ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ, ಅಂಕಿಅಂಶಗಳು ಬೇಕಾಗುತ್ತದೆ. ಅದನ್ನು ಕೊಡುವವರು ಯಾರು, ಅಧಿಕೃತವಾಗಿ ಕೊಡುವವರು ಸರ್ಕಾರ ಮಾತ್ರ ಅಧಿಕೃತವಾಗಿ ಆ ಅಂಕಿಅಂಶ ಸಿಗದೆ ಹೋದರೆ, we can't do justice. ಏನು ನಡೆಯುತ್ತಿದೆ ಎನ್ನುವುದನ್ನು ಈ ರಾಜ್ಯದ ಜನರ ಗಮನಕ್ಕೆ ತರುವುದಕ್ಕೆ ನಾವು ವಿಫಲವಾಗುತ್ತೇವೆ. ಆದುದರಿಂದ ಇವತ್ತು ನೀವು ಮಾಡಿದ್ದೀರಿ, ಮುಂದೆ ಏನಾಗುತ್ತದೆಂದು ನಾವು ನೋಡೋಣ. ನಾನು ಅವರು ಅಲ್ಲಿಯವರೆಗೆ ಇರುತ್ತಾರೆಂದು ತಿಳಿದುಕೊಂಡಿದ್ದೇನೆ, ಮಧ್ಯದಲ್ಲಿ ಬಿದ್ದು ಹೋದರೆ ನನಗೆ ಗೊತ್ತಿಲ್ಲ. ಏಕೆಂದರೆ, ಚುನಾವಣೆ due date ಇರುವುದು ಏಪ್ರಿಲ್, ಮೇನಲ್ಲಿ, ಇನ್ನೊಂದು ಬಜೆಟ್ ಮಂಡನೆ ಮಾಡುವುದಕ್ಕೆ ಅವಕಾಶವಿದೆ, I don't think, ನಾವೇನೂ ಮಾಡುವುದಕ್ಕೆ ಹೋಗುವುದಿಲ್ಲ, ಇವರೇ ಇರಲೆಂದು ನಾವು ತಿಳಿದುಕೋಂಡಿದ್ದೇವೆ, ಆದರೆ ಇವರೇ ಒಳಗಡೆ ಕಿತ್ತಾಡುತ್ತಾರೆ. ಮೇಲ್ಮನೆಯಲ್ಲಿ ನೋಡಿ ಒಬ್ಬರಿಗೊಬ್ಬರು ಹೇಗೆ ಜಗಳವಾಡಿದ್ದಾರೆ. ಈಶ್ವರಪ್ಪನವರೆ, ಯಾರು ನಿಮಗೆ ಹೇಳಲಿಲ್ಲವೆ? ಅಧ್ಯಕ್ಷರಿಗೆ ಹೇಗಾದರೂ ಹೇಳಬೇಕಲ್ಲ?

ಶ್ರೀ ಎಸ್.ಈಶ್ವರಪ್ಪ (ಕಂದಾಯ ಮತ್ತು ಪಂಚಾಯತ್ ರಾಜ್ ಸಚಿವರು):– ಮೊನ್ನೆ ಚಿತ್ರದುರ್ಗಾದಲ್ಲಿ ಕಿತ್ತಾಡಿದ್ದನ್ನು ಮಾತ್ರ ನನಗೆ ಹೇಳಿದರು, ಅದನ್ನೇ ಹೇಳಿದ್ದು.

ಶ್ರೀ ಸಿದ್ದರಾಮಯ್ಯ : – ಅದನ್ನು ಹೇಳಿದರು, ಅವರು ಚಿತ್ರದುರ್ಗದಲ್ಲಿ ಒಂದು ಪಾರ್ಟಿ ಕಛೇರಿಯಲ್ಲಿ ಹೊಡೆದಾಡಿದರು, ಅಲ್ಲಿ ಕೌನ್ಸಿಲ್‌ನಲ್ಲೇ ಹೊಡೆದಾಡಿದರು, ಕೌನ್ಸಿಲ್‌ನಲ್ಲಿಹೊಡೆದಾಡಿದರೆ? Bharathi Shetty Vs.Karjol ಜಟಾಪಟಿ. ನಿಮಗೆ ಚರ್ಚೆ ಎಂದರೇನು, ಜಗಳ ಎಂದರೇನು, ಹಾಗಾದರೆ, ಚಿತ್ರದುರ್ಗದಲ್ಲಾಡಿದದ್ದು ಚರ್ಚೆನಾ?

ಶ್ರೀ ಕೆ.ಎಸ್.ಈಶ್ವರಪ್ಪ : – ಕುರ್ಚಿ ಕುರ್ಚಿ ಹಿಡಿದರು, ಸರ್ಕಾರದಲ್ಲಿ ಏನು ಲೋಪವಾಗಿದೆ ಎನ್ನುವ ಅಂಶವನ್ನು ನಮ್ಮ ಸಹೋದರಿಯವರಾದ ಭಾರತಿ ಶೆಟ್ಟಿಯವರು ಪ್ರಸ್ತಾಪ ಮಾಡಿದರು, ಅದಕ್ಕೆ ಮಂತ್ರಿಗಳು ಉತ್ತರ ಕೊಟ್ಟರು, ಅದನ್ನು ನೀವು ಜಟಾಪಟಿ ಎಂದುಕೊಂಡರೆ, ನಿಮ್ಮ ದೃಷ್ಟಿಯಲ್ಲಿ ಜಟಾಪಟಿ ಎಂದರೆ ಕುರ್ಚಿ ತಾನೆ, ಮೊನ್ನೆ ನಿಮ್ಮ ಕೋರ್ ಕಮಿಟಿಯಲ್ಲಿ ನಿಮ್ಮ

ಮಿಸ್ತ್ರಿಯವರ ಬಗ್ಗೆ ಯಾವ ರೀತಿ ನಡೆದುಕೊಂಡರು ನಾನು ವಿವರಕ್ಕೆ ಹೋಗುವುದಿಲ್ಲ ಬಿಡಿ.

ಶ್ರೀ ಸಿದ್ದರಾಮಯ್ಯ : – ನೀವು ಇದ್ದೀರಾ ಅಲ್ಲಿ? ಪೇಪರ್‌ನಲ್ಲಿ ಬಂದಿರುವುದು ಹೇಳುತ್ತಿದ್ದೀರಿ. ನಾನು ಹೇಳುವುದು ಕೌನ್ಸಿಲ್‌ನಲ್ಲಿ ವರದಿ ಕೌನ್ಸಿಲ್‌ನ ವರದಿ ತಪ್ಪಾದರೆ ವರದಿ ಮಾಡಿರುವವರ ಮೇಲೆ ಪ್ರಿವಿಲೇಜ್ ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ : – ಪತ್ರಿಕೆಗಳಲ್ಲಿ ಬಂದಿರುವುದು ನಿಜವೆಂದು ನಾನು ಹೇಳುತ್ತೇನೆ, ಒಬ್ಬ ಸದಸ್ಯರು ಅವರ ಹಕ್ಕನ್ನು ಪ್ರಸ್ತಾಪ ಮಾಡಿದರು, ಮಂತ್ರಿಗಳು ಅದಕ್ಕೆ ಉತ್ತರವನ್ನು ಹೇಳಿದರು.

ಶ್ರೀ ಸಿದ್ದರಾಮಯ್ಯ : – ಅಸೆಂಬ್ಲಿಯಲ್ಲಿ ನಡೆಯುವುದಕ್ಕೂ ಅಸೆಂಬ್ಲಿಯಲ್ಲಿ ನಡೆಯುವುದನ್ನು ವರದಿ ಮಾಡುವುದಕ್ಕೂ ಬೇರೆ ಎಲ್ಲೋ ಸಭೆಯಲ್ಲಿ ಭಾಷಣ ಮಾಡುವುದಕ್ಕೂ ಕಂಪೇರ್ ಮಾಡುವುದಕ್ಕೆ ಬರುವುದಿಲ್ಲ. This House has got responsibility. ಇದಕ್ಕೆ ಬಹಳ ಜವಾಬ್ದಾರಿ ಇದೆ, ಡಿಗ್ನಿಟಿ ಇದೆ, ಡೆಕೊರಂ ಇದೆ, ಇದಕ್ಕೆ ಗೌರವವಿದೆ, ಇದು 6 ಕೋಟಿ ಜನರನ್ನು ಪ್ರತಿನಿಧಿಸತಕ್ಕಂತ ಸ್ಥಳವಿದು, ಇಲ್ಲಿ ಮಾತನಾಡುವುದಕ್ಕೂ ಅಲ್ಲಿ ಮಾಡುವುದಕ್ಕೂ ಸಂಬಂಧವಿಲ್ಲ. ಇಲ್ಲಿ ಜಗಳವಾಡುವುದಕ್ಕೂ ಎಲ್ಲೋ ಚಿತ್ರದುರ್ಗದಲ್ಲಿ ಜಗಳವಾಡುವುದಕ್ಕೂ ಸಂಬಂಧ ಕಲ್ಪಿಸುವುದಕ್ಕಾಗುವುದಿಲ್ಲ. ನಾನು ಏನು ಹೇಳುತ್ತಿದ್ದೆ ಎಂದರೆ, ಏತಕ್ಕೆ ನಿಮ್ಮ ಅಧಿಕಾರಿಗಳು ನಮ್ಮ ಮಾತನ್ನು ಕೇಳುವುದಿಲ್ಲ? Why there is dereliction of duty? why they are not showing respect to the House? It is your failure or their negligence or dereliction of duty on their part? It is both. ಅದಕ್ಕೆ, ಹೇಗೆ ಕುದುರೆ ಸವಾರರು ಇರುತ್ತಾರೋ ಹಾಗೆ ಕುದುರೆಗಳು ಓಡುತ್ತೇವೆ, ಸರ್ಕಾರ ನಡೆಯುತ್ತದೆಂದು ನಾನು ಹೇಳಿದ್ದು, ಇಲ್ಲದಿದ್ದರೆ ಈ ತರಹದ ಅಧಿಕಾರಿಗಳು ಯಾರ ಮಾತನ್ನೂ ಕೇಳುವುದಿಲ್ಲ. ಯಾವಾಗ instability ಸರ್ಕಾರದಲ್ಲಿ ಶುರುವಾಯಿತೋ ಯಾರು ಬರುತ್ತಾರೋ ತಾಳಪ್ಪ, ಈಗಾಗಲೇ 10 ತಿಂಗಳಿದ್ದ ಸದಾನಂದ ಗೌಡರು ಹೊರಟು ಹೋದರು, ಜಗದೀಶ್ ಶೆಟ್ಟರ್ ಬಂದಿದ್ದಾರೆ, ಜಗದೀಶ್ ಶೆಟ್ಟರ್ ಎಷ್ಟು ದಿವಸ ಇರುತ್ತಾರೆ, ಅವರು ಹೋಗಿ ಇನ್ನ್ಯಾರು ಬರುತ್ತಾರೋ ಇವನ್ಯಾರೋ ಮಂತ್ರಿ ಬಂದಿದ್ದಾರೆ, ಯಾರೋ ಬರುತ್ತಾರೆ, ಹೋಗುತ್ತಾರೆ, ನಾವು ಏತಕ್ಕೆ ಇವರ ಬಗ್ಗೆ ತಲೆ ಕೆಡಿಸಿಕೊಳ್ಳುವುದು

ಎಂದು ಅಧಿಕಾರಿಗಳೆಲ್ಲಾ ಸುಮ್ಮನಾಗಿ ಬಿಡುತ್ತಾರೆ This is quite natural. ಹಿಂದೆ ಜನತಾ ಪಕ್ಷ, ಜನತಾ ದಳ ಪಕ್ಷಗಳು ಜಗಳವಾಡಿಕೊಂಡು ಈ ತರಹ ಆಗಿರುವುದನ್ನು ನಾನು ನೋಡಿದ್ದೇನೆ. ಈಗ ಅದಕ್ಕಿಂತ ಹೇಸಿಗೆ ಪಡುವ ಮಟ್ಟಿಗಾಗಿಬಿಟ್ಟಿದೆ. ಇದು ಅಧಿಕಾರಿಗಳಲ್ಲಿರುವ ಮನಸ್ಥಿತಿಗಳು, ಇವೆಲ್ಲಾ ಸ್ವಾಭಾವಿಕವಾಗಿ ಆಗತಕ್ಕಂಥವು, ನಾನು ಅನುಭವದಿಂದ ಈ ಮಾತುಗಳನ್ನೆಲ್ಲಾ ಹೇಳುತ್ತಿದ್ದೇನೆ. ಈ ಸರ್ಕಾರದ ಟರ್ಮ್ ಮುಗಿಯಬೇಕಾದರೆ ಕೆಲವೇ ತಿಂಗಳುಗಳಿವೆ, ಈಗಲಾದರೂ ಲಗಾಂಅನ್ನು ಬಿಗಿಯಾಗಿ ಹಿಡಿದುಕೊಂಡು ಓಡಿಸುವುದನ್ನು ಮಾಡಿ, ಆಗಲಿಲ್ಲವೆಂದರೆ ಬಿಟ್ಟುಬಿಡಿ, ನೀವೇ ಓಡಿಸಿ. ನಾವು ಬರುವುದಿಲ್ಲ, ಯಾವ ಕಾರಣಕ್ಕೂ ನಾವು ಬರುವುದಿಲ್ಲ.

ಶ್ರೀ ಸಿ.ಟಿ.ರವಿ : – ಅಂಕಿ ಅಂಶವನ್ನು ಇಟ್ಟುಕೊಂಡು ಮಾತನಾಡುತ್ತಿದ್ದಾರೋ ಅಥವಾ ಮತ್ತೇ ಸುಬ್ಬರಾಯನ ಕೆರೆ ಭಾಷಣಕ್ಕೆ ಹೋಗಿಬಿಟ್ಟರಲ್ಲ? ನಿಮ್ಮನ್ನು ಟ್ರ್ಯಾಕಿಗೆ ತರುತ್ತಿದ್ದೇನೆ, ನಿಮ್ಮ ಭಾಷಣ ಕೇಳುವುದಕ್ಕೆ ಕೌನ್ಸಿಲ್ ಬಿಟ್ಟು ಬಂದಿದ್ದೇನೆ.

ಶ್ರೀ ಸಿದ್ದರಾಮಯ್ಯ :– ಹೋಗೋಣ ಕುಳಿತುಕೊಳ್ಳಿ, ಚಿಕ್ಕಮಗಳೂರಿನಲ್ಲಿ ಗಣೇಶನನ್ನು ಪೂಜೆ ಮಾಡುತ್ತೀರಲ್ಲ, ಈಗ ಅಲ್ಲಿಗೆ ಬರುತ್ತೇನೆ, ಬೇಡವೆಂದರೆ ಹೋಗಿ ನಿಮಗೆ ಆಸಕ್ತಿ ಇಲ್ಲವೆಂದರೆ, please go.

ಶ್ರೀ ಸಿ.ಟಿ.ರವಿ : – ಸುಬ್ಬರಾಯನಕೆರೆ ಭಾಷಣವೇ ಮುಂದುವರೆದರೆ ಹೋಗಬೇಕಾಗುತ್ತದೆ..

ಶ್ರೀ ಸಿದ್ದರಾಮಯ್ಯ : – ಹೋಗಪ್ಪ ನಾನು ಬೇಡವೆನ್ನುವುದಿಲ್ಲ, Absolutely I have no objection, please go. ಸುಬ್ಬರಾಯನ ಕೆರೆ ಭಾಷಣವೆಂದು ನಾನು ಏತಕ್ಕೆ ಹೇಳಿದೆ ಎಂದರೆ, ಈಗ ಅದು ನಡೆಯುತ್ತಿಲ್ಲ, 1980 ಕ್ಕಿಂತ ಹಿಂದೆ ನಡೆಯುತ್ತಿದ್ದನ್ನು ಹೇಳುತ್ತಿರುವುದು, ಈಗ ಅಲ್ಲಿ ಪಾರ್ಕ್ ಮಾಡಿಬಿಟ್ಟಿದ್ದಾರೆ, ಅಲ್ಲಿ ಈಗ ಭಾಷಣವಿಲ್ಲ, ಜೊತೆಗೆ ಟೌನ್ ಹಾಲ್ ಭಾಷಣನೂ ಇಲ್ಲ, ಸಾರ್ವಜನಿಕವಾಗಿ ಭಾಷಣ ಮಾಡುವುದಕ್ಕೆ ಜಾಗವಿಲ್ಲ. ಟೌನ್ ಹಾಲ್ ಭಾಷಣವೆಂದರೆ, ನಾವು ಕ್ಲಾಸ್ ಬಿಟ್ಟು ಭಾಷಣ ಕೇಳುವುದಕ್ಕೆ ಓಡುತ್ತಿದೆವು ನಾನು ಒಂದು ಕಾಲದಲ್ಲಿ ಲಾ ಓದುತ್ತಿದ್ದೆ, ಜಾರ್ಜ್ ಫರ್ನಾಂಡಿಸ್ ಬಂದಿದ್ದಾರೆ, ಮಧುಲಿಮೆಯೆ ಬಂದಿದ್ದಾರೆ, ವಾಜಪೇಯಿ ಬಂದಿದ್ದಾರೆ, ಹುಬ್ಬಳ್ಳಿಯ ಜನಸಂಘದ ಜಗನ್ನಾಥ ಜೋಷಿ ಬಂದಿದ್ದಾರೆ, ಮೊರಾರ್ಜಿ ದೇಸಾಯಿ

ಬಂದಿದ್ದಾರೆ, ಇಂದಿರಾ ಗಾಂಧಿ ಬಂದಿದ್ದಾರೆ, ಜಯಪ್ರಕಾಶ್ ನಾರಾಯಣ್ ಬಂದಿದ್ದಾರೆಂದರೆ ಭಾಷಣ ಕೇಳುವುದಕ್ಕೆ ಕಾಲೇಜು ಬಿಟ್ಟು ಓಡುತ್ತಿದ್ದೆವು. ನನಗೆ ಎಲ್ಲಿಯವರೆಗೆ ಹುಚ್ಚು ಹಿಡಿದುಕೊಂಡಿತ್ತು ಎಂದರೆ, ಇಬ್ರಾಹಿಂ ಭಾಷಣ ಕೇಳುವುದಕ್ಕೂ ನಾನು ಹೋಗಿದ್ದೆ. ಆ ಕಾಲದಲ್ಲಿ ಪಾಪ್ಯುಲರ್ ಸ್ಪೀಕರ್ ಇಬ್ರಾಹಿಂ. Yes, he was a popular speaker at that time. 1971–72 ರಲ್ಲಿ ಇಬ್ರಾಹಿಂ ವೀರೇಂದ್ರ ಪಾಟೀಲ್ ಅವರ ಜೊತೆ ಭಾಷಣ ಮಾಡುವುದಕ್ಕೆ ಬಂದಿದ್ದರು. ಆ ಸಮಯದಲ್ಲಿ ಇಬ್ರಾಹಿಂ ಬಹಳ ಚೆನ್ನಾಗಿ ಭಾಷಣ ಮಾಡುತ್ತಾನಂತೆ, ಬಸವಣ್ಣನ ವಚನಗಳನ್ನೆಲ್ಲ ಸಾಬರು ಹೇಳುತ್ತಾರಂತೆ ಎಂದು ನಾನು ಭಾಷಣ ಕೇಳುವುದಕ್ಕೆ ಹೋಗಿದ್ದೆ. ಪಾಪ ಆತ ಚೆನ್ನಾಗಿ ಮಾತನಾಡುತ್ತಿದ್ದರು. ಈಗಲೂ ಕೂಡ he is a good speaker. ಅದರ ಬಗ್ಗೆ ಎರಡನೇ ಮಾತಿಲ್ಲ, ಇವತ್ತು ಕೂಡ ಹೇರಳವಾಗಿ ಬಸವಣ್ಣನವರ ವಚನಗಳು, ಶ್ಲೋಕಗಳನ್ನೆಲ್ಲಾ ಉದ್ಧರಿಸುತ್ತಾರೆ, ಹಾಗಾಗಿ ಅವರು he is a popular speaker. ಇರಲಿ ಬಿಡಿ, ನಾನು ಪ್ರಾಸಂಗಿಕವಾಗಿ ಆ ಮಾತನ್ನು ಹೇಳಿದೆ ಅಷ್ಟೆ, it is not relevant here. ಆದ್ದರಿಂದ ಹೋದೆ. ಆ ಭಾಷಣಗಳೆಲ್ಲಾ ಈಗ ಇಲ್ಲ. ಈಗೇನಿದ್ದರೂ ಇಲ್ಲಿ ನಾವು ಅಸೆಂಬ್ಲಿಯಲ್ಲಿ ಅಂಕಿಅಂಶಗಳನ್ನಿಟ್ಟುಕೊಂಡು ಭಾಷಣ ಮಾಡಬೇಕಾದ್ದು ಜವಾಬ್ದಾರಿ ಮತ್ತು ಪ್ರತಿಯೊಂದು ರೂಪಾಯಿ ಕೂಡ ಸರಿಯಾಗಿ ಖರ್ಚಾಯಿತೋ ಇಲ್ಲವೋ ಎಂದು ನೋಡಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ. ಅಂಕಿ ಅಂಶಗಳನ್ನು ಕೊಟ್ಟಿಲ್ಲದಿರುವುದರಿಂದ ಸುಬ್ಬರಾಯನ ಕೆರೆ ಭಾಷಣ ಮಾಡಿ ಎಂದು ನೀವೇ ನಮಗೆ ಪ್ರಚೋದನೆ ಮಾಡಿದ್ದೀರಿ. ಮಾನ್ಯ ಯಡಿಯೂರಪ್ಪನವರು ಕೊನೆಯಲ್ಲಿ ಕುಳಿತಿದ್ದಾರೆ, ಅವರು ಪದೇ ಪದೇ ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಬೇಕೆನ್ನುವುದು ನನ್ನ ಮನದಾಸೆ, ಮಂಡಿಸಬೇಕೆಂದು ಅವರು ಹೇಳುತ್ತಿದ್ದರು. ಅವರು ಹೋದ ಮೇಲೆ ಸದಾನಂದಗೌಡರು ಕೂಡ ಒಂದು ಲಕ್ಷದ ಮೂರು ಸಾವಿರದ ಮುನ್ನೂರ ಇಪ್ಪತ್ತೆಂಟು ಕೋಟಿ ರೂಪಾಯಿಗಳ ಬಜೆಟ್‌ಅನ್ನು ಮಂಡಿಸಿದ್ದಾರೆ, ಮಾನ್ಯ ರವಿಯವರೆ, ಅಂಕಿಅಂಶ ಬೇಕೆಂದರಲ್ಲ ಬರೆದುಕೊಳ್ಳಿ. ಆದರೆ ಈ ವರ್ಷ ಒಂದು ಲಕ್ಷದ ಎರಡು ಸಾವಿರದ ಏಳುನೂರು ಚಿಲ್ಲರೆ ಕೋಟಿ ಖರ್ಚು ಮಾಡುತ್ತೇವೆಂದು ಈ ವರ್ಷ ಬಜೆಟ್ ಮಂಡಿಸಿದ್ದಾರೆ, ಬೇರೆ ಬೇರೆ ಇಲಾಖೆಗಳಿಗೆಲ್ಲಾ ಅಲೋಕೇಟ್ ಮಾಡಿದ್ದಾರೆ, ಆ ಅಲೋಕೇಷನ್

ಅನ್ನು ಚರ್ಚೆ ಮಾಡುವುದಕ್ಕೋಸ್ಕರ ಅಲ್ಲಿನಾವು ಸೇರಿದ್ದೇವೆ, ನೀವು ಅದರ ಬಗ್ಗೆಯೇ ಅಂಕಿಅಂಶಗಳನ್ನು ಕೊಟ್ಟಿಲ್ಲ. I am forced to make subbarayanakere speech. ನಾನು ಅದು ಮಾಡುವುದಕ್ಕೆ ಹೋಗುವುದಿಲ್ಲ. ಬಜೆಟ್‌ನಲ್ಲಿ ಸುಮಾರು 51,800 ಕೋಟಿ ರೂಪಾಯಿಗಳಷ್ಟು ನಮ್ಮ ರಾಜ್ಯದ own taxes. ನಮ್ಮ ಪಾಲು ಮತ್ತು central grants ಎರಡೂ ಸೇರಿ ಸುಮಾರು 26.5 ಸಾವಿರ ಕೋಟಿ. ರಾಜ್ಯ ಸರ್ಕಾರದ own taxes 51,700 ರಿಂದ 51,800 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದಿಂದ ನಮ್ಮ ಟ್ಯಾಕ್ಸ್‌ನಲ್ಲಿ ಪಾಲು ಮತ್ತು ಅನುದಾನ ಎರಡೂ ಸೇರಿ 26.5 ಸಾವಿರ ಕೋಟಿ. Non-tax revenue is about Rs.3,00 crs. ಸಾಲ 22,000 ಕೋಟಿ. ಒಟ್ಟು 1,03,000 ಚಿಲ್ಲರೆ ಕೋಟಿಗಳು ನಮ್ಮ ಆಯವ್ಯಯದ ಅಂದಾಜು. Estimated budget figure ಇದು. Budget estimation (BE) ಎಂದು ಕರೆಯುತ್ತೇವೆ. plan size 2011–12 ಕ್ಕೆ ಕಳೆದ ವರ್ಷ 38,070 ಕೋಟಿ ಇತ್ತು. ಈ ವರ್ಷಕ್ಕೆ 2012–13 ಕ್ಕೆ 42,030 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. plan ಗೆ ಖರ್ಚು ಮಾಡುವುದು about 40%, non-planಗೆ ಖರ್ಚು ಮಾಡುವುದು about 60% out of 1,03,000 crores ನಲ್ಲಿ 42,030 crores ಎಂದರೆ about 40% ಬರುತ್ತದೆ. ಇನ್ನು ಉಳಿದದ್ದು non-plan expenditure ಎಂದರೆ it comes to about more than 60% a little about 60% ಇದಿಷ್ಟು ಸ್ಥೂಲವಾಗಿ ನಮ್ಮ ಬಜೆಟ್. ಕಳೆದ ಸಾರಿ plan ನಲ್ಲಿ 38,070 ಕೋಟಿಯಲ್ಲಿ ಅವರು ಜನವರಿಯವರೆಗೆ ಖರ್ಚು ಮಾಡಿದ್ದು ಸುಮಾರು 19,000 ಕೋಟಿ. ಉಳಿದದ್ದನ್ನೆಲ್ಲಾ ಈಗ 2011–12 ರಲ್ಲಿ ಕಳೆದ ವರ್ಷ ಖರ್ಚು ಮಾಡಿದ್ದೇವೆಂದು ಹೇಳುತ್ತಿದಾರೆ. 50% ಅಲ್ಲಿಯವರೆಗೆ, ಇನ್ನುಳಿದ 50% ಎರಡು ತಿಂಗಳಲ್ಲಿ ಖರ್ಚು ಮಾಡುತ್ತಾರೆ. ಹೇಗೆ ಖರ್ಚು ಮಾಡಿದರೋ ಗೊತ್ತಿಲ್ಲ. ಹಣ ಖರ್ಚು ಮಾಡುವುದಕ್ಕೆ ಕೆಲವು ಇಲಾಖೆಗಳಲ್ಲಿ ಅಧಿಕಾರಿಗಳೇ ಇಲ್ಲ. ಅದು ಹೇಗೆ ಖರ್ಚು ಮಾಡುತ್ತೀರೋ ನನಗಂತೂ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು 2011–12 ರಲ್ಲಿ ಒಂದು ಹೊಸ ಶಕೆಯನ್ನು ಪ್ರಾರಂಭ ಮಾಡಿದರು. ಅದು ಏನೆಂದರೆ, ಪ್ರತ್ಯೇಕ "ಕೃಷಿ ಬಜೆಟ್" ಕೃಷಿ ಸಂಬಂಧಿತ ಇಲಾಖೆಗಳೆಲ್ಲಾ ಸೇರಿ Agriculture, Animal Husbandry, sericulture, Irrigation, Energy, Horticulture ಇವೆಲ್ಲಾ

ಇಲಾಖೆಗಳು ಸೇರಿ ಸುಮಾರು 17,000 ಚಿಲ್ಲರೆ ಕೋಟಿ ಇಟ್ಟಿದ್ದರು. ಆದರೆ ಎಷ್ಟು ಖರ್ಚು ಮಾಡಿದರು ಎಂದು ನಮಗೆ ಇವತ್ತಿನವರೆಗೂ ಅವರು ಲೆಕ್ಕ ಕೊಟ್ಟಿಲ್ಲ. ನಾವು ಪ್ರತಿ ಇಲಾಖೆಯ ಲೆಕ್ಕ ಕೊಡಿ ಎಂದರೆ, ಕೊಡುವುದಕ್ಕಾಗುವುದಿಲ್ಲ ನಮ್ಮ ಕೈಲ್ಲಿ ಆಗುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಪ್ರತಿ ಇಲಾಖೆಯ ಮಾಹಿತಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಕನಿಷ್ಠ ಪಕ್ಷ ನಿಮ್ಮ ಹತ್ತಿರ ಆದರೂ ಉತ್ತರ ಇದ್ದರೆ ಕೊಡಿ. ಅನುಕೂಲವಾಗುತ್ತದೆ. ಅದಕ್ಕೆ ನಮಗೆ performance budget ಬಂದಿದ್ದರೆ ಗೊತ್ತಾಗುವುದು, ಅದು ಮಾಡಲಿಲ್ಲ. ಇವರು resources mobilization ಮಾಡಬೇಕು, ನಮ್ಮದು 52,000 ಕೋಟಿ ಇದೆ, Non-tax REvenue ಕಳೆದ ನಾಲ್ಕೈದು ವರ್ಷಗಳಿಂದ 2900 ಕೋಟಿ, 3000 ಕೋಟಿ ಹೀಗೆಯೇ ಇದೆ. ಅದನ್ನು ಹೆಚ್ಚು ಮಾಡತಕ್ಕಂತಹ ಪ್ರಯತ್ನ ಸ್ವಲ್ಪವೂ ಮಾಡಲಿಲ್ಲ. 2011–12 ಕ್ಕೆ ಕಳೆದ ವರ್ಷದ Medium Term Fiscal plan ನಲ್ಲಿ ಇವರೇ ಹೇಳಿಕೊಂಡಿದ್ದಾರೆ. Low Non-Tax revenues. ಕಳೆದ ವರ್ಷ 2011–12

"While the state has one of the highest tax to GSDP ratio as stated earlier, the ratio as non-tax revenue to total receipts has been declining over the years". ಈ ಕಡೆ ಸರ್ಕಾರ ಮೂರು ಕಾಸಿನ ಗಮನ ಕೊಟ್ಟಿಲ್ಲ. ಇದು ನಾನು ಹೇಳುತ್ತಿರುವುದಲ್ಲ, ಇವರೇ ಬರೆದು ನಮಗೆ ಕೊಟ್ಟಿರುವುದು. Planning Department and Finance Department ನವರು ಇದನ್ನು ಮಾಡಿ ಕೊಟ್ಟಿದ್ದಾರೆ. 2012 ರ ಮಾರ್ಚ್‌ನಲ್ಲಿ ಪ್ರೆಸೆಂಟ್ ಮಾಡಿರುವುದು ಇದು. "The state's own non-tax revenue which was 0.85% of GSDP in 2010-11 (BE) is projected to reduce 0.73 % in 2011 (BE). AS brought out earlier fiscal management had also blurred this trend and suggested remedial measures like regular revision of user charges to check the slide in growth of non-tax revenues. Apart from enforcement and monitoring of own tax efforts, special emphasis needs to be given for mobilizing non-tax revenues during the coming years. Government is committed to rationalizing user charges.

ಇವೆಲ್ಲಾ ಹೇಳುತ್ತಾ, ಇವರ efforts ಮಾತ್ರ Zero. Forest produce ಎಷ್ಟೋ ವರ್ಷಗಳಿಂದ ಎಷ್ಟಿತ್ತೋ ಅಷ್ಟೇ ಇದೆ. 150 ಕೋಟಿಯೋ 160 ಕೋಟಿಯೋ ಅಷ್ಟೇ ಇದೆ. Taxes from minerals ಅಷ್ಟೇ ಇದೆ. ಅಕ್ರಮ ಗಣಿಗಾರಿಕೆ ನಡೆದು ಕೋಟ್ಯಂತರ ರೂಪಾಯಿ ನಷ್ಟ ಆಯಿತು ಎಂದು ಹೇಳಿ, ಲೋಕಾಯುಕ್ತರವರು ಎರಡು ವರದಿ ಕೊಟ್ಟಿದ್ದಾರೆ. ಮೈಸೂರು ಮಿನರಲ್ಸ್‌ರವರು ಅಲ್ಲಿಯ ಅಧಿಕಾರಿಗಳು ನೂರಾರು ಕೋಟಿ ಲೂಟಿ ಮಾಡಿದರು ಎಂದು ವರದಿ ಕೊಟ್ಟಿದ್ದಾರೆ. ಅವರಿಂದ ಒಂದು ರೂಪಾಯಿ ಇವರಿಗೆ ವಸೂಲಿ ಮಾಡುವುದಕ್ಕಾಗಲಿಲ್ಲ. It comes under non-tax revenue. ಬೇಲೇಕೇರಿ ಬಂದರಿನಲ್ಲಿ ಆರು ಲಕ್ಷ ಕೋಟಿ ಮಾಯ ಆಯಿತು. ಅದು ಏನಾಯಿತು ಎಂದು ಗೊತ್ತಾಗಲಿಲ್ಲ. ದುಡ್ಡು ಎಲ್ಲಿಗೆ ಹೋಯಿತು ಎಂದು ಗೊತ್ತಾಗಲಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ. ಆ ಮೇಲೆ arrears ಸುಮಾರು 5,000 ಕೋಟಿಗೂ ಹೆಚ್ಚು ಇದೆ. ಅದನ್ನು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ.ಅವುಗಳ ಮೇಲೆ Government of Karnataka ಬಹಳ ಹಣವನ್ನು invest ಮಾಡಿದೆ. The total amount invested in Boards and Corporations comes to about 38421 Crores. ಇದು ನಮ್ಮ ದುಡ್ಡು, ನಮ್ಮ ರಾಜ್ಯದ ಹಣ 38,421 ಕೋಟಿ ರೂ.ಗಳು. In Various boards and corporations invest ಮಾಡಿದ್ದೀರಿ. From this, 38,421 crores, ನಮಗೆ ರಿಟರ್ನ್ ಎಷ್ಟು ಬರಬಹುದು ಎಂದರೆ, ಕೆಲವು ಕಡೆ ನಷ್ಟವಾಗುತ್ತದೆ, ಕೆಲವು ಕಡೆ ಲಾಭ ಬರುತ್ತಿದೆ, ಕೆಲವು ಕಡೆ ಬೇಕಾದಷ್ಟು ನಷ್ಟವಾಗುತ್ತಿದೆ. ಅವೆಲ್ಲವೂ ಸೇರಿದರೆ the return will be. negligible. The efforts of Govenment to get due returns of its investments in various entities have not yielded satisfactory results. As of March 2011 the government had invested Rs.38,421 Crores in various government compnies, Boards and corporations. The return on these investments @ 0.11% is negligible. Not even 1%, 0.9% ಅಲ್ಲ, 2% ಅಲ್ಲ. 0.11%. Why most of the boards and corporations are running under loss? only a few companies and boards andcorporations are making profits, why not

others? To make profits, what are the efforts the goverment has taken? NOthing.

ಡಾ:ಶರಣಪ್ರಕಾಶ್ ಆರ್.ಪಾಟೀಲ್ : – ಒಂದು ರೀತಿ Rehabilitation centre ಆಗಿವೆ.

ಶ್ರೀ ಸಿದ್ದರಾಮಯ್ಯ : – ಹಿಂದೆ 40 ರಿಂದ 50 ಜನರನ್ನು ಬೋರ್ಡ್ ಮತ್ತು ಕಾರ್ಪೋರೇಶನ್‌ಗಳಿಗೆ ಅಪಾಯಿಂಟ್ ಮಾಡುತ್ತಿದ್ದರು. ನಮ್ಮ ಸರ್ಕಾರವಿದ್ದಾಗ ಅತಿ ಹೆಚ್ಚೆಂದರೆ 50 ರಿಂದ 60 ಜನರನ್ನು ಅಪಾಯಿಂಟ್ ಮಾಡಲಾಗಿತ್ತು. ಆದರೆ ಈಗ ಒಂದು ನೂರು ಜನರು ಇರಬಹುದು ಬೋರ್ಡ್ಸ್ ಮತ್ತು ಕಾರ್ಪೋರೇಶನ್‌ಗಳಲ್ಲಿ. ಸುಮಾರು ಒಂದು ನೂರರಷ್ಟು ಛೇರ್ಮನ್‌ಗಳಿದ್ದಾರೆ. ಆಮೇಲೆ in most of the boards and corporations and companies, the Managing Directors are IAS Officers and they are supposed to be very qualified and having technical knowledge, administrative knowledge. Why they are suffering under loss? ಪಾಪ! ಅನೇಕ ಛೇರ್ಮನ್‌ಗಳಿಗೆ 'ರೀ, ನೀವು ಕೇವಲ ಬೋರ್ಡ್ ಮತ್ತು ಕಾರ್ಪೋರೇಷನ್‌ಗಳಲ್ಲಿ ಮೀಟಿಂಗ್ ಮಾಡುವುದಕ್ಕೆ ಮಾತ್ರ ಇರುವುದು' ಎಂದು ಐ.ಪಿ.ಎಸ್ ಅಧಿಕಾರಿಗಳು ಹೇಳುತ್ತಾರೆ. Do you know that?

ಶ್ರೀ ಬಸವರಾಜ ಬೊಮ್ಮಾಯಿ : – ನೀವು ಇದ್ದಾಗಲೂ ಹಾಗೇ ಹೇಳುತ್ತಿದ್ದರು.

ಶ್ರೀ ಸಿದ್ದರಾಮಯ್ಯ : – ಅದರಿಂದಲೇ ಹೇಳುತ್ತಿರುವುದು ನಾನು. ನೀವು ಇದ್ದಾಗ ಇದು ಗೊತ್ತಾಯಿತೆ ನಿಮಗೆ. ನಾನು ಇದ್ದಾಗಲೂ ಇತ್ತು. ನೀವು ಇದ್ದಾಗಲೂ ಇದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, what is that they are doing? Inspite of the fact that they are all enjoying full freedom. . .

ಶ್ರೀ ಉಮೇಶ್ ವಿ.ಕತ್ತಿ : – Rehabilitation Centre ಆಗಿದೆ.

ಶ್ರೀ ಸಿದ್ದರಾಮಯ್ಯ:– Rehabilitation Centre ಯಾರಿಗೆ? ಅಧಿಕಾರಿಗಳಿಗೋ ಅಥವಾ ನಿಮಗೋ?

ಶ್ರೀ ಉಮೇಶ್ ವಿ. ಕತ್ತಿ:- ಇಬ್ಬರಿಗೂ.

ಶ್ರೀ ಸಿದ್ದರಾಮಯ್ಯ : – ಆಮೇಲೆ, ನೀವು ಅವರ ಕಛೇರಿಗಳನ್ನು ನೋಡಬೇಕು ಹೇಗಿದೆಯೆಂದು ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೆ, ನಿಮ್ಮ ಕಛೇರಿ ಕೂಡ ಆ ರೀತಿಯಿಲ್ಲ. ಅವರಿಗೆ ಕಾರ್‌ಗಳು ಎರಡೆರಡು, ಮೂರ್ಮೂರು, ಕೈಗೊಂದು, ಕಾಲ್ಗೊಂದು, ಬೆರಳ್ಗೊಂದು, I am not exaggerating. ಆಮೇಲೆ ಇದು Autonomous Body. They are all autonomous bodies, most of them are autonomous bodies with status. ಆಮೇಲೆ ಅನೇಕ ಸಾರಿ ಆ concerned Minister ಇರುತ್ತಾರಲ್ಲ ಅವರ ಮಾತನ್ನೂ ಆ ಬೋರ್ಡ್ಸ್ ಮತ್ತು ಕಾರ್ಪೋರೇಶನ್‌ನವರು ಕೇಳುವುದಿಲ್ಲ. ಇವತ್ತಿನವರೆಗೆ ನಷ್ಟವನ್ನುಂಟುಮಾಡುವ ಎಂ.ಡಿ.ಗಳ ಮೇಲೆ ಒಂದಾದರು ಕ್ರಮ ತೆಗೆದುಕೊಂಡಿರುವ ನಿದರ್ಶನಗಳಿವೆಯೇ ಅಥವಾ ಏಕೆ ನಷ್ಟವನ್ನುಂಟುಮಾಡಿದ್ದೀರೆಂದು ಕೇಳಿದ್ದಾರೆಯೇ? They enjoy all powers and facilities more than a minister. ಪಾಪ! ನಮ್ಮ Minister Chamber ಗಳು ಚೆನ್ನಾಗಿರುವುದಿಲ್ಲ, ಮುಂದುಗಡೆ ಹರಿದುಹೋಗಿರುವ ಚೇರ್‌ಗಳನ್ನು ಹಾಕಿಸಿದ್ದೀರಿ ನೀವು. ನೀವು ನೋಡಿದ್ದೀರ ಅಲ್ಲಿ? ಮೊಗಸಾಲೆಯಲ್ಲಿ ಚೇರ್‌ಗಳೆಲ್ಲವೂ ಹರಿದುಹೋಗಿವೆ. ನಾನು ಒಂದು ಬಾರಿ ಎಂ.ಡಿ.ಚೇಂಬರ್‌ಗೆ ಹೋದೆ, ಇವರು ಹೇಗಿದ್ದಾರೆ ಮತ್ತು ಚೇಂಬರ್ ಹೇಗಿರುತ್ತದೆ ನೋಡೋಣವೆಂದು. ನೋಡಿದರೆ ಎಲ್ಲವೂ ಫಳ, ಫಳ ಎಂದು ಹೊಳೆಯುತ್ತದೆ. ಫಳ ಫಳ ಎಂದು ಹೊಳೆಯುತ್ತಿದೆ. ಇಲ್ಲಿ ಬರಗಾಲ ಬಂದಿದೆ, ಕುಡಿಯುವುದಕ್ಕೆ ನೀರಿಲ್ಲ, ಮೇವು ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ, ಇವರ ಛೇಂಬರ್ ನೋಡಿದರೆ ಫಳ ಫಳ ಎಂದು ಹೊಳೆಯುತ್ತಿದೆ. ಅಂದರೆ ಅವರು ಎಷ್ಟು ಬೇಕಾದರೂ ದುಡ್ಡು ಖರ್ಚು ಮಾಡಿಕೊಳ್ಳಬಹುದು ಎನ್ನುವ ಭ್ರಮೆಯಲ್ಲಿ ಅವರು ಇದ್ದಾರೆ. They do not know that they are living in democracy. ನಾವು ಇದನ್ನು ಉದ್ದೇಶಪೂರ್ವಕವಾಗಿ ಹೇಳುತ್ತಿಲ್ಲ. These are all facts. ಪಾಪ, ಆ ಇಲಾಖೆಯ ಮಂತ್ರಿಗಳಿದ್ದಾರಲ್ಲಾ, ಅವರು ಕೇವಲ ಉತ್ತರ ಕೊಡುವುದಕ್ಕಷ್ಟೇ ಮಾತ್ರ ಇರುವುದು. ಈಗ ರೇವೂನಾಯಕ್ ಬೆಳಮಗಿ ಎನ್ನುವವರು ಮಂತ್ರಿಗಳಾಗಿದ್ದಾರೆ. ಕೆ.ಎಂ.ಎಫ್.ನಲ್ಲಿ ಎಂ.ಡಿ ಇದ್ದಾರಲ್ಲಾ, ಅವರು ಈ ಸಚಿವರ ಮಾತನ್ನು ಕೇಳುತ್ತಾರೆಯೇ ಕೇಳಿ?

ಶ್ರೀ ಬಿ.ಎನ್.ಬಚ್ಚೇಗೌಡ : – ಅವೆಲ್ಲವೂ Autonomous Body.

ಶ್ರೀ ಸಿದ್ದರಾಮಯ್ಯ : – ನಾನು ಅದನ್ನೇ ಹೇಳುತ್ತಿರುವುದು ಬಚ್ಚೇಗೌಡರೇ, ಅವು Autonomous Body ಎಂದು ಅವರ ಕೈಗೆ ಕೊಟ್ಟ ಮೇಲೆ ನಷ್ಟವನ್ನು ಏಕೆ ಉಂಟು ಮಾಡುತ್ತಿದ್ದಾರೆ?

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು) : – ಈಗ ತಾವು ಹೇಳಿದಂತೆ 1983 ರಿಂದ ಇಲ್ಲಿಯವರೆಗೆ ಬಂದಿರುವಂಥ ಇಂಥ ಎಲ್ಲ ಸಂಸ್ಥೆಗಳಲ್ಲಿ ಐದಾರು ಸಂಸ್ಥೆಗಳನ್ನು ಬಿಟ್ಟರೆ ಉಳಿದೆಲ್ಲಾ ಸಂಸ್ಥೆಗಳಲ್ಲಿ ನಷ್ಟವನ್ನು ಅನುಭವಿಸುತ್ತಿರುವುದು ತಮಗೂ ಗೊತ್ತಿದೆ. ತಮ್ಮ ಕಡೆಯಿಂದ disinvestment ಮಾಡಬೇಕೆನ್ನುವ ಸಲಹೆ ಇದೆಯೇ?

ಶ್ರೀ ಸಿದ್ದರಾಮಯ್ಯ : – ಮೊದಲನೆಯದಾಗಿ ಅವುಗಳೆಲ್ಲವನ್ನೂ re-structure ಮಾಡಬೇಕು. ಯಾವ ಯಾವುದು ನಷ್ಟದಲ್ಲಿದೆ ಅವುಗಳನ್ನು re-structure ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಯಾವುದೋ ಓಬಿರಾಯನ ಟೆಕ್ನಾಲಜಿಯನ್ನಿಟ್ಟುಕೊಂಡು ಕೆಲವು ಕೆಲಸ ಮಾಡುತ್ತಿವೆ, ಅದನ್ನು ಬದಲಾಯಿಸಬೇಕು. ಈಗ ಮೈಸೂರು ಲ್ಯಾಂಪ್ಸ್ ಕಂಪನಿಯನ್ನು ಮುಚ್ಚಲಾಗಿದೆ. ಏಕೆ ನಾವು ಮೈಸೂರ್ ಲ್ಯಾಂಪ್ಸ್ ಮುಚ್ಚಿದೆವು? ಅವರು Competitive ಆಗಿ ಬಲ್ಬ್‌ಗಳನ್ನು ತಯಾರು ಮಾಡಲೇ ಇಲ್ಲ. ಈಗ Mysore Soaps and Detergent Company ಇದೆ. ಅದು ಏಕೆ ನಷ್ಟದಲ್ಲಿದೆ? ನಾನು ಹೇಳುತ್ತೇನೆ, ಏಕೆಂದರೆ, ನಮ್ಮ ಟೆಕ್ನಾಲಜಿ ಏನಿದೆ ಅದನ್ನು ಇಂಪ್ರೂವ್ ಮಾಡಿಕೊಳ್ಳಬೇಕು ಅಥವಾ ಇನ್ನೊಂದಷ್ಟು ಅದಕ್ಕಾಗಿ ಇನ್‌ವೆಸ್ಟ್ ಮಾಡಬೇಕೆಂದರೆ ಇನ್‌ವೆಸ್ಟ್ ಮಾಡಬೇಕು, market improvement ಮಾಡಬೇಕು, ಅವೆಲ್ಲವನ್ನೂ ಮಾಡುವುದಕ್ಕಾಗಲಿಲ್ಲವೆಂದರೆ ಯಾರು ಎಂ.ಡಿ. ಇರುತ್ತಾರೋ ಅವರು ತಿಂದುಕೊಂಡು ಕುಳಿತಿದ್ದಾರೆಯೇ ಎಂಬುದನ್ನು ಸರ್ಕಾರದವರು ನೋಡಬೇಕು.

Is it due to these things or due to inefficiency or corruption? That is my suggestion. ಅದಕ್ಕೇ ಅದನ್ನು ಸರ್ಕಾರ ಸರಿಪಡಿಸಕ್ಕಂಥ ವಿಚಾರದಲ್ಲಿ re-structure ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಎಲ್ಲಿ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ dis-investment ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕು. ನಾನು straight atway, dis-investmen ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. I do not say,'

straight, away disinvestment ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. you try. ಆಮೇಲೆ ಪ್ರತಿ ಅಧಿಕಾರಿಗಳಿಗೆ ನೀವು accountability fix ಮಾಡಬೇಕು. Fix the accountability on them. ಕೇವಲ deluxe luxurious office ಗಳನ್ನು ಮಾಡಿಕೊಂಡು ಮಜಾ ಮಾಡುವುದಕ್ಕಲ್ಲ ಅವರು ಇರುವುದು. ನಾನು ಹಣಕಾಸು ಖಾತೆಯನ್ನು ಹೊಂದಿದ್ದು ಉಪ ಮುಖ್ಯಮಂತ್ರಿ ಆಗಿದ್ದಾಗ ಒಂದು ಕಡೆ ಎಂ.ಡಿ.ಯನ್ನು ನೋಡುವುದಕ್ಕೆ ಹೋದೆ. ನನ್ನ ಛೇಂಬರ್‌ಗಿಂತಲೂ ಎಂ.ಡಿ.ಛೇಂಬರ್ ಚೆನ್ನಾಗಿತ್ತು. ಅವರಿಗೆ ಆ ರೀತಿಯಲ್ಲಿ ಮಾಡಿಕೊಳ್ಳಲು ಯಾರು ಅಧಿಕಾರ ಕೊಟ್ಟವರು? ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಪ್ರತಿಯೊಂದು ಬೋರ್ಡ್ ಮತ್ತು ಕಾರ್ಪೋರೇಷನ್ ಬಗ್ಗೆ ಅನಲೈಸ್ ಮಾಡಿ, ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನು ನೋಡಬೇಕಾಗುತ್ತದೆ. ನಾನು ಏಕೆ ಹೇಳುತ್ತಿದ್ದೇನೆಂದರೆ 38,000 ಕೋಟಿ ರೂಪಾಯಿ ನಾವು ಬಂಡವಾಳ ಹಾಕಿ 0.11% returns ಬರುತ್ತದೆ ಎಂದರೆ ಅದು ಸತ್ಯ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದುದರಿಂದ non-tax revenue ನಮಗೆ ಸರಿಯಾಗಿ ಬರುತ್ತಿಲ್ಲ. ಇಷ್ಟೊಂದು invest ಮಾಡಿದರೂ ಕೂಡ returns ಏನೂ ಬರುತ್ತಿಲ್ಲ, negligible returns ಎಂದು ಹೇಳುವುದು ನನ್ನ point. ಮಾನ್ಯ ಉದಾಸಿಯವರೆ, ಗೊತ್ತಾಯಿತೆ? I hope that you have got my point.

ಶ್ರೀ ಸಿ.ಎಂ.ಉದಾಸಿ : – ಈಗ technology change ಆದ ಹಾಗೆ ಬದಲಾವಣೆ ಮಾಡಬೇಕಾಗಿರುವ lapsesನಿಂದ ಇದೆಲ್ಲ ಆಗಿದೆ. Manpower ಇಷ್ಟೊಂದು ಸಂಖ್ಯೆಯಲ್ಲಿ ಬೇಕಾಗಿರುವುದರಲ್ಲಿ ಸಹ ನಾವು manpower ಗೆ ಏನು expenditure ಮಾಡುತ್ತಿದ್ದೇವೆ, ಅದರಿಂದ production ಬಂದಿದ್ದನ್ನು ಮಾರಾಟ ಮಾಡಿ ಮಾಡಬಹುದಾಗಿತ್ತು, ಅದು ಆಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : – ಅದು ಆಗಲ್ಲ, this is disinvestment. That is my point.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : – Mysore Minerals Limited inefficient ಎಂದು ಆಗಿದೆಯೆಂದರೆ it is totally because of

corruption. ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಏನು ಮಾಡುತ್ತಿದ್ದಾರೆಂದು ನೋಡಬೇಕು.

ಶ್ರೀ ಸಿದ್ದರಾಮಯ್ಯ :- ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿದೆ. ಇದು ಮಾರ್ಕೆಟ್ ಇಲ್ಲ ಎನ್ನುವ ಕಾರಣದಿಂದ ನಷ್ಟವಾಗಿದೆಯಾ? ಲಂಚ ತೆಗೆದುಕೊಂಡು ಅಲಾಟ್ ಮಾಡುತ್ತಾರೆ.

ಶ್ರೀ ತನ್ವೀರ್ ಸೇಠ್ :- 2004 ರಲ್ಲಿ ಸರ್ಕಾರ cabinet sub-committee ಮಾಡಿ 91 ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ನಮ್ಮ investment ಎಲ್ಲೆಲ್ಲಿದೆ ಎಂದು ವರದಿ ಮಾಡಿರುವುದು ಸರ್ಕಾರದಲ್ಲಿದೆ. ನಾವು 41 ಸಂಸ್ಥೆಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವುದು ಬೇಡ ಎಂದು ತಡೆ ಹಿಡಿದುಬಿಟ್ಟಿದ್ದೀವಿ. ಈಗ ಏನಾಗಿದೆ ಅಂದರೆ ಅಧಿಕಾರದ ಒಂದು rehabilitation ಮಾಡುವುದಕ್ಕೆ ನಾವು ಎಲ್ಲಾ ಕಡೆ ಸರ್ಕಾರಿರಹಿತ ಅಧ್ಯಕ್ಷರನ್ನು ನೇಮಕ ಮಾಡುತ್ತಿದ್ದೇವೆ. ಎರಡನೆಯದಾಗಿ, NGEF, KS&DL, Mysore Lamps Limited ಆಗಿರಬಹದು, ಅನೇಕ ವಿಚಾರಗಳನ್ನು step by step ಪ್ರಧಾನ ಕಾರ್ಯದರ್ಶಿಯವರು ಮತ್ತು ನಮ್ಮ ಹಿರಿಯ ಸಚಿವರು ಸಬ್ ಕಮಿಟಿಯಲ್ಲಿ ಮಾಡಿದ ವರದಿ ಈಗಾಗಲೇ ಸರ್ಕಾರದಲ್ಲಿದೆ. ಸರ್ಕಾರ ಬದಲಾವಣೆ ಆಗಬಹುದು. our administration part is continuous. ಹಿಂದಿನ ಸರ್ಕಾರ ಏನು ಮಾಡಿದೆ, ನಾವು ಯಾವುದನ್ನು ಸ್ವೀಕಾರ ಮಾಡಿ ಮುಂದುವರೆಸಬಹುದು ಎಂದು ನೋಡಿ ಅದನ್ನು ಮಾಡುವುದು ನಿಮ್ಮ ಕೈಯಲ್ಲಿ ಇದೆ. ಹಾಗಾಗಿ ಸರ್ಕಾರದ ಹಣ ನಾವು 31,000 ಕೋಟಿ ರೂಪಾಯಿ ಏನು invest ಮಾಡಿದ್ದೇವೆ, ಅದನ್ನು disinvest ಮಾಡಬೇಕಾದರೆ ನಾವು ಬಹಳ ಸುಲಭವಾಗಿ ಮಾತನಾಡಬಹುದು. ಆದರೆ ಅದರ ಪರಿಣಾಮ ಏನಾಗುತ್ತದೆ? ಅದನ್ನು ಹಂತಹಂತವಾಗಿ ಏನು ಮಾಡಬೇಕು? ಇದರ ಬಗ್ಗೆ ಮಾನ್ಯ ಸಚಿವರು ಏನು ಮಾಡಬೇಕು, ಏನು ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, it is not my intention ಯಾರಿಗೋ ಟೀಕೆ ಮಾಡಬೇಕೆನ್ನುವ ಉದ್ದೇಶವಾಗಲಿ ಇಲ್ಲ. ಜನರಲ್ ಆಗಿ ಇರುವ ಪರಿಸ್ಥಿತಿಯನ್ನು ನಾನು explain ಮಾಡುತ್ತಿದ್ದೇನೆ. ಈ ಪರಿಸ್ಥಿತಿ ಇವತ್ತು

ಬಂದಿರುವುದಲ್ಲ. ಸುಮಾರು ವರ್ಷಗಳಿಂದ ಬಂದಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ according to me, Boards and Corporation ನಲ್ಲಿ the officers who are there as M.Ds, they are more accountable than the minister. That is my point. ನಾನು ಎಲ್ಲರೂ ಎಂದು ಹೇಳುವುದಕ್ಕೆ ಹೋಗುವುದಿಲ್ಲ. Majarity of the officers, because of their inefficiency and corruption, they are running under loss. With my experience, Planning Minister ಆಗಿ ನಾನು ನೋಡಿರುವಂಥಾದ್ದು. ಸರ್ಕಾರ ಈ ಕಡೆ ಗಮನ ಕೊಡಬೇಕು. ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ಎಷ್ಟು ಜನ ಅಧಿಕಾರಿಗಳು ಲೂಟಿ ಹೊಡೆದರು ಎಂದು ರಿಪೋರ್ಟ್ ಇದೆ. ಮಾನ್ಯ ಮುಖ್ಯಮಂತ್ರಿಗಳೇ, ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಲೋಕಾಯುಕ್ತದ ಎರಡು ರಿಪೋರ್ಟ್‌ಗಳು ಇವೆ. ಅದರ ಮೇಲೆ ಕೂಡ ಕ್ರಮ ತೆಗೆದುಕೊಂಡಿಲ್ಲ. ಸುಮಾರು 16,000 ಕೋಟಿ ರೂಪಾಯಿ ವಸೂಲು ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಂಡಿಲ್ಲ. ಒಂದು ಕಡೆ ಬರ ಎದುರಿಸುವುದಕ್ಕೆ ಕುಡಿಯುವ ನೀರಿಗೆ ದುಡ್ಡು ಕೊಡುವುದಕ್ಕೆ, ರೈತರ ಸಾಲ ಮನ್ನಾ ಮಾಡುವುದಕ್ಕೆ, ರೈತರ ಬೆಳೆ ಪರಿಹಾರ ಕೊಡುವುದಕ್ಕೆ we don't have money. ಇನ್ನೊಂದು ಕಡೆ ನೂರಾರು ಕೋಟಿ ರೂಪಾಯಿ ಲೂಟಿಯಾಗುತ್ತಿದೆ. ಅದನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. Why? what is the intention of the Government? ಯಾರಿಗೆ protection ಕೊಡಬೇಕೆನ್ನುವುದು ಅವರ ಉದ್ದೇಶ? I demand. ಆ report ಪ್ರಕಾರ legal ಆಗಿ ವಸೂಲು ಮಾಡಿ, ನಾನೇನು illegal ಆಗಿ ಮಾಡಿ, prejudicious ಆಗಿ ಮಾಡಿ ಅಥವಾ vengeance ನಿಂದ ಮಾಡಿ ಎಂದು ಹೇಳುವುದಿಲ್ಲ. Legal ಆಗಿ ನಮಗೆ ಬರಬೇಕಾಗಿರುವುದನ್ನು ವಸೂಲು ಮಾಡತಕ್ಕಂಥ ಕ್ರಮವನ್ನು ಸರ್ಕಾರ ಕಟ್ಟುನಿಟ್ಟಾಗಿ ಮಾಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಆದಾಯ ಹೇಗೆ ಬರುತ್ತದೆ? ನಾವು ಸರ್ಕಾರದಿಂದ 16 ಸಾವಿರ ಕೋಟಿ ಅಥವಾ 20 ಸಾವಿರ ಕೋಟಿ ರೂಪಾಯಿಗೆ ಗ್ಯಾರಂಟಿ ಕೊಟ್ಟಿರುತ್ತೇವೆ. ನಮಗೆ ಅದರ ಮೇಲೆ ಒಂದು ಪೈಸೆ ಏನೂ ಬರುವುದಿಲ್ಲ. ಯಾರೂ ಕೊಡುವುದಿಲ್ಲ. ನಾವು ಇದನ್ನೆಲ್ಲ ಮರತೇ ಬಿಟ್ಟಿದ್ದೇವೆ. ಒಂದು review meeting ಕೂಡ ಮಾನ್ಯ ಮಂತ್ರಿಗಳು

ಮಾಡುವುದಿಲ್ಲ. ಅಧಿಕಾರಿಗಳು ಮಾಡುವುದಿಲ್ಲ. That is why non-tax revenue is declining year by year. ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರದಲ್ಲಿ ಬಹಳ ತಮಾಷೆ ಇದೆ. ಮಾನ್ಯ ಬಚ್ಚೇಗೌಡರೆ, ಬೆಂಗಳೂರು ಸುತ್ತ ರೆವಿನ್ಯೂ ಭೂಮಿಗಳನ್ನು ಆಕ್ರಮಣ ಮಾಡಿಕೊಂಡರು ಎಂದು ಮಾನ್ಯ ರಾಮಸ್ವಾಮಿಯವರು ವರದಿ ಕೊಟ್ಟಿರಲ್ಲ, ಮಾನ್ಯ ಮುಖ್ಯಮಂತ್ರಿಗಳೇ, ಅದು ಎಷ್ಟು ಎಕರೆ ಇತ್ತು? 19 ಸಾವಿರ ಅಥವಾ 20 ಸಾವಿರ ಎಕರೆ ಇರಬೇಕು, ಅದು ಏನಾಯಿತು? what has happened to it? ಅದರಿಂದ ನಮಗೆ ದುಡ್ಡು ಬರುತ್ತಿರಲಿಲ್ಲವೇ? ನಮ್ಮ ಸಾಲ ಕಡಿಮೆ ಮಾಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಈ ವರ್ಷ 22,000 ಕೋಟಿ ರೂಪಾಯಿ ಸಾಲ ಮಾಡಿದ್ದೇವೆ. ಆ ಸಾಲವನ್ನು 2012–13 ನೇಸಾಲಿಗೆ ಕಡಿಮೆ ಮಾಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಅದನ್ನು ಬರಗಾಲಕ್ಕೆ ಖರ್ಚು ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಕುಡಿಯುವ ನೀರಿಗೆ ಖರ್ಚು ಮಾಡುವುದಕ್ಕೆ ಆಗುತ್ತಿರಲಿಲ್ಲವೇ?

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ಸರ್ಕಾರದ ಜಾಗವನ್ನು ಹರಾಜು ಹಾಕಿದ್ದಾರೆ. ಹರಾಜಿನಲ್ಲಿ ಹಾಕಿರುವವರಿಗೆ 30% ದುಡ್ಡು ಕಟ್ಟಿಸಿಕೊಂಡಿದ್ದಾರೆ, ಆದರೆ possession ಕೊಡಿಸಿಲ್ಲ.

ಶ್ರೀ ಸಿದ್ದರಾಮಯ್ಯ :– ಅದು ಬೇರೆ, ಆ ರೀತಿಯ ಸಮಸ್ಯೆಗಳು ಇವೆ. ನಾನು ಏನು ಹೇಳುತ್ತಿದ್ದೇನೆ ಎಂದರೆ, 19,000 ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಅಧಿಕೃತ ವರದಿ ಸರ್ಕಾರದ ಕೈಲಿದ್ದರೂ ಕೂಡ so far that report has not been placed on the floor of the House. ಇವತ್ತಿನವರೆಗೂ ಆ ವರದಿಯನ್ನು ಮಂಡಿಸಿಲ್ಲ. ಅದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಿದೆಯೋ ಗೊತ್ತಿಲ್ಲ. ಆಮೇಲೆ ಮಾನ್ಯ ಬಾಲಸುಬ್ರಮಣಿಯನ್ ಎನ್ನುವವರು ಒಂದು ವರದಿ ಕೊಟ್ಟರು. ಅದರಲ್ಲಿ politicians, ಅಧಿಕಾರಿಗಳು ಸೇರಿದ್ದಾರೆ, ಯಾರ್ಯಾರೋ ಸೇರಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂದಿರುವುದನ್ನು ನೋಡಿದ್ದೇವೆ. ಮಾನ್ಯ ಈಶ್ವರಪ್ಪನವರೇ ಎಷ್ಟು ಲಕ್ಷ ಎಕರೆ? ಅದು ನಿಮ್ಮ ಇಲಾಖೆಗೆ ಬರುತ್ತದೆ ಎಂದು ನೀವು ಇದರ ಬಗ್ಗೆ ತಿಳಿದುಕೊಂಡು ಹೇಳಿ. ಮಾನ್ಯ ಮುಖ್ಯಮಂತ್ರಿಗಳೇ ನೀವು ಇದ್ದೀರಿ ಅಲ್ಲವೇ? ಆಗ ನೀವು ಇರಲಿಲ್ಲ. ಅದನ್ನು ನೋಡಿ ಹೇಳೀ. ಆ ರಿಪೋರ್ಟ್‌ಗಳನ್ನು ಏಕೆ ಕೊಟ್ಟರು?

ಆ ಕಮಿಟಿಯನ್ನು ಏಕೆ ಮಾಡಿದಿರಿ? ಮಾನ್ಯ ಬಾಲಸುಬ್ರಹ್ಮಣಿಮನ್ ಕಮಿಟಿ ಮಾಡಿ, ಅವರು ರಿಪೋರ್ಟ್ ತೆಗೆದುಕೊಂಡ ಮೇಲೆ ಏನಾದರೂ ಆಕ್ಷನ್ ತೆಗೆದುಕೊಳ್ಳಬೇಕಲ್ಲ? ಅದು forest land, revenue land, kharab land ಯವ್ಯಾವುದು land acquire ಮಾಡಿಕೊಂಡಿದ್ದಾರಲ್ಲ, ಅವರ ಮೇಲೆಏನು action ತೆಗೆದುಕೊಂಡಿದ್ದೀರಿ? ಅದರಿಂದ ಸರ್ಕಾರಕ್ಕೆ ಎಷ್ಟು ಆದಾಯ ಬಂದಿದೆ? ನೀವು ಅದರ ಬಗ್ಗೆ ಏಕೆ ಗಮನ ಹರಿಸಿಲ್ಲ? ನೀವು ಏಕೆ resource mobilize ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ? What made you to keep quiet? Why you are sleeping over the reports? That is my point. ನಿಮಗೆ ಸಾಕಷ್ಟು ಹಣ ಬರುತ್ತಿರಲಿಲ್ಲವೇ? ಮಾನ್ಯ ರೋಷನ್ ಬೇಗ್‌ರವರೆ ಇನ್ನೊಂದು ತಮಾಷೆ ಏನೆಂದರೆ, ಕಳೆದ ಮೂರ್‍ನಾಲ್ಕು ವರ್ಷಗಳಿಂದ 2,000 ಕೋಟಿ ರೂ.ಗಳು ಜಮೀನು ಮಾರಾಟದಿಂದ ಬರುತ್ತದೆಂದು ಬಜೆಟ್‌ನಲ್ಲಿ capital receipts ಕಡೆ ಬರೆದುಕೊಳ್ಳುವುದು. ಪ್ರತಿ ವರ್ಷ receipt ಕಡೆ 2,000 ಕೋಟಿ ರೂ.ಗಳೆಂದು ಬರೆದುಕೊಳ್ಳುವುದು. ಅದರಲ್ಲಿ ಇವರಿಗೆ 5 ರೂ.ಗಳು, 5 ಕೋಟಿ ರೂ.ಗಳು ಬರುವುದಿಲ್ಲ. Last year 5 ಕೋಟಿ ರೂ.ಗಳು ಬರಲಿಲ್ಲ, ಅದರ ಹಿಂದಿನ ವರ್ಷವೂ 5 ಕೋಟಿ ರೂ.ಗಳು ಬರಲಿಲ್ಲ. ಈ ವರ್ಷದ ಬಜೆಟ್‌ನಲ್ಲಿ 2,000 ಕೋಟಿ ರೂ.ಗಳನ್ನು ಏಕೆ ಬರೆದುಕೊಂಡಿದ್ದೀರಿ? why? ಇದು ಯಾರನ್ನು ಖುಷಿ ಪಡಿಸುವುದಕ್ಕೆ ಬರೆದಿದ್ದೀರಿ? what happened to that Rs. 2,000 crore? ಈ ಬಜೆಟ್ ಲೆಕ್ಕಾಚಾರದಲ್ಲಿ, receipts ನಲ್ಲಿ ಅದೂ ಇದೆ. ಇದು ಏತಕ್ಕೆ? ಇದು budgetary disciplineನಾ? Can you call it budgetary discipline? ಇಂಥದ್ದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇಂಥದ್ದನ್ನು ಅಧಿಕಾರಿಗಳು ನೋಡಿ ಹೇಳಿ ಕೊಡಬೇಕು. Governmentಗೆ advise ಮಾಡಬೇಕು. They are also not advising. ಇವರಿಗೂ ನೋಡಿಕೊಳ್ಳುವುದಕ್ಕೆ ಪುರುಸೊತ್ತಿಲ್ಲ. That is also not correct. 100 ಕೋಟಿ ರೂ.ಗಳು ಬರುತ್ತದೆಂದು ಹಾಕಿಕೊಂಡಿದ್ದಾರೆ. ಇದು ಎಲ್ಲಿಂದ ಬಂದು, ಎಲ್ಲಿಗೆ adjust ಆಗಿದೆಯೋ ಗೊತ್ತಿಲ್ಲ. 2000 ಕೋಟಿ ರೂ.ಗಳಿಗೆ 100 ಕೋಟಿ ರೂ.ಗಳು ಬರುತ್ತದೆಂದು ಬರೆದುಕೊಂಡಿದ್ದಾರೆ. ಈ Mid-Term Fiscal Plan ಪುಸ್ತಕವನ್ನು ತೆಗೆದು ನೋಡಿ. ಇವರು ಈ ರೀತಿ non tax revenueವನ್ನು

ಹೆಚ್ಚು ಮಾಡುವುದಕ್ಕೆ, ವಸೂಲು ಮಾಡುವುದಕ್ಕೆ ಪ್ರಯತ್ನವನ್ನೇ ಮಾಡಿಲ್ಲ. ಬರೀ Mysore Minerals Limited ಒಂದರಿಂದ ವಸೂಲು ಮಾಡಿದರೆ ಸಾಕು, ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡಿ ಬಿಡಬಹುದು. ಲೋಕಾಯುಕ್ತ ರಿಪೋರ್ಟ್‌ನಲ್ಲಿ ಹದಿನಾರು ಸಾವಿರ ಕೋಟಿ ಚಿಲ್ಲರೆ ಹಣವನ್ನು ಅವರಿಂದ ವಸೂಲು ಮಾಡಿ ಎಂದು ಹೇಳಿದ್ದಾರೆ. ಅವರ ಆಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿ ಕೊಳ್ಳಿ ಎಂದು ಹೇಳಿದ್ದಾರೆ. ಈ ಹಣವನ್ನು ವಸೂಲು ಮಾಡಿದರೆ, ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ರೈತರ ಸಾಲವನ್ನು ಎಷ್ಟು ಮನ್ನಾ ಮಾಡಬಹುದು. ಎಷ್ಟು ಬೆಳೆ ಪರಿಹಾರ ಕೊಡಬಹುದು! ನಾವು ಬೆಳೆ ಪರಿಹಾರವನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತೇವೆ. ನಿಮಗೆ ಮಾನ್ಯ ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡುವುದಕ್ಕೆ ಪ್ರಚೋದನೆ ಮಾಡಬೇಕಾಗಿ ಬಂತು. ನಾವು ಹೇಳಿದರೆ ಕೇಳಲೇ ಇಲ್ಲ, ನಾನು ಬಜೆಟ್ ಮೇಲೆ ಮೂರು ಬಾರಿ ಚರ್ಚೆ ಮಾಡಿದಾಗಲೂ ರೈತರ ಸಾಲವನ್ನು ಮನ್ನಾ ಮಾಡಿ ಎಂದು ಹೇಳಿದೆ, ತಾವು ಕೇಳಲೇ ಇಲ್ಲ, ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಆಗ ಮಾನ್ಯ ಯಡಿಯೂರಪ್ಪನವರು ಹೇಳಿದ ತಕ್ಷಣವೇ announce ಮಾಡಿದರು.

ಶ್ರೀ ಉಮೇಶ್ ವಿ. ಕತ್ತಿ : – ಆಗ ನೀವು ಸರಿಯಾಗಿ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : – ನಾನು ಸರಿಯಾಗಿ ಹೇಳಿದ್ದೀನಲ್ಲವೇ? ಸರಿಯಾಗಿ ಹೇಳಲಿಲ್ಲವೇ? ಹಾಗಾದರೆ ನೀವೇ ಸರಿಯಾಗಿ ಹೇಳಿ.

ಅಧ್ಯಕ್ಷರು : – ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಡಿಸೆಂಬರ್‌ನಲ್ಲಿ ಚರ್ಚೆ ಮಾಡಿದಾಗ ರೈತರ ಸಾಲ ಮನ್ನಾ ಮಾಡಿ ಎಂದು ಹೇಳಿದೆ. ಈಗ ಮೊನ್ನೆ ಭಾಷಣ ಮಾಡಿದಾಗ ಹೇಳಿದೆ. ಮಾನ್ಯ ಜಗದೀಶ್‌ಶೆಟ್ಟರ್‌ರವರು ಇಲ್ಲಿ ತಲೆ ಅಲ್ಲಾಡಿಸುತ್ತಾ ಕುಳಿತ್ತಿದ್ದರು. ಮಾನ್ಯ ಈಶ್ವರಪ್ಪನವರು ಇದಕ್ಕೆ ರೆಡಿ ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಹಿಂದೆ ಎದ್ದು ಹೇಳಿದ ತಕ್ಷಣ ಎಷ್ಟು ಪ್ರಚಾರ ಸಿಕ್ಕಿ ಬಿಟ್ಟಿತು. ನಾವು ಏನೋ ಈ ಕಡೆಯಿಂದ 10,000 ಕೋಟಿ ರೂ.ಗಳನ್ನು ಮಾಡಿಸುತ್ತಾರೆಂದು ಟೇಬಲ್ ತಟ್ಟಿದೆವು. ಅವರು ಮೂರೂವರೆ ಸಾವಿರ ಕೋಟಿ ರೂ.ಗಳಷ್ಟಕ್ಕೆ ಸೀಮಿತ ಮಾಡಿ, ಠುಸ್ಸು ಎಂದು ಬಿಟ್ಟರು. ಈ ಮೂರೂವರೆ ಸಾವಿರ ಕೋಟಿ ರೂ.ಗಳು

ಆಗುವುದಿಲ್ಲ. ಈ ಆತನ್ನು ಏಕೆ ಹೇಳುತ್ತೇನೆಂದರೆ, ಕಳೆದ ವರ್ಷ Co-operative Institutions ನಿಂದ ಐದೂವರೆ ಸಾವಿರ ಕೋಟಿ ರೂ.ಗಳನ್ನು ಸಾಲವಾಗಿ ಕೊಟ್ಟಿರುವಂಥದ್ದು. ಈ ವರ್ಷಕ್ಕೆ ಆರೂವರೆ ಸಾವಿರ ಕೋಟಿ ರೂ.ಗಳನ್ನು ಸಾಲವಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಡಿಸೆಂಬರ್‌ವರೆಗೂ ಕೊಡುತ್ತಾ ಹೋಗುತ್ತಾರೆ. ಕಳೆದ ವರ್ಷ ಸಾಲ ಕೊಟ್ಟಿರುವುದರಲ್ಲಿ 93% recovery ಆಗಿ ಬಿಟ್ಟಿದೆ.

ಶ್ರೀ ಉಮೇಶ್ ವಿ. ಕತ್ತಿ : – 94% ಆಗಿದೆ.

ಶ್ರೀ ಸಿದ್ದರಾಮಯ್ಯ : – ನಾವು ಹೆಚ್ಚು ಕಡಿಮೆ correct ಆಗಿ ಹೇಳುತ್ತಿದ್ದೇನಲ್ಲವೇ? 93% recovery ಆಗಿ ಬಿಟ್ಟಿದೆ. ರೈತರಿಗೆ ಅನುಕೂಲವಾದರೆ ಬಹಳ ಸಂತೋಷ. ಆಗಲಿಲ್ಲವೆಂದರೆ ಜನರು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಿಮ್ಮನ್ನು ಕ್ಷಮಿಸುವುದಿಲ್ಲವೆಂಬ ಮಾತನ್ನು ಹೇಳಿ ಬಿಡುತ್ತೇನೆ. ನಾನು ಹೇಳುವುದೇನೆಂದರೆ ಆರೂವರೆ ಸಾವಿರ ಕೋಟಿ ರೂ.ಗಳು, ಆದರೆ ಇವರು ಇವತ್ತಿನವರೆಗೂ 2,100 ಕೋಟಿ ರೂ.ಗಳ ಸಾಲವನ್ನು ಕೊಟ್ಟಿದ್ದಾರೆ. 93% recovery ಆದ ಮೇಲೆ, ಈಗಾಗಲೇ ವಾಪಾಸ್ ಮಾಡಿರುವರಿಗೆ ಇದು ಇಲ್ಲ. ಇದು defaulters ಗೆ ಮಾತ್ರ apply ಆಗುತ್ತದೆ. ತಾವು ಸಾಲ ವಾಪಾಸ್ ಕಟ್ಟಿರುವವರಿಗೆ ಕೊಡುವುದಿಲ್ಲವಲ್ಲಾ. . . .

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಜಯಚಂದ್ರರವರು ಸ್ಪಷ್ಟೀಕರಣ ಕೇಳಿದಾಗ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : – 25,000 ರೂ.ಗಳನ್ನು ಸಾಲ ತೆಗೆದುಕೊಂಡು ವಾಪಾಸ್ಸು ಕೊಟ್ಟು ಬಿಟ್ಟಿರುತ್ತಾರೆ. My point is ನಾನು 25,000 ರೂ:ಗಳ ಸಾಲವನ್ನು ತೆಗೆದುಕೊಂಡಿರುತ್ತೇನೆ. ಈ ಹಣವನ್ನು ವಾಪಾಸ್ಸು ಕೊಟ್ಟುಬಿಟ್ಟೆ, ಇದಕ್ಕೆ 1% ಬಡ್ಡಿ ಇತ್ತು, ನಾನು ಆ ಹಣವನ್ನು ವಾಪಸ್ಸು ಕೊಟ್ಟುಬಿಟ್ಟೆ. ಈಗ ನನಗೆ ಹೇಗೆ? ನನಗೆ 25,000 ರೂ.ಗಳನ್ನು ಕೊಡುತ್ತಾರೆಯೇ? ನನಗೆ ಈ ಹಣ ಹೇಗೆ ಬರುತ್ತದೆ? ನಾನು ಪುನಃ ಸಾಲವನ್ನು ತೆಗೆದುಕೊಂಡು ಅದು ಬಾಕಿ ಇದ್ದರೆ, ಈ ಹಣ due ಇದ್ದರೆ ನನಗೆ ಸಿಗುತ್ತದೆ. Due ಇಲ್ಲವೆಂದರೆ ನನಗೆ ಹೇಗೆ ಸಿಗುತ್ತದೆ? That is why?, ಈಗಲೂ ತಮ್ಮ ಮೂಲಕ ನಾನು ಅವರಿಗೆ suggest ಮಾಡುತ್ತೇನೆ. ಎಲ್ಲಾ ರೈತರಿಗೆ, irrespective of the holdings, 5 ಎಕರೆ ಇರುವವರಿಗೆ 5,000 ರೂ.ಗಳಂತೆ ಕೊಟ್ಟು ಬಿಡಿ. ಒಂದು ಎಕರೆಗೆ

5000 ರೂ.ಗಳಷ್ಟು ಬೆಳೆ ನಷ್ಟವೆಂದು ಕೊಡಿ. To all. Whether they are small farmers or big farmers, whether they are having irrigated land or dry land, Rs.5,000 per acre, up to 5 acres ಕೊಟ್ಟು ಬಿಡಿ, ಎಲ್ಲರಿಗೂ ಅನುಕೂಲವಾಗಲಿ, ಏಕೆಂದರೆ ಎರಡು ಸಾರಿ ಬೆಳೆ ಹಾಳಾಯಿತು. ಮೊದಲನೆಯದಾಗಿ, ಸೆಪ್ಟೆಂಬರ್‌–ಅಕ್ಟೋಬರ್‌ ತಿಂಗಳು ಮಳೆ ಬರಲಿಲ್ಲ, ಬೆಳೆ ನಾಶವಾಯಿತು. ಈ ವರ್ಷ 42% ಮಳೆ deficit ಆಗಿದೆ, ಮುಂಗಾರು ಬೆಳೆ ನಾಶವಾಯಿತು. ಹಿಂಗಾರು ಮಳೆ ಏನಾಗುತ್ತದೋ ಗೊತ್ತಿಲ್ಲ. ಹಾಗಾಗಿ ರೈತರಿಗೆ ಹಣವನ್ನು ಕೊಡಿ ಅನುಕೂಲವಾಗಲಿ, ಮಾನ್ಯ ಯೋಗೇಶ್ವರ್‌ರವರೆ ಎಲ್ಲರೂ ಒಪ್ಪಿ ಕೊಳ್ಳುತ್ತೀರಲ್ಲವೇ?

ಶ್ರೀ ಸಿ.ಪಿ.ಯೋಗೇಶ್ವರ್‌ : – ತಾವು ಕೇಂದ್ರ ಸರ್ಕಾರದಿಂದ ಏನಾದರೂ ಮಾಡಿ.

ಶ್ರೀ ಸಿದ್ದರಾಮಯ್ಯ : – ಅದನ್ನು ಮಾಡೋಣ, ಇದನ್ನು ನೀವು ಮಾಡಿ, ಅದನ್ನು ಆಮೇಲೆ ಮಾಡೋಣ. ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಹೋಗೋಣ.

ಶ್ರೀ ಹೆಚ್‌.ಸಿ.ಬಾಲಕೃಷ್ಣ : – ಮಾನ್ಯ ಸಿದ್ದರಾಮಯ್ಯನವರೆ, ತಾವು ಅಧ್ಯಕ್ಷರ ಮುಖಾಂತರ ಹೇಳಬೇಡಿ. ಮಾನ್ಯ ಯಡಿಯೂರಪ್ಪನವರ ಮುಖಾಂತರ ಹೇಳಿ, ಅದನ್ನೂ ಮನ್ನಾ ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : – ನಾನು ಹೇಳುವುದನ್ನು ಬಿಟ್ಟು ಬಿಟ್ಟೆ. ಅವರು 10,000 ಕೋಟಿ ರೂ.ಗಳೆಂದು ಹೇಳಿ ಬಿಟ್ಟು ಒಂದೇ ದಿವಸಕ್ಕೆ ಸುಮ್ಮನೆ ಆಗಿ ಬಿಟ್ಟರು. ನಾನು ಹೇಳುವುದಿಲ್ಲ, ನೀವೇ ಹೇಳುವುದಾದರೆ ಹೇಳಿ. ನೀವು ಹೇಳಿದರೆ ಸ್ವಲ್ಪ ನಡೆಯಬಹುದೇನೋ ನೋಡಿ. ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಾತು ಎತ್ತಿದರೆ Central Government, Central Government ಎಂದು ಹೇಳುತ್ತಾರೆ.

ಶ್ರೀ ಸಿ.ಪಿ.ಯೋಗೇಶ್ವರ್‌ : – ಮಾನ್ಯ ಅಧ್ಯಕ್ಷರೆ. . . .

ಶ್ರೀ ಸಿದ್ದರಾಮಯ್ಯ : – ನಾನು ಹೇಳುವುದನ್ನು ಕೇಳಿ, ಬರೆದುಕೊಳ್ಳಿ. ನಿಮಗೆ Central Government ನಿಮಗೆ, , ,

ಶ್ರೀ ಉಮೇಶ್.ವಿ.ಕತ್ತಿ : – Forest Minister ರವರಿಗೆ ಹುಲಿ, ಸಿಂಹಗಳ ಬಗ್ಗೆ ಲೆಕ್ಕ ಹೇಳಿದರೆ ಬರೆದು ಕೊಳ್ಳುತ್ತಾರೆ. ತಾವು ಹಣದ ಲೆಕ್ಕವನ್ನು ಹೇಳಿದರೆ ಅವರು ಹೇಗೆ ಬರೆದುಕೊಳ್ಳುತ್ತಾರೆ?

ಶ್ರೀ ಸಿದ್ದರಾಮಯ್ಯ : – ನಾನು ಅವರು ಸ್ನೇಹಿತರು ಹಾಗಾಗಿ ಹೇಳಿದೆ.

ಶ್ರೀ ಉಮೇಶ್.ವಿ.ಕತ್ತಿ : – ಹುಲಿ, ಸಿಂಹಗಳ ಲೆಕ್ಕ ಹೇಳಿದರೆ ಬರೆದುಕೊಳ್ಳುತ್ತಾರೆ. ನೀವು ದುಡ್ಡಿನ ಲೆಕ್ಕ ಹೇಳಿದರೆ ಅವರಿಗೆ ಬರೆದುಕೊಳ್ಳುವುದಕ್ಕೆ ಬರುವುದಿಲ್ಲ. ಹುಲಿ ಇಷ್ಟು, ಆನೆ ಇಷ್ಟು, ಸಿಂಹಗಳು ಇಷ್ಟೆಂದು ಹೇಳಿ ಬರೆದುಕೊಳ್ಳುತ್ತಾರೆ.

ಶ್ರೀ ಸಿದ್ದರಾಮಯ್ಯ : – ಹುಲಿಗಳು ಎಷ್ಟಿವೆ, ಆನೆಗಳು ಎಷ್ಟಿವೆ, ಯಾರನ್ನು ಹೊಡೆದು ಹಾಕಿದರು, ಎಷ್ಟು ಆನೆ ದಂತಗಳನ್ನುಕದ್ದುಕೊಂಡು ಹೋದರೆಂಬ ಲೆಕ್ಕ ಯಾರಿಗೂ ಗೊತ್ತಿಲ್ಲ. ಜಯಚಂದ್ರರವರು ಸಮಿತಿಯ ಅಧ್ಯಕ್ಷರಾಗುವುದಕ್ಕಿಂತ ಮುಂಚೆ ನಾನು public Account Committee ಯ ಅಧ್ಯಕ್ಷನಾಗಿದ್ದಾಗ ಕಮಿಟಿಯಿಂದ ಒಂದು report ಕೊಟ್ಟಿದ್ದೇನೆ. ಇದನ್ನು ನೋಡಿ. ಇಲ್ಲಿ ಮಲ್ಲಿಕಾರ್ಜುನ ಖರ್ಗೆಯವರು Leader of the Opposition ಆಗಿದಾಗ, ನಾನು ಒಂದು report ಕೊಟ್ಟಿದ್ದೇನೆ. ಅದನ್ನು ನೋಡಿ. ಆನೆಗಳ ಬಗ್ಗೆ, ಹುಲಿಗಳ ಬಗ್ಗೆ ಒಂದು ರಿಪೋರ್ಟ್ ಇದೆ.ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಬರಗಾಲಕ್ಕೆ ನಾವು ಬೇಕಾದಷ್ಟು ಕೋಟಿ ಖರ್ಚು ಮಾಡಿದೇವೆ ಎಂದು ಇವರು ಹೇಳುತ್ತಾರೆ. ನಾನು ಆಗಲೇ ಹೇಳಿದೆ. ಈಗಲೂ ಹೇಳುತ್ತೇನೆ, ಕೇಂದ್ರ ಸರ್ಕಾರದಿಂದ 2011–12 ಕ್ಕೆ 169 ಕೋಟಿ, ರೂಪಾಯಿ S.D.R.F ಆಗಿ ಕೊಟ್ಟಿದ್ದಾರೆ. ಮೊದಲನೇ ಮೆಮೊರಾಂಡಂ ಕೊಟ್ಟಾಗ 70 ಕೋಟಿ, ಎರಡನೇ ಮೆಮೊರಾಂಡಂ ಕೊಟ್ಟ ಮೇಲೆ 282 ಕೋಟಿ ಕೊಟ್ಟಿದ್ದಾರೆ. ಈ ವರ್ಷ S.D.R.F ಇರುವುದು 177 ಕೋಟಿ. ಅದರಲ್ಲಿ 50% ಅಂದರೆ 88 ಕೋಟಿ ಬಿಡುಗಡೆಯಾಗಿದೆ. ಹೀಗೆ ಒಟ್ಟು 609 ಕೋಟಿ ಕೊಟ್ಟಿದ್ದಾರೆ. ಅದರಲ್ಲಿ ಇವರು ಖರ್ಚು ಮಾಡಿರುವುದು 175 ಕೋಟಿ. ಕುಡಿಯುವ ನೀರಿಗೆ ಹೋದ ವರ್ಷ 175 ಕೋಟಿ, ಈ ವರ್ಷ 47 ಕೋಟಿ ಖರ್ಚು ಮಾಡಿದ್ದಾರೆ. S.D.R.F. ನಿಂದ 222 ಕೋಟಿ N.D.R.F ನಿಂದ 182 ಕೋಟಿ ಬಿಡುಗಡೆ ಮಾಡಿದ್ದಾರೆ. ಇಷ್ಟನ್ನು ಬಿಟ್ಟರೆ ನೀವು ಹಣವನ್ನು ಎಲ್ಲಿ ಖರ್ಚು ಮಾಡಿದ್ದೀರಿ? ಯೋಗೇಶ್ವರ್‌ರವರೆ ಬರೆದುಕೊಂಡಿರಾ? ಲೆಕ್ಕ ಸರಿ ಹೋಯಿತಲ್ಲವೇ?

ಶ್ರೀ ಸಿ.ಟಿ.ರವಿ : – ಇದರಲ್ಲಿ ರೈತರಿಗೆ ಒಂದು ಎಕರೆಗೆ ಎಷ್ಟಾಯಿತು? ಐದು ಎಕರೆಯ ಒಳಗಿರುವವರಿಗೆ ಪ್ರತಿ ಎಕರೆಗೆ ಎಷ್ಟು ಕೊಡಬೇಕು?

ಶ್ರೀ ಸಿದ್ದರಾಮಯ್ಯ : – You are the state Government. ಬರೀ ರಾಜ್ಯ ಸರ್ಕಾರವೊಂದೇ ಹಣವನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರವೂ ಕೊಟ್ಟಿದೆ. ನಿಮ್ಮ ಚಿಕ್ಕಮಗಳೂರು ಸೇರಿದಂತೆ ಒಟ್ಟು 6 ಜಿಲ್ಲೆಗಳಿಗೆ ಕೇಂದ್ರ ಸರ್ಕಾರದವರು 2,689 ಕೋಟಿ ರೂಪಾಯಿಗಳನ್ನು ಕೊಟ್ಟರಲ್ಲ, ಅದು ಯಾರ ದುಡ್ಡು? ವಿದರ್ಭ ಪ್ಯಾಕೇಜ್‌ನಲ್ಲಿ ಕೊಟ್ಟಿದ್ದಾರೆ. ವಿದರ್ಭ ಪ್ಯಾಕೇಜ್ ಕೇಂದ್ರ ಸರ್ಕಾರದ್ದಲ್ಲವೇ? Vidarbha Package is Prime Minister's Rehabilitation package. ಕೇಂದ್ರ ಸರ್ಕಾರ ಒಟ್ಟಿಗೆ 72 ಸಾವಿರ ಕೋಟಿ ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲವನ್ನು ಮನ್ನಾ ಮಾಡಿದರಲ್ಲ, ಅದು ರೈತರಿಗಲ್ಲವೇ?

ಶ್ರೀ ಸಿ.ಟಿ.ರವಿ : – ನೀವು ಊರಿನ ಕಥೆ ಹೇಳುತ್ತಿದ್ದೀರಿ, ಅದರಲ್ಲಿ ನಮ್ಮ ರಾಜ್ಯಕ್ಕೆ ಬಂದಿದ್ದು ಎಷ್ಟು ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : – ಮತ್ತೆ ನೀವು ಯಾವಾಗಲೂ ಡೆಲ್ಲಿ ಕಡೆ ನೋಡುತ್ತೀರಿ.

ಶ್ರೀ ಸಿ.ಟಿ.ರವಿ : – ಈ 2,689 ಕೋಟಿಯಲ್ಲಿ ಐದು ಎಕರೆಯೊಳಗಡೆ ಇರುವ ರೈತರಿಗೆ ತಲಾ ಎಷ್ಟೆಷ್ಟು ಬಂತು ಎನ್ನುವುದನ್ನು ಹೇಳಿದರೆ ಲೆಕ್ಕ ಸುಲಭವಾಗಿ ಅರ್ಥವಾಗುತ್ತದೆ. ನಿಮ್ಮ ಹಾಗೆ Economist ಆದರೆ ನಾವು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಿದ್ದೆವು.

ಶ್ರೀ ಸಿದ್ದರಾಮಯ್ಯ : – ಅದನ್ನು ಲೆಕ್ಕ ಹಾಕಿ ಆಮೇಲೆ ನೀವು ಅವರಿಗೆ ಹೇಳಿ, ರವಿಯವರೇ, ಈ ಎಲ್ಲ ಲೆಕ್ಕಾಚಾರಗಳನ್ನು ತಲೆಯಲ್ಲಿ ಇಟ್ಟುಕೊಂಡಿರಬೇಕು, ಸುಮ್ಮನೆ ಹೇಳುವುದಕ್ಕೆ ಆಗುವುದಿಲ್ಲ. ಅಂಕಿಅಂಶಗಳೆಲ್ಲ ತಲೆಯಲ್ಲಿ ಇದ್ದರೆ ಮಾತ್ರ ಹೇಳುವುದಕ್ಕಾಗುತ್ತದೆ. ನೀವು ಈ ಪುಸ್ತಕವನ್ನು ತೆಗೆದು ನೋಡಿ. ರವಿಯವರೇ, ಇದನ್ನು ತೆಗೆದುಕೊಳ್ಳಿ, evaluation ಆಗಿದೆ, ಓದಿಬಿಟ್ಟು ವಾಪಾಸ್ಸು ಕೊಡಿ.

ಶ್ರೀ ಆರ್.ಅಶೋಕ್ : – ಕೇಂದ್ರ ಸರ್ಕಾರ ಎಷ್ಟೇ ಕೊಟ್ಟರೂ ಸಹ, ನಾವು ಕೇವಲ ಬೆಂಗಳೂರಿನಿಂದಲೇ 30 ಸಾವಿರ ಕೋಟಿಗೂ ಹೆಚ್ಚು ಟ್ಯಾಕ್ಸ್‌ನ್ನು

ಕೇಂದ್ರ ಸರ್ಕಾರಕ್ಕೆ ಕಟ್ಟುತ್ತೇವೆ. ಈ 2,000 ಕೋಟಿ, 200 ಕೋಟಿ, 300 ಕೋಟಿ ಯಾವ ಲೆಕ್ಕ?

ಶ್ರೀ ಸಿ.ಟಿ.ರವಿ : – 1,600 ಕೋಟಿಯನ್ನು ಕರ್ನಾಟಕ ಆಗಲೇ ಮನ್ನಾ ಮಾಡಿತ್ತು. ಅದನ್ನು reimbursement ಮಾಡಬೇಕಿತ್ತು. ಕೇಂದ್ರ ಸರ್ಕಾರ ಕೊಟ್ಟಿರುವ 72 ಸಾವಿರ ಕೋಟಿಯಲ್ಲಿ ಅದು ಇಲ್ಲವೇ ಇಲ್ಲ.

ಶ್ರೀ ಸಿದ್ದರಾಮಯ್ಯ : – ಅದನ್ನು ಲೆಕ್ಕ ಹಾಕಿಲ್ಲ.

ಶ್ರೀ ಸಿ.ಟಿ.ರವಿ : – ಅದನ್ನು ಕೊಡಲೇ ಇಲ್ಲವಲ್ಲ, ಕರ್ನಾಟಕದ ಪಾಲಲ್ಲವೇ ಅದು? ಅದನ್ನು ಕೊಡಬೇಕಿತ್ತಲ್ಲವೇ? ನಿಮ್ಮ ಪುಸ್ತಕದಲ್ಲಿ ಅದು ಇಲ್ಲವೇ ಇಲ್ಲ.

ಶ್ರೀ ಸಿದ್ದರಾಮಯ್ಯ : – Thisi is regarding Prime Minister's Rehabilitation Package.

ಶ್ರೀ ಸಿ.ಟಿ.ರವಿ : – ಬೇರೆ ರಾಜ್ಯಗಳಿಗೆ ಕೊಟ್ಟು, ಕರ್ನಾಟಕಕ್ಕೆ reimbursement ಕೊಡಲಿಲ್ಲ.

ಶ್ರೀ ಸಿದ್ದರಾಮಯ್ಯ : – ಇದು ಬೇರೆ. ಅದನ್ನು ಓದಿ ಗೊತ್ತಾಗುತ್ತದೆ.

ಶ್ರೀ ಸಿ.ಟಿ.ರವಿ : – ಓದುತ್ತಿದ್ದೇನೆ, ಸುಲಭವಾಗಲಿ ಎಂದು ನೀವು marker ಅನ್ನೂ ಹಾಕಿದ್ದೀರಿ. ಕರ್ನಾಟಕಕ್ಕೆ 2,689 ಕೋಟಿ ಎನ್ನುವುದಕ್ಕೆ ನೀವು high lighter ಹಾಕಿದ್ದೀರಿ.

ಶ್ರೀ ಸಿದ್ದರಾಮಯ್ಯ : – ಹಾಗಿದ್ದರೆ ಅದು ಏನೆಂದು ಹೇಳಿಬಿಡಿ ನೋಡೋಣ.

ಶ್ರೀ ಸಿ.ಟಿ.ರವಿ : – Rehabilitation Package by States. ಆಂಧ್ರ ಪ್ರದೇಶಕ್ಕೆ 9,650 ಕೋಟಿ, ಕರ್ನಾಟಕಕ್ಕೆ ಬರೀ 2,689 ಕೋಟಿ.

ಶ್ರೀ ಸಿದ್ದರಾಮಯ್ಯ : – It is an evaluation report on Prime Minister's Rehabilitation Package. ಅದನ್ನು ನಾನು ನಿಮಗೆ ಹೇಳಿದ್ದು. ಅದು ಜನಗಳಿಗೆ ಎಷ್ಟು ತಲುಪಿದೆ, ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎನ್ನುವುದನ್ನು evaluation ಮಾಡಿದ್ದಾರೆ. ಅದರ ರಿಪೋರ್ಟ್ ಇದು. ಸಣ್ಣ

ಮತ್ತು ಅತಿ ಸಣ್ಣ ರೈತರಿಗೆ ಸಾಲ ಮನ್ನಾ ಮಾಡಿದರಲ್ಲ, ಅದು ಈ 72 ಸಾವಿರ ಕೋಟಿಯಲ್ಲಿ ಬರುವುದಿಲ್ಲ. That is a different package, ಇದು ಬೇರೆ ಪ್ಯಾಕೇಜ್. ಇದರಲ್ಲಿ ಆಂದ್ರ ಪ್ರದೇಶಕ್ಕೆ, ಕೇರಳಕ್ಕೆ, ಕರ್ನಾಟಕಕ್ಕೆ, ಮಹಾರಾಷ್ಟ್ರಕ್ಕೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಚಿತ್ರದುರ್ಗ, ಬೆಳಗಾಂ ಮತ್ತು ಹಾಸನ ಈ 6 ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಅದು ಜನಗಳಿಗೆ ಹೇಗೆ ಸೇರಿತು ಎನ್ನುವುದರ evaluation report ಅದು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಲ್ಲ, ಆ ಹಿನ್ನಲೆಯಲ್ಲಿ ಕೊಟ್ಟಂಥಾದ್ದು ಇದು. ಆಂಧ್ರ ಪ್ರದೇಶದಲ್ಲಿ highest suicides ಆಯಿತು. Andhra Pradesh is No.1, Maharashtra is No.2 and Karnataka is No.3 in suicides. ಆ ಕಾರಣಕ್ಕಾಗಿ ಪ್ರಧಾನ ಮಂತ್ರಿಗಳು ಆ ಪ್ಯಾಕೇಜನ್ನು ಅನೌನ್ಸ್ ಮಾಡಿ ದುಡ್ಡನ್ನು ಬಿಡುಗಡೆ ಮಾಡಿದರು. ಆಂಧ್ರ ಪ್ರದೇಶಕ್ಕೆ ಸುಮಾರು ಒಂಭತ್ತು ಸಾವಿರ ಕೋಟಿ ಕೊಟ್ಟಿರುವುದು ನಿಜ. ಮಹಾರಾಷ್ಟ್ರ ಎರಡನೆಯದು, ಕರ್ನಾಟಕ ಮೂರನೆಯದು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾವು ಕೇವಲ ಕೇಂದ್ರ ಸರ್ಕಾರದ ಕಡೆ ತೋರಿಸಿಬಿಟ್ಟು ಕುಳಿತುಕೊಳ್ಳಲು ಆಗುವುದಿಲ್ಲ. ಒಂದು ವಿಷಯದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. "ಆಸರೆ" ಮನೆಗಳು. 2009 ರ ಸೆಪ್ಟೆಂಬರ್ 29, 30 ಮತ್ತು ಅಕ್ಟೋಬರ್ 1 ಮತ್ತು 2 ರಲ್ಲಿ ಯಾವತ್ತೂ ಕಾಣದೇ ಇರುವಂಥ ಪ್ರವಾಹ ರಾಜ್ಯದಲ್ಲಿ ಆಯಿತು. ಕೇಂದ್ರ ಸರ್ಕಾರ ಆ ವರ್ಷ ಅಂದರೆ 2009-10 ಕ್ಕೆ 1,733 ಕೋಟಿ ರೂಪಾಯಿಗಳನ್ನು ಪರಿಹಾರಕ್ಕಾಗಿ ಅಂದರೆ 289 ಹಳ್ಳಿಗಳನ್ನು ಶಿಫ್ಟ್ ಮಾಡಲಿಕ್ಕಾಗಿ ಕೊಟ್ಟರು, ಮೂರು ವರ್ಷವಾಯಿತು. ಇನ್ನೂ 88 ಹಳ್ಳಿಗಳನ್ನು ಶಿಫ್ಟ್ ಮಾಡಲು ಆಗಿಲ್ಲ. ಮೊನ್ನೆ ಯಡಿಯೂರಪ್ಪನವರು ಕೂಡ ಇದನ್ನು ಪ್ರಸ್ತಾಪ ಮಾಡಿದರು. 201 ಹಳ್ಳಿಗಳನ್ನು ಮಾತ್ರ ಶಿಫ್ಟ್ ಮಾಡಿದ್ದಾರೆ. ಇನ್ನೂ 88 ಹಳ್ಳಿಗಳನ್ನು ಶಿಫ್ಟ್ ಮಾಡುವುದಕ್ಕೆ ಆಗಿಲ್ಲ. ಇದರಲ್ಲಿ ಒಟ್ಟು 56 ಸಾವಿರ ಮನೆಗಳು ಹಸ್ತಾಂತರವಾಗಬೇಕಿತ್ತು. ಇನ್ನೂ 31 ಸಾವಿರ ಮನೆಗಳನ್ನು ಹಸ್ತಾಂತರ ಮಾಡುವುದಕ್ಕೆ ಆಗಿಲ್ಲ. 8 ಸಾವಿರ ಮನೆಗಳು ಇನ್ನೂ ವಿವಿಧ ಹಂತಗಳಲ್ಲಿವೆ. ಕೆಲವು ಕಡೆ ಇನ್ನೂ ಶುರುನೇ ಆಗಿಲ್ಲ. ನಾನು ರೋಣ ತಾಲ್ಲೂಕಿನಲ್ಲಿ ಕುರಟ್ಟಿ ಎನ್ನುವ ಊರಿಗೆ ಹೋಗಿದ್ದೆ. ಅಲ್ಲಿ 50 ಕುಟುಂಬಗಳು ಇವತ್ತೂ ಕೂಡ ತಗಡಿನ ಶೆಡ್‌ಗಳಲ್ಲಿದ್ದಾರೆ. ಬಾಣಂತಿಯರು, ಮುದುಕರು, ಸಣ್ಣಮಕ್ಕಳು, ರೋಗಿಗಳು

ಹೀಗೆ ಎಲ್ಲರೂ ಕೂಡ ತಗಡಿನ ಶೆಡ್‌ಗಳಲ್ಲಿದ್ದಾರೆ. ಬರಗಾಲ ನೋಡುವುದಕ್ಕೆ ಹೋಗಿದ್ದಾಗ ನಾನು ಹೋಗಿ ಅವರನ್ನು ಭೇಟಿ ಮಾಡಿದ್ದೆ. ಇವತ್ತಿನವರೆಗೂ ಅಲ್ಲಿ ಜಮೀನು ಅಕ್ವೈರ್ ಮಾಡಲು ಆಗಿಲ್ಲ. Even today land has not been acquired. ಇವತ್ತಿನವರೆಗೂ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಇದನ್ನು ಅವರು ಇಲ್ಲವೆಂದು ಹೇಳಲಿ. Even today, 3 ವರ್ಷಗಳಾಯಿತು. Are they not human beings? Is it not our responsibility to give them protection and relief? ಇವತ್ತಿನವರೆಗೂ ಮಾಡಲಿಕ್ಕೆ ಆಗಲಿಲ್ಲ. Still they are living in the sheds. ಆ ತಗಡು ಶೆಡ್‌ಗಳಲ್ಲಿ ವಾಸಿಸುತ್ತಿದ್ದಾರೆ. ಅವರ ಶಾಪ ನಿಮಗೆ ತಟ್ಟುವುದಿಲ್ಲವೇ? This is my point. ಸರ್ಕಾರದವರು ನಾವು ಬಡವರ ಪರವಾಗಿದ್ದೇವೆ. ರೈತರ ಪರ ಇದ್ದೇವೆ, ಹಳ್ಳಿಯವರ ಪರ ಇದ್ದೇವೆಂದು ಬಾಯಿ ಮಾತಿನಲ್ಲಿ ಹೇಳಿದರೆ ಅವರಿಗೆ ಪರಿಹಾರ ಸಿಗುವುದಿಲ್ಲ. ಪರಿಹಾರ ಕೊಡಬೇಕು. 1733 ಕೋಟಿ ರೂಪಾಯಿಗಳಷ್ಟು ಜನರು ವಂತಿಗೆಯನ್ನು ಕೊಟ್ಟರು. ಸುಮಾರು 450 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದರೆ ಇನ್ನೂ ಕೂಡ ಹೊಸದಾಗಿ 56 ಸಾವಿರ ಮನೆಗಳನ್ನು ಕಟ್ಟಬಹುದಾಗಿತ್ತು. ನೀವು ಏಕೆ ಮಾಡಲಿಲ್ಲ? ಕೇವಲ ಪ್ರಚಾರದಿಂದ ಜನರ ಕಷ್ಟ ಬಗೆಹರಿಯುತ್ತದೆಯೇ? Flex ಗಳು, hoarding ಗಳು, ಸಾಧನೆಗಳ board ಎಲ್ಲಿ ನೋಡಿದರೂ ರಾರಾಜಿಸುತ್ತವೆ, ಸಾಧನೆಗಳು ಎಂದು ಬೋರ್ಡ್ ಹಾಕಿಸಿಕೊಂಡಿದ್ದೀರಲ್ಲಾ, ಸಾಧನೆ ಎಲ್ಲಿ ಆಗಿದೆ? ನಾನು ಧೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರಕ್ಕೆ ಬರಬೇಕಾದಂತಹ ಬಾಕಿ legally the Government is entitled, ಅದನ್ನು ವಸೂಲಿ ಮಾಡಿದರೆ ಸಾಕು, we can solve so many problems. We can provide money to so many programmes. ಈಗಲೂ ನಾವು 22 ಸಾವಿರ ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಳ್ಳಬೇಕೇ? ಇಷ್ಟೆಲ್ಲ ನಮಗೆ ಇದ್ದರೂ ಕೂಡ ಏಕೆ ತೆಗೆದುಕೊಳ್ಳಬೇಕು? ನಮ್ಮ Fiscal Responsibility Act ನ guidance ಒಳಗಡೆ ಇದೆ. ಅದು ಬೇರೆ ವಿಚಾರ. ಈಗ ನಮ್ಮ ರಾಜ್ಯ ಸರ್ಕಾರದ ಸಾಲ ಎಷ್ಟಿದೆ? 2012-13 ಕ್ಕೆ ಬಜೆಟ್ ಮತ್ತು ಆಯವ್ಯಯೇತರ loan ಎಷ್ಟಾಗುತ್ತದೆ ಎಂದರೆ 1 ಲಕ್ಷದ 18 ಸಾವಿರ ಕೋಟಿ ರೂಪಾಯಿಗಳು. ಇದು ಈ ವರ್ಷಕ್ಕೆ ನಮ್ಮ ಮೇಲಿರುವ ಸಾಲವಾಗಿದೆ. ಸಾಲ ಎಲ್ಲಾ ಕಾಲದಲ್ಲಿತ್ತು.

ಸಾಲ ಮಾಡಲೇ ಬೇಕು ಎಂದು ನೀವು defend ಮಾಡಿಕೊಳ್ಳಬಹುದು, Yes, ಸಾಲ ಮಾಡಬೇಕಾಗಿರುವುದು not on the basis of the availability, but on the basis of the affordability. ಸಾಲ ಸಿಗುತ್ತದೆಂದು ಸಾಲ ಮಾಡುವುದಲ್ಲ. 1 ಲಕ್ಷದ 18 ಸಾವಿರ ಕೋಟಿ ರೂಪಾಯಿಗಳಷ್ಟು ರಾಜ್ಯದ ಸಾಲ ಎಂದು ಸರ್ಕಾರದ ಕಡೆಯಿಂದ ನೀವೇ ಕೊಟ್ಟಿರುವ ಮಾಹಿತಿಯನ್ನು ಹೇಳುತ್ತಿದ್ದೇನೆ. ಈ ವರ್ಷ ಎಷ್ಟು ಸಾಲ ಆಗಬಹುದೆಂದು ಇದರಲ್ಲಿ ನೀವೇ forecast ಮಾಡಿದ್ದೀರಿ. 2012–13 ನೇ ಸಾಲಿಗೆ outstanding debt 1 ಲಕ್ಷದ 14 ಸಾವಿರ 745 ಕೋಟಿ ರೂಪಾಯಿಗಳು. ಆ ಮೇಲೆ Off budget borrowings 3249 ಕೋಟಿ ರೂಪಾಯಿಗಳು. ಇವೆರಡೂ ಸೇರಿಸಿದರೆ 1 ಲಕ್ಷದ 18 ಸಾವಿರ ಕೋಟಿ ರೂಪಾಯಿಗಳು outstanding debt on Government of Karnataka on 6 crore people, Rs.1 lakh 18 thousand crores divided by 6 crores. ತಲಾ ಎಷ್ಟು ಸಾಲ ಬರುತ್ತದೆಂದು ಲೆಕ್ಕ ಹಾಕಿ. ಇದು ಈಗಿರುವಂಥ ಪರಿಸ್ಥಿತಿ. ನಾನು ಹೇಳುವುದೇನೆಂದರೆ, ನಮಗೆ resources ಇದ್ದರೂ ಕೂಡ ವಸೂಲು ಮಾಡತಕ್ಕಂಥ avenues ಬೇಕಾದಷ್ಟು ಇದ್ದರೂ ಕೂಡ, resources mobilize ಮಾಡುವುದಕ್ಕೆ ಬೇಕಾದಷ್ಟು avenues ಇದ್ದರೂ ಕೂಡ, they are not doing it. They have failed to mobilize the resources on non-tax revenue. Non-tax revenue sides ಏನೇನೂ ಮಾಡಲಿಲ್ಲ. ಒಂದನೆಯದಾಗಿ, investment ಇಲ್ಲ, arrears ಇಲ್ಲ; Mysore Minerals, ಎಲ್ಲಾ ಕೋಟಿಗಟ್ಟಲೆ ಹಣ ಖರ್ಚು ಮಾಡಿದೆ. User charges, ಆಯಿತು ನಿಮಗೆ ಶಿಫಾರಸ್ಸು ಮಾಡಿದ್ದಾರೆ. Chief Minister ಅಧ್ಯಕ್ಷತೆಯಲ್ಲಿ ಒಂದು Committee ಇದೆ. Fiscal Responsibility Act ನಲ್ಲಿ, there is a committee headed by Chief Secretary, ಮೀಟಿಂಗ್ ಮಾಡಿ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಒಂದು recommendation ಆದರೂ implement ಆಗಿದೆಯೇ? ಭಟ್ಟಾಚಾರ್ಯರವರ ಅಧ್ಯಕ್ಷತೆಯಲ್ಲಿ Expenditure Commission ಎನ್ನುವ ಒಂದು ಕಮಿಟಿ ಮಾಡಿದಿರಿ. quality expenditure ಇರಬೇಕೆಂದು one, two ಹೀಗೆ ಎರಡು report ಕೊಟ್ಟಿದಾರೆ. Expenditure ಬಗ್ಗೆ resources mobilization ಬಗ್ಗೆ

ಒಂದಾದರೂ ಶಿಫಾರಸ್ಸನ್ನು ನೋಡಿದ್ದೀರಾ? ಒಂದೇ ಒಂದು ಶೀಫಾರಸ್ಸನ್ನೂ ಸಹ ನೋಡಿಲ್ಲ. But,what is that, you are doing? ಕುರ್ಚಿಗೆ ಜಗಳ ಕರ್ನಾಟಕದ ಸಂಪತ್ತಿನ ಲೂಟಿ, ಇದನ್ನು ಮಾಡುತ್ತಿದ್ದೀರಿ. ಯಾವ ಕಾರಣಕ್ಕೆ ಸಾಲ ತೆಗೆದುಕೊಂಡಿರುತ್ತೇವೆ ಅದರಿಂದ assests creation ಆಗಬೇಕು. Whatever loan we have taken by the Government ಅದನ್ನು assets ನಿರ್ಮಾಣಕ್ಕೆ, ಆಸ್ತಿ ನಿರ್ಮಾಣಕ್ಕೆ ಖರ್ಚು ಮಾಡಬೇಕು, not for the revenue expenditure, not for the on-going expenditure. It is for the creation of assets. ಅದು ಇಲ್ಲವೇ ಇಲ್ಲ. ಒಂದಕ್ಕೊಂದು ಅರ್ಥಾತ್ ಸಂಬಂಧವೇ ಇಲ್ಲ. 'ಎತ್ತು ಈಯಿತು, ಕೊಟ್ಟಿಗೆಗೆ ಕಟ್ಟು' ಎನ್ನುವ ರೀತಿ ಯಾರೋ ಬಜೆಟ್ ಭಾಷಣವನ್ನು ಬರೆದುಕೊಡುತ್ತಾರೆ, ಅದನ್ನು ಓದುವುದಷ್ಟೆ ಇವರ ಕೆಲಸ. ಅದೂ ಕೂಡ ಬಜೆಟ್ ಭಾಷಣದಲ್ಲಿ ನೇರವಾಗಿ ನಮ್ಮ ಕವಿಗಳು, ಸಾಹಿತಿಗಳು ಬರೆದಿರುವ ಕವನಗಳನ್ನು ಬಜೆಟ್ ಪುಸ್ತಕದಲ್ಲಿ ಸೇರಿಸಿ ಓದಿಬಿಡುವುದು. ಅಡಿಗರು ಬರೆದಿರುವ 'ಕಟ್ಟುವೆವು ಹೊಸ ನಾಡೊಂದನ್ನು ಎನ್ನುವ ಒಂದು ಸಾಲನ್ನು ಓದಿಬಿಡುತ್ತಾರೆ. ಆದರೆ, ಇವರು ಎಲ್ಲಿ ಹೊಸ ನಾಡನ್ನು ಕಟ್ಟುವುದು? ಹಳೇ ನಾಡನ್ನೇ ಹರಾಜು ಹಾಕಿಬಿಟ್ಟು ಮಾನ ಮರ್ಯಾದೆ ಕಳೆದುಬಿಟ್ಟಿದ್ದೀರಿ. ಕಟ್ಟವೆವು ಹೊಸ ನಾಡೊಂದನ್ನು, ರಸದ ಬೀಡೊಂದನ್ನು ಎಂದು ಹೇಳಿದ್ದೀರಿ. ಆದರೆ, ನೀವು ಎಲ್ಲಿ ಹೊಸ ನಾಡು ಕಟ್ಟಿದ್ದೀರಿ? ಇನ್ನು, ಇವರು ಕೃಷಿ ಬಜೆಟ್ ಮಂಡಿಸಿದ್ದೇ ಮಂಡಿಸಿದ್ದು. ಇವರು ಕೃಷಿಗೆ ಘೋಷಿಸಿದ ಅನುದಾನ 2008–09 ಕ್ಕೆ 1171 ಕೋಟಿ 89 ಲಕ್ಷ ರೂಪಾಯಿಗಳು, revised budgetary estimate 768 ಕೋಟಿ ರೂಪಾಯಿಗಳು, ಬಿಡುಗಡೆಯಾದ ಮೊತ್ತ 717 ಕೋಟಿ ರೂಪಾಯಿಗಳು, ಖರ್ಚು ಮಾಡಿರುವುದು 675 ಕೋಟಿ ರೂಪಾಯಿಗಳು. ಬಜೆಟ್‌ನಲ್ಲಿ ಹೇಳಿರುವಂಥದ್ದು, 57% of the allocation made or shown in the Budget. ಪ್ರತ್ಯೇಕ ಕೃಷಿ ಬಜೆಟ್. Can we call this as a separate Agriculture Budget? Is this the importance given to the Agriculture? ಇದನ್ನು ಯಾರು ಹೇಳಬೇಕು ಹೇಳಿ. This is in the year 2008–09. 2009–10 ರಲ್ಲಿ ಅಲೋಕೇಷನ್ 786 ಕೋಟಿ, revised estimate 713 ಕೋಟಿ, released 648 ಕೋಟಿ, ಖರ್ಚು 634 ಕೋಟಿ.

2010–11ರಲ್ಲಿ ಅಲೋಕೇಷನ್ ಇದ್ದದ್ದು 855 ಕೋಟಿ, revised estimate 673 ಕೋಟಿ, ಅದರಲ್ಲಿ ಬಿಡುಗಡೆಯಾದುದು 608 ಕೋಟಿ, ಖರ್ಚಾದುದು 558 ಕೋಟಿ. ಕಳೆದ ವರ್ಷ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡಿಸಿದರು. ಅದರಲ್ಲಿ ಘೋಷಣೆ ಮಾಡಿದ್ದು 1,741 ಕೋಟಿ. ಅದನ್ನು revise ಮಾಡಿದ್ದು 1,202 ಕೋಟಿ. 500 ಕೋಟಿ ಕಡಿಮೆ ಮಾಡಿ revise ಮಾಡಿದರು. ಅದರಲ್ಲಿ ಬಿಡುಗಡೆಯಾದುದು 1,036 ಕೋಟಿ. ಮತ್ತೆ ಅದರಲ್ಲಿ 166 ಕೋಟಿ ಕಡಿಮೆಯಾಯಿತು. ಖರ್ಚಾದುದು 684 ಕೋಟಿ. The percentage of the total allocation to expenditure comes to 38%. ನೀವೇ ಲೆಕ್ಕ ಹಾಕಿ, 1,741 ಕೋಟಿಯಲ್ಲಿ 684 ಕೋಟಿ ಎಂದರೆ 38% ಆಗುತ್ತದೆ. This is the expenditure they have made on Agriculture? Can we say this Government is committed to Agriculture? By seeing this figure, can anybody say? Can anybody call this Government is committed to the separate Agriculture budget? I call it as a gimmick. ಜನರ ಕಣ್ಣಿಗೆ ಮಣ್ಣು ಎರಚತಕ್ಕಂಥ ತಂತ್ರಗಾರಿಕೆ. ರೈತರ ಮೂಗಿಗೆ ತುಪ್ಪ ಹಚ್ಚತಕ್ಕಂಥ ಗಿಮಿಕ್ ಇದು. ಮತ್ತೇಕೆ ನೀವು separate budget ತಂದಿರಿ? In Agriculture Department more than 4,000 vacancies are there. How can they spend money? ಈ ಕೃಷಿ ಬಜೆಟ್ ಸುಮಮನೆ ತೋರಿಕೆಗಾಗಿಯೇ? ಹಾಗೆಯೇ, ಹಿಂದುಳಿದ ಕಣ್ಮಣಿಗಳು ಎಂದು ದೊಡ್ಡ ಪ್ರಚಾರವಾಯಿತು. ಹಿಂದುಳಿದವರಿಗಾಗಿ ಕಳೆದ ವರ್ಷ 760 ಕೋಟಿ ಇಟ್ಟಿದ್ದೆವು, ಈ ವರ್ಷ 1,000 ಕೋಟಿ ಇಟ್ಟಿದ್ದೇವೆ. ಹಣವನ್ನು ಖರ್ಚು ಮಾಡುವುದಕ್ಕೆ district level ನಲ್ಲಿ ಅಧಿಕಾರಿಗಳಿದ್ದಾರೆಯೇ? ಖರ್ಚು ಮಾಡಲಿಕ್ಕೆ ತಾಲ್ಲೂಕು ಲೆವೆಲ್‌ನಲ್ಲಿ ಯಾರಾದರೂ ಒಬ್ಬ ಅಧಿಕಾರಿ ಇದ್ದಾರೆಯೇ? ದೇವರಾಜ ಅರಸು ಅಭಿವೃದ್ಧಿ ನಿಗಮದಲ್ಲಿ ಯಾರಾದರೂ ಅಧಿಕಾರಿಗಳು ಇದ್ದಾರೆಯೇ? How can they spend?

ಶ್ರೀ ಆರ್.ಅಶೋಕ್ : – ಆ ಕಡೆ ಕೇಳಬೇಡಿ, ಈ ಕಡೆ ಕೇಳಿ.

ಶ್ರೀ ಸಿದ್ದರಾಮಯ್ಯ : – ನಿಮ್ಮ ಕಡೆಯೇ ಕೇಳುತ್ತಿರುವುದು. Mr.Ashok, you are from Bangalore city, You can't understand all these things. ಇವೆಲ್ಲ ಹಳ್ಳಿಯವರಿಗೆ ಗೊತ್ತಾಗುತ್ತದೆ.

ಶ್ರೀ ಆರ್. ಅಶೋಕ್ : – ನಾನು ಹಳ್ಳಿಯಿಂದಲೇ ಬಂದಿರುವುದು, ನಾನು ಹಳ್ಳಿಯಲ್ಲೇ ಹುಟ್ಟಿದ್ದು.

ಶ್ರೀ ಸಿದ್ದರಾಮಯ್ಯ : – Now, you are in charge of Bangalore city. ಹುಟ್ಟಿದ್ದು ಹಳ್ಳಿಯಲ್ಲಿ, ಆದರೆ ಈಗ ಹಳ್ಳಿಯಲ್ಲಿ ಇಲ್ಲವಲ್ಲ?

ಶ್ರೀ ಆರ್.ಅಶೋಕ್ : – ನೀವೂ ಇಲ್ಲವಲ್ಲ.

ಶ್ರೀ ಸಿದ್ದರಾಮಯ್ಯ : – ಇವತ್ತು ನನ್ನ ಆಸ್ತಿ ನಮ್ಮ ಊರಿನಲ್ಲಿಯೇ ಇರುವುದು. ಮೈಸೂರಿನಿಂದ 25 ಕಿ.ಮೀ ದೂರದಲ್ಲಿರುವ ಊರಿನಲ್ಲಿ ನನ್ನ ಪಾಲು ಇನ್ನೂ ಅಲ್ಲೇ ಇದೆ. ನಾವು ಅಣ್ಣ ತಮ್ಮಂದಿರು ಇನ್ನೂ ಭಾಗ ಆಗಿಲ್ಲ. ನಮ್ಮ ಊರಿನಲ್ಲಿ ಇನ್ನೂ joint family ಇದೆ. ನಾನೇ ಕರ್ತ of the family. ಕರ್ತ ಎಂದರೆ ಏನೆಂದು ನಿಮಗೆ ಗೊತ್ತೇ? I am the head of the family. ಅಧ್ಯಕ್ಷರೆ, ನಿಮಗೆ ಗೊತ್ತಿದೆಯಲ್ಲವೇ? ನೀವು Law practice ಮಾಡಿದ್ದೀರಿ ಅಲ್ಲವೇ? ಅಶೋಕ್‌ರವರೇ, are you a Law Graduate? ನಾನು ಏಕೆ ಇದನ್ನೆಲ್ಲ ಹೇಳುತ್ತಿದ್ದೇನೆ ಎಂದರೆ, ಇವತ್ತೂ ನಾನು ಹಳ್ಳಿಗಳಿಗೆ ಹೋಗುತ್ತಿರುತ್ತೇನೆ. ಕನಿಷ್ಠ ಪಕ್ಷ ಒಂದು ತಿಂಗಳಿಗೆ ಒಂದು ಸಾರಿ ನಮ್ಮ ಊರಿಗೆ ಹೋಗುತ್ತೇನೆ. ಅಲ್ಲಿ ನನ್ನ ತಮ್ಮಂದಿರ ಜೊತೆ ಕುಳಿತುಕೊಂಡು ಮಾತನಾಡಿ, ಏನು ಬೆಳೆದಿರಿ, ಏನು ಮಾಡಿದಿರಿ, ನಮಗೊಂದಿಷ್ಟು ದುಡ್ಡು ಕೊಡುತ್ತೀರಾ ಎಂದು ಕೇಳಿಕೊಂಡು ಬರುತ್ತಿರುತ್ತೇನೆ. ಆಗ ಅವರು ನನ್ನನ್ನೇ ಕೇಳುವುದಕ್ಕೆ ಶುರು ಮಾಡಿ ಬಿಡುತ್ತಾರೆ. ಆಗ ಮೆಲ್ಲಗೆ ಈ ಕಡೆ ಬಂದು ಬಿಡುತ್ತೇನೆ. ನನ್ನನ್ನು ಕೇಳದೇ ಇರಲಿ ಎಂದು ನಾನು ಅಲ್ಲಿಗೆ ಹೋಗುವುದು. ಆದರೆ ಅಕ್ಕಿ, ಬೇಳೆ, ಖಾರದ ಪುಡಿ, ಹುಣಸೆಹಣ್ಣು, ಕಾಳುಗಳು, ತೆಂಗಿನಕಾಯಿ ಎಲ್ಲವನ್ನೂ ಅವರೇ ಕೊಡುತ್ತಾರೆ. ನಾಟಿ ಕೋಳಿಯನ್ನು ಅಲ್ಲಿಂದ ತೆಗೆದುಕೊಂಡು ಬರುವುದಿಲ್ಲ. ಇಲ್ಲೇ ತೆಗೆದುಕೊಳ್ಳುತ್ತೇವೆ. ನಾನು ಏಕೆ ಇದನ್ನೆಲ್ಲ ಹೇಳುತ್ತಿದ್ದೇನೆ ಎಂದರೆ, ರೈತರಿಗೆ ಇಷ್ಟೆಲ್ಲ ಹೇಳಿ ಆಮೇಲೆ ನೀವು ಏನು ಮಾಡಿದಿರಿ? ಜನಗಳಿಗೆ ಟೋಪಿ ಹಾಕತಕ್ಕಂಥ ಕೆಲಸಗಳು ಹೇಗೆ ನಡೆಯುತ್ತವೆ ಎನ್ನುವುದಕ್ಕೆ ಒಂದು ವಿಷಯವನ್ನು ಹೇಳುತ್ತೇನೆ. ಸಾವಯವ ಕೃಷಿ ಎಂದು ಮಾಡಿದ್ದಾರೆ. ಯಾರನ್ನು ಸಾಯಿಸುತ್ತಾರೋ ಗೊತ್ತಿಲ್ಲ. ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳು ಆರ್ಥಿಕ ಪ್ರಗತಿ. 2008–09 ರಲ್ಲಿ 100 ಕೋಟಿ ಇಟ್ಟರು. ಅದರಲ್ಲಿ ಬಿಡುಗಡೆ ಮಾಡಿದ್ದು 48 ಕೋಟಿ, ಖರ್ಚಾದುದು 45 ಕೋಟಿ.

2009–10 ರಲ್ಲಿ 100 ಕೋಟಿ ಇಟ್ಟರು. ಬಿಡುಗಡೆಯಾದುದು 49 ಕೋಟಿ, ಖರ್ಚಾದುದು 34 ಕೋಟಿ. 2010–11 ರಲ್ಲಿ 100 ಕೋಟಿ ಇಟ್ಟರು, ಬಿಡುಗಡೆಯಾದುದು 39 ಕೋಟಿ, ಖರ್ಚಾದುದು 22 ಕೋಟಿ. 2011–12 ರಲ್ಲಿ 200 ಕೋಟಿ ಇಟ್ಟರು, ಅದರಲ್ಲಿ 60 ಕೋಟಿ ಬಿಡುಗಡೆ ಮಾಡಿದರು, ಇಲ್ಲಿಯವರೆಗೆ 44 ಕೋಟಿ ಖರ್ಚಾಗಿದೆ ಎಂದು ಹೇಳುತ್ತಾರೆ. ಬಜೆಟ್‌ನಲ್ಲಿ ಇಟ್ಟಿರುವ 500 ಕೋಟಿಗೆ ಖರ್ಚಾಗಿರುವುದು 147 ಕೋಟಿ. ಬಹಳ expectations ಇಟ್ಟುಕೊಂಡು ಮಾಡಿದಂಥ ಕಾರ್ಯಕ್ರಮವಿದು. ನಾಲ್ಕು ವರ್ಷಗಳಲ್ಲಿ ಒಟ್ಟು ಬಜೆಟ್ ಅಲೋಕೇಷನ್ 500 ಕೋಟಿ, ಅದರಲ್ಲಿ ಖರ್ಚು ಮಾಡಿರುವುದು 147 ಕೋಟಿ. ಈ 147 ಕೋಟಿ ಯಾವುದಕ್ಕೆ ಖರ್ಚಾಗಿದೆ ಗೊತ್ತೇ? ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಅವರಿಗೆ ಟಿ.ಎ/ಡಿ.ಎ ಕೊಡುವುದಕ್ಕೆ ಖರ್ಚು ಮಾಡಿರುವುದು ಇದು. ಎಲ್ಲೂ ಸಾವಯವ ಗೊಬ್ಬರವನ್ನು ನಿರ್ಮಾಣ ಮಾಡಿಲ್ಲ. ಸಾವಯವ ಬೆಳೆಯನ್ನೂ ತೆಗೆದಿಲ್ಲ. ಅದಕ್ಕೆ ಎಲ್ಲೂ ಜಮೀನನ್ನು ಅಳವಡಿಸಿಲ್ಲ. ಏನೂ ಮಾಡಿಲ್ಲ. ಎಲ್ಲ ಬರೀ ಸಂಬಳ–ಸಾರಿಗೆಗೆಳಿಗೆ ಹೋಗಿದೆ. ರಾಜ್ಯ ಮಟ್ಟದಲ್ಲಿ ಸಾವಯವ ಕೃಷಿ ಮಿಷನ್‌ಗೆ ಒಬ್ಬರು ಅಧ್ಯಕ್ಷರಿದ್ದಾರೆ. ಒಬ್ಬ R.S.S. ಕಾರ್ಯಕರ್ತನಿಗೆ accommodate ಮಾಡಬೇಕಾಗಿತ್ತು, ಅದಕ್ಕೆ ಇದನ್ನು ಮಾಡಿ ಕುಳಿತುಕೊಂಡು ಬಿಟ್ಟರು. ಈ ಎಲ್ಲ ಅಂಕಿ ಅಂಶಗಳನ್ನು ರವಿಯವರಿಗೆ ಮನದಟ್ಟಾಗಲಿ ಎಂದು ಪದೇ ಪದೇ ಹೇಳುತ್ತಿದ್ದೇನೆ. ಅವರು ನಮ್ಮ ಒಳ್ಳೆಯ ಫ್ರೆಂಡ್. ಬೆಂಗಳೂರು ಯೂನಿವರ್ಸಿಟಿ ವಿಷಯದಲ್ಲಿ ಅವರು ಬಹಳ ಕಷ್ಟಕ್ಕೆ ಸಿಕಿಹಾಕಿಕೊಂಡುಬಿಡುತ್ತಾರೆ. ಅಲ್ಲಿಯ ವೈಸ್ ಚಾನ್ಸಲರ್ ಮತ್ತು ರಿಜಿಸ್ಟ್ರಾರ್‌ರವರು ಭಾರತ ಪಾಕಿಸ್ತಾನ ಇದ್ದ ಹಾಗೆ ಇದ್ದಾರೆ. ಅವರಲ್ಲಿ ಒಬ್ಬರ ಮೇಲಾದರೂ ನೀವು ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಯೂನಿವರ್ಸಿಟಿಯ ಮರ್ಯಾದೆ ಹಾಳಾಗಿ ಬಿಡುತ್ತದೆ. ಒಂದು Academic council meeting ಮಾಡುವುದಕ್ಕೆ ಆಗುವುದಿಲ್ಲ. ಒಂದು Syndicate meeting ಮಾಡುವುದಕ್ಕೆ ಆಗುವುದಿಲ್ಲ. ಇಬ್ಬರೂ ಜಗಳವಾಡುತ್ತಾರೆ. ರಿಜಿಸ್ಟ್ರಾರ್ ಆದ ಮೈಲಾರಪ್ಪ, ಒಂದು ಕಡೆ, ವೈಸ್ ಚಾನ್ಸಲರ್ ಆದ ಪ್ರಭುದೇವ ಒಂದು ಕಡೆ. Bangalore University, such a reputed University. ಅದರ ಮರ್ಯಾದೆಯನ್ನು ಹಾಳು ಮಾಡಿ ಬೀದಿ ಪಾಲು ಮಾಡಿಬಿಟ್ಟರು. Don't you think so? ರವಿಯವರೇ, ನೀವು

ಹೊಸದಾಗಿ ಹುರುಪಿನಿಂದ ಬಂದಿದ್ದೀರಿ, ನೀವಾದರೂ ಸ್ವಲ್ಪ ನೋಡಿ ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಿರಿ. ಕೃಷಿ ಬಂಡವಾಳ ಹೂಡಿಕೆ ಎಂದು ಬಜೆಟ್‌ನಲ್ಲಿ ಹೊಸ ಕಾರ್ಯಕ್ರಮಗಳು 2010–11 ರಲ್ಲಿ ಹೇಳಿದರು. ಬಜೆಟ್‌ನಲ್ಲಿ ಇಟ್ಟಿರುವುದು 50 ಕೋಟಿ, ಬಿಡುಗಡೆಯಾಗಿರುವುದು 23 ಕೋಟಿ. ಉಳಿದ 27 ಕೋಟಿ ಬಿಡುಗಡೆ ಮಾಡಲಿಲ್ಲ. Micro ನೀರಾವರಿ ಮಂಡಳಿಗೆ 10 ಕೋಟಿ ಇಟ್ಟರು. ಆದರೆ ಅದನ್ನು ಬಿಡುಗಡೆ ಮಾಡಲಿಲ್ಲ. ಹೋದ ವರ್ಷ ಸುವರ್ಣ ಭೂಮಿಯಲ್ಲಿ 10 ಲಕ್ಷ ಜನರಿಗೆ ಕೊಡುತ್ತೇವೆಂದು ಮೊದಲನೆ ಕಂತಿಗೆ 300 ಕೋಟಿ ಇಟ್ಟರು. ಆದರೆ ಖರ್ಚು ಮಾಡಿದ್ದು 247 ಕೋಟಿ. Second installment has not been released. ಇದನ್ನು ನೀವು 2008–09 ರಿಂದ 2011–12 ನೇ ಸಾಲಿಗೆ ಹೊಸ ಯೋಜನೆಗಳೆಂದು ಕೊಟ್ಟಿರುವುದು. ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆಗಾಗಿ 62 ಕೋಟಿ ಇಟ್ಟರು. ಇದರಲ್ಲಿ ಖರ್ಚು ಮಾಡಿದ್ದು 9 ಕೋಟಿ 98 ಲಕ್ಷ. 62 ಕೋಟಿ ಬಜೆಟ್‌ನಲ್ಲಿಟ್ಟುಬಿಟ್ಟು 9 ಕೋಟಿ 98 ಲಕ್ಷ ಖರ್ಚು ಮಾಡಿರುವುದು, ಇವು ಏಕೆ ಬೋರ್ಡ್‌ಗಳನ್ನು ಬರೆಸಿಕೊಳ್ಳಲಿಕ್ಕೆ. ಇದು ಪ್ರತ್ಯೇಕ ಕೃಷಿ ಬಜೆಟ್. ನಾನು ಹೀಗೆ ಬೇಕಾದಷ್ಟು ಹೇಳಬಹುದು, ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ ನಿಮಗೂ ಸಮಯವಿಲ್ಲ, ನಮ್ಮ ಮುಖ್ಯಮಂತ್ರಿಗಳು ಮನಸ್ಸಿನೊಳಗೆ ನನ್ನ ಬಯ್ದುಕೊಳ್ಳುತ್ತಾರೆ. ಇವತ್ತು ಮುಗಿಸಿ ಬಿಡುತ್ತೇನೆ. ಮುಗಿಸಿ ಬಿಡಬಹುದಲ್ಲವೆ? ಇವತ್ತು ಎಷ್ಟು ಹೊತ್ತಾದರೂ ಮುಗಿಸೋಣವೆ? ಭಾವನಾತ್ಮಕವಾಗಿ ಇರಬೇಡಿ. ವರಮಹಾಲಕ್ಷ್ಮಿ ಹಬ್ಬ ಮುಗಿದು ಹೋಯಿತು. ಅದರೊಳಗಡೆ ಕೊಡಬೇಕೆಂದರೆ ಮಧ್ಯಾಹ್ನದೊಳಗೆ ಕೊಡಬೇಕಾಗಿತ್ತು. ಈಗ ಕೊಟ್ಟರೆ ಏನು ಪ್ರಯೋಜನ? ಈಗ ಲಕ್ಷ್ಮಿ ಕೋಪಿಸಿಕೊಂಡು ಬಿಡುತ್ತಾಳೆ.

ಶ್ರೀ ಸಿದ್ದು ಸವದಿ : – ಇವತ್ತು ಮುಗಿಸೋಣ.

ಶ್ರೀ ಸಿದ್ದರಾಮಯ್ಯ : – ರೀ ಸವದಿ, ನೀನು ಅಲ್ಲಿ ಕುಳಿತು ಜಾಸ್ತಿ ಮಾತನಾಡಿ ಎಂದು ನನಗೆ ಹೇಳಿ ಹೀಗೆ ಹೇಳಿದರೆ ಹೇಗೆ? ನಾನು ಇದನ್ನು ಏಕೆ ಹೇಳುತ್ತೇನೆಂದರೆ, ಈಗ ನಮ್ಮ ಮುಖ್ಯಮಂತ್ರಿಗಳು ಇದ್ದಾರೆ, ಆದರೆ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರಾದ ಕಾಗೇರಿಯವರು ಇಲ್ಲ. 18 ಸಾವಿರ ಪೋಸ್ಟ್‌ಗಳು ಖಾಲಿ ಇವೆ. Both in primary schoos, High schoos and Junior Colleges, more than 18 thousand posts are vacant. ಏಕೆ

ಇವುಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ? ಒಂದು ಕಡೆ Right to Education Act implement ಮಾಡಬೇಕು. ಈ ವರ್ಷ ಅದನ್ನು ಸರಿಯಾಗಿ ಮಾಡಲಿಲ್ಲ. because ಬದ್ಧತೆ ಇಲ್ಲ. They have no commitment at all. ನೀವು implement ಮಾಡಿ ದುಡ್ಡು ನಾವು ಕೊಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳಿದರು ಇವರ ಕೈಯಲ್ಲಿ ಮಾಡುವುದಕ್ಕೆ ಆಗಿಲ್ಲವೆಂದರೆ what commitment they have?

ಶ್ರೀ ಬಿ. ರಮಾನಾಥ ರೈ : – ಕಟ್ಟಡ ಕಟ್ಟುವುದಕ್ಕೆ ದುಡ್ಡು ಕೊಡುತ್ತಾರೆ, Fee ಕೊಡುತ್ತಾರೆ, ಸರ್ವ ಶಿಕ್ಷಣ ಅಭಿಯಾನದಲ್ಲಿ ದುಡ್ಡು ಕೊಡುತ್ತಾರೆ. ಇವರಿಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಏನು ತೊಂದರೆ?

ಶ್ರೀ ಸಿದ್ದರಾಮಯ್ಯ : – ಅದಕ್ಕೆ ನಾನು ಏಕೆ ಹೇಳುತ್ತಿದ್ದೇನೆಂದರೆ, ಇಷ್ಟೆಲ್ಲಾ ಕೇಂದ್ರ ಸರ್ಕಾರ ನಿಮಗೆ ಸವಲತ್ತುಗಳನ್ನು ಕೊಡುತ್ತಿದ್ದರೂ ಸಹ ನೀವು ಏಕೆ ಹೀಗೆ ಮಾಡುತ್ತಿದ್ದೀರಿ? ಏಕೆ implement ಮಾಡಲಿಲ್ಲ? ಯಾರ pressure ಗೆ ಒಳಗಾಗಿದ್ದೀರಿ? ಯಾರ ಮುಲಾಜಿಗೆ ಒಳಗಾಗಿದ್ದೀರಿ? ಮೊನ್ನೆ ನಮ್ಮ ತುಕಾರಾಂರವರು ಮತ್ತು ಎನ್.ಸಂಪಂಗಿಯವರು ಇಬ್ಬರೂ ಒಂದು ಪ್ರಶ್ನೆ ಹಾಕಿದ್ದರು. ಪ್ರಾಥಮಿಕ ಶಾಲೆಗಳಲ್ಲಿ ತುಕಾರಾಂ ರವರ ಕ್ಷೇತ್ರದಲ್ಲಿ ಸುಮಾರು 176 ಶಿಕ್ಷಕರುಗಳು ಇಲ್ಲ, ಎನ್.ಸಂಪಂಗಿಯವರ ಕ್ಷೇತ್ರದಲ್ಲಿ 300 ಜನ ಶಿಕ್ಷಕರುಗಳು ಇಲ್ಲವಂತೆ. ಅದಕ್ಕೆ ಅವರೇನು ಹೇಳಿದರು? ಮುಖ್ಯಮಂತ್ರಿಗಳು ಬರಲಿ. ಏಕೆಂದರೆ ಹಣಕಾಸಿನ ಇಲಾಖೆ ಅವರ ಹತ್ತಿರ ಇದೆ, ನನ್ನ ಹತ್ತಿರ ಇಲ್ಲ ಎಂದರು.

ಶ್ರೀ ಜಗದೀಶ್ ಶೆಟ್ಟರ್ : – ನಾನು ಉತ್ತರ ಕೊಡುವಾಗ ಗೆಸ್ಟ್ ಟೀಚರ್ಸ್ ತಗೆದುಕೊಳ್ಳುವಂತೆ ಹೇಳಿದೆ, ಆಗ ಮಾನ್ಯ ಜಯಚಂದ್ರರವರು ಇದ್ದರು. ಬೇಕಾದರೆ ಕೇಳಿ.

ಶ್ರೀ ಸಿದ್ದರಾಮಯ್ಯ : – ಕೊಟ್ಟಿದ್ದರೆ ನೀವು ದುಡ್ಡು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರೆ ನಿಮಗೆ ಧನ್ಯವಾದಗಳು. ಅವತ್ತು ಏನಾಯಿತು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಬರಲಿ ಅವರು ಇದ್ದರೆ ಒಳ್ಳೆಯದು ಎಂದು ಹೇಳಿದ್ದೆವು. ನೀವು ಇದು ಮುಗಿದ ಕೂಡಲೇ ಆ ಎಲ್ಲವನ್ನೂ ಭರ್ತಿ ಮಾಡಲಿಕ್ಕೆ ತಕ್ಷಣಕ್ಕೆ ಗೆಸ್ಟ್ ಟೀಚರ್ಸ್ ನೇಮಕಾತಿ ಕೂಡಲೇ ಮಾಡಿ. ಈಗ ನಿಮಗೆ ರಿಟೈರ್ಡ್ ಟೀಚರ್ಸ್ ಸಿಗುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ರಿಟೈರ್ಡ್ ಆದವರು ಸಿಕ್ಕುವುದಿಲ್ಲ. ಅದಕ್ಕೆ ನಾವು ಏನು ಸಲಹೆ ಕೊಟ್ಟೆವು ಎಂದರೆ, ಡಿ.ಎಡ್., ಆದವರನ್ನು ಹೊಸಬರನ್ನೇ ತೆಗೆದುಕೊಳ್ಳಿ ಎಂದು ಹೇಳಿದೆವು.

ಶ್ರೀ ಸಿದ್ದರಾಮಯ್ಯ :– ನನಗೆ ಸ್ವಲ್ಪ ಅವರಷ್ಟು ಅನುಭವ ಇಲ್ಲ. ರಿಟೈರ್ಡ್ ಟೀಚರ್ಸ್ ಸಿಕ್ಕದೇ ಹೋದರೆ ಹೊಸಬರನ್ನೇ ಡಿ.ಎಡ್. ಮಾಡಿದ್ದರೆ, ಬಿ.ಎಡ್. ಮಾಡಿದ್ದರೆ ಅವರನ್ನು ಕೂಡಲೇ ಭರ್ತಿ ಮಾಡಿಕೊಳ್ಳಿ. ನಂತರ ನೀವು ರೂಲ್ಸ್ ಫ್ರೇಮ್ ಮಾಡಿಕೊಂಡು ಏನೇನು ಮಾಡಿಕೊಳ್ಳಬೇಕೋ ಆ recruitment procedures ಏನು ಇದೆ ಅದನ್ನು adopt ಮಾಡಿಕೊಂಡು, reservation policy adopt ಮಾಡಿಕೊಂಡು, ಅವೆಲ್ಲಾ ಮಾಡಿ. ಇಲ್ಲದೇ ಹೋದರೆ we can not give quality education and the purpose of the Right to Education Act is going to be defeated. ಅವರು ಯಾರೋ KUSMA ರವರು ಪ್ರತಿಭಟನೆ ಮಾಡಿದರು ಎಂದು ಬಿಟ್ಟೇ ಬಿಟ್ಟರು. Private institution ನವರು 25% admission ಮಾಡಿಕೊಳ್ಳಬೇಕು. ಇವತ್ತು ಮಾಡಿದ್ದರೆ ಆ ಬಡವರ ಮಕ್ಕಳಿಗೆ quality education ಸಿಗುವುದಕ್ಕೆ ಅನುಕೂಲವಾಗುತ್ತಿರಲಿಲ್ಲವೆ? Why have you not done it? What made them to have compromise with the private Management? ಅವರು ಚಳುವಳಿ ಮಾಡುತ್ತೇವೆಂದರೆ ಹೆದರಿಕೊಳ್ಳುವುದೆ? Police ಗೆ ಎಷ್ಟು ದುಡ್ಡು ಖರ್ಚು ಮಾಡುವುದು? ಕಾನೂನುಗಳೇನಿವೆ ಅವುಗಳನ್ನು ಜಾರಿ ಮಾಡಿ. ನಾವು ಯಾವುದೋ ಬಲಾತ್ಕಾರವಾಗಿ illegal ಆಗಿ ಮಾಡಿ ಬಲ ಉಪಯೋಗಿಸಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. Legal ಆಗಿ ಮಾಡಿ. ಮಾಡಬಹುದಾಗಿತ್ತಲ್ಲಾ? ಬಡವರ ಮಕ್ಕಳಿಗೆ ಹಳ್ಳಿಯವರ ಮಕ್ಕಳಿಗೆ ದಲಿತರ ಮಕ್ಕಳಿಗೆ ಹಿಂದುಳಿದವರ ಮಕ್ಕಳಿಗೆ ಅಲ್ಪಸಂಖ್ಯಾತರ ಮಕ್ಕಳಿಗೆ ಸಿಗುತ್ತಿತ್ತಲ್ಲ? ಇವರು ಪಾಪ quality education ಸಿಗಬೇಕು, ಕಡ್ಡಾಯ ಶಿಕ್ಷಣ ಆಗಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿರುವುದು. ಇದನ್ನು ಮಾಡುವುದಕ್ಕೆ ಆಗಲಿಲ್ಲವೆಂದ ಮೇಲೆ ಇವರು ಏನು ಮಾಡುತ್ತಾರೆಂದು ನಾವು ಇವರನ್ನು ನಂಬಿಕೊಳ್ಳಬೇಕು. ಇದು ಕೂಡ ಆಗಲಿಲ್ಲ. ಶಿಕ್ಷಣ ಬಿದ್ದು ಹೋಗಿದೆ. Higher Education ಅವಾಂತರ. Vice Chancellors, Registrars ಬೀದಿಗೆ ಬಂದು ಜಗಳವಾಡಿಕೊಂಡು ಕುಳಿತಿದ್ದಾರೆ. ನಾಚಿಕೆಯಾಗುತ್ತದೆ. ಮೊದಲು

ನಾವೆಲ್ಲಾ ಓದುವಾಗ Vice Chancellors ಎಂದರೆ ನಾವು ಬಹಳ ಎತ್ತರದ ಸ್ಥಾನದಲ್ಲಿಟ್ಟು ನೋಡುತ್ತಿದ್ದೆವು. Today, ಬೀದಿ ರಂಪ ಜಗಳವಾಡಿಕೊಂಡು ಕುಳಿತು ಬಿಟ್ಟಿದ್ದಾರೆ. ನಾವು ಓದುವಾಗ Mysore University ಯಲ್ಲಿ ಎಂತೆಂಥ Vice Chancellors ಇದ್ದರು? ಪಾವಟಿಯವರು, ರಾಧಾ ಕೃಷ್ಣನ್‌ರವರು, ಕುವೆಂಪುರವರು, ಗೋಕಾಕ್‌ರವರು, ನರಸಿಂಹಯ್ಯನವರು, ಅವರೆಲ್ಲಿ? ಇವರೆಲ್ಲಿ? ಮಾನ್ಯ ನಂಜುಂಡಪ್ಪರವರು ಸಹ ಆಗಿದ್ದರು, above Board. ಆಗ academic standard ಬಹಳ ಎತ್ತರದಲ್ಲಿತ್ತು. Integrity, honesty, commitment, where is it? ಇದೆಲ್ಲ ಒಬ್ಬರಲ್ಲಿಯೂ ಕಾಣಿಸುತ್ತಿಲ್ಲ Education ಈ ರೀತಿಯಾಗಿದೆ. ಹಿಂದುಳಿದ ವರ್ಗದ ಆಯೋಗಕ್ಕೆ ಎರಡು ವರ್ಷದಿಂದ permanent Chairman ಅನ್ನು ಮಾಡಿರಲಿಲ್ಲ. ದ್ವಾರಕಾನಾಥ್ ರಾಜೀನಾಮೆ ಕೊಟ್ಟ ನಂತರ ಎರಡು ವರ್ಷಗಳಿಂದ ಮಾಡಿಲ್ಲ. ಈಗ Chairman ಮಾಡಿದ್ದಾರೆ. ಆದರೆ, ಅದಕ್ಕೆ ಒಬ್ಬ Secretary ಇಲ್ಲ. There is no Secretary to Backward Classes Commission. I suggest, Secretary to the Government level ಒಬ್ಬರನ್ನು ಅಲ್ಲಿಗೆ Secretary ಆಗಿ ಮಾಡಬೇಕು. Otherwise, ಅಲ್ಲಿ ಏನೂ ಕೆಲಸ ನಡೆಯುವುದಿಲ್ಲ. ಅವರಿಗೆ ಜಾತಿವಾರು ಸಮೀಕ್ಷೆ ಮಾಡುವುದಕ್ಕೆ ಜವಾಬ್ದಾರಿ ಕೊಟಿದ್ದೇವೆ. 2004–05 ರಲ್ಲಿ ನಾನು ಅದನ್ನು ಉದ್ಘಾಟನೆ ಮಾಡಿ ಸರ್ವೆ ಮಾಡುವುದಕ್ಕೆ 22 ಕೋಟಿ ರೂಪಾಯಿ ದುಡ್ಡು ಇಟ್ಟು ಬಂದೆ. ಆದರೆ, ಇವತ್ತಿನವರೆಗೆ ಸರ್ವೆ ಮಾಡಿಲ್ಲ. ಜಾತಿ ಸಮೀಕ್ಷೆ ಆಗಬೇಕು. Socio-economic conditions survey ಆಗಬೇಕು. After the independence where everybody is standing. ಅವರ socio economic-standard ಏನೆಂಬುದು ಗೊತ್ತಾಗಬೇಕು. Educationwise, Employment wise, industry ನಲ್ಲಿ ಎಲ್ಲಿದ್ದೇವೆಂಬುದು ಗೊತ್ತಾಗಬೇಕಲ್ಲವೆ? ಎಷ್ಟು ಜನ ಡಾಕ್ಟರ್‌ಗಳು, ಎಷ್ಟು ಜನ ಇಂಜಿನಿಯರ್‌ಗಳು, ಎಷ್ಟು ಜನ ಐ.ಎ.ಎಸ್, ಎಷ್ಟು ಜನ Scientist ಗಳಿದ್ದಾರೆಂಬುದು ಗೊತ್ತಾಗಬೇಕಲ್ಲವೆ? ಏಕೆಂದರೆ permanent Backward classes Commission ಮಾಡಿರುವುದೇ elimination and additional process ಮಾಡುವುದಕ್ಕೋಸ್ಕರ. ನಿಮಗೆ ಯಾವುದೂ ಪಕ್ಕ ಮಾಹಿತಿ ಇಲ್ಲದೇ ಇದ್ದರೆ how can you do it? The entire purpose will be defeated.

We can't do social justice to the depressed and oppressed classes and those who are denied justice. ಯಾರು ಅಕ್ಷರ ಸಂಸ್ಕೃತಿಯಿಂದ ಇಷ್ಟು ವರ್ಷಗಳ ಕಾಲ ದೂರ ಉಳಿದಿದ್ದರೋ ಅವರಿಗೆ ನ್ಯಾಯ ಸಿಗಬೇಕೆಂದು ಸಂವಿಧಾನದಲ್ಲಿ ಹೇಳಿಕೊಳ್ಳಲಾಗಿದೆ ಅಲ್ಲವೇ? ಸರ್ವರಿಗೂ ಸಮ ಪಾಲು ಸಮ ಬಾಳು ಎಂದು ಹೇಳಲಾಗಿದೆ. For that purpose only ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ರಾಜ್ಯ ಸರ್ಕಾರದಿಂದ ನಾನು 2 ಕೋಟಿ ಮತ್ತು ಕೇಂದ್ರ ಸರ್ಕಾರ 21 ಕೋಟಿ ತರಿಸಿ ಒಟ್ಟು 23 ಕೋಟಿ ರೂಪಾಯಿ ಇಟ್ಟು ಅದನ್ನು ಉದ್ಘಾಟನೆ ಮಾಡಿ ಬಂದೆ. ಹಣ ಕೊಟ್ಟು ಇಲ್ಲಿಗೆ ಸುಮಾರು 7 ವರ್ಷಗಳಾಗಿದೆ.. 7 ವರ್ಷಗಳಿಂದ ಕೆಲಸ ನಿಂತು ಹೋಗಿದೆ. ಇದಕ್ಕೆ ಯಾರು ಜವಾಬ್ದಾರಿ? ಇವರು ಬಂದು ನಾಲ್ಕು ವರ್ಷ ಆಗಿದೆ ಮತ್ತೆ ಸಮ್ಮಿಶ್ರ ಸರ್ಕಾರ ಬಂದು 20 ತಿಂಗಳು ಇದ್ದರೂ ಸಹ ಇದುವರೆಗೆ ಏನೂ ಆಗಿಲ್ಲ. ಮಾನ್ಯ ನಾರಾಯಣಸ್ವಾಮಿಯವರೆ, ನಾನು ಹೇಳುವುದೇನೆಂದರೆ ಕೂಡಲೇ ಒಬ್ಬರು Secretary to the permanent Backward class Commission.

ಶ್ರೀ ನಾರಾಯಣಸ್ವಾಮಿ : – ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿಗೆ ಕಾರ್ಯದರ್ಶಿಯನ್ನು ಕೊಟ್ಟಿದ್ದೇವೆ. ಮತ್ತೆ ಇಲಾಖೆಯನ್ನು ಪ್ರತ್ಯೇಕ ಮಾಡಿ ಅಲ್ಲಿಗೂ ಕೂಡ ಒಬ್ಬ ಕಾರ್ಯದರ್ಶಿಯವರನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಅಲ್ಲಿ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎ.ನಾರಾಯಣ ಸ್ವಾಮಿ : – ಈಗಾಗಲೇ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಯಾವಾಗ ಮಾಡಿದ್ದೀರಿ? ಇನ್ನೂ ಮಾಡುತ್ತಿದ್ದೀರೋ ಅಥವಾ ಈಗಾಗಲೇ ಮಾಡಿ ಆಗಿದೆಯೋ?

ಶ್ರೀ ಎ.ನಾರಾಯಣ ಸ್ವಾಮಿ : – ಈಗಾಗಲೇ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – Secretary ಯಾರು?

ಶ್ರೀ ಎ.ನಾರಾಯಣ ಸ್ವಾಮಿ : – ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಮಾಡಿದರೆ ಸಂತೋಷ. ಜಿಲ್ಲಾ ಮಟ್ಟದಲ್ಲಿರುವ ಹಿಂದುಳಿದ ಇಲಾಖೆಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಇಲ್ಲ. ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ವರ್ಗ

ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗೆ ಹಣ ಕೊಡುತ್ತೇವೆ. ಆದ್ದರಿಂದ, ಎಷ್ಟು ಬೋರ್‌ವೆಲ್‌ಗಳನ್ನು ಮಂಜೂರು ಮಾಡಿ ಎಷ್ಟು ಬೋರ್‌ವೆಲ್‌ಗಳನ್ನು ತೋಡಿಸಿದ್ದೇವೆಂಬುದು ಮತ್ತು ಎಷ್ಟು electrification ಆಗಿದೆ ಎಂಬುದನ್ನು ನೋಡಿದರೆ ಬಹಳ ನಿರಾಶದಾಯಕವಾದ ಚಿತ್ರ ಅಲ್ಲಿದೆ. Most hopeless performance ಅಲೊಕೇಶನ್ ಕೂಡ ಕಡಿಮೆ ಇದೆ. ಒಂದು ಕ್ಷೇತ್ರಕ್ಕೆ 9–10 ಕೊಡುತ್ತೀರಿ. ಕೇವಲ 5 ಕೊಡುತ್ತಿದ್ದಾರಾ? ನಮ್ಮ ಕ್ಷೇತ್ರಕ್ಕೆ 9–10 ಸಿಕ್ಕಿವೆ.

ಶ್ರೀ ಎ.ನಾರಾಯಣ ಸ್ವಾಮಿ : – ಕಳೆದ ವರ್ಷದಿಂದ ಜಾಸ್ತಿ ಮಾಡಿದ್ದೇವೆ. ಈ ವರ್ಷ ಕೂಡ ಜಾಸ್ತಿ ಮಾಡಿದ್ದೇವೆ. ಕಳೆದ ವರ್ಷ ಪ್ರತಿ ಕ್ಷೇತ್ರಕ್ಕೆ 17 ಹೆಚ್ಚುವರಿಯಾಗಿ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : – ನಮ್ಮ ಕ್ಷೇತ್ರಕ್ಕೆ ಕೊಟ್ಟಿಲ್ಲ.

ಶ್ರೀ ಎ.ನಾರಾಯಣ ಸ್ವಾಮಿ : – ನಿಮಗೂ ಸಹ ಕೊಟ್ಟಿದ್ದೇವೆ. ಎಲ್ಲರಿಗೂ ಸಮಾನವಾಗಿ ಹಂಚಿದ್ದೇವೆ.

ಶ್ರೀ ಸಿದ್ದರಾಮಯ್ಯ :– ಎಲ್ಲಾ ಹಳ್ಳಿಗಳಿಗೆ ಹಂಚಿದ್ದೀರಾ?

ಶ್ರೀ ಎ.ನಾರಾಯಣ ಸ್ವಾಮಿ :– ಸಮಾನವಾಗಿ ಹಂಚಲಾಗಿದೆ.

ಶ್ರೀ ಸಿದ್ದರಾಮಯ್ಯ : – ನನ್ನ ಪ್ರಕಾರ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ 50 ಕೊಡಿ. ಪರಿಶಿಷ್ಟ ಜಾತಿಯವರಿಗೆ 100 ಕೊಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : – ಹಳೆಯದನ್ನೇ ಇನ್ನೂ ಕೊರೆದಿಲ್ಲ. ಎರಡು–ಮೂರು ವರ್ಷಗಳಿಂದ ಪೆಂಡಿಂಗ್ ಇವೆ. ಅದರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಮತ್ತೇ ಇರುವ ಗುತ್ತಿಗೆದಾರರಿಗೇ ಮತ್ತೆ ಕೊಡುತ್ತೀರಿ. ಅವರು ಬೋರ್‌ವೆಲ್ ಅನ್ನು ಕೊರೆಯುವುದಿಲ್ಲ. ಇದೊಂದು ದೊಡ್ಡ ಹಿಂಸೆಯಾಗಿದೆ. ಮುಂದಕ್ಕೆ ಕೊಡುವುದು ಇರಲಿ, ಮೊದಲು ಹಳೆಯದನ್ನು ಕೊರೆಸಿ. No Water, No Money scheme ತಂದಿರುವುದರಿಂದ ಅವರು ಬೋರ್‌ವೆಲ್ ಕೊರೆಯುತ್ತಿಲ್ಲ. 5–10 ಸಾವಿರ ರೂಪಾಯಿ ಕೊಡಿ ಎಂದು ರೈತರ ಹತ್ತಿರ ಕೇಳುತ್ತಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : – No Water, No Money scheme ಇರುವುದರಿಂದ ಯಾರೂ ಮುಂದೆ ಬರುತ್ತಿಲ್ಲ. ಆದ್ದರಿಂದ, ಇದನ್ನು ತೆಗೆಯಿರಿ.

ಶ್ರೀ ಸಿದ್ದರಾಮಯ್ಯ : – ಮಾನ್ಯ ನಾರಾಯಣ ಸ್ವಾಮಿಯವರೆ, No Water, No Money scheme ಎಂದು ಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: – ಆ ಸ್ಕೀಂ ಇರುವುದರಿಂದಲೇ ಯಾರೂ ಬರುತ್ತಿಲ್ಲ. ಆದ್ದರಿಂದ ಅದನ್ನು ತೆಗೆಯಬೇಕೆಂದು ಹೇಳುತ್ತಿದ್ದೇವೆ. ಈ ಸ್ಕೀಂ ಇರುವುದರಿಂದ ಬೋರ್‌ವೆಲ್ ಕೊರೆಯುವುದಕ್ಕೆ ಯಾರೂ ಬರುತ್ತಿಲ್ಲ.

ಶ್ರೀ ಸಿದ್ದರಾಮಯ್ಯ:– ಹಾಗಾದರೆ, ಬೇರೆ ತರಹ ಮಾಡುವುದಕ್ಕೆ ಯೋಚನೆ ಮಾಡಿ. ಈಗ ಏನಾಗಿದೆ ಎಂದರೆ ಡ್ರಿಲ್ ಮಾಡಿದರೆ ನೀರು ಬರುವುದಿಲ್ಲ. ಆದರೆ, ದುಡ್ಡು ತಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಹೆಚ್.ಸಿ.ಮಹದೇವಪ್ಪ : – ನೀರು ಬಾರದೆ ಇದ್ದಾಗ ಇನ್ನೊಂದು ಬೋರ್‌ವೆಲ್ ಅವರಿಗೆ ಕೊಡುವುದಿಲ್ಲ.

ಶ್ರೀ ಅಮರೇಶ್ : – ಮಾನ್ಯ ಅಧ್ಯಕ್ಷರೆ, ಹಿಂದುಳಿದ ಅಭಿವೃದ್ಧಿ ನಿಗಮದಲ್ಲಿ. . .

ಅಧ್ಯಕ್ಷರು : – ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : – ಅವರು ಮಾತನಾಡಬೇಕೆಂದು ಇದ್ದರು. ಆದ್ದರಿಂದ ಅವರಿಗೆ ಕ್ಲಾರಿಫಿಕೇಷನ್ ಸಂದರ್ಭದಲ್ಲಿ ಅವರಿಗೆ ಅವಕಾಶ ಕೊಡಬೇಕು.

ಶ್ರೀ ಅಮರೇಶ್ : – ಹಿಂದುಳಿದ ಅಭಿವೃದ್ದಿ ನಿಗಮ ಮತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸಾಲ ತೆಗೆದುಕೊಂಡಿರುವವರಿಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಸಾಲ ಮನ್ನಾ ಮಾಡಿಲ್ಲ. ಅಲ್ಲಿ ಸುಮಾರು 10 ರಿಂದ 20 ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಅಲ್ಲಿನ ಯಾವುದೇ ಸಾಲವನ್ನು ಮನ್ನಾ ಮಾಡಿಲ್ಲ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಪರಿಗಣಿಸಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಳೆದ ಸಾರಿ 760 ಕೋಟಿ ರೂಪಾಯಿಯನ್ನು ಹಿಂದುಳಿದ ವರ್ಗದವರಿಗೆ ಇಟ್ಟಿದ್ದೆವು. ಈ ಸಾರಿ ಒಂದು ಸಾವಿರ ಕೋಟಿ ರೂಪಾಯಿ ಇಟ್ಟಿದ್ದೇವೆಂದು ಪ್ರಚಾರ ಗಿಟ್ಟಿಸಿದ್ದೀರಿ. ಅಲ್ಲಿ ದುಡ್ಡು ಸಹ ಖರ್ಚಾಗಿರುವುದಿಲ್ಲ.ಮತ್ತೇ ಅಧಿಕಾರಿಗಳು ಸಹ ಅಲ್ಲಿಲ್ಲ. Allocation is not

important. How much money is spent? ಎಷ್ಟು ಹಣ ಬಿಡುಗಡೆ ಆಗಿದೆ, revised estimate ನಲ್ಲಿ ಎಷ್ಟು ಮಾಡಿಕೊಂಡಿದ್ದಾರೆಂಬುದನ್ನು ಮತ್ತು ಬಿಡುಗಡೆ ಮಾಡಿ ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ನಾನು ಓದಿ ಹೇಳಿದ್ದು ಈ ಕಾರಣಕ್ಕೋಸ್ಕರ. ಕಳೆದ ವರ್ಷ ಕೃಷಿಗಾಗಿ 1700 ಕೋಟಿ ಇದ್ದರೆ ಖರ್ಚಾಗಿರುವುದು ಕೇವಲ 654 ಕೋಟಿ ರೂಪಾಯಿ ಮಾತ್ರ. ಅಂದರೆ 38% ನಷ್ಟು ಮಾತ್ರ ಆಗಿದೆ. ಅದೇ ತರಹ ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಆಗಿದೆ. ಬಜೆಟ್‌ನಲ್ಲಿ ಇಷ್ಟು ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳಿ ಅಲ್ಲಿ ಖರ್ಚು ಮಾಡಿರುವುದನ್ನು ನೋಡಿದರೆ not even 35% of it. ಅಲೊಕೇಶನ್ ಮತ್ತು expenditure ಗೆ ಸಂಬಂಧ ಇರಬೇಕು, 5%, 10% ಮಾಡಲಿಲ್ಲವೆಂದರೆ, I can understand that it is not possible. 100% ಮಡುವುದಕ್ಕೆ ಆಗುವುದಿಲ್ಲ. Because Whatever money is allocated in the budget it is estimated allocation. It will be more than that or it will be less than that. Sometimes you have to go for the revised estimated also. But, the question is it cannot be abnormal. Abnormal ಆಗಿ ಇರಬಾರದು. ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತೇನೆಂದರೆ, ನೀವು ಎಷ್ಟು ಹಣವನ್ನು ಇಡುತ್ತೀರೋ ಅದರಲ್ಲಿ 5 ರಿಂದ 10% O.K, It cannot be more than 50%.

ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) : – ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಅನೇಕ ವರ್ಷಗಳಿಂದ ಹಿಂದುಳಿದ ವರ್ಗದವರ ಬಗ್ಗೆ ಸಾಕಷ್ಟು ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ. ಈಗ ನನ್ನ ಕಳಕಳಿಯ ಮನವಿ ಇಷ್ಟೆ. ಈ ಬಜೆಟ್‌ನಲ್ಲಿ ಹೇಗಿದ್ದರೂ ಕೂಡ 1,000 ಕೋಟಿ ರೂಪಾಯಿಗಳು ಹಿಂದುಳಿದ ವರ್ಗದವರಿಗಾಗಿ ಇಟ್ಟಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಕೂಡ ಹಿಂದುಳಿದ ವರ್ಗದವರಿಗೆ ಒಂದು Secretariat ಅನ್ನು ಮಾಡಬೇಕೆಂದು ಮೊನ್ನೆ Cabinet ನಲ್ಲಿ ಕೂಡ approval ಆಗಿದೆ. ಈ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಯಾವ ಯಾವ ರೂಪದಲ್ಲಿ ಕೊಡಬೇಕೆಂಬುದರ ಬಗ್ಗೆ ಅದನ್ನು ಬಳಸುವ ದಿಕ್ಕಿನಲ್ಲಿ ಏನೇನು

ಮಾಡಬೇಕೆಂದು ಆ ಒಂದು Backward Classes Secrettariat ಮುಖಾಂತರವೇ ಮಾಡಿ ಅದಕ್ಕೆ separate ಅಧಿಕಾರಿಗಳನ್ನು ನಿಯೋಜಿಸುವ ಎಲ್ಲಾ ಪ್ರಯತ್ನಗಳ ಬಗ್ಗೆಯೂ ಕೂಡ Cabinet ನಲ್ಲಿ ಆಗಿದೆ. ಇದು ಪೂರ್ಣವಾಗಿ ಯಾವ ಯಾವ ಹಿಂದುಳಿದ ವರ್ಗಗಳಿಗೆ ಜಾತಿಗಳಿಗೆ ಏನೇನು ಬೇಕೆಂಬುದರ ಬಗ್ಗೆಯೂ ಕೂಡ ಈಗಾಗಲೇ ಆಯಾಯ ಸಮಾಜಗಳಿಂದ ಸಮಾಜದ ಸಂಘಟನೆಗಳ ಪ್ರಮುಖರು ಇರಬಹುದು, ಸಮಾಜದ ರಾಜ್ಯಮಟ್ಟದ ಸಂಘಗಳು ಇರಬಹುದು, ಆ ಸಮಾಜದ ಮಠಾಧಿಪತಿಗಳು ಸಹ ಇರಬಹುದು, ಏನೇನು ಹಿಂದುಳಿದ ವರ್ಗದವರ ಹಾಸ್ಟೆಲ್‌ಗಳಿಗೆ ಅಥವಾ ವಿದ್ಯಾಭ್ಯಾಸಕ್ಕೆ ಅಥವಾ ದೇವಸ್ಥಾನಗಳಿಗೆ ಏನೇನು ಬೇಕೆಂಬುದರ ಬಗ್ಗೆಯೂ ಸಹ ಕೊಟ್ಟಿದ್ದಾರೆ. ಅದರ ಪ್ರಕಾರವೇ sanction ಕೂಡ ಮಾಡಿದ್ದೇವೆ. ಇದನ್ನು execute ಮಾಡುವಂತಹ ದಿಕ್ಕಿನಲ್ಲಿ ತಾವು ಏನು 1,000 ಕೋಟಿ ರೂಪಾಯಿಗಳು ಖರ್ಚಾಗಬೇಕೆಂದು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ, ಅದಕ್ಕೋಸ್ಕರವೇ ಆ ಒಂದು ಇಲಾಖೆಯ ಮಂತ್ರಿಗಳು ಕೂಡ separate ಆಗಿ ಪ್ರತಿ ತಿಂಗಳು ಅಧಿಕಾರಿಗಳನ್ನು ಇಟ್ಟುಕೊಂಡು review ಮಾಡಬೇಕು. ಪ್ರತಿ ಜಾತಿಗೂ ಕೂಡ ಏನು ಹಿಂದುಳಿದ ವರ್ಗದ ಸಮಾಜಕ್ಕೆ ಮುಟ್ಟಬೇಕು, ಇದಕ್ಕೆ ಪೂರ್ಣಪ್ರಮಾಣದ ಪ್ರಯತ್ನವು ಈಗಾಗಲೇ ಪ್ರಾರಂಭವಾಗಿದೆ. ಪ್ರತಿ ತಿಂಗಳು ವರದಿಯನ್ನು ಕೊಡುವಂತಹ ಸಂದರ್ಭದಲ್ಲಿ ತುಂಬಾ ಸ್ಪಷ್ಟವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಒಂದು ವರ್ಷದಲ್ಲಿಯೇ 1,000 ಕೋಟಿ ರೂಪಾಯಿಗಳು ಇಟ್ಟಿದ್ದೇವೆ ಅದು ಎಲ್ಲಾ ಹಿಂದುಳಿದ ವರ್ಗಗಳಿಗೆ ತಲುಪಬೇಕು. ಆ ದಿಕ್ಕಿನಲ್ಲಿ ಪ್ರಯತ್ನವನ್ನು ನಾವು ಈ ಸಾರಿ ಖಂಡಿತವಾಗಿ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೆ, ತಾವು ಅದನ್ನು ಮಾಡುತ್ತಿದ್ದರೆ ಬಹಳ ಸಂತೋಷ. I have no objection. I welcome all those things. But the question is ಕಳೆದ ವರ್ಷ ಆಗಿಲ್ಲ. ಆ ಹಿನ್ನೆಲೆಯಲ್ಲಿ I am making all these suggestions. ಕಳೆದ ವರ್ಷವೂ ಆಗಲಿಲ್ಲ. ಕಳೆದ ವರ್ಷ ಇದಕ್ಕಾಗಿ 760 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಿರಿ. But, so much of money has not been released to you. ಅಷ್ಟೊಂದು expenditure ಆಗಲಿಲ್ಲ. It is because

ಇಲಾಖೆಯಲ್ಲಿ ಅಧಿಕಾರಿಗಳು ಇಲ್ಲ, Devaraj Urs Development Corporation ನಲ್ಲಿ ಅಧಿಕಾರಿಗಳು ಇಲ್ಲ. ಅಲ್ಲಿ ಯಾರೂ ಕೂಡ ಕೆಲಸವನ್ನು ಮಾಡುತ್ತಿಲ್ಲ. ಈ ಕಾರಣಕ್ಕೋಸ್ಕರವಾಗಿ, ಇದಕ್ಕಾಗಿ ಕೊಟ್ಟ ದುಡ್ಡು ಸಹ ಖರ್ಚಾಗದೆ release ಆದಂತಹ ಹಣವೂ ಸಹ ಖರ್ಚಾಗದೆ ಹಾಗೆಯೇ ದುಡ್ಡು ಉಳಿದುಕೊಂಡಿದೆ. ನಾನು Backward Classes, Minoritiesಗೆ ಸಂಬಂಧಪಟ್ಟಂತೆ figures ಅನ್ನು ತಂದಿದ್ದೇನೆ. ಹೋದ ವರ್ಷ ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದರು, ಅದರಲ್ಲಿ ಎಷ್ಟು ಹಣವು release ಆಯಿತು. ಇದಕ್ಕಾಗಿ ಎಷ್ಟು expenditure ಆಯಿತು ಎಂಬ figures ಇದೆ. Minorities ಅವರಿಗೆ ಈ ವರ್ಷ ಸುಮಾರು 284 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಇಟ್ಟಿರುವುದು. But, rlease was Rs.140 crores. Expenditure Rs. 140 crores. Not even 50%. ಬೇಕಾದರೆ ನೋಡಿ check up ಮಾಡಿ. 284 ಕೋಟಿ ರೂಪಾಯಿಗಳಲ್ಲಿ 140 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. 140 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಅದಕ್ಕಾಗಿ ಅದನ್ನು ತಾವು strengthen ಮಾಡಬೇಕು. ಈಗ ಕೃಷಿ ಇಲಾಖೆಯಲ್ಲಿ ನೀವು ಬರೀ ಬಜೆಟ್ ಮಂಡಿಸಿದರೆ ಸಾಲದು. ಅಲ್ಲಿ ಕೃಷಿ ಸಂಪರ್ಕ ಕೇಂದ್ರಗಳು ಇದೆಯಲ್ಲಾ, you strengthen it. ನೀವು ಅಧಿಕಾರಿಗಳನ್ನು recruit ಮಾಡಬೇಕು. ಒಂದೇ ಸೂರಿನಡಿಯಲ್ಲಿ ಎಲ್ಲಾ ರೈತರಿಗೆ ಸಿಗೋ ತರಹ ಮಾಡಬೇಕು. Everything should be available. ಬೆಲೆ ಎಷ್ಟು increase ಮಾಡಬೇಕು, ಮಾರುಕಟ್ಟೆಯಲ್ಲಿ ಏನಾಗುತ್ತದೆ ಎಂದು forecast ಮಾಡಿ ಹೇಳಬೇಕು. ಮಳೆಯ ಬಗ್ಗೆಯೂ ಕೂಡ forecast ಮಾಡಿ ಹೇಳಬೇಕು. ಗೋಡೌನ್‌ಗಳನ್ನು ಮಾಡಿಕೊಡಬೇಕು. ಅವರಿಗೆ cold storage ಮಾಡಿಕೊಡಬೇಕು. ಅವೆಲ್ಲವನ್ನು ತಾವು ಮಾಡಿಕೊಡಿ. ನೀವು ಬಿಡುಗಡೆ ಮಾಡಿರುವ ಹಣವನ್ನೂ ಸಹ ಖರ್ಚು ಮಾಡಿರುವುದಿಲ್ಲ. ಮಾನ್ಯ ಉಮೇಶ್ ವಿ. ಕತ್ತಿಯವರೆ ನೀವು ಆಗ ಇರಲಿಲ್ಲ. ನಿಮಗೆ ಎಷ್ಟು ಹಣ ಖರ್ಚಾಯಿತು ಎಂದು ಗೊತ್ತಾಯಿತೆ? ನೀವು ಆಗ ಸದನದಲ್ಲಿ ಇರಲಿಲ್ಲವೆಂದು ಪುನ: ನಾನು ಕೃಷಿಯ ಬಗ್ಗೆ ಹೇಳಬೇಕಾಗಿದೆ. ಹೋದ ವರ್ಷ 2011–12 ರಲ್ಲಿ ಕೃಷಿ ಬಜೆಟ್ ಅನ್ನು ಮಂಡಿಸಿದ ಮೇಲೆ agriculture ಒಂದಕ್ಕೆ 1741 ಕೋಟಿ

ರೂಪಾಯಿಗಳು allocation ಬಿಡುಗಡೆ ಆಯಿತು, ಅದರಲ್ಲಿ 1202 ಕೋಟಿ ರೂಪಯಿಗಳು, ಇದು revised estimate ನಲ್ಲಿರುವುದು,

ಶ್ರೀ ಕೆ.ಗೋಪಾಲ ಭಂಡಾರಿ :– ಪವರ್ ಟೆಲ್ಲರ್‌ಗಳಿಗೆ ಕೊಟ್ಟಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ :– 1036 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿರುವುದು. 684 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಇದು ನಿಮ್ಮ ಕೃಷಿ ಇಲಾಖೆಯಿಂದ ಕೊಟ್ಟಿರುವುದು. ಇದನ್ನು ಸರ್ಕಾರವೇ ಕೊಟ್ಟರುವಂತಹ ಅಂಕಿ ಅಂಶಗಳು. ಅಂದರೆ 38% of the allocation. But separate budget. ಈ ಸರ್ಕಾರ ರೈತರ ಪರವಾಗಿದೆಯೆಂದು ಹೇಳಿಕೊಳ್ಳುತ್ತಾರೆ. ನಾನು ಏತಕ್ಕಾಗಿ specific ಆಗಿ ಹೇಳುತ್ತಿದ್ದೇನೆಂದರೆ allocation ಬೇರೆ, revised estimate ಬೇರೆ, ಆಮೇಲೆ release ಬೇರೆ, Expenditure ಬೇರೆ, Four stages are there. Allocation, revised, released, expenditure, Every year 12,000 ಕೋಟಿ ರೂಪಾಯಿಯಿಂದ 14,000 ರೂಪಾಯಿಗಳವರೆಗೆ unspent. ಹೋದ ವರ್ಷದ ಆಯವ್ಯಯ 85,000 ಕೋಟಿ ರೂಪಾಯಿಗಳ ಆಯವ್ಯಯ. ಇದರಲ್ಲಿ 15,000 crores unspent. ಆಮೇಲೆ ಈ ವರ್ಷದಲ್ಲಿ 1,03,000 ಕೋಟಿ ರೂಪಾಯಿ ಬಜೆಟ್‌ನಲ್ಲಿ 20,000 ಕೋಟಿ ರೂಪಾಯಿಗಳು unspent. ಇದನ್ನು budjet discipline ಎಂದು ಕರೆಯಬೇಕೆ? We cannot say you have maintained the budgetary discipline. ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ ಒಂದೂವರೆ ಲಕ್ಷ ಎಕರೆ ಸೃಷ್ಟಿಯಾಯಿತು ಎಂದು ಹೇಳುತ್ತಾರೆ. ಇದನ್ನು ಹೋದ ವರ್ಷ ನೀರಾವರಿಗೆ ಒಳಪಡಿಸಿದೆವು. ಹಾಗಾದರೆ ನೀರಾವರಿಯಾದ ಮೇಲೆ food production ಹೆಚ್ಚಾಗಬೇಕಲ್ಲವೆ? Minor Irrigation ನಲ್ಲಿ ಎಷ್ಟು ಹೆಕ್ಟೇರ್ ಆಯಿತು ಎಂದು ಹೇಳುತ್ತಾರೆ. ನೀರಾವರಿಗೆ ಒಳಪಡಿಸಿದ ಮೇಲೆ What is the food production increase? ಎಷ್ಟು increase ಆಯಿತು? ಇದಕ್ಕೂ ಅದಕ್ಕೂ ತಾಳೆಯಾಗಬೇಕಲ್ಲ? ಅದು ಇಲ್ಲ. ನಮಗೆ Krishna Tribunal ನಿಂದ ಸುಮಾರು 130 TMC Water ಅನ್ನು ಬಳಸಿಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದೆ. ಅದಕ್ಕೆ ಯಾವುದೇ ಸಮಸ್ಯೆ ಇಲ್ಲ. ಅದನ್ನು ನಾವು ಬಳಸಿಕೊಳ್ಳಬೇಕಲ್ಲ? ನಾವು

ಬೇರೆ ವಿಚಾರಗಳಿಗೆ ಕೋರ್ಟಿಗೆ ಹೋಗಿರುವುದು. ನಾವು Supreme Court ಹಾಗೂ Tribunalನ ಮುಂದೆ clarificatory ಅರ್ಜಿಯನ್ನು ಹಾಕಿರುವುದು. ಆದರೆ 130 ಟಿಎಂಸಿ ನೀರನ್ನು ಬಳಸಿಕೊಳ್ಳುವುದಕ್ಕೆ there is no problem. No bottleneck. ಇಲ್ಲಿ ನಾವು ಈ ಬಗ್ಗೆ resolution ಸಹ ಮಾಡಿದ್ದೇವೆ. 17,000 ಕೋಟಿ ರೂಪಾಯಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಷ ಇವತ್ತಿನವರೆಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಅದು ಏನೂ ಇಲ್ಲ. Financial phase out ಮಾಡಿದ್ದಾರೆ. ಅದನ್ನು ನೋಡಿದರೆ ಅದು ಇವತ್ತು ಮುಗಿಯುವುದಿಲ್ಲ. ನೀರಾವರಿ ಇಲಾಖೆ ಹೀಗೆ ಇದೆ. ನಾವು 45 ಲಕ್ಷ ಹೆಕ್ಟೇರ್ ನೀರಾವರಿ ಮಾಡಬೇಕೆಂದು ಇದ್ದೇವೆ. ಇವತ್ತಿನವರೆಗೆ achieve ಮಾಡುವುದಕ್ಕೆ ಆಗಲೇ ಇಲ್ಲ. ಈ ಗುರಿಯನ್ನು ತಲುಪುವುದಕ್ಕೆ ಆಗಲೇ ಇಲ್ಲ. 10 ಲಕ್ಷ ಹೆಕ್ಟೇರ್ Minor Irrigation ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ. ಇವತ್ತಿನವರೆಗೆ 6, 30,000 ಹೆಕ್ಟೇರ್ ಆಗಿದೆ. ಉಳಿದದ್ದು ಇನ್ಯಾವಾಗ ಆಗುತ್ತದೆ? 3,70,000 ಹೆಕ್ಟೇರ್ ಮಾಡುವುದು. ಇದನ್ನು ಎಷ್ಟು ವರ್ಷದಿಂದ ಮಾಡುತ್ತೀರಿ. ಇದಕ್ಕೆ ಇನ್ನೊಂದಿಷ್ಟು ಹಣವನ್ನು ಕೊಡಿ. ಈಗ ಕುಡಿಯುವುದಕ್ಕೆ ನೀರು ಇಲ್ಲ. ಕೆರೆಗಳು ಎಲ್ಲಾವೂ ಒಣಗಿಹೋಗಿದೆ. ನಿಮಗೆ 3,500 ಕೆರೆಗಳಲ್ಲಿ 2,500 ಕೆರೆಗಳು ಒಣಗಿ ಹೋಗಿವೆ. ನೀವು ಹಣವನ್ನು ತೆಗೆದುಕೊಂಡು ಎಲ್ಲಾ ಕೆರೆಗಳಲ್ಲಿ ಹೂಳನ್ನು ಎತ್ತಬೇಕು. ಮುಂದಿನ ಸಾರಿ ಮಳೆ ಬಂದಾಗ ಆ ಕೆರೆಯಲ್ಲಿ ನೀರು ನಿಲ್ಲಲಿ ಅಥವಾ ನಾಲೆಗಳಿಂದ ನೀರನ್ನು ತುಂಬಿಸಿ. ಮಾನ್ಯ ಅಧ್ಯಕ್ಷರೆ, ನಮಗೆ ಭಯವಾಗುತ್ತಿದೆ. ಇವತ್ತಿನವರೆಗೆ ಕೆ.ಆರ್.ಎಸ್.ಗೆ ನೀರು ಬಂದಿಲ್ಲ. ಇವತ್ತಿನವರೆಗೆ ಕಬಿನಿ ಜಲಾಶಯಕ್ಕೆ ನೀರು ಬಂದಿಲ್ಲ. ಇವತ್ತಿನವರೆಗೆ ಹೇಮಾವತಿ ಜಲಾಶಯಕ್ಕೆ ನೀರು ಬಂದಿಲ್ಲ. ಇವತ್ತಿನವರೆಗೆ ತುಂಗಭದ್ರಾ ನದಿಗೆ ನೀರು ಬಂದಿಲ್ಲ. ಇವತ್ತಿನವರೆಗೆ ಭದ್ರಾ ಜಲಾಶಯಕ್ಕೆ ನೀರು ಬಂದಿಲ್ಲ. Upper Krishna ಕ್ಕೂ ಕೂಡ ನೀರು ಬಂದಿಲ್ಲ. ನಾರಾಯಣಪುರ ಜಲಾಶಯಕ್ಕೂ ಕೂಡ ನೀರು ಬಂದಿರುವುದಿಲ್ಲ. ಏನಾಗಬಹುದು ನಮ್ಮ ಪರಿಸ್ಥಿತಿ? ಕುಡಿಯುವ ನೀರನ್ನು ಕೊಡುವುದಕ್ಕೂ ಸಹ ತೊಂದರೆಯಾಗುತ್ತದೆ. ನಿಮ್ಮ ಕೊಡಗಿನಲ್ಲೂ ಸಹ ಮಳೆ ಇಲ್ಲ.

ಅಧ್ಯಕ್ಷರು : - ಮೊನ್ನೆಯಿಂದ ಮಳೆ ಬೀಳುತ್ತಿದೆಯೇ? ನಮ್ಮ ಕೆ.ಆರ್.ಎಸ್.ನಲ್ಲಿ ಇನ್ನೂ ನೀರು ಬಂದಿಲ್ಲ.

ಅಧ್ಯಕ್ಷರು : – ನೀರು ಬಂದಿದೆ.

ಶ್ರೀ ಸಿದ್ದರಾಮಯ್ಯ : – ಈಗ ಶುರುವಾಗಬಹುದು. ಅಲ್ಲೂ 32% deficit ಇತ್ತು. ನಿಮ್ಮಲ್ಲಿ 52% deficit ಇತ್ತು. ಈಗ ಏನೋ ಸ್ವಲ್ಪ make up ಆಗಿರಬಹುದು. ಕರಾವಳಿಯಲ್ಲಿ 31% dificit ಇತ್ತು. ನಾನು ಇವೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಈ ವರ್ಷ ಜಲಾಶಯದಲ್ಲಿ ನೀರು ಇಲ್ಲದಿದ್ದರೆ power ಪರಿಸ್ಥಿತಿ ಏನಾಗಬಹುದು? ಶರಾವತಿ, ನಾಗಝರಿ, ಸೂಪಾ ಜಲಾಶಯಗಳಲ್ಲಿ ನೀರು ಇಲ್ಲದೇ power ಉತ್ಪತ್ತಿಯಾಗುತ್ತಿಲ್ಲ. That is why ಇವತ್ತು power ಇಲ್ಲದಂತಹ ಪರಿಸ್ಥಿತಿ ನಮಗೆ ಇದೆ. ಅಷ್ಟೇ ಅಲ್ಲ even ನಮ್ಮ ರಾಯಚೂರಿನಲ್ಲಿರುವ 8 ಘಟಕಗಳಿಂದ 1,720 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಬೇಕು. ಕೇವಲ 900 ಚಿಲ್ಲರೆ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಿದೆ. ಈ ರೀತಿ ಆದರೆ power ಹೇಗೆ ಕೊಡುವುದಕ್ಕೆ ಆಗುತ್ತದೆ? ಕುಡಿಯುವುದಕ್ಕೆ ನೀರು ಇರುವುದಿಲ್ಲ. ದನಕರುಗಳಿಗೆ ಮೇವಿಲ್ಲ. ಮತ್ತೆ power problem. ನಾವು purchase ಮಾಡಿ ಕೊಡುತ್ತೇವೆಂದು ಹೇಳುತ್ತಾರೆ. 'ಎಲ್ಲಿ ಕೊಡುವುದಕ್ಕಾಗುತ್ತದೆ? ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ. ಆಕಾಶಕ್ಕೆ ಮೊಳೆ ಹಾಕುವುದಕ್ಕಾಗುತ್ತದೆಯೇ? ಎಂದು. ಇವತ್ತು ಈ ಪರಿಸ್ಥಿತಿ ಇದೆ. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಇವತ್ತು power purchaseಗಾಗಿ ಖರ್ಚು ಮಾಡುತ್ತಿದ್ದೇವೆ. This is of no use. ಹಾಗೆಯೇ SC-ST backlog ಹುದ್ದೆಗಳು..

ಶ್ರೀ ಈ.ತುಕಾರಾಮ್ : – 10 ವರ್ಷಗಳಿಂದ ಸುಮಾರು 21,000 backlog ಹುದ್ದೆಗಳನ್ನು ಭರ್ತಿ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : – 1998 ರಲ್ಲಿ recruitment ಮಾಡಿದ್ದು, ಅದಾದ ಮೇಲೆ Backlog ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಮಾನ್ಯ ಈಶ್ವರಪ್ಪನವರೆ, ತಾವು Deputy Chief Minister ಆಗಿದ್ದೀರಿ. Backward class ನಲ್ಲಿಯೂ ಕೂಡ ಬಹಳಷ್ಟು Backlog ಹುದ್ದೆಗಳು ಬಾಕಿ ಇವೆ. use your good office. See that, ಯಾವ್ಯಾವ class ನಲ್ಲಿ Backlog ಹುದ್ದೆಗಳಿವೆ ಅವುಗಳನ್ನು ತುಂಬಲಿಕ್ಕೆ ಪ್ರಯತ್ನ ಮಾಡಿ. ನಾವು ಅಧಿಕಾರದಲ್ಲಿದ್ದಾಗ, 1994–95 ರಲ್ಲಿ ಪಂಚಾಯತ್‌ಗಳಲ್ಲಿ,

ಮುನಿಸಿಪಾಲಿಟಿಗಳಲ್ಲಿ, ಕಾರ್ಪೋರೇಷನ್‌ಗಳಲ್ಲಿ, ಸೊಸೈಟಿಗಳಲ್ಲಿ Backward class ಗಳಿಗೆ reservation ಕೊಡಲಾಗಿತ್ತು. ನಾನು 2004-05 ರಲ್ಲಿ ಯಾರ್‍ಯಾರು Marginal Farmers, small Farmers and Backward communities and SC's ಇದ್ದಾರೆ, ಆ ವರ್ಗಗಳಿಗೆಲ್ಲಾ ಸರ್ಕಾರವೇ share ತುಂಬಿ ಅವರನ್ನೆಲ್ಲಾ Members ಮಾಡಿ ಎಂದು ಹೇಳಿದ್ದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, 'ಯಶಸ್ವಿನಿ' ಕಾರ್ಯಕ್ರಮ ಇದೆ. ಇವತ್ತು ಮಾರಕ ಕಾಯಿಲೆಗಳು ಬರುತ್ತಿವೆ. Those who are members of the society, they are eligible to get the benefit. Those who are not the members of the society they can't get. ಯಾರ್‍ಯಾರು SC ಯವರು Backward class ನವರು, Minorities, ಅವರೆಲ್ಲರನ್ನೂ Members ಮಾಡಿಸಿ, Member ಮಾಡಿಸಲು ಏನೂ ಭಾರಿ ದುಡ್ಡಾಗುವುದಿಲ್ಲ, 50 ಕೋಟಿ, 100 ಕೋಟಿ ರೂಪಾಯಿ ಆಗಬಹುದು. ಅದು ಮಾಡಿಸಿದರೆ they will get the benefits. Share capital ಆಗುತ್ತದೆ. ಡಯಾಲಿಸಿಸ್ ಅಂತೂ, ಮಾನ್ಯ ಅಧ್ಯಕ್ಷರೆ, in every Government Hospital Dialysis Unit ಇರಬೇಕು. Not in Medical Education. In all the Government Hospitals including community Health centres ಏಕೆಂದರೆ ನನಗೆ ಗೊತ್ತಿರುವ ಪ್ರಕಾರ, Community Health Centreನ್ನೂ ಕೂಡ 30,000 ಕ್ಕಿಂತ ಹೆಚ್ಚು ಜನಸಂಖ್ಯೆ ಇರುವಂತಹ ಕಡೆ ಮಾಡುತ್ತೀರಿ.

ಶ್ರೀ ಈ. ತುಕಾರಾಮ್ : – ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : – ಪ್ರತಿ ಬಾರಿ ತಾವು ಏಕೆ ಎದ್ದು ನಿಂತುಕೊಳ್ಳುತ್ತೀರಿ? ಕುಳಿತುಕೊಳ್ಳಿ.

ಶ್ರೀ ಈ. ತುಕಾರಾಮ್ : – ಮಾನ್ಯ ಅಧ್ಯಕ್ಷರೆ, ಇದು ಬಹಳ Important ಇದೆ.

ಅಧ್ಯಕ್ಷರು : – Important ಇರಬಹುದು, ಆನಂತರ ಹೇಳಿ. It is not fair.

ಶ್ರೀ ಈ. ತುಕಾರಾಮ್ : – ನಮ್ಮ ಕ್ಷೇತ್ರದಲ್ಲಿ ಆಸ್ಪತ್ರೆಗಳಲ್ಲಿ ಎಲ್ಲಾ equipments ಇವೆ. ಆದರೆ Doctors ಇಲ್ಲ.

ಅಧ್ಯಕ್ಷರು : – ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : – ಇಲ್ಲಿ Health Minister ಇದ್ದಾರೆಯೇ? Community Health Centre ನಲ್ಲಿ ಕನಿಷ್ಠ ಪಕ್ಷ 5–6 Doctors ಮಂಜೂರಾತಿ ಮಾಡಿದ್ದಾರೆ. ಆದರೆ ಅಲ್ಲಿ ಒಬ್ಬರೂ Doctor ಇರುವುದಿಲ್ಲ. PHC ಗಳಲ್ಲಿ Doctors ಇಲ್ಲವೇ ಇಲ್ಲಾ ಬಿಡಿ. ಹಳ್ಳಿಗಳಿಗೆ Doctors ಬರುವುದೇ ಇಲ್ಲ. ಒಂದು ವೇಳೆ ಜೋರು ಮಾಡಿದರೆ ನಾನು ಬರುವುದೇ ಇಲ್ಲ ಹೋಗಿ' ಎಂದು ರಜಾ ಹಾಕಿ ಹೋಗುತ್ತಾರೆ. ಈಗ ನನ್ನ ಕ್ಷೇತ್ರದಲ್ಲಿ ತಗಡೂರು ಎಂಬ ಊರು ಇದೆ. ಮಾನ್ಯ ಮಹದೇವಪ್ಪನವರಿಗೂ ಗೊತ್ತು. ಅವರದ್ದು ಹಳೇ ಕ್ಷೇತ್ರ. ಅಲ್ಲಿ ಒಂದು Community Health Centre ಇದೆ. ನನ್ನ ಪ್ರಕಾರ ಆ Community Health Centre ನಲ್ಲಿ 7 ಜನ Doctors ಗಳ ಮಂಜೂರಾತಿ ಇದೆ. ಏಳು ಜನ ಇರಬೇಕು, ಅಲ್ಲಿ ಒಬ್ಬರೇ ಒಬ್ಬರು Doctor ಇದ್ದಾರೆ. ಈಗ ಒಬ್ಬರನ್ನು post ಮಾಡಿದ್ದೇವೆ ಎಂದು ಹೇಳಿದರು, ಅವರೂ ಬರಲಿಲ್ಲ. ಹಾಗಾದರೆ ನೀವು 30 Bedded Hospitals, CHC ಎಂದು ಏಕೆ ಮಾಡಿದ್ದೀರಿ? ಅಲ್ಲಿ ನಿಮ್ಮ ಕೈಯಲ್ಲಿ Doctors ಏಕೆ ಕೊಡುವುದಕ್ಕೆ ಆಗಿಲ್ಲ? ಏಕೆ Medicines ಕೊಡುವುದಕ್ಕೆ ಆಗಿಲ್ಲ? ಏನೂ ಮಾಡೇ ಇಲ್ಲ. ಹಿಂದಿನ ಮಂತ್ರಿಗಳು ಒಂದು ದಿನವೂ ಒಂದಾದರೂ ಆಸ್ಪತ್ರೆ ನೋಡಲು ಹೋಗಲಿಲ್ಲ. ಈಗ ಹೊಸದಾಗಿ ಬಂದಿದ್ದಾರೆ, ಇವರು ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ. ನಾನು ಒಂದು ಬಾರಿ ಕೋಲಾರ ಜಿಲ್ಲೆಯ ಬಂಗಾರಪೇಟೆಗೆ ಹೋದೆ. ಮಾನ್ಯ ತುಕಾರಾಮ್‌ರವರು ತಮ್ಮ ಕ್ಷೇತ್ರವಾದ ಸಂಡೂರು ತಾಲ್ಲೂಕಿನಲ್ಲಿ 32 ಜನ Doctors ಹುದ್ದೆ ಖಾಲಿ ಇದೆ ಎಂದು ಹೇಳುತ್ತಿದ್ದಾರೆ. ಸಂಡೂರು ತಾಲ್ಲೂಕಿನಲ್ಲಿ ಗಣಿ ಪ್ರದೇಶವಿದೆ ಧೂಳು ಕುಡಿಯಬೇಕಾಗುತ್ತದೆ ಎಂದು ಯಾರೂ Doctors ಅಲ್ಲಿ ಹೋಗುವುದಿಲ್ಲ. ಅಲ್ಲಿ ಹೋಗಿ ತಾವು ನೋಡಬೇಕು, ಮರಗಿಡಗಳೆಲ್ಲಾ ಕೆಂಪಾಗಿವೆ. ಅಲ್ಲಿ ಹೋದರೆ ಎಲ್ಲರೂ Helicopters ನಲ್ಲಿ ತಿರುಗಾಡಬೇಕು. All important issues I am highlighting ಬೇರೆಯದೆ ಬಿಟ್ಟುಬಿಟ್ಟಿದ್ದೇನೆ. ನಾನೂ Finance Minister ಆಗಿದ್ದೆನಲ್ಲಾ ಮಾನ್ಯ ಈಶ್ವರಪ್ಪನವರೇ, ಆಗ ನಾನು ಕೊನೆ ದಿನ 31ನೇ ತಾರೀಖು ಎರಡೂ ಕಡೆ ಉತ್ತರ ಕೊಟ್ಟು Appropriation Bill pass ಮಾಡಿರುವ ನಿದರ್ಶನ ಇದೆ. 31ನೇ ತಾರೀಖು last day ಎರಡೂ ಕಡೆ ಉತ್ತರ ಕೊಟ್ಟು ಎರಡೂ ಕಡೆ pass ಆಗಿರುವ ನಿದರ್ಶನ ಇದೆ. ಅದೇನೂ ತೊಂದರೆ ಆಗುವುದಿಲ್ಲ. We are not going to

oppose. ಎಲ್ಲಿ Division ಕೇಳುತ್ತಾರೋ ಎಂದು, ನೀವೆಲ್ಲಾ Whip ಕೊಟ್ಟು, ಕಷ್ಟಪಟ್ಟು ಇಲ್ಲಿ ಸದಸ್ಯರುಗಳನ್ನು ಕೂರಿಸಿಕೊಂಡಿದ್ದೀರಿ. ನನಗೆ ಗೊತ್ತಾಗುತ್ತದೆ. ನಾವೇನೂ ಆ ರೀತಿ ಮಾಡುವುದಕ್ಕೆ ಹೋಗುವುದಿಲ್ಲ. Don't worry. ಹಬ್ಬಕ್ಕೆ ಹೋಗುವವರನ್ನೆಲ್ಲಾ ಹೋಗಿ ಎಂದು ಹೇಳಿ. ಒಂದು ಬಾರಿ ಯಾವತ್ತೋ ನಾವು ಇಲ್ಲಿ ಭಾಷಣ ಮಾಡುತ್ತಿದ್ದೆವು. Quorum ಇಲ್ಲದೆ ಹಾಗೆ ಮಾಡಿದ್ದರು. ಯಾವುದೋ ಒಂದು ವಿಷಯಕ್ಕೆ ನಾವು ಇಲ್ಲಿ Adjournment Motion Move ಮಾಡಿ ಬರುತ್ತದೆ ಎಂದು ಕುಳಿತುಕೊಂಡಿದ್ದೇವೆ. ಇವರೂ ಕುಳಿತಿದ್ದಾರೆ. ಮಾನ್ಯ ಜೀವರಾಜ್‌ರವರು Chief whip, whip, ಜಾರಿ ಮಾಡಿದ್ದರು. ಇನ್ನೂ ಮಾನ್ಯ ಸವದಿಯವರು ಆಗಿರಲಿಲ್ಲ. ಪಾಪಾ ಹೇಳಬೇಕೋ ಬೇಡವೋ ಗೊತ್ತಿಲ್ಲ. ಎಲ್ಲರನ್ನೂ ಆಚೆಗೆ ಕಳುಹಿಸಿಬಿಟ್ಟರು. ಆಮೇಲೆ 21 ಜನ ಉಳಿದುಕೊಂಡಿದ್ದರು. ಸಾರ್ ಆಮೇಲೆ ಕೋರಂ ಇಲ್ಲವೆಂದು ಅವರೇ ಹೇಳುತ್ತಾರೆ. ನಾನು ಕೋರಂ ಇಲ್ಲ ಅಂದ ಮೇಲೆ ಏನು ಮಾಡುವುದು ಎಂದು ಹ್ಯಾಪ್ ಮುಖವನ್ನು ಹಾಕಿಕೊಂಡು ಹೋದೆ. ಹೀಗೆ ಆಯಿತಲ್ಲಾ ರಾತ್ರಿ ಅವತ್ತು 9.30 ಇರಬಹುದು. ನಾನು ಬಹಳ important ವಿಷಯವನ್ನು ಹೇಳುತ್ತಿದ್ದೆ. I hope that you agree.

ಶ್ರೀ ಟಿ.ಬಿ. ಜಯಚಂದ್ರ : – ಇವತ್ತು ಬಹಳ ಪ್ರಮುಖವಾದಂತಹ ವಿಚಾರಗಳು ಪ್ರಸ್ತಾಪವಾಗುತ್ತಿದೆ. 14.11.2011 ರಂದು ಆರ್ಥಿಕ ಇಲಾಖೆಗೆ ಸಂಬಂಧಿಸಿದಂತೆ 2009–10ನೇ ಸಾಲಿನ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರದ ಮೇಲೆ ಸಮಿತಿಯ ಒಂದು ವರದಿ. ವರದಿಯನ್ನು ಕೊಟ್ಟಿರುವುದಕ್ಕೆ ಅದರ ಬಗ್ಗೆ ಒಂದೇ ಒಂದು ನಿಮಿಷದಲ್ಲಿ ಹೇಳುತ್ತೇನೆ. 2009–10ನೇ ಸಾಲಿನಲ್ಲಿ ಅದು ಯಾವ ಮಟ್ಟಕ್ಕೆ ನಡೆದಿದೆ ಎಂದರೆ ಬಳಕೆಯಾಗದೆ ಇರತಕ್ಕಂತದ್ದಕ್ಕೆ ಅವಕಾಶ. 17 ಇಲಾಖೆಗಳಲ್ಲಿ 100 ಕೋಟಿ ರೂಪಾಯಿಗಳಿಗೂ ಮೀರಿ ಅಂದರೆ 11,878 ಕೋಟಿ ರೂಪಾಯಿಗಳು ಇದುವರೆಗೂ ಕೂಡ ಬಳಕೆಯಾಗಿರುವುದಿಲ್ಲ. ಬಹಳಷ್ಟು ಅಲೋಕೇಷನ್ಸ್ ಮಾಡುತ್ತೇವೆಂದು ಇಲ್ಲಿ ಅವರು ತೋರಿಸುತ್ತಾರೆ. ಇದರಲ್ಲಿ 11,000 ಕೋಟಿ ರೂಪಾಯಿಗಳು ಬಳಕೆಯಾಗದೆ ಇರುವುದು. ಮಂಜೂರಾತಿ ಸ್ವೀಕೃತಿ ಮತ್ತು ವೈಫಲ್ಯತೆಯಿಂದಾಗಿ ವಿಳಂಬಕ್ಕೆ ಸ್ವೀಕೃತಿಯಾಗಿ ಬಳಕೆಯಾಗದೆ ಇರುವಂತಹ ಅನುದಾನ ಎಷ್ಟೆಂದರೆ 255 ಕೋಟಿ

ರೂಪಾಯಿಗಳು. ಕೃಷಿ, ಪಶುಸಂಗೋಪನೆ, ಗೃಹ, ಆರ್‌ಡಿಪಿಆರ್, ಅರಣ್ಯ ಮತ್ತು ನಗರಾಭಿವೃದ್ಧಿ ಯೋಜನೆಗಾಗಿ ಇರುವುದು. ಈಗ ಸತತವಾಗಿ ಮೂರು ಇಲಾಖೆಯವರು ದುಡ್ಡನ್ನು ಬಳಸಿರುವುದಿಲ್ಲ.

ಅಧ್ಯಕ್ಷರು : – ಮಾನ್ಯ ಜಯಚಂದ್ರರವರೆ, ತಾವು ಆಮೇಲೆ ಕೇಳಿ.

ಶ್ರೀ ಟಿ.ಬಿ. ಜಯಚಂದ್ರ : – ಇದು ಈ ರೀತಿಯಾಗಿ Releases, spending ಆದರೆ ಇದಕ್ಕೆ ಏನು ಅರ್ಥ ಇದೆ? ಇದು ಎಷ್ಟೋ ವರ್ಷವಾದ ಮೇಲೆ ಆಗುತ್ತದೆ. ನಾವು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಇದರ ಮೇಲೂ ಸಹ ಬದಲಾವಣೆ ಆಗದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಇದರ ಬಗ್ಗೆ ತಾವು ದಯಮಾಡಿ ಯೋಚನೆಯನ್ನು ಮಾಡಬೇಕು.

ಅಧ್ಯಕ್ಷರು : – ಮಾನ್ಯ ಸಿದ್ದರಾಮಯ್ಯನವರೆ, ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : – ಅವರು ಹೇಳಿರುವುದು ಸಹ ಸತ್ಯವಾಗಿದೆ. ಅವರು ಅದನ್ನೇ ರೆಕಾರ್ಡ್ ಮೂಲಕವೇ ಹೇಳುತ್ತಿದ್ದಾರೆ. ನಾನು ಎಲ್ಲವನ್ನೂ ಸಹ ತೆಗೆದು ಹೇಳುವುದಕ್ಕೆ ಹೋಗುತ್ತಿಲ್ಲ. ಇವೆಲ್ಲವನ್ನೂ ತೆಗೆದು ಓದುತ್ತಾ ಹೋದರೇ another five hours ಆಗುತ್ತದೆ. ನಾನು ಹಾಗಾದರೆ ಸೋಮವಾರ ದಿವಸ ಮಾತನಾಡಲೇ? ಎಲ್ಲರೂ ವರಮಹಾಲಕ್ಷ್ಮಿ ಹಬ್ಬಕ್ಕೆ ಹೋಗೋಣ. ಏನ್ರಪ್ಪಾ ಎಲ್ಲರೂ ಹಬ್ಬಕ್ಕೆ ಹೋಗೋಣವೇ? ಸೋಮವಾರ ದಿವಸ ಮಾತನಾಡಲೇ? ನೀವೆಲ್ಲರೂ ಒಕ್ಕೊರಲಿನ ಅಭಿಪ್ರಾಯವನ್ನು ಹೇಳಿ. ನಾನು ಸೋಮವಾರ ದಿವಸ ಇದನ್ನು complete ಮಾಡಿಕೊಡುತ್ತೇನೆ. ನನಗೆ ಮಾತನಾಡುವುದಕ್ಕೆ ಕನಿಷ್ಠ ಇನ್ನು ಒಂದು ಗಂಟೆಯಾದರೂ ಬೇಕಾಗುತ್ತದೆ. ನಾನು ಮಿನಿಮಮ್ ಎಂದು ಹೇಳುತ್ತಿರುವುದು ನನಗೆ two hours ಬೇಕಾಗುತ್ತದೆ. Minimum one hour ಸಾಕು. ನೀವೆಲ್ಲರೂ ಕುಳಿತುಕೊಂಡರೆ ನನಗೇನೂ ಇಲ್ಲ. ಈಗ ನೀವು ಸರ್ಕಾರವನ್ನು ನಡೆಸುವವರು ಕುಳಿತುಕೊಳ್ಳಲೇಬೇಕು. ನಿಮ್ಮ ಜೊತೆಯಲ್ಲಿ ನಾವೂ ಸಹ ಕುಳಿತುಕೊಳ್ಳಬೇಕಲ್ಲಾ? ನಾವು ಇಲ್ಲಿ ಮನೆಯನ್ನು ಇಟ್ಟುಕೊಂಡು ಹಬ್ಬಕ್ಕೆ ಹೋಗಿರುವುದಿಲ್ಲ. ರಾಮದಾಸ್ ವರಮಹಾಲಕ್ಷ್ಮಿ ಹಬ್ಬದ ಬಗ್ಗೆ ಹೇಳುತ್ತಿದ್ದರು. ಅವರಿಗೆ ನಾನು ನಿನಗೆ ಮದುವೆಯೇ ಆಗಿಲ್ಲ ನಿನಗೆ ಯಾವುದಪ್ಪ ಹಬ್ಬ? ಎಂದು ಹೇಳಿದೆ. ಮಾನ್ಯ ರಾಮದಾಸ್‌ರವರು ಮದುವೆ ಎಲ್ಲಿ ಆಗಿದ್ದಾರೆ? ಈ ಹಬ್ಬಕ್ಕೆ ಹೆಣ್ಣು ಮಕ್ಕಳು ಪೂಜೆ ಮಾಡುವುದು.

ಶ್ರೀ ಗೋವಿಂದ ಎಂ. ಕಾರಜೋಳ : – ಹಾಗಾದರೆ ಮದುವೆಯಾಗದೆ ಇದ್ದವರು ಮನೆಗೆ ಹೋಗುವ ಹಾಗಿಲ್ಲ. ಎಲ್ಲಿ ಪೂಜೆ ನಡೆಯುತ್ತದೆಯೋ ಅಲ್ಲಿಗೆ ಅವರು ಹೋಗುತ್ತಾರೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಕಾರಜೋಳರವರಿಗೆ experience ಎಷ್ಟು ಇದೆ ನೋಡಿ. ನಾನು ಇವೆಲ್ಲವನ್ನೂ ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇವತ್ತು ವಾಸ್ತವಿಕತೆ ಬೇರೆ ground reality ಯೇ ಬೇರೆ. Implementation level ನಲ್ಲಿ ಏನಾಗುತ್ತಿದೆ ಅದು ಬೇರೆ. ಹಣ ಏನಾಗುತ್ತಿದೆ ಎಂಬುದು ಬೇರೆ. ಹಣವು ಸರಿಯಾಗಿ ತಲುಪುತ್ತಿದೆಯೇ ಅದು ಬೇರೆ ವಿಷಯ. ತಾವು ಸುವರ್ಣಭೂಮಿಯನ್ನು ಮಾಡಿದ್ದೀರಲ್ಲಾ ಅದರಲ್ಲಿ ದಳ್ಳಾಳಿಗಳು ಎಷ್ಟು ಜನ ಹೊಡೆದುಕೊಂಡರು ಎಂದು ನಿಮಗೆ ಗೊತ್ತೇ? ಅದಕ್ಕಾಗಿ ಒಂದು installment ಕೊಟ್ಟಿದ್ದಾರೆ. ಇನ್ನೊಂದು installment ಅನ್ನು ಕೊಟ್ಟಿರುವುದಿಲ್ಲ. ಅದನ್ನು ಏನೋ ಸರಿಯಾಗಿ ಬಳಸಿಕೊಂಡಿಲ್ಲವೆಂದು ಮಾಡಿ ಅದನ್ನು ಹಾಗೆಯೇ ನಿಲ್ಲಿಸಿಬಿಟ್ಟಿದ್ದಾರೆ. ಈ ವರ್ಷ ಇನ್ನೂ ಕೊಟ್ಟಿರುವುದಿಲ್ಲ. ಸುವರ್ಣ ಭೂಮಿಗಾಗಿ ಅರ್ಜಿಗಳನ್ನು ಕರೆದಿದ್ದಾರೆ. ಇದುವರೆಗೂ ಕೊಟ್ಟಿರುವುದಿಲ್ಲ. ಇವತ್ತು Irrigation ಮತ್ತು ಇತರೇ ಇಲಾಖೆಗಳಿಗೆ ಗ್ರ್ಯಾಂಟ್ಸ್ ಕೊಡುವುದೇ ಕಡಿಮೆ. ಕೊಡುವ ಹಣವನ್ನು ಸಹ ಸರಿಯಾಗಿ ಖರ್ಚು ಮಾಡುವುದಿಲ್ಲ. ಈ ಯೋಜನೆಯನ್ನು time-bound Programme ಆಗಿ ಮಾಡಲ್ವಾ? Irrigation ಮತ್ತು PWD ಯಲ್ಲಿ, Minor Irrigation ನಲ್ಲಿ ನೀವು ಎಲ್ಲಿಯವರೆಗೆ time-bound Programme ಗಳನ್ನು ನಿಗದಿ ಮಾಡುವುದಿಲ್ಲವೋ, ಎಲ್ಲಿಯವರೆಗೆ ಸರಿಯಾಗಿ action plan ಮಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ project ಮುಗಿಯುವುದಿಲ್ಲ. ಇದಕ್ಕಾಗಿ ದುಡ್ಡು ಖರ್ಚು ಮಾಡುವುದು ನಿಲ್ಲುವುದಿಲ್ಲ. ನೀವು ಯಾವುದೋ ಒಂದು ಪ್ರಾಜೆಕ್ಟ್ ಸುಮಾರು 3 ರಿಂದ 6 ವರ್ಷಗಳಲ್ಲಿ ಮುಗಿಸುತ್ತೇವೆಂದು chalk out ಮಾಡಿಕೊಳ್ಳಿ. At any cost, ಅದು ಅಷ್ಟರೊಳಗಡೆ ಮುಗಿಯಬೇಕು. ಆಗ ನಿಮಗೆ ಹಣ ಉಳಿತಾಯವಾಗುತ್ತದೆ. ಜನಗಳಿಗೆ ಉಪಯೋಗವಾಗುತ್ತದೆ. ಇವೆಲ್ಲವೂ ನಡೆಯದೇ ಹೋದರೆ ಇದೇ ರೀತಿಯಾಗಿ ನಡೆಯುತ್ತಲೇ ಇರುತ್ತದೆ. ಒಂದೊಂದು ಪ್ರಾಜೆಕ್ಟ್ 20 ವರ್ಷ, 25 ವರ್ಷ ಆಗಿ

ಅಷ್ಟು ಹೊತ್ತಿಗೆ ಒಂದು Generation ಹೋಗಿರುತ್ತದೆ. ಎರಡನೇ Generation ಬಂದಿರುತ್ತದೆ.

ಒಬ್ಬ ಮಾನ್ಯ ಸದಸ್ಯರು : – ವರುಣಾ ನಾಲೆ ಆದ ಹಾಗೆ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : – ವರುಣಾ ನಾಲೆ ಆದ ಹಾಗೆ ಆಗುತ್ತದೆ. ವರುಣಾ ನಾಲೆಯು 1978ರಲ್ಲಿ ಪ್ರಾರಂಭವಾಗಿದ್ದು, ಶ್ರೀ ಡಿ. ದೇವರಾಜ ಅರಸುರವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದರು. ವರುಣಾ ನಾಲೆಯು ಮುಗಿದು ಹೋಗಿದ್ದು, ಯಾವಾಗ ಅಂದರೆ ನಾನು 2004–05 ರಲ್ಲಿ ಹಣಕಾಸಿನ ಮಂತ್ರಿಯಾಗಿದ್ದಾಗ, ಅಲ್ಲಿಯವರೆಗೂ ಈ ಕೆಲಸ ನಡೆಯುತ್ತಿತ್ತು. ಆಗ ಬಜೆಟ್ ಎಷ್ಟು ಇತ್ತೆಂದರೆ 18.5 ಕೋಟಿ ರೂಪಾಯಿಗಳು ಇತ್ತು. ಇದು ಮುಗಿದಾಗ ಸುಮಾರು more than 500 crores. ಆದರಿಂದ ಇವತ್ತಿನವರೆಗೂ 60% ನೀರನ್ನು ಕೊಡುವುದಕ್ಕೆ ಆಯಿತೇ ಹೊರತು ಅಚ್ಚುಕಟ್ಟಿನ ಬಗ್ಗೆ ನಾವು ಎಷ್ಟು ಲೆಕ್ಕವನ್ನು ಹಾಕಿದ್ದೆವೋ 80,000 ಎಕರೆಗೆ ಇವತ್ತಿನವರೆಗೆ 60% ಮಾತ್ರ ನೀರನ್ನು ಕೊಡುವುದಕ್ಕೆ ಸಾಧ್ಯವಾಯಿತು. ಇನ್ನು 40% ನೀರನ್ನು ಕೊಡುವುದಕ್ಕಾಗಲಿಲ್ಲ. It is because ನೀರು ಸಿಗುತ್ತಿಲ್ಲ. ಹಾಗೆಯೇ ಎಲ್ಲಾ ಪ್ರಾಜೆಕ್ಟ್‌ಗಳು ಕೂಡ. ನಾವು 130 ಟಿಎಂಸಿ ನೀರನ್ನು ಬಳಸಿಕೊಳ್ಳಬೇಕಲ್ಲವೇ? ಅದಕ್ಕೆ ಬೇಕಾದಂತೆ ನಾನು ಹೇಳಿದೆ. ನೀರಾವರಿಯ ಎಲ್ಲಾ ಪ್ರಾಜೆಕ್ಟ್‌ಗಳನ್ನು ತಾವು 5 ವರ್ಷದಲ್ಲಿ ಮುಗಿಸಿ. We need Rs.50.000 crores.Spend Rs.10.000 crore every year. ಎಲ್ಲವನ್ನು ಮುಗಿಸಿಬಿಡಿ. ನೀವು ಇದನ್ನು ಮಾಡದೇ ಹೋದರೆ, ಆಗುವುದಿಲ್ಲ. ಇವತ್ತು ಕುಡಿಯುವ ನೀರಿಗೆ ನಮ್ಮ ಹತ್ತಿರ ಎಷ್ಟು habitations ಇರುವುದು? ಮಾನ್ಯ ಮುಖ್ಯಮಂತ್ರಿಯವರೆ 59,000 habitations ಸುಮಾರು 27,000 ಹಳ್ಳಿಗಳು, 29,000 ಹಳ್ಳಿಗಳು, 59,000 habitations ಜನವಸತಿ. ಇವತ್ತು ಸಾವಿರಾರು ಹಳ್ಳಿಗಳಿಗೆ ನಾವು ನೀರನ್ನು ಕೊಡುವುದಕ್ಕಾಗಲಿಲ್ಲ. ನಾವು ಅವರಿಗೆ ಶೌಚಾಲಯಗಳನ್ನು ಕಟ್ಟಿಸಿಕೊಟ್ಟಿದೇವಾ? ಇವತ್ತಿನವರೆಗೂ ಕೂಡ ಅದು ಆಗಿಲ್ಲ. ಇವತ್ತು ಶೌಚಾಲಯಗಳನ್ನು ಹಳ್ಳಿಗಳಲ್ಲಿ ಕಟ್ಟಿಸುವುದಕ್ಕೆ 10,000 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಮೊದಲು ಏನು ಕಡಿಮೆ ಇತ್ತು. ಈ ಕೆಲಸವನ್ನು ಏತಕ್ಕಾಗಿ war-footing ನಲ್ಲಿ ಮಾಡಬಾರದು. ಪಾಪ ಇವತ್ತೂ ಕೂಡ ಹೆಣ್ಣು ಮಕ್ಕಳು ನಮ್ಮ ಹಳ್ಳಿಗಳಲ್ಲಿ ಸೂರ್ಯ ಮುಳುಗಿದ ಮೇಲೆ ಈಚೆಗೆ ಬರಬೇಕು. ಈಗ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 50%

ಕೊಡಬೇಕೆಂದು ಮಾಡಿದ್ದಾರೆ. ಅದಕ್ಕೆ ಉಳಿದ ಹಣವು ಕೇಂದ್ರ ಸರ್ಕಾರದ ಅನುದಾನದಿಂದ ಬರುತ್ತದೆ. ಏಕೆಂದರೆ ಎಲ್ಲವನ್ನೂ ನೀವು ಖರ್ಚು ಮಾಡಬಾರದು. ಅವರಿಗೆ ಸಂಪೂರ್ಣ ಸ್ವಚ್ಚತೆ, individual ಆಗಿ ಕಟ್ಟಿಕೊಡಬೇಕೆಂದು ಸಹ ಆಗಿದೆ. ಅದನ್ನು ಇವತ್ತಿನವರೆಗೂ ಕೂಡ ಮಾಡುವುದಕ್ಕಾಗಲಿಲ್ಲ. ನನ್ನ ಪ್ರಕಾರ ಇನ್ನೂ 20 ಲಕ್ಷ ಜನಗಳಿಗೆ ಶೌಚಾಲಯಗಳು ಇರುವುದಿಲ್ಲ. ಇದಕ್ಕಾಗಿ ಅನೇಕ ಕಡೆಗಳಲ್ಲಿ ಹಣವನ್ನು ಕೊಟ್ಟಿರುವುದಿಲ್ಲ. ನೀವು ಇದನ್ನು ಮಾಡಬೇಕು. These are all basic necessities. ಇವೆಲ್ಲವೂ basic need ಆಗಿದೆ. ನಿಮ್ಮ ಕೈಯಲ್ಲಿ ದುಡ್ಡನ್ನು ಕೊಟ್ಟರೂ ಕೂಡ ಮಾಡುವುದಕ್ಕಾಗುವುದಿಲ್ಲ. ಹೋದ ವರ್ಷದ ಬಗ್ಗೆ ನಾನು ಆಗಲೇ ಹೇಳುತ್ತಿದ್ದೆ. ಕುಡಿಯುವ ನೀರಿಗಾಗಿ 1,500 ಕೋಟಿ ರೂಪಾಯಿಗಳು release ಆಗಿದೆ. ನೀವು 1180 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. Why you could not able to spend the entire money released? These are the problems you have to tackle on war footing. ನೀವು ಇದನ್ನೆಲ್ಲಾ ಗಂಭೀರವಾಗಿ ನೋಡುವುದಿಲ್ಲ. ನೀವು ಏಕೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಿಕ್ಕಾಗುತ್ತಿಲ್ಲ? ದಲಿತರ ಮೇಲೆ Commitment ಇಲ್ಲ, Social justice ಬಗ್ಗೆ Commitment ಇಲ್ಲ. ನಾರಾಯಣಸ್ವಾಮಿಯವರೇ, ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳು. ಅಸೆಂಬ್ಲಿಯಲ್ಲಿ ಪತ್ರಿಕೆಯನ್ನು ಓದಬಾರದೆಂದು ಒಂದು ರೂಲ್ ಇದೆ. SC/ST Backlog ಹುದ್ದೆಗಳು ಭರ್ತಿ ಮಾಡಿಲ್ಲ. ಕೋರ್ಟಿನಲ್ಲಿ ಬೇರೆ 1300 ಜನ ಇಂಜಿನಿಯರ್ಸ್ ಬಗ್ಗೆ ಇದೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು) : – ಎಲ್ಲಾ ನಿಗಮಗಳವರೊಂದಿಗೆ review ಮಾಡಿದ್ದೇನೆ. 16,000 posts fill ಮಾಡಿದ್ದೇವೆ. Relaxation ಕೊಟ್ಟಿದ್ದೇವೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಿಕ್ಕೆ ಏಳು ವರ್ಷಗಳಿದ್ದಿದ್ದನ್ನು ಮೂರು ವರ್ಷಕ್ಕೆ ಮತ್ತು ಹತ್ತು ವರ್ಷಗಳಿದ್ದನ್ನು ಆರು ವರ್ಷಕ್ಕೆ ಮಾಡಿ 16000 posts ತುಂಬಿದ್ದಾರೆ. ಇನ್ನೂ ತುಂಬಬೇಕಾಗಿದೆ. ಅದನ್ನು ಮತ್ತೆ ಚುರುಕು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – Backward classes, SC/ST/ Minorities backlog posts ಭರ್ತಿ ಮಾಡಿ. ಪಾಪ ಅವರು ಮುಖ್ಯವಾಹಿನಿಗೆ

ಬರಬೇಕಲ್ಲವೇ? Socially, Economically empowerment ಆಗಬೇಕಲ್ಲವೇ? ಮಾಡಿ, ಏಕೆ ಸುಮರು ವರ್ಷಗಳಿಂದ ಹಾಗೆ ನಿಲ್ಲಿಸಿಬಿಟ್ಟಿದ್ದೀರಿ? ಮಾನ್ಯ ಅಧ್ಯಕ್ಷರೆ, there are so many lapses on implementation side and administration side. Administration has collapsed. ಮೇಲ್ಮನೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ದಲಿತರ ಮೇಲೆ ದೌರ್ಜನ್ಯ. ಪ್ರಶ್ನೆ ಕೇಳಿರುವುದು ಇತ್ತೀಚಿನ ದಿನಗಳಲ್ಲಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೌದು, ಬಂದಿದೆ. ಇದು ಸರ್ಕಾರದ ಉತ್ತರ. ಆಮೇಲೆ ಪಟ್ಟಣಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು, murder, rapes, ಪ್ರತಿ ವರ್ಷ ಹೆಚ್ಚಾಗುತ್ತಿವೆ. ಬೆಂಗಳೂರು, ಹುಬ್ಬಳ್ಳಿ, ಧಾರವಾಡದಲ್ಲಿ, ಮೈಸೂರು, ಮಂಗಳೂರಿನಲ್ಲಿ ಎಲ್ಲಾ ಕಡೆ ಸರಗಳ್ಳತನ ಹೆಚ್ಚಾಗುತ್ತಿದೆ. ಮೊನ್ನೆ ಬೆಂಗಳೂರಿನಿಂದ ಮೈಸೂರಿಗೆ ಒಬ್ಬ 19 ವರ್ಷದ ಹೆಣ್ಣುಮಗಳು ರೈಲಿನಲ್ಲಿ ಹೋಗುತ್ತಿದ್ದಳು. ಅವಳ ಹೆಸರು ಆಶಾರಾಣಿ. ಆ ಹುಡುಗಿಗೆ ಒಂದಷ್ಟು ಪೋಲಿ ಹುಡುಗರು ಸೇರಿಕೊಂಡು ರೈಲಿನಲ್ಲಿ ಎಲ್ಲಾ ಜನರು ಇರುವಾಗ ಆ ಹುಡುಗಿಗೆ molestation ಮಾಡಿ, ಮರ್ಯಾದೆ ತೆಗೆದು ಆ ಹುಡುಗಿಗೆ ದುಡ್ಡು ಕೊಡುತ್ತೇವೆಂದು ಕರೆದು, ಪಾಪ ಆ ಹುಡುಗಿಗೆ ಒಂದು compartment ನಿಂದ ಇನ್ನೊಂದು compartmentಗೆ ಹೋಗಲಿಕ್ಕೆ ಬಿಡಲೊಲ್ಲರು. ನೊಂದು ಕೊಂಡು ಆ ಹುಡುಗಿ ಇವತ್ತು ಹೇಳಿದೆ. ಬಿಡಿ ಎಂದರೂ ಬಿಡಲಿಲ್ಲ. ಆ ಹುಡುಗಿ ಕೆಳಕ್ಕೆ ಇಳಿಯಲಿಕ್ಕೆ ಹೋದರೆ ಆಚೆಗೆ ತಳ್ಳಿ ಬಿಟ್ಟಿದ್ದಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಈಗ ಯಾರಿಗೂ ಭಯ ಇಲ್ಲ. ಕಾನೂನು ಬಗ್ಗೆ ಭಯ ಇಲ್ಲ. ಪೊಲೀಸಿನವರ ಭಯ ಇಲ್ಲ. ಕೋರ್ಟ್‌ಗಳ ಮೇಲೆ ಭಯ ಇಲ್ಲ. ಸರ್ಕಾರ ಇದೆಯೋ ಇಲ್ಲವೋ ಎಂಬ ಬಗ್ಗೆ ಇವತ್ತು ಪ್ರಶ್ನೆ ಮಾಡಬೇಕಾಗುತ್ತದೆ. ಏನು ಮಾಡುತ್ತಿದ್ದೀರಿ? ಇತ್ತೀಚಿನ ಐದಾರು ತಿಂಗಳುಗಳಿಂದ ರೇಪ್‌ಗಳು ಜಾಸ್ತಿಯಾಗುತ್ತಿವೆ. ಮೈಸೂರಿನಲ್ಲಿ ಒಂಟಿ ಮಹಿಳೆ ಮನೆಗಳಲ್ಲಿ ಇರಲಿಕ್ಕಾಗುತ್ತಿಲ್ಲ. Rape ಮಾಡಿ murder ಮಾಡಿಬಿಡುತ್ತಾರೆ. ಈ ರೀತಿ ಅಸ್ಸಾಂನಲ್ಲಿ ಆಗುವ ಬಗ್ಗೆ ಕೇಳಿದ್ದೆವು. ಇಲ್ಲೆಲ್ಲ ಶುರುವಾಗಿ ಬಿಟ್ಟಿದೆ. ನೋಡಿ ಮೊನ್ನೆ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಹಾಡುಹಗಲಿನಲ್ಲಿ ಕೊಲೆ ಮಾಡಿದ್ದಾರೆ. 20–40 ಜನ ಬೀದಿಯಲ್ಲಿ ನಿಂತುಕೊಂಡು ಗ್ಯಾಂಗ್‌ವಾರ್ ಮಾಡುತ್ತಿದ್ದಾರೆ. ಬಿಹಾರದ ರೀತಿ

ಆಗಿಬಿಟ್ಟಿದೆ. Where is the law and order? Home Department ಏನು ಮಾಡುತ್ತಿದೆ? ಎರಡು ಸಾವಿರ ಕೋಟಿ ರೂಪಾಯಿಗಳನ್ನು ಪೊಲೀಸ್ ಇಲಾಖೆಗೆ ಖರ್ಚು ಮಾಡುತ್ತೇವೆ. Totally failed. Government has failed, Police Department has failed. This is the situation. ನಾವು ಸಂವಿಧಾನದಲ್ಲಿ ಬರೆದುಕೊಂಡಿದ್ದೇವೆ. ಎಲ್ಲರ ಮಾನ, ಆಸ್ತಿ ರಕ್ಷಣೆ ಮಾಡುವುದಕ್ಕೋಸ್ಕರ ಸರ್ಕಾರ ಇರುವಂಥದ್ದು. ಅವರ ಮಾನ ಹರಾಜು ಆಗುತ್ತಿದೆ. ಬೀದಿಪಾಲಾಗುತ್ತಿದೆ. ಮಾನಹರಣ ಆಗುತ್ತಿದೆ. ಅವರಿಗೆ ರಕ್ಷಣೆ ಕೊಡಲಿಕ್ಕಾಗುತ್ತಿಲ್ಲ. This is the Position. ಕಳ್ಳತನಗಳು, ದರೋಡೆಗಳು ಜಾಸ್ತಿಯಾಗುತ್ತಿವೆ. Law and order totally fail ಆಗಿದೆ. ಮಾನ್ಯ ಅಧ್ಯಕ್ಷರೆ, ಯಾವ ಇಲಾಖೆಯ ಬಗ್ಗೆ ಹೇಳುವುದು ನಾವು? Modernization of Policeಗೆ ದುಡ್ಡು ಇಟ್ಟರೆ ಅವರ ಖರ್ಚಿಗೆ ಸಾಕಾಗುವುದಿಲ್ಲ. ನಾವೆಲ್ಲಾ ಸಂಬಳ ಜಾಸ್ತಿ ಮಾಡುವುದು ದೊಡ್ಡ ದೊಡ್ಡ ಅಧಿಕಾರಿಗಳಿಗೆ, ಕೆಳಗಡೆ ಇರುವವರು, ಕಾನ್ಸ್‌ಟೇಬಲ್ಸ್, ದಫೇದಾರ್‌ಗಳು, ಸಬ್‌ಇನ್ಸ್‌ಪೆಕ್ಟರ್ಸ್ ಅವರಿಗೆ ಸಂಬಳ ಕಡಿಮೆ. ಕಾನ್ಸ್‌ಟೇಬಲ್ ಪಾಪ 24 ಗಂಟೆ ಆ ಬೂಟುಗಳನ್ನು ಹಾಕಿಕೊಂಡಿರುತ್ತಾರೆ. ವಾಟಾಳ್ ನಾಗರಾಜ್ ಒಂದು ಸಾರಿ ಭಾಷಣ ಮಾಡುತ್ತಿದ್ದರು. ಆ ಬೂಟು ಅರ್ಧ ಕೆ.ಜಿ. ಆ ಹ್ಯಾಟ್ ಅರ್ಧ ಕೆ.ಜಿ., ಬೆಲ್ಟ್ ಕಾಲು ಕೆ.ಜಿ. ಇವನ್ನೆಲ್ಲಾ ಹೊತ್ತುಕೊಂಡು ಓಡಿ ಎಂದರೆ ಎಲ್ಲಿ ಓಡುತ್ತಾರೆ? ಕೆಲವರಿಗೆ ಹೊಟ್ಟೆ ಬೇರೆ. Modernization ಆಗಬೇಕು. No exercise. ಅದಕ್ಕೆ ಎಲ್ಲಾ ಪೊಲೀಸರು ಸೆಕ್ಯುರಿಟಿಗೆಂದು ಬಂದು ಬಿಡುತ್ತಿದ್ದಾರೆ. ಸುಮಾರು ಜನರು ಸೆಕ್ಯೂರಿಟಿ ನನಗೆ ದೂರವಾಣಿಯಲ್ಲಿ, ಮೊಬೈಲ್‌ನಲ್ಲಿ threaten ಮಾಡಿದರು. ಅವರಿಗೆ ಪೊಲೀಸ್ ಕೊಡಿ. ಗನ್‌ಮ್ಯಾನ್‌ಗಳು ಕೊಡಿ ಎನ್ನುತ್ತಾರೆ. ಹಾಗಾಗಿ ನಮ್ಮ ಹತ್ತಿರ ಅವರೇ ಬಂದು ನಮ್ಮನ್ನು ಗನ್‌ಮ್ಯಾನ್‌ಗಳಾಗಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಏಕೆಂದರೆ ಅಲ್ಲಿ ಪೆರೇಡ್‌ನಲ್ಲಿ ಓಡಬೇಕು. ಅಲ್ಲಿ ಹೊಟ್ಟೆ ಕರಗಿಸಲಿಕ್ಕೆ ಆಗುವುದಿಲ್ಲ. ಅದಕ್ಕೆ ಇಲ್ಲಿಗೆ ಬಂದುಬಿಡುತ್ತಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಕಾನ್ಸ್‌ಟೇಬಲ್ಸ್‌ಗೆ, ಪೊಲೀಸ್ ಸ್ಟೇಷನ್‌ನಲ್ಲಿ, ಸ್ಟೇಷನ್‌ಹೌಸನಲ್ಲಿ ಯಾರಿರುತ್ತಾರೆ ಅವರಿಗೆ, ಸಬ್‌ಇನ್ಸ್‌ಪೆಕ್ಟರ್ಸ್, ಇನ್ಸ್‌ಪೆಕ್ಟರ್‌ಗಳಿಗೆ ಹೆಚ್ಚಿಗೆ ಸಂಬಳ ಕೊಡಬೇಕು. ರೌಡಿಗಳ ಜೊತೆಯಲ್ಲಿ, ಕ್ರಿಮಿನಲ್ಸ್ ಜೊತೆ ಹೋರಾಟ ಮಾಡುವವರು, ಅವರನ್ನು ಹಿಡಿಯುವವರು, ಅರೆಸ್ಟ್ ಮಾಡುವವರು ಅವರು, ಅವರಿಗೆ ಹೆಚ್ಚಾಗಿ

ಸಂಬಳ ಕೊಡಬೇಕು. ಅಲ್ಲಿ ಸುಧಾರಣೆ ಆಗಬೇಕು. ಮೇಲಾಧಿಕಾರಿಗಳಿಗಲ್ಲ, ಅವರೇನಿದ್ದರೂ, ಕೋಲು ಹಿಡಿದುಕೊಂಡು ತಿರುಗಾಡುವುದು ಅಷ್ಟೇ. ಇಲ್ಲಿಯೂ ಅಷ್ಟೇ, ಮೇಲಧಿಕಾರಿಗಳಿಗೆ ಯದ್ವಾತದ್ವಾ ಸಂಬಳ, ಕೆಳಗೆ ಪಾಪ ಅವರಿಗೆ ಆ ಗ್ರಾಮ ಸಹಾಯಕರಿಗೆ.. ಕಾರಜೋಳರವರೇ, ನಾನು ಹಣಕಾಸು ಮಂತ್ರಿಯಾಗಿದ್ದಾಗ ಅವರಿಗೆ consolidated pay ಮಾಡಿದೆ. ಹತ್ತು ಸಾವಿರ ಜನ ಗ್ರಾಮ ಸಹಾಯಕರು ಇದ್ದಾರೆ. ಎಲ್ಲಾ ಬಡವರು, majority of them ಪರಿಶಿಷ್ಟ ಜಾತಿಯಿಂದ ಬಂದವರು, ಗ್ರಾಮ ಸಹಾಯಕರು ಬಹಳ ಹಳೆಯ ಕಾಲದವರು ರೆವಿನ್ಯೂ ಇಲಾಖೆಯಲ್ಲಿದ್ದಾರೆ. ಹತ್ತು ಸಾವಿರ ಜನ ಇದ್ದಾರೆ. ಅವರಿಗೆ ತಿಂಗಳಿಗೆ 3,500–00 ರೂಪಾಯಿಗಳನ್ನು ಕೊಡುತ್ತೇವೆ. ಪಾಪ ಅವರಿಗೆ ಅದು ಸಾಲುವುದಿಲ್ಲ. ಅವರನ್ನೆಲ್ಲಾ permanent ಮಾಡಿಕೊಳ್ಳಿ. ಅವರಿಗೆಲ್ಲಾ ವಯಸ್ಸಾಗುತ್ತಾ ಬಂತು. Retire ಆಗುತ್ತಿದ್ದಾರೆ. ಅವರಿಗೆ ಜೀವನ ಮಾಡಲಿಕ್ಕೆ ತೊಂದರೆ ಇದೆ. ಮಕ್ಕಳಿಗೆ ಓದಿಸಲಿಕ್ಕಾಗುತ್ತಿಲ್ಲ. ಅವರೇ ಜಾಸ್ತಿ ಕೆಲಸ ಮಾಡುವುದು. ಆ ಫೈಲ್ ಅಲ್ಲಿಂದ ಇಲ್ಲಿಗೆ ಎತ್ತಿಕೊಂಡು ಬರುವುದು. ಗ್ರಾಮ ಸಹಾಯಕರೇ ತಹಶೀಲ್ದಾರ್ Revenue Inspector ಹೇಳಿದಂತೆ ಕೇಳುವುದು.

ಶ್ರೀ ಬಿ.ಎನ್. ಬಚ್ಚೇಗೌಡ : – permanent ಎಂದಲ್ಲ. ಗೌರವ ಧನವೆಂದು ಕೊಡುತ್ತಿದ್ದಾರೆ. ಅದನ್ನು ಮಾಡಿದ್ದು ತಾವೇ.

ಶ್ರೀ ಸಿದ್ದರಾಮಯ್ಯ : – ಮೊದಲು ರೂ. 3,000/– ಗಳಿದ್ದು, ಈಗ 3,500 ರೂ.ಗಳಿರಬಹುದು, 500 ರೂ.ಗಳನ್ನು ಹೆಚ್ಚು ಮಾಡಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : – ಇಲ್ಲಾ, ಈಗ ಒಂದು ಸಾವಿರ ರೂ. ಗಳನ್ನು ಹೆಚ್ಚು ಮಾಡಿರುವುದು. ಈಗ ನಾಲ್ಕು ಸಾವಿರ ರೂ. ಗಳು ಇರಬಹುದು.

ಶ್ರೀ ಸಿದ್ದರಾಮಯ್ಯ : – ಇಲ್ಲಾ ನನಗೆ ನೆನಪಿರುವ ಮಟ್ಟಿಗೆ 3,500 ರೂ. ಗಳು. ಇದು ಈ ಕಾಲದಲ್ಲಿ ಸಾಕಾಗುತ್ತದೆಯೇ? ಒಂದು ಕೆ.ಜಿ. ಅಕ್ಕಿ 20 ರೂ.ಗಳಾಗಿರುವ ಕಾಲದಲ್ಲಿ ಸಾಕಾಗುತ್ತದೆಯೇ? ಅವರು ಗ್ರಾಮ ಸಹಾಯಕರಾಗಿದ್ದಾರೆಂದು ಹೇಳಿ ಅವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವುದಿಲ್ಲ. ಅವರಿಗೆ facilities ಸಿಕ್ಕುವುದಿಲ್ಲ. ಆದ್ದರಿಂದ ಅವರನ್ನು permanent ಆಗಿ recruit ಮಾಡಿಕೊಳ್ಳಿ. ಅವರೆಲ್ಲಾ 90% Scheduled Caste ನವರು. You have to take it up. ಇದು ನಿಮ್ಮ ಇಲಾಖೆಗೆ ಬರುತ್ತದೆ. ಅದನ್ನು ಮಾಡಿ ಈ ರೀತಿಯಾದ ಕಾರ್ಯಕ್ರಮಗಳನ್ನು ಮಾಡಿದರೆ at least, ನಾವು ಬಡವರಿಗೆ

ರಕ್ಷಣೆ ಕೊಟ್ಟ ಹಾಗೆ ಆಗುತ್ತದೆ. ಅವರಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ಕೊಟ್ಟ ಹಾಗೆ ಆಗುತ್ತದೆ. ಈ ರೀತಿ ಮಾಡಬೇಕು. ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆಂಬುದು ಮುಖ್ಯವಲ್ಲ. ಯಾರಿಗೆ ಮಾಡಿದ್ದೇವೆ. ಮತ್ತು ಹೇಗೆ ಖರ್ಚು ಮಾಡಿದ್ದೇವೆ, ಯಾವ ಜನರಿಗೆ ಕೊಟ್ಟಿದ್ದೇವೆಂಬುದು ಬಹಳ ಮುಖ್ಯವಾಗುತ್ತದೆ. ಇನ್ನೂ ಅನೇಕ ಇಲಾಖೆಗಳ ಬಗ್ಗೆ ಮಾತನಾಡಬೇಕಾಗಿದ್ದರೂ ಸಹ ಸಮಯದ ಅಭಾವವಿರುವುದರಿಂದ ಮತ್ತು ಅವರೇನೋ ಉತ್ತರವನ್ನು ಕೊಡಲೇಬೇಕೆಂದು ಕಾಯುತ್ತಾ ಕುಳಿತಿದ್ದಾರೆ, ಈಗಲೂ ನೀವು ಸಲಹೆ ಮಾಡಿದರೆ ಸೋಮವಾರ ಒಂದೆರೆಡು ಗಂಟೆಗಳ ಸಮಯ ಮಾತನಾಡಿ ನಂತರ ಉತ್ತರ ಕೊಡುವುದಾದರೆ ಅನುಕೂಲವಾಗುತ್ತದೆಂದು ನನಗನಿಸುತ್ತದೆ. ಬೇಡವೆಂದರೆ ಹೇಳಿ, ಏಕೆಂದರೆ ಒಪ್ಪಿಕೊಂಡುಬಿಟ್ಟಿದ್ದೇವಲ್ಲ ಆ ಕಾರಣಕ್ಕೋಸ್ಕರ ನಿಮ್ಮ ಮಾತಿಗೆ ಕಟ್ಟು ಬಿದ್ದು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಮತ್ತು ಇವರ ಎಲ್ಲಾ ಡಿಮ್ಯಾಂಡ್‌ಗಳನ್ನು ತೀವ್ರವಾಗಿ ವಿರೋಧ ಮಾಡುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು : – 2012–13 ನೇ ಸಾಲಿನ ಅನುದಾನ ಬೇಡಿಕೆಗಳ 'ಮೇಲಿನ ಚರ್ಚೆ ಮುಕ್ತಾಯವಾಗಿದ್ದು, ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳೇ, ಹಿಂದೆ Fisheries Department ನಿಂದ ಮೀನುಗಾರರಿಗೆ ಕೆರೆಗಳನ್ನು ಗುತ್ತಿಗೆಗೆ ಕೊಡಲಾಗಿತ್ತು. ಆ ಕೆರೆಗಳು ಬರಗಾಲದಿಂದ ಬತ್ತಿ ಹೋಗಿದೆ. ಕಳೆದ ವರ್ಷ ಕೆರೆಯಲ್ಲಿ ನೀರಿಲ್ಲದೆ ಅವರಿಗೇನೂ ಸಿಕ್ಕಿಲ್ಲ, ತುಂಬಾ ಕಷ್ಟದಲ್ಲಿದ್ದಾರೆ. ಆದ್ದರಿಂದ ಅವರಿಗೆ ಗುತ್ತಿಗೆ ಅವಧಿಯನ್ನು ಮತ್ತೊಂದು ವರ್ಷಕ್ಕೆ ಮುಂದುವರೆಸುವ ಬಗ್ಗೆ ಅವರನ್ನು ಕರೆದು ಮಾತನಾಡಿ ಅನುಕೂಲ ಮಾಡಿಕೊಡತಕ್ಕಂತಹ ಕೆಲಸ ಮಾಡಬೇಕು.

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ, ಇವತ್ತು ಈ ಒಂದು ಬಜೆಟ್ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹೆಚ್.ಡಿ. ರೇವಣ್ಣನವರು, ಮಾನ್ಯ ಟಿ.ಬಿ. ಜಯಚಂದ್ರರವರು ಮತ್ತು ಒಟ್ಟು 26 ಜನ ಮಾನ್ಯ ಶಾಸಕರು ಚರ್ಚೆಯಲ್ಲಿ

ಸಕ್ರಿಯವಾಗಿ ಭಾಗವಹಿಸಿದ್ದಾರೆ. ಬಹಳ ಅತ್ಯುತ್ತಮವಾದ ಸಲಹೆಗಳನ್ನು ಅವರು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆಂಬ ಮಾತನ್ನು ಹೇಳಬಯಸುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ಆಡಳಿತ ವ್ಯವಸ್ಥೆ ಹೇಗಿರಬೇಕು, ಎಲ್ಲೆಲ್ಲಿ ಲೋಪದೋಷಗಳಿವೆ ಯಾವ ರೀತಿ ಸುಧಾರಣೆ ಮಾಡಬೇಕು ಎಂಬುದರ ಬಗ್ಗೆ ಸಾಕಷ್ಟು ವಿಚಾರ ಹಾಗೂ ಸಲಹೆಗಳನ್ನು ಅವರು ಕೊಟ್ಟಿದ್ದಾರೆನ್ನುವುದನ್ನು ಹೇಳಬಯಸುತ್ತೇನೆ. ಇದಲ್ಲದೆ ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಹಲವಾರು ಪ್ರಮುಖ ವಿಚಾರಗಳ ಬಗ್ಗೆ ತಮ್ಮ ಅನುಭವದ ಮಾತುಗಳನ್ನು ಹೇಳಿದ್ದಾರೆ. ಈ ಬಜೆಟ್ ಮಂಡನೆಯಾದ ಸಂದರ್ಭದಲ್ಲಿ ಮಾನ್ಯ ಡಿ.ವಿ. ಸದಾನಂದಗೌಡರು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳಾಗಿದ್ದರು. ಈ ಬಜೆಟ್ ಮಂಡನೆಯಾದ ಮೇಲೆ vote on account ತೆಗೆದುಕೊಂಡಿದ್ದೇವೆ. ಅದಾದ ನಂತರ ಪೂರ್ಣ ಬಜೆಟ್‌ಗೆ ಒಪ್ಪಿಗೆಯನ್ನು ಪಡೆಯುವ ಜವಾಬ್ದಾರಿ ನನ್ನ ಮೇಲೆ ಬಂದಿದೆ ಅದಕ್ಕೆ ನಮ್ಮ ಶಾಸಕರು ಮತ್ತು ನಾಯಕರು ಮಾತನಾಡಿದ್ದಾರೆ. ಆ ವಿಷಯಗಳಿಗೆ ಸಂಬಂಧಪಟ್ಟಂತೆ ನಾನು ಕೆಲವೊಂದು ಸ್ಪಷ್ಟೀಕರಣವನ್ನು ಕೊಡುತ್ತೇನೆ. ಈ ಒಂದು ಬಜೆಟ್ ಹಿನ್ನೆಲೆಯಲ್ಲಿ ಮುಖ್ಯವಾದ ವಿಚಾರಗಳು ಮತ್ತು ಯಾವ ರೀತಿ ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿಯಿದೆ, ಅಕ್ಕಪಕ್ಕದ ರಾಜ್ಯಗಳಲ್ಲಿರುವ ಹಣಕಾಸಿನ ಪರಿಸ್ಥಿತಿಗೆ comparison ಮಾಡುತ್ತಾ ಇವತ್ತಿನ ನಮ್ಮ ಹಣಕಾಸಿನ ವ್ಯವಸ್ಥೆ ಮೇಲೆ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಕರ್ನಾಟಕದಲ್ಲಿ ನಮ್ಮ ಸರ್ಕಾರ ಆಡಳಿತಕ್ಕೆ ಬಂದ ನಂತರ ಇರಬಹುದು ಅಥವಾ ಹಿಂದಿನ ಸರ್ಕಾರಗಳಿರಬಹುದು, ಈ ಒಂದು ಹಣಕಾಸಿನ ವಿಚಾರದಲ್ಲಿ ಆ ವ್ಯವಸ್ಥೆಯನ್ನು ಅತ್ಯಂತ ಪ್ರಮಾಣಿಕವಾಗಿ ಹಾಗೂ ಉತ್ತಮವಾದ ವ್ಯವಸ್ಥೆಯನ್ನು quality management ಮಾಡುವುದರಲ್ಲಿ ದೇಶದಲ್ಲೇ ಕರ್ನಾಟಕಕ್ಕೆ ಬಹಳ ಒಳ್ಳೆಯ ಹೆಸರಿದೆ. ಹೀಗಾಗಿ ಬಹುಶಃ ಆ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಮುಂದುವರೆದಿದ್ದರಿಂದ ಉತ್ತಮ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ನಡೆಸಿಕೊಂಡು ಬರುತ್ತಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮತ್ತು ನಮ್ಮ ರಾಜ್ಯದ ಇತಿಹಾಸದಲ್ಲಿ ಒಂದು ಲಕ್ಷ ಕೋಟಿ ರೂ. ಗಳ ಬಜೆಟನ್ನು ಇವತ್ತು ನಾವು ಮಂಡನೆ ಮಾಡಿದ್ದೇವೆ. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ಲಕ್ಷ

ಕೋಟಿ ರೂ. ಗಳ ಬಜೆಟ್‌ನ್ನು ಮಂಡನೆ ಮಾಡಬೇಕೆಂಬ ಮಾತನ್ನು ಹಾಗೂ ನಮ್ಮ ಸರ್ಕಾರ ಮಂಡನೆ ಮಾಡುತ್ತದೆ ಎಂಬ ಮಾತನ್ನು ಪ್ರತಿ ಹಂತದಲ್ಲಿ ಹೇಳುತ್ತಿದ್ದರು. ಅವರೇನು ಕನಸು ಕಂಡಿದ್ದರೋ ಆ ಕನಸು ಇವತ್ತು ನನಸಾಗಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕೆ ತಕ್ಕಂತೆ ಆಯವ್ಯಯಗಳನ್ನು ಸಹ ನಾವು ನಿರೂಪಣೆ ಮಾಡಬೇಕಾಗುತ್ತದೆ. ಕೇವಲ ಒಂದು ಲಕ್ಷ ಕೋಟಿ ರೂ. ಗಳ ಬಜೆಟ್ ಮಂಡನೆ ಮಾಡುತ್ತಿದ್ದೇವೆನ್ನುವುದು ಅಷ್ಟೇ ಅಲ್ಲ, ಅದರ ಪೂರ್ವ ತಯಾರಿಯನ್ನು ಕೂಡ ಮಾಡಬೇಕಾಗುತ್ತದೆ. ಈ ಹಂತದಲ್ಲಿ ಅದಕ್ಕೊಂದು ರೂಪವನ್ನು ಕೂಡ ಕೊಡಬೇಕಾಗುತ್ತದೆ. ಆ ರೀತಿ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಆ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳಷ್ಟು ಆರ್ಥಿಕವಾದ ಹಿಂಜರಿಕೆಗಳಿರಬಹುದು, ಬಹಳಷ್ಟು ಸಮಸ್ಯೆಗಳಿರಬಹುದು ಅಂಥ ಸಂದರ್ಭದಲ್ಲಿ ಸಹ ನಮ್ಮ ಹಣಕಾಸಿನ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇವೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ಬಜೆಟ್ ಗಾತ್ರ, ಯೋಜನಾ ಗಾತ್ರ, plan outlay ಇವೆಲ್ಲಾ ಪ್ರತಿ ವರ್ಷದ ಬಜೆಟ್ ನೋಡಿದಾಗ ಹೆಚ್ಚಳ ಕಂಡು ಬಂದಿರುವುದನ್ನು ನಾನು ನೋಡುತ್ತಿದ್ದೇನೆ. ಸಂಪನ್ಮೂಲ ಸುಧಾರಣೆಗೆ ಸಹಿತ ಇವತ್ತು ಹೆಚ್ಚಿನ ರೀತಿಯಾದ ಗಮನವನ್ನು ಕೊಟ್ಟಿದ್ದೇವೆ. ಸಾಮಾನ್ಯ ವೆಚ್ಚಕ್ಕಿಂತ ಸಾಮಾಜಿಕ ವಲಯ ಮತ್ತು ಆರ್ಥಿಕ ವಲಯ ಇದಕ್ಕೆ ಹೆಚ್ಚು ಒತ್ತು ಕೊಡುವ ಕೆಲಸವನ್ನು ನಾವು ಮಾಡಿದ್ದೇವೆ. ಸಾಮಾನ್ಯ ವೆಚ್ಚಕ್ಕಿಂತ ಸಾಮಾಜಿಕ ವಲಯ ಮತ್ತು ಆರ್ಥಿಕ ವಲಯ ಇದಕ್ಕೆ ಹೆಚ್ಚು ಒತ್ತು ಕೊಡುವುದರಿಂದ ಹೆಚ್ಚು ಜನರಿಗೆ ಸರಿಯಾದಂತಹ ಸೌಲಭ್ಯಗಳು, ಉತ್ತಮವಾದ ಶಿಕ್ಷಣ ವ್ಯವಸ್ಥೆ ಹಾಗೂ ಉತ್ತಮ ಆರೋಗ್ಯ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಸಹ ಈ ಬಜೆಟ್ ಮುಖಾಂತರ ನಾವು ಮಾಡುತ್ತಿದ್ದೇವೆ. ವಿತ್ತೀಯ ಕೊರತೆಯನ್ನು ನಿಯಂತ್ರಣ ಮಾಡುವುದು ಹಣಕಾಸಿನ ಶಿಸ್ತನ್ನು ಕಾಪಾಡಿಕೊಂಡು ಹೋಗುವುದು ಮತ್ತು ಬಂಡವಾಳ ವೆಚ್ಚದಲ್ಲಿ ಹೆಚ್ಚಳ capital expenses ಅನ್ನು ಹೆಚ್ಚಳ ಮಾಡುವ ಕೆಲಸಗಳನ್ನು ಸಹ ನಾವು ಮಾಡಿದ್ದೇವೆ. ಹೀಗಾಗಿ ನಾನು ಸಂತೋಷದಿಂದ ಹೇಳುವಂತಹದೇನೆಂದರೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ, ಹಣಕಾಸಿನ

ಆರೋಗ್ಯ ಬಹಳ ಉತ್ತಮವಾಗಿದೆಯೆನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕಳೆದ ವರ್ಷ ಕೂಡ ಭೀಕರವಾದ ಬರಗಾಲವನ್ನು ನಾವು ಅಲ್ಲಿಂದ ಇಲ್ಲಿಯವರೆಗೆ ಎದುರಿಸುತ್ತಾ ಬಂದಿದ್ದೇವೆ. ಅಂತಹದರಲ್ಲಿಯೂ ಸಹ ಈ ಒಂದು ಆರ್ಥಿಕ ಹಣಕಾಸಿನ ಉತ್ತಮ ನಿರ್ವಹಣೆಯನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಕೆಲವೊಂದು ವಿಚಾರಗಳ ಬಗ್ಗೆ revenue receipts, fiscal management, ನಿರ್ವಹಣೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. 2011–12ನೇ ಸಾಲಿನ fiscal management (ವಿತ್ತೀಯ ನಿರ್ವಹಣೆ) ಬಗ್ಗೆ ಎಲ್ಲಾ ವಿತ್ತೀಯ ಸೂಚಕಾಂಶಗಳನ್ನು ಪರಿಗಣಿಸಿದಲ್ಲಿ 2010–11 ಸಾಲಿಗಿಂತ 2011–12ನೇ ಸಾಲಿನ ವಿತ್ತೀಯ ನಿರ್ವಹಣೆಯು ಗಣನೀಯ ಪ್ರಮಾಣದಲ್ಲಿ ಉತ್ತಮಗೊಂಡಿದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. 2010–11ನೇ ಸಾಲಿಗೆ ಹೋಲಿಸಿದಾಗ ರೂ. 58,439 ಕೋಟಿ ಮತ್ತು 2011–12ನೇ ಸಾಲಿನಲ್ಲಿ ರೂ. 69,800 ಕೋಟಿ ಋಣಯೇತರ ಸ್ವೀಕೃತವಾಗಿದ್ದು, ಇದು 19% ರಷ್ಟು ಹೆಚ್ಚಾಗಿದೆಯೆಂಬುದನ್ನು ಹೇಳಬಯಸುತ್ತೇನೆ. ಕಳೆದ ಹಿಂದಿನ ಸಾಲುಗಳಲ್ಲಿ ನೋಡಿದಾಗ ರಾಜಸ್ವ revenue receipts ಅನ್ನು ಪ್ರತಿ ಹಂತದಲ್ಲಿ ಹೆಚ್ಚಳವನ್ನು ನಾವು ಮಾಡಿಕೊಂಡು ಬಂದಿದ್ದೇವೆ. revenue receipts 4,981 ಕೋಟಿ ರೂ. ಗಳು. 2010–11ನೇ ಸಾಲಿನಲ್ಲಿ 4,172 ಕೋಟಿ ರೂ. ಗಳು, ಕಳೆದ ವರ್ಷ 4, 981 ಕೋಟಿ ರೂ. ಗಳು, ಅಂದರೆ ನಾವು ಹೆಚ್ಚಳವನ್ನು ಪಡೆದುಕೊಂಡು ಬಂದಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗಾಗಿ ವಿತ್ತೀಯ ಕೊರತೆ, ಆರ್ಥಿಕ ನೀತಿಯ ಪ್ರಕಾರ deficit 3% ದಾಟಬಾರದೆಂದು ಇದೆ. ಆರ್ಥಿಕ ನೀತಿಯ ಪ್ರಕಾರ deficit 2.78% ಇದ್ದು ಅದನ್ನು maintain ಮಾಡಿಕೊಂಡು ಬಂದಿದ್ದೇವೆಂದು ಹೇಳುತ್ತಿದ್ದೇನೆ. plan expenditure ಬಗ್ಗೆ ಹೇಳುವುದಾದರೆ ಕಳೆದ ವರ್ಷ 38,070 ಕೋಟಿ ರೂ.ಗಳಿಗೆ plan expenditure ಅನ್ನು ನಿಗದಿ ಮಾಡಲಾಗಿತ್ತು. ತಾತ್ಕಾಲಿಕ ಲೆಕ್ಕದ ಪ್ರಕಾರ 38,433 ಕೋಟಿ ರೂ. ಗಳಿಗೆ ಸಾಧನೆ ಮಾಡಿದ್ದೇವೆ. ಹೀಗೆ 2010–11 ನೇ ಸಾಲಿನಲ್ಲಿ 31,154 ಕೋಟಿ ರೂ. ಗಳ ಸಾಧನೆಗಿಂತ ಶೇ .23 ರಷ್ಟು ಹೆಚ್ಚಳದ ಸಾಧನೆ ಮಾಡಿದ್ದೇವೆ. ಒಂದೊಂದು ವರ್ಷದಲ್ಲಿ 23% ಅನ್ನು ನಾವು ನೋಡಿದಾಗ ಸಾಧನೆ ಎಷ್ಟಿದೆ ಎಂಬುದನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ. 2011–12 ರಲ್ಲಿ qualitative expenditure

ಒಟ್ಟು ವೆಚ್ಚ 85 ಸಾವಿರ ಕೋಟಿ 11 ಲಕ್ಷ. 2010-11 ನೇ ಸಾಲಿನಲ್ಲಿ 71,934 ಕೋಟಿ ರೂ. ಗಳು 2010-11ನೇ ಸಾಲಿನಲ್ಲಿ 71,934 ಕೋಟಿ ರೂ. ಗಳಿದ್ದು, 2011-12ನೇ ಸಾಲಿನಲ್ಲಿ 85 ಸಾವಿರ ಕೋಟಿ 11 ಲಕ್ಷ ಅಂದರೆ ಶೇ. 18 ರಷ್ಟು qualitative expenditure ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗಾಗಿ ಯೋಜನಾ ವೆಚ್ಚದಲ್ಲೂ ಶೇ. 19 ರಷ್ಟು ಹೆಚ್ಚಳವಾಗಿದೆ. ಯೋಜನೇತರ ವೆಚ್ಚವನ್ನು ಶೇ.17ಕ್ಕೆ ಮಿತಿಗೊಳಿಸಿದ್ದೇವೆ. ಬಹಳ ಮುಖ್ಯವಾದುದೆಂದರೆ, Tax collection. Revenue collection ನಲ್ಲಿ Tax collection ಬಹಳ ಉತ್ತಮವಾದ ಪ್ರಗತಿಯನ್ನು ಸಾಧನೆ ಮಾಡಿದ್ದೇವೆ. 2011-12ನೇ ಸಾಲಿನಲ್ಲಿ ಸ್ವಂತ ತೆರಿಗೆ Revenue collection 46,000 ಕೋಟಿ 341 ಲಕ್ಷ ರೂ. ಗಳು. 2010-11 ನೇ ಸಾಲಿನ ಸಂಗ್ರಹಣೆಗಿಂತ 7,868 ಕೋಟಿ ರೂ. ಗಳು, ಅಂದರೆ 2011-12ನೇ ಸಾಲಿನಲ್ಲಿ ಶೇ. 20 ರಷ್ಟು ಅಧಿಕವಾಗಿದೆ. 43,817 ಕೋಟಿ ಆಯವ್ಯಯ ಅಂದಾಜುಗಳ ಪಟ್ಟಿಯಾಗಿ, ಅದಕ್ಕೆ ವ್ಯತಿರಿಕ್ತವಾಗಿ 46, 341 ಕೋಟಿ ರೂ. ಗಳ tax collection ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆಯವ್ಯಯದಲ್ಲಿ ನಮಗಿದ್ದ ನಿರೀಕ್ಷೆಗಿಂತಲೂ 2,524 ಕೋಟಿ ರೂ. ಗಳನ್ನು ಬೇರೆ ಬೇರೆಯಾಗಿ split ಮಾಡಿ ಅಧಿಕವಾಗಿ tax collection ಮಾಡಿದ್ದೇವೆ. 2010-11ನೇ ಸಾಲಿಗೆ ಹೋಲಿಕೆ ಮಾಡಿ ನೋಡಿದಾಗ ಯಾವ್ಯಾವ ಇಲಾಖೆಯಿಂದ ಎಷ್ಟು ಹಣ ಬಂದಿದೆ ಎಂಬುದಕ್ಕೆ, 2011-12ನೇ ಸಾಲಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 28,148 ಕೋಟಿ ರೂ. ಗಳ ಸಂಗ್ರಹವಾಗಿದ್ದು, ಇದನ್ನು 2010-11ಕ್ಕೆ ಹೋಲಿಕೆ ಮಾಡಿದಾಗ ಶೇ.22 ರಷ್ಟು ಅಧಿಕವಾಗಿದೆ. ಅಬಕಾರಿ ಇಲಾಖೆಯಿಂದ 9,775 ಕೋಟಿ ರೂ ಗಳ ಸಂಗ್ರಹವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದಾಗ ಶೇ.18 ರಷ್ಟು ಜಾಸ್ತಿಯಾಗಿದೆ. Stamps and Registration ಇಲಾಖೆಯಿಂದ 4,623 ಕೋಟಿ ರೂ. ಗಳು ಸಂಗ್ರಹವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದಾಗ ಶೇ 31 ರಷ್ಟು ಅಧಿಕವಾಗಿದೆ ಮತ್ತು Motor Vehicles tax ನಿಂದ 2,982 ಕೋಟಿ ರೂ. ಗಳು ಸಂಗ್ರಹವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದಾಗ ಶೇ. 17 ರಷ್ಟು ಅಧಿಕವಾಗಿದೆ. ಅಂದರೆ, ಹಿಂದಿನ ವರ್ಷಕ್ಕೆ, ಅದರ ಹಿಂದಿನ ವರ್ಷಕ್ಕೆ ಹೋಲಿಸಿದಾಗ, ಎಷ್ಟೊಂದು ಹಣ ಸಂಗ್ರಹವಾಗಿದೆಯನ್ನುವುದನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕು. ಹೀಗಾಗಿ ಆರ್ಥಿಕ ನಿರ್ವಹಣೆಯನ್ನು ನಾವು ಇಂದು

ಇಲ್ಲಿ ಹೋಲಿಕೆ ಮಾಡಬಹುದು. Collection of revenue ನಲ್ಲಿ ಅಕ್ಕ ಪಕ್ಕದ, ರಾಜ್ಯಗಳಿಗೆ ಹೋಲಿಸಿದಾಗ ವಾಣಿಜ್ಯ ತೆರಿಗೆ ಸಂಗ್ರಹಣೆ ನಮ್ಮ ಕರ್ನಾಟಕ ರಾಜ್ಯದಲ್ಲಿ 2011–12ನೇ ಸಾಲಿಗೆ ಶೇ. 22 ರಷ್ಟು, ಮಹಾರಾಷ್ಟ್ರದಲ್ಲಿ ಶೇ.11, actually Maharashtra is a Commercial State. Bobay is a commercial city in international level. ಮಹಾರಾಷ್ಟ್ರದಲ್ಲಿ ಶೇ.11 ಇದ್ದರೆ, ಕರ್ನಾಟಕದಲ್ಲಿ ಶೇ.22 ಇದೆ. ಆಂಧ್ರ ಪ್ರದೇಶದಲ್ಲಿ ಶೇ.13 ಕೇರಳ ಶೇ.23, ಅಂದರೆ ಕೇರಳ ಒಂದು ಚಿಕ್ಕ ರಾಜ್ಯ, ಅವರಿಗೂ ನಮಗೂ ಹೋಲಿಸಿದರೆ ಶೇ.1 ರಷ್ಟು ಮಾತ್ರ ವ್ಯತ್ಯಾಸವಿದೆ. ಹೀಗಾಗಿ ಈ ರೀತಿಯ ಹೋಲಿಕೆಗಳನ್ನು ಮಾಡಿದಾಗ ಉತ್ತಮವಾದ ವ್ಯವಸ್ಥೆ ನಮ್ಮ ರಾಜ್ಯದಲ್ಲಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಬಡ್ಡಿ ಪಾವತಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವ ಹಾಗೆ ಸಾಲ ನೀವು ಜಾಸ್ತಿ ತೆಗೆದುಕೊಂಡಿದ್ದೀರಿ. debts ಜಾಸ್ತಿ ಇದೆ, liability ಇದೆ ಎನ್ನುವ ಮಾತುಗಳನ್ನು ಪ್ರತಿ ಹಂತದಲ್ಲಿಯೂ ಅವರು ಹೇಳುತ್ತಾ ಬಂದಿದ್ದಾರೆ. ಅದಕ್ಕೆ ಬಡ್ಡಿ ಎಷ್ಟು ಸೇರಿಸಿ ಕೊಡುತ್ತೇವೆ, ಮತ್ತು ಇದಕ್ಕೆ ಒಂದು restriction ಇದೆ. Government of India ಇರಬಹುದು, Planning Commission ಇರಬಹುದು, ನಾವು ಎಷ್ಟು ಸಾಲ ತೆಗೆದುಕೊಳ್ಳಬೇಕು, ಎಷ್ಟು ಬಡ್ಡಿ ಕೊಡಬೇಕು, ಎನ್ನುವ ಬಗ್ಗೆ ಸಾಕಷ್ಟು restrictions ಇವೆ. ಆ ಒಂದು ಪರಿಧಿಯೊಳಗೆ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾವ ರಾಜ್ಯವೂ ಸಹ ಸಾಲವಿಲ್ಲದೇ ಸರ್ಕಾರ ನಡೆಸಿರುವುದಿಲ್ಲ. ಎಲ್ಲರೂ ಸಾಲವನ್ನು ತೆಗೆದುಕೊಂಡಿದ್ದಾರೆ. ಆದರೂ ಅದಕ್ಕೆ ಒಂದು limitation ಇದೆ. Within the purview ನಾವು ಮಾಡುತ್ತಿದ್ದೇವೆ. ಬಡ್ಡಿ ಪಾವತಿಯಲ್ಲಿ restriction ಇರುವುದು ರಾಜಸ್ವ ಸ್ವೀಕೃತಿ, ರೆವಿನ್ಯೂ ರೆಸೀಟ್ಸ್ ನಲ್ಲಿ ಹಣ ಪಾವತಿ ಮಾಡುವಾಗ ಶೇ. 15ಕ್ಕಿಂತ ಜಾಸ್ತಿ interest ಪಾವತಿಯಾಗಬಾರದೆಂದು restriction ಇದೆ. 2011–12ನೇ ಸಾಲಿನ ಲೆಕ್ಕಾಚಾರ ತೆಗೆದುಕೊಂಡಾಗ ನಮ್ಮ ರಾಜ್ಯ ಬಡ್ಡಿ ಪಾವತಿ ಶೇ. 8.7 ರಷ್ಟಿದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಹೋಲಿಕೆ ಮಾಡಿ ನೋಡಿದಾಗ interest ಪೇಮೆಂಟ್ ಕಡಿಮೆಯಾಗುತ್ತಾ ಹೋಗುತ್ತಿದೆ.

ಶ್ರೀ ಸಿದ್ದರಾಮಯ್ಯ : – If you don't mind, ಒಂದು ನಿಮಿಷ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಹೇಳಿದ ಮೇಲೆ ನೀವು

ಕುಳಿತುಕೊಳ್ಳುವುದಿಲ್ಲವೆಂದರೆ ಹೇಗೆ? ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಕುಳಿತುಕೊಳ್ಳುತ್ತಿರಲಿಲ್ಲ. ನೀವು ಅದೇ ರೀತಿ ಮಾಡಿದರೆ ಹೇಗೆ? I have not mentioned anywhere. ನೀವು Fiscal Responsibility Act ನಲ್ಲಿ ಏನು ಟಾರ್ಗೆಟ್ ಇದೆ ಅದನ್ನೆಲ್ಲವನ್ನೂ ಮೀರಿ ಹೋಗಿದ್ದೀರೆಂದು ನಾನು ಹೇಳುತ್ತಿಲ್ಲ. I didn't say. ನಾನು ಹೇಳುವುದೇನೆಂದರೆ ಇನ್ನೂ ಕೂಡ resources ಅನ್ನು mobilize ಮಾಡುವುದಕ್ಕೆ ಅವಕಾಶವಿತ್ತು ಎಂದು ಹೇಳುತ್ತಿದ್ದೇನೆ. Non-tax revenue side ನಲ್ಲಿ ಇನ್ನೂ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಅವೆಲ್ಲವನ್ನೂ ನೀವು ಮಾಡಿದ್ದರೆ 27,000 ಕೋಟಿ ರೂ. ಗಳ ಸಾಲ ತೆಗೆದುಕೊಳ್ಳುವ ಅಗತ್ಯ ಇರುತ್ತಿರಲಿಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

That is my point. Not that, ಬಾಗಿಲು ಎಲ್ಲಿಯವರೆಗೆ ಇದೆಯೋ ಅಲ್ಲಿಯವರೆಗೆ ಬೆಳೆಯುತ್ತೇನೆ ಎನ್ನುವುದಲ್ಲ. ಇದರಲ್ಲಿ ಇನ್ನೂ ಸ್ವಲ್ಪ ಮೊತ್ತ ಉಳಿದುಕೊಂಡರೆ ಬೇರೆ ಅಭಿವೃದ್ಧಿ ಕೆಲಸಗಳನ್ನು ಮಾಡಬಹುದಲ್ಲವೇ? Debt service, non-developmental expenditure ಕಡಿಮೆ ಆದರೆ, ಮತ್ತೊಂದು ಏನಾದರೂ ಕಡಿಮೆಯಾದರೆ, non-tax revenue collection ಜಾಸ್ತಿಯಾದರೆ 27,000 ಕೋಟಿ ರೂ.ಗಳ ಬದಲಾಗಿ, 20,000 ಅಥವಾ 22,000 ಕೋಟಿ ತೆಗೆದುಕೊಂಡರೆ ನಿಮಗೆ assets creationsಗೆ ಅನುಕೂಲ ಆಗುತ್ತದೆ ಅಲ್ಲವೇ? Plan side ನಲ್ಲಿ ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ. That is my point.

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಬೇರೆ ಕಡೆ ಕೂಡ resource mobilization ಮಾಡಲಿಕ್ಕೆ ಸಾಧ್ಯವಿದೆ. encroachment of the lands ಬಗ್ಗೆ ಬಹಳಷ್ಟು ಮಾತನಾಡಿದರು land ಅನ್ನು ಹರಾಜು ಮೂಲಕ ಮಾರಾಟ ಮಾಡಿದ್ದರೆ ಸಾಕಷ್ಟು revenue ಬರುತ್ತದೆ. ಈ ವಿಷಯವನ್ನು ಬಹಳ serious ಯಾಗಿ ಯೋಚನೆ ಮಾಡುತ್ತಿದ್ದೇನೆ. ಇಲ್ಲಿಯವರೆಗೆ ಏಕೆ stagnant ಆಯಿತು ಎಂದು ತಿಳಿದುಕೊಳ್ಳುವುದಕ್ಕೆ ಪ್ರತ್ಯೇಕ ನಿಗಮವನ್ನು ಮಾಡಿದ್ದೇವೆ ಮತ್ತು ಅದಕ್ಕೆ ಬೇಕಾಗುವ ಲ್ಯಾಂಡ್‌ನ್ನು ಹರಾಜು ಮಾಡುವ ಸಲುವಾಗಿ ಒಂದು

ಪ್ರತ್ಯೇಕವಾದ ನಿಗಮವನ್ನು ಮಾಡಿದ್ದೇವೆ. ಅದನ್ನು speed up ಮಾಡಬೇಕಾಗಿದೆ. ಖಂಡಿತವಾಗಿ ಮಾಡುತ್ತೇನೆ. ಅದಕ್ಕೆ ಕೆಲವು ತೊಂದರೆಗಳಿದ್ದು, ನಂತರ ಅದನ್ನು ತಮಗೆ ವಿವರಿಸುತ್ತೇನೆ. Interst payment ಬಗ್ಗೆ ಹೇಳುವುದಾದರೆ 2008–09 ನೇ ಸಾಲಿನಲ್ಲಿ 10.5% ನಂತೆ 4,532 ಕೋಟಿ ರೂ. ಗಳನ್ನು ಬಡ್ಡಿ ಕೊಟ್ಟಿದ್ದೇವೆ. 2009–10ನೇ ಸಾಲಿನಲ್ಲಿ 10.6% ನಂತೆ 5,713 ಕೋಟಿ ರೂ. ಗಳು ಹಾಗೂ 2010–11ನೇ ಸಾಲಿನಲ್ಲಿ 9.7% ನಂತೆ 5,641 ಕೋಟಿ ರೂ. ಗಳು ಹಾಗೂ 2011–12ನೇ ಸಾಲಿನಲ್ಲಿ 8.7% ನಂತೆ 6,062 ಕೋಟಿ ರೂ. ಗಳು ಬಡ್ಡಿಯನ್ನು ಕೊಟ್ಟಿದ್ದೇವೆ. ಅಂದರೆ ಬಡ್ಡಿ ಕೂಡ ಕಡಿಮೆಯಾಗುತ್ತಾ ಬರುತ್ತಿದೆ. ನಮಗೆ ಇರುವುದು 15% ಮಾತ್ರ. ಕಳೆದು 3–4 ವರ್ಷದಿಂದ ಅದಕ್ಕಿಂತ ಕಡಿಮೆ ಬಡ್ಡಿಯಲ್ಲಿ comparison ಮಾಡುತ್ತಿದ್ದೇವೆ. 2011–12 ರಲ್ಲಿ consolidated debts 26% ಗೆ ಮೀರಬಾರದೆಂದು ಮಾನ್ಯ ಸಿದ್ದರಾಮಯ್ಯನವರು ಏನು ಹೇಳಿದ್ದಾರೆ, ಅದರಂತೆ ನಮ್ಮ ಸರ್ಕಾರ ಇರುವ ಸಂದರ್ಭದಲ್ಲಾಗಲಿ, ಯಾವುದೇ ಸರ್ಕಾರವಿರುವ ಸಂದರ್ಭದಲ್ಲಾಗಲಿ ಆ ಮಿತಿಯನ್ನು ಮೀರಿಲ್ಲ. ಅಂದರೆ, ನಮ್ಮ ರಾಜ್ಯ 26% ಗಿಂತ ಮೀರಿ ಹೋಗಿಲ್ಲ. ಕಳೆದ 2–3 ವರ್ಷಗಳಿಂದ ನಾನು ಹೇಳುತ್ತಿದ್ದೇನೆ. 2011–12 ರಲ್ಲಿ consolidated debts 24.3%, 2009–10 25.8%, 2010–11 ರಲ್ಲಿ 24.9%, this year 24.3%. ಅಂದರೆ healthy financial position maintain ಮಾಡಿದ್ದೇವೆ. loan ತೆಗೆದುಕೊಳ್ಳುವುದು ಇರಬಹುದು, interest ನಾವು ಕೊಡುವುದು ನಮ್ಮ ಮಿತಿಯಲ್ಲಿ ಇದ್ದೇವೆ. within the purview ಇದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Fiscal deficit ಏನು ಇದೆ ಅದು 3 ಕ್ಕೆ ಮೀರಬಾರದು ಹಾಗಾಗಿ 2.78% ಇರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತು per capita plan expenditure ಇರಬಹುದು, revenue surplus ಇರಬಹುದು, ಇವುಗಳೂ ಸಹ ನಾವು ನಿರಂತರವಾಗಿ ನಮ್ಮ ಮಿತಿಯಲ್ಲಿಯೇ ಇದೆ. ಇವತ್ತು ಬಹುಶಃ ರಾಷ್ಟ್ರದ ಇತಿಹಾಸದಲ್ಲಿ, ಕರ್ನಾಟಕ ರಾಜ್ಯ ಕರ್ನಾಟಕ ಹೊಣೆಗಾರಿಕೆ ಅಧಿನಿಯಮವನ್ನು ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ಅದಕ್ಕೆ ಸುಸ್ತಿ ಬಡ್ಡಿ ಮನ್ನಾ ಮಾಡಿರುವುದರಿಂದ ಇವೆಲ್ಲಾ Work out ಆಗುತ್ತಿವೆ. ಹಣಕಾಸಿನ ನಿರ್ವಹಣೆ ಸರಿಯಾಗಿ ಹೋಗುತ್ತಿದೆಯೆಂದು ಈ ಸಂದರ್ಭದಲ್ಲಿ ನಾನು

ಹೇಳಬಯಸುತ್ತಿದ್ದೇನೆ. Per capita plan expenditure ಸಹ 2011–12 ನೇ ಸಾಲಿನಲ್ಲಿ ತಲಾ ಯೋಜನಾ ಗಾತ್ರ ಈ ಕೆಳಕಂಡಂತೆ ಇದೆ. ಬೇರೆ ರಾಜ್ಯಗಳನ್ನು ನಾವು compare ಮಾಡಿದಾಗ Per capita plan expenditure ಕರ್ನಾಟಕದಲ್ಲಿ 6,729 ಇದ್ದರೆ ಆಂಧ್ರ ಪ್ರದೇಶದಲ್ಲಿ 5079, ತಮಿಳುನಾಡು 3,767, ಮಹಾರಾಷ್ಟ್ರ 3,374, ಗುಜರಾತ್ 6,793 ಇದೆ. ಅದರಲ್ಲೂ ಸಹ ಇವತ್ತು maintain ಮಾಡಿಕೊಂಡು ಹೋಗಿದ್ದೇವೆ. ಬೇರೆ ರಾಜ್ಯಗಳನ್ನು ನಾವು compare ಮಾಡಿದಾಗ ಸಾಮಾಜಿಕ, ಆರ್ಥಿಕ ಸೇವಾ ವಲಯಗಳಲ್ಲಿ Per capita expenditure under general, social and expenditure ನಲ್ಲಿ ಇನ್ನೂ ಹೆಚ್ಚಿನ ಒಂದು ಸಾಧನೆಯನ್ನು ನಾವು ಮಾಡಬೇಕಾಗಿದೆ. ಅದಕ್ಕೆ ನಾವು ಹೆಚ್ಚಿನ ಪ್ರಯತ್ನವನ್ನು ಮಾಡಿ ಹೆಚ್ಚು ಒತ್ತನ್ನು ಕೊಡುತ್ತೇವೆಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, Per capita expenditure in agriculture, ಕೃಷಿ ವಲಯದಲ್ಲಿ ಕಳೆದ 2–3 ವರ್ಷದಿಂದ ಕೃಷಿ ಬಜೆಟ್ ಅನ್ನು ನಾವು ಪ್ರತ್ಯೇಕವಾಗಿ ಮಂಡನೆ ಮಾಡಿದ್ದೇವೆ. ಕೃಷಿ ಬಜೆಟ್ ಪ್ರತ್ಯೇಕವಾಗಿ ಮಂಡನೆ ಮಾಡಿದ್ದೀರಿ, ಖರ್ಚು ಹೆಚ್ಚಾಗಿಲ್ಲ, ಇದರಿಂದ ಏನು ಲಾಭ ಆಯಿತು? ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಕೃಷಿ ವಲಯಕ್ಕೆ ನಾವು ಕೃಷಿ ಬಜೆಟ್ ಅನ್ನು ಮಂಡನೆ ಮಾಡಿರುವುದರಿಂದ, ಭೂ ಚೇತನ ಕಾರ್ಯಕ್ರಮವನ್ನು implement ಮಾಡಿರುವುದರಿಂದ ಬಹಳಷ್ಟು progress ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಬೇಕಾದರೆ ಬೇರೆ State ಅನ್ನು comparison ಮಾಡಿ ನೋಡಿ, ತಲಾ ವೆಚ್ಚ ಸರಾಸರಿ ಸುಮಾರು 2 ಪಟ್ಟು ಹೆಚ್ಚಿನ ವೆಚ್ಚವನ್ನು ಅಂದರೆ, ರೂ. 782/– ವೆಚ್ಚವನ್ನು ಕರ್ನಾಟಕದಲ್ಲಿ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಬೇರೆಯವರು ಕೃಷಿ ಬಜೆಟ್ ಅನ್ನು ಮಂಡಿಸಿಲ್ಲ. ನೀವು ಮಂಡಿಸಿದ್ದೀರಿ. Why do you compare Karnataka with other States? What is your rank in the entire map in national level? Karnataka still is in the 7th place.

ಶ್ರೀ ಜಗದೀಶ್ ಶೆಟ್ಟರ್ : – ಸನ್ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ನಮ್ಮ ರಾಜ್ಯದ per capita expenditure in agriculture

progress 782 ಇದೆ. ತಮಿಳು ನಾಡು 419, ಆಂಧ್ರ ಪ್ರದೇಶ 352, ಮಹಾರಾಷ್ಟ್ರ 501, ಗುಜರಾತ್ 453 ಮತ್ತು ಎಲ್ಲಾ ರಾಜ್ಯದ average 413 ಇದೆ. ನಮ್ಮದು 782 ಆಗಿದೆ. ನಾವು ಕೃಷಿ ಬಜೆಟ್ ಮಂಡನೆ ಮಾಡಿರುವುದರಿಂದ ಮತ್ತು ಅದರಲ್ಲಿ progress ಸಾಧನೆ ಮಾಡಿರುವ ಕಾರಣ ನಮಗೆ ಇಷ್ಟು ಒಳ್ಳೆಯದು ಆಗಿದೆ. 2011–12 ರಲ್ಲಿ ಶಿಕ್ಷಣ ವಲಯದಲ್ಲಿ 12,787 ಕೋಟಿ ರೂಪಾಯಿ, ಹಾಗೂ ಈ ವರ್ಷ ಅಂದರೆ, 2012–13 ರಲ್ಲಿ 15,071 ಕೋಟಿ ಹಣವನ್ನು ನಾವು ಒದಗಿಸಿದ್ದೇವೆ ಅಂದರೆ, ಶಿಕ್ಷಣ ರಂಗಕ್ಕೂ ನಾವು ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ ಎನ್ನತಕ್ಕಂತ ಮಾತನ್ನು ನಾನು ಹೇಳುತ್ತೇನೆ. ಆರೋಗ್ಯ ವಲಯಕ್ಕೆ 2011–12ನೇ ಸಾಲಿನಲ್ಲಿ 3,754 ಕೋಟಿ, ಈ ಸಾಲಿನಲ್ಲಿ ಅಂದರೆ, 2012–13 ರಲ್ಲಿ 4,760 ಕೋಟಿ ಕೊಟ್ಟಿದ್ದೇವೆ. ಇನ್ನೊಂದು ಮುಖ್ಯವಾಗಿರತಕ್ಕಂಥದ್ದು, per capita expenditure in capital sector. Our per capita expenditure in capital sector ಅನ್ನು ಬೇರೆ ರಾಜ್ಯಕ್ಕೆ comparison ಮಾಡಿದಾಗ ಕರ್ನಾಟಕ ರಾಜ್ಯದ್ದು 2,470 ಕೋಟಿ ಇದ್ದರೆ, ತಮಿಳುನಾಡು 2,037 ಕೋಟಿ, ಆಂಧ್ರ ಪ್ರದೇಶ 1,704 ಕೋಟಿ, ಮಹಾರಾಷ್ಟ್ರ 1,683 ಗುಜರಾತ್ 1,717 ಕೋಟಿ.

ಶ್ರೀ ಸಿದ್ದರಾಮಯ್ಯ : – Human Development index ನಲ್ಲಿ what is our position?

ಶ್ರೀ ಜಗದೀಶ್ ಶೆಟ್ಟರ್ : – Interest paymentನಲ್ಲಿ ನಮ್ಮದು ಎಷ್ಟು ಕಡಿಮೆ ಇದೆ ಎನ್ನುವುದನ್ನು ನಾನು ಆಗಲೇ ಹೇಳಿದ್ದೇನೆ. Average ಶೇಕಡ 15 ಇರಬಹುದು, ಅದಕ್ಕಿಂತ ಕಡಿಮೆ ಇರಬಹುದು, even comparing to other States also ನಮ್ಮದು ಚೆನ್ನಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. commuted expenditure on pensions, ಇದರ balance ಸಹಿತ employees ಗೆ ಪಿಂಚಣಿಯನ್ನು ನಮ್ಮ ರಾಜ್ಯದಲ್ಲಿ ರೂ. 666/– ಕೊಟ್ಟರೆ, ತಮಿಳುನಾಡು ರೂ 1,632/– ಆಂಧ್ರ ಪ್ರದೇಶ ರೂ. 1,134/– ಮಹಾರಾಷ್ಟ್ರ ರೂ. 790/– ಗುಜರಾತ್ ರೂ. 957/– ಇದರಲ್ಲೂ ನಾವು ಕಡಿಮೆ ಇದ್ದೇವೆಂದು ನಾನು ಹೇಳಬಯಸುತ್ತೇನೆ. Assets and liability ratio ಬಗ್ಗೆ ತಾವು ಕೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ : – ನಾನು ಅದರ ಬಗ್ಗೆ ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : – Assets ಬಗ್ಗೆ ತಾವು ಕೇಳಿದ್ದೀರಿ. Assets ಗೆ ಎಷ್ಟು ನಿರ್ಮಾಣ ಮಾಡಿದ್ದೀರೆಂದು ತಾವು ಕೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ : – My point is, ನಾವು ಸಾಲ ತೆಗೆದುಕೊಳ್ಳುವುದೆಲ್ಲಾ assets ನಿರ್ಮಾಣಕ್ಕೆ ಆಗಬೇಕೆಂದು ನಾನು ಹೇಳಿದ್ದೆ. Whatever loan we have taken whether it is Rs. 22,000 crores, Rs. 20,000 crores or Rs.18,000 crores ತೆಗೆದುಕೊಂಡಿರುವುದೆಲ್ಲಾ Assets formation ನಲ್ಲಿ ವಿನಿಯೋಗ ಆಗಬೇಕೆಂದು ನಾನು ಹೇಳಿದ್ದೆ.

ಶ್ರೀ ಜಗದೀಶ್ ಶೆಟ್ಟರ್ : – ಇವತ್ತು assets ಎಷ್ಟು creat ಮಾಡಿದ್ದೇವೆ, ನಮ್ಮ loans ಅನ್ನು comparison ಮಾಡಿದಾಗ ನಮ್ಮದು 109% ಇದೆ. ಅದರಲ್ಲೂ ತುಲನಾತ್ಮಕವಾಗಿ ಅದನ್ನು maintain ಮಾಡಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Even C.A.G ಯವರು ತಮ್ಮ report ನಲ್ಲಿ ನಮ್ಮ ರಾಜ್ಯದ ಆರ್ಥಿಕ, ವಿತ್ತೀಯ ಪರಿಸ್ಥಿತಿ ಸದೃಢವಾಗಿದೆಯೆಂದು ಹೇಳಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಇವತ್ತು plan outlay ಪ್ರತಿ ವರ್ಷವೂ ಹೆಚ್ಚಳವಾಗಿರುವುದನ್ನು ನಾವು comparison ಮಾಡಬೇಕಾಗುತ್ತದೆ. 2007–08 ರಲ್ಲಿ 48,109 ಕೋಟಿ, 2008–09 ರಲ್ಲಿ 54,000 ಕೋಟಿ ಅಂದರೆ 12%, 2009–10 ರಲ್ಲಿ 62,964 ಕೋಟಿ, 2010–11 ರಲ್ಲಿ 71,934 ಕೋಟಿ 2011–12 ರಲ್ಲಿ 85,011 ಕೋಟಿ 18% ಈ ವರ್ಷ 1,02,742 ಕೋಟಿ ಅಂದರೆ 21%. ಹಿಂದಿನ ವರ್ಷಕ್ಕೆ comparison ಮಾಡಿದಾಗ ಈ plan outlay 12%, 17%, 14% ಹೆಚ್ಚಳ ಆಗಿರುವುದನ್ನು ನಾವು ಈ ಸಂದರ್ಭದಲ್ಲಿ ನೋಡಬಹುದಾಗಿದೆ. ಈ ವರ್ಷ 1 ಲಕ್ಷ 2 ಸಾವಿರದ 742 ಕೋಟಿ ರೂಪಾಯಿಗಳನ್ನು ಅಂದರೆ 21% ಹಿಂದಿನ ವರ್ಷಕ್ಕೆ compare ಮಾಡಿದರೆ plan outlay 12%, 17%, 14% ಹೆಚ್ಚಳ ಆಗಿರುವುದನ್ನು ಈ ಸಂದರ್ಭದಲ್ಲಿ ನಾವು ನೋಡಬಹುದಾಗಿದೆ. ಹೀಗಾಗಿ ಇವತ್ತು ಯೋಜನಾ ಗುರಿ 10.4 ಕ್ಕಿಂತ ಜಾಸ್ತಿ ಆಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಹೀಗಾಗಿ 2012–13 ರಲಿ ಈಗ Revenue collection, tax collection ಈ 3 ತಿಂಗಳುಗಳಲ್ಲಿ 13,471 ಕೋಟಿ ರೂಪಾಯಿಗಳಷ್ಟು ಸ್ವಂತ ತೆರಿಗೆಯಿಂದ ಸಂಗ್ರಹಿಸಲಾಗಿದ್ದು, 2011–12 ರಲ್ಲಿ ಇದೇ ಅವಧಿಯಲ್ಲಿ ಅದು

10,865 ಕೋಟಿ ರೂಪಾಯಿ, ಬಜೆಟ್ ಮಂಡನೆಯಾದ 3 ತಿಂಗಳುಗಳಲ್ಲಿ 13,471 ಕೋಟಿ ರೂಪಾಯಿ, ಕಳೆದ ವರ್ಷ ಇದೇ ಅವಧಿಯಲ್ಲಿ 10,865 ಕೋಟಿ ರೂಪಾಯಿಗಳಿತ್ತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು 20 % ಬೆಳವಣಿಗೆ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಂತರ ನಮ್ಮ ಕೃಷಿ ಬಜೆಟ್ ಇವತ್ತು ಮಂಡನೆಯಾಗಿರುವುದರಿಂದ ಅದಕ್ಕೆ ಹೆಚ್ಚು ಮಹತ್ವ ಬಂದಿದೆ. ಅದರ ಮುಖಾಂತರ ಹಲವಾರು ಯೋಜನೆಗಳನ್ನು ನಾವು ಜಾರಿಗೆ ತರಲಿಕ್ಕೆ ಸಾಧ್ಯವಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೇ ಬಾರಿಗೆ 1 ಲಕ್ಷ ರೂಪಾಯಿಗಳವರೆಗೆ ಶೂನ್ಯ ಬಡ್ಡಿ ದರಕ್ಕೆ ಇವತ್ತು ಕೃಷಿ ಸಾಲವನ್ನು ಕೊಟ್ಟಿದ್ದು ಬಹುಶಃ ಎಲ್ಲರಿಗೂ ಗೊತ್ತಿರುವ ವಿಚಾರ. ಅದರಿಂದ 14 ರಿಂದ 15 ಲಕ್ಷ ನಮ್ಮ ರೈತ ಕುಟುಂಬದವರಿಗೆ ಅನುಕೂಲವಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಭೂ ಚೇತನ ಕಾರ್ಯಕ್ರಮ ಒಣ ಭೂಮಿ ಕೃಷಿಯಲ್ಲಿ ಸರಾಸರಿ ಶೇಕಡ 21 ರಿಂದ ಶೇಕಡ 43 ರಷ್ಟು ಇಳುವರಿ ಹೆಚ್ಚಳವನ್ನು ನಾವು ಸಾಧನೆ ಮಾಡಿದ್ದೇವೆ. ಭೂ ಚೇತನ ಕಾರ್ಯಕ್ರಮದ ಬಗ್ಗೆ ಬೇರೆ ರಾಜ್ಯದವರು ಕರ್ನಾಟಕಕ್ಕೆ ಬಂದು ಯಾವ ರೀತಿ ಯಶಸ್ವಿಯಾಗುತ್ತಿದೆ ಎನ್ನುವುದನ್ನು study ಮಾಡಿಕೊಂಡು ಹೋಗುತ್ತಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಭೂ ಚೇತನ ಯೋಜನೆ 5 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶದಿಂದ ಒಟ್ಟು 50 ಲಕ್ಷ ಹೆಕ್ಟೇರ್‌ವರೆಗೆ ವಿಸ್ತರಣೆ ಮಾಡಲಾಗಿದ್ದು, ಇದರಿಂದ 45 ಲಕ್ಷ ರೈತ ಫಲಾನುಭವಿಗಳಿಗೆ ಇದರ ಲಾಭ ಸಿಕ್ಕಿದೆ ಎಂದು ಹೇಳಬಯಸುತ್ತೇನೆ. ಕೃಷಿ ಮತ್ತು ಕೃಷಿ ಸಂಬಂಧ ವಲಯಗಳಿಗೆ ಹೆಚ್ಚಿನ ಅನುದಾನವನ್ನು ಈ ವರ್ಷ ಕೊಟ್ಟಿದ್ದೇವೆ. ನೀರಾವರಿಗೆ ಮೊಟ್ಟಮೊದಲ ಬಾರಿಗೆ 10 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಅಂದರೆ 10,500 ಕೋಟಿ ರೂಪಾಯಿಗಳನ್ನು ಇವತ್ತು ನಾವು allocation ಮಾಡಿದ್ದೇವೆ. ರಸಗೊಬ್ಬರಗಳ ದಾಪು ದಾಸ್ತಾನನ್ನು 4 ಲಕ್ಷ ಮೆಟ್ರಿಕ್ ಟನ್‌ನಿಂದ 8 ಲಕ್ಷ ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗಿದೆ. ಅಂದರೆ 2 ಪಟ್ಟು ಹೆಚ್ಚು ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮೂಲಭೂತ ಸೌಕರ್ಯಗಳಿಗೆ ಇವತ್ತು ವಿದ್ಯುತ್ ಸರಬರಾಜು ಮಾಡುವ ನಿರಂತರ ಜ್ಯೋತಿ ಯೋಜನೆಗೆ 2181 ಕೋಟಿ ರೂಪಾಯಿ ಖರ್ಚು ಮಾಡುವಂತೆ allocation ಮಾಡಿದ್ದೇವೆ. ಲೋಕೋಪಯೋಗಿ ರಸ್ತೆಗಳ

ಸಲುವಾಗಿ 1715 ಕೋಟಿ ರೂಪಾಯಿ ಸೇರಿ ಒಟ್ಟಾರೆ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 4380 ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ರಸ್ತೆ ಮತ್ತು ವಿದ್ಯುತ್ ಸಹ ಬರುತ್ತದೆ. ತಾಲ್ಲೂಕಿನಿಂದ ಜಿಲ್ಲಾ ಸಂಪರ್ಕ ರಸ್ತೆಗಳನ್ನು ಸಹ ಜಾರಿಗೆ ತರುವಂಥ ಕೆಲಸ ಮಾಡಿದ್ದೇವೆ. 3710 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಮಾಡುವುದಕ್ಕೆ 1423 ಕೋಟಿ ರೂಪಾಯಿಗಳ ಹಣವನ್ನು ನಾವು allocation ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. 65 ಪ್ಯಾಕೇಜ್‌ಗಳಲ್ಲಿ 10 ಕಾಮಗಾರಿಗಳನ್ನು ಗುರುತಿಸಿ ಕೆಲಸ ಪ್ರಾರಂಭ ಮಾಡಿದ್ದೇವೆ. ಇನ್ನೊಂದು ಬಹಳ ಮುಖ್ಯವಾಗಿರುವುದು, ಬಹುಶಃ ನಮ್ಮ ನಗರ ಪ್ರದೇಶಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಇದ್ದಾಗ ಪ್ರಾರಂಭ ಮಾಡಿದ್ದು, ಒಂದೊಂದು ಕಾರ್ಪೋರೇಷನ್‌ಗೆ 100 ಕೋಟಿ ರೂಪಾಯಿಗಳ special grant ಕೊಡುವಂಥ ಯೋಜನೆ ಮತ್ತು ಕೆಲವು ನಗರಸಭೆ, ಪುರಸಭೆಗಳಿಗೂ ಸಹ 5 ಕೋಟಿ, 10 ಕೋಟಿ, 15 ಕೋಟಿ ಮತ್ತು 20 ಕೋಟಿಗಳವರೆಗೂ ಪುರಸಭೆಗಳಿಗೂ ಸಹ ಕೊಡುವ ಯೋಜನೆ ತಂದಿರುವುದರಿಂದ, ಈ ಯೋಜನೆ ಬಂದ ಮೇಲೆ ಬಹಳಷ್ಟು ಬದಲಾವಣೆ ನಗರ ಪ್ರದೇಶಗಳಲ್ಲಿ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಈ ನಗರೋತ್ಥಾನ ಮೊದಲನೇ ಹಂತದಲ್ಲಿ ಇವತ್ತು ಸಾಕಷ್ಟು progress ಆಗಿದೆ. 2ನೇ ಹಂತದಲ್ಲಿ ಮತ್ತೆ ಪ್ರತಿಯೊಂದು ಕಾರ್ಪೋರೇಷನ್‌ಗೆ 100 ಕೋಟಿ ರೂಪಾಯಿಗಳನ್ನು ಕೊಡುವ ಯೋಜನೆ ಮತ್ತು ಲೋಕಲ್ ಬಾಡೀಸ್, ನಗರಸಭೆ ಮತ್ತು ಪುರಸಭೆಗಳಿಗೂ ಸಹ ಅನುದಾನ ಕೊಡುವುದಕ್ಕೆ ಈ ಸಲ 1591 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಬಹುಶಃ ಈ ರೀತಿ special grant ಕೊಟ್ಟಿದ್ದು ಪ್ರಥಮ ಬಾರಿಗೆ ಎನ್ನುವುದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡುವುದಕ್ಕೆ ಸಾಧ್ಯವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿ ಬೆಂಗಳೂರು ಹೊರತು ಪಡಿಸಿ ಬೇರೆ ನಗರ ಪ್ರದೇಶಗಳಿಗೆ ಒತ್ತು ಕೊಟ್ಟಿದ್ದಾರೆ. ಅದೇ ರೀತಿ ಬೆಂಗಳೂರು ನಗರಾಭಿವೃದ್ಧಿಗೂ ಸಹ ಈ ವರ್ಷ 5,500 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದೇವೆ. ಮೂಲಭೂತ ಸೌಕರ್ಯಗಳನ್ನು ಅನುಷ್ಠಾನ ಮಾಡುವುದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ಒಂದು ಸಾವಿರ

ಕೋಟಿ ರೂಪಾಯಿ ಕೊಟ್ಟಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 4ನೇ ಹಂತದ ಕಾವೇರಿ ಕುಡಿಯುವ ನೀರಿನ ಯೋಜನೆಗಾಗಿ ಬೆಂಗಳೂರು ಜಲ ಮಂಡಳಿಗೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ನಿಗದಿ ಪಡಿಸಲಾಗಿದೆ. ಅದನ್ನು ಖರ್ಚು ಮಾಡುವಂಥದ್ದು ನಡೆಯುತ್ತಿದೆ. ಕಾಮಗಾರಿ ಪ್ರಾರಂಭವಾಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಮತ್ತು ಹಲವಾರು signal ಮುಕ್ತ corridorಗಳನ್ನು ನಿರ್ಮಾಣ ಮಾಡುವುದಕ್ಕೆ 426 ಕೋಟಿ ರೂಪಾಯಿ, ಮತ್ತು ಇನ್ನೊಂದು ಬಹಳ ಮುಖ್ಯವಾಗಿ ನಮ್ಮ ಶಾಸಕರು ಹೇಳುತ್ತಿದ್ದರು. ಕಳೆದ ವರ್ಷ ನಮ್ಮ RDPR ಇಲಾಖೆಯಿಂದ 20 ಕಿ.ಮೀ. ರಸ್ತೆ, "ನಮ್ಮ ಗ್ರಾಮ ನಮ್ಮ ರಸ್ತೆ" ಯೋಜನೆಯಡಿ ಕಳೆದ ವರ್ಷ ಮಾಡಿದ್ದೀರಿ, ಬಹಳ ಒಳ್ಳೆಯ ಕೆಲಸವಾಗಿದೆ. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ಪೈಕಿ ಕಳೆದ ಬಾರಿ 20 ಕಿ.ಮೀ. ಆಗಿತ್ತು. ಈ ಸಾರಿ' 30 ಕಿ.ಮೀ. ರಸ್ತೆಗೆ ಹಣವನ್ನು ನಾವು ಮಂಜೂರು ಮಾಡುತ್ತಿದ್ದೇವೆ. ಅದರ ಬಗ್ಗೆ ಯಾರೂ ಚಿಂತನೆ ಮಾಡುವಂಥದ್ದಲ್ಲ. ರೋಡ್‌ಗಳ ಲಿಸ್ಟ್ ರೆಡಿ ಇದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : –ಯಾವಾಗ ಮಾಡುತ್ತೀರ ಹೇಳಿ?

ಶ್ರೀ ಜಗದೀಶ್ ಶೆಟ್ಟರ್ : – 30 ಕಿ.ಮೀ. ಕೇಳಿದ್ದೀರಿ ಅದನ್ನು ಕೊಟ್ಟಿದ್ದೇವೆ. ಮೊದಲು 30 ಕಿ.ಮೀ. implement ಆಗಲಿ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ.

ಶ್ರೀ ಸಿದ್ದರಾಮಯ್ಯ : – ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರು, ಅಲ್ಲಿ ಕೆಲಸ ನಿಂತು ಹೋಗಿವೆ. ಆಮೇಲೆ PWD ಇಲಾಖೆಗೆ LOC ಬಿಡುಗಡೆಯಾಗದೇ ಕೆಲಸಗಳು ನಿಂತು ಹೋಗಿವೆ. ಉದಾಸಿಯವರೇ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : – "ನಮ್ಮ ಗ್ರಾಮ ನಮ್ಮ ರಸ್ತೆ" ಯೋಜನೆಯಡಿ 20 ಕಿ.ಮೀ. ರಸ್ತೆ ಅನುಷ್ಠಾನವಾಗಿದೆ. ಈ ವರ್ಷ 30 ಕಿ.ಮೀ. ರಸ್ತೆ ತೆಗೆದುಕೊಳ್ಳುತ್ತಿದ್ದೇವೆ. ಬಜೆಟ್‌ನಲ್ಲಿ announce ಆಗಿದೆ. ಲಿಸ್ಟ್ ರೆಡಿ ಇದೆ. ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ಸುವರ್ಣ ಗ್ರಾಮ ಯೋಜನೆ 4 ವರ್ಷಗಳಿಂದ ಮಾಡಲೇ ಇಲ್ಲ. 4 ವರ್ಷಗಳಿಂದ ಸುವರ್ಣ ಗ್ರಾಮ ಯೋಜನೆಯಡಿ ವರ್ಷಕ್ಕೆ ಒಂದು ಸಾವಿರ ಹಳ್ಳಿ ಮಾಡುತ್ತೇವೆ ಎಂದು, ಸುವರ್ಣ ಗ್ರಾಮೋದಯ ಈ ವರ್ಷ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ನಿಮಗೆ ಆಗ

ಯಡಿಯೂರಪ್ಪನವರೂ ದುಡ್ಡು ಕೊಟ್ಟಿಲ್ಲ, ಸದಾನಂದಗೌಡರೂ ದುಡ್ಡು ಕೊಟ್ಟಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : – ಸುವರ್ಣ ಗ್ರಾಮದಲ್ಲಿ 4 ಹಂತದಲ್ಲಿ ಕೆಲಸ ಆಗಿದೆ.

ಶ್ರೀ ಸಿದ್ದರಾಮಯ್ಯ : – ಎಲ್ಲಿ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : – 2 ಹಂತದಲ್ಲಿ ಕೆಲಸ ಮುಗಿದಿದೆ. 3th & 4th ನಡೆಯುತ್ತಿದೆ. ಅದಕ್ಕೂ ಹಣ ಒದಗಿಸುತ್ತೇವೆ. ಈಗ 5th phase ನಾವು declare ಮಾಡಿದ್ದೇವೆ, ಬಜೆಟ್‌ನಲ್ಲಿ announce ಮಾಡಿದ್ದೇವೆ. ಅದಕ್ಕೂ ಹಣ ಕೊಡುತ್ತೇವೆ. ಅದನ್ನು ಈ ಸಲ implement ಮಾಡುತ್ತೇವೆ. ಸುವರ್ಣ ಗ್ರಾಮ ಯೋಜನೆ 5ನೇ ಹಂತದ್ದು implement ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ನಮಗೆಲ್ಲಾ ಒಂದೇ ಸಾರಿ ಒಂದು ಸಾವಿರ ಹಳ್ಳಿಗಳು ಎಂದು announce ಮಾಡಿದ್ದು

ಶ್ರೀ ಜಗದೀಶ್ ಶೆಟ್ಟರ್ : – ಹೌದು

ಶ್ರೀ ಸಿದ್ದರಾಮಯ್ಯ : – ಒಂದು ಸಾವಿರ ಹಳ್ಳಿಗಳು ನಮ್ಮ ಕ್ಷೇತ್ರದಲ್ಲಿ, ಬಿಟ್ಟರೆ ಪೂರಾ ಮಾಡಿರಲಿಲ್ಲ. ಎಲ್ಲಿ ಮಾಡಿದ್ದೀರಿ?

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ : – ಬಿ.ಜೆ.ಪಿ. ಸರ್ಕಾರ ಬಂದ ಮೇಲೆ ಈಗ 2ನೇ ಕಂತು ಕೊಡುತ್ತಿರುವುದು, ನೀವು ಹೇಳುವುದು ಸರಿ.

ಶ್ರೀ ಬಸವರಾಜ್ ಬೊಮ್ಮಾಯಿ : – ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟ ನಂತರ ಅವರ clarificationsಗೆ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : – ಸನ್ಮಾನ್ಯ ಅಧ್ಯಕ್ಷರೆ, ಸುವರ್ಣ ಗ್ರಾಮ ಯೋಜನೆ ಏನಿದೆ, ಇದು ಮೊದಲನೇ ಹಂತದಲ್ಲಿ entire state apply ಮಾಡಿದ್ದೇವೆ. ಆಮೇಲೆ 2ನೇ ಹಂತದಲ್ಲಿ ಹೈದರಾಬಾದ್ ಕರ್ನಾಟಕಕ್ಕೆ, ಅಲ್ಲಿ ಮಾನ್ಯ ಯಡಿಯೂರಪ್ಪನವರು ಕ್ಯಾಬಿನೆಟ್ ಸಭೆ ಮಾಡಿ 2 ಸಲ, 2ನೇ ಹಂತದಲ್ಲಿ ಕೇವಲ ಹೈದರಾಬಾದ್ ಕರ್ನಾಟಕ, ಯಾವ ಹಿಂದುಳಿದ ತಾಲ್ಲೂಕುಗಳಿವೆ, ಯಾವ ಹಿಂದುಳಿದ ಪ್ರದೇಶಗಳಿವೆ ಅಲ್ಲಿ ಹೆಚ್ಚು ಒತ್ತು ಕೊಟ್ಟಿರುವುದರಿಂದ 2ನೇ ಹಂತದಲ್ಲಿ 220 ಗ್ರಾಮಗಳನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : – ಮಾತನಾಡಲು ಅವಕಾಶ ಕೊಡಿ. ಪ್ರತಿ ಸಲ ಪ್ರಶ್ನೆ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : – ಹೈದರಾಬಾದ್ ಕರ್ನಾಟಕಕ್ಕೆ 4 phasees ಸಿಕ್ಕಿದೆ Entire State 2 phas ಸಿಕ್ಕಿದೆ ಅಷ್ಟೇ, entire state 3ನೇ ಹಂತ ಈಗ ಪ್ರಾರಂಭವಾಗುತ್ತದೆ. 3ನೇ phaseಗೆ ಪ್ರಾರಂಭ ಮಾಡಿದ್ದು, ಈಗ ಆದೇಶ ಬಂದಿದೆ.

ಶ್ರೀ ಸಿದ್ದರಾಮಯ್ಯ : – ನಾನು ಮಾತನಾಡುತ್ತೇನೆ. ನೀವು ಸ್ವಲ್ಪ rest ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : – Rest ಏನೂ ಬೇಕಾಗಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ : – ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ : – ಅವರು yield ಆಗುತ್ತಿದ್ದಾರೆ. What is your objection?

ಅಧ್ಯಕ್ಷರು : – Reply ಮಾಡಲಿ ಅವರು.

ಶ್ರೀ ಬಸವರಾಜ್ ಬೊಮ್ಮಾಯಿ : – Clarification ನಲ್ಲಿ ಕೇಳಲಿ. ನಮ್ಮದೇನೂ objection ಇಲ್ಲ.

ಶ್ರೀ ಸಿದ್ದರಾಮಯ್ಯ : – ಅವರು yield ಆಗಿದ್ದಾರಲ್ಲಾ? ಅವರು yield ಆಗದಿದ್ದರೆ ನಾನು ಕುಳಿತುಕೊಂಡು ಬಿಡುತ್ತಿದ್ದೆ.

ಶ್ರೀ ಬಸವರಾಜ್ ಬೊಮ್ಮಾಯಿ : – ಉತ್ತರವನ್ನು ಅವರು ಆ speed ನಲ್ಲಿ ಕೊಟ್ಟರೆ..

ಶ್ರೀ ಸಿದ್ದರಾಮಯ್ಯ : – ಹಾಗಿದ್ದರೆ ನಾವು ಕೇಳುವುದು ಬೇಡವೇನು?

ಶ್ರೀ ಬಸವರಾಜ್ ಬೊಮ್ಮಾಯಿ : – Clarification ಕೇಳಿ. ನಿಮಗೆ ಬೇಡವೆಂದು ಹೇಳುವವರು ಯಾರಿದ್ದಾರೆ ಇಲ್ಲಿ?

ಶ್ರೀ ಸಿದ್ದರಾಮಯ್ಯ : – ಅವರು ಕುಳಿತುಕೊಂಡಿದ್ದಾರೆ. ನಾನು ನಿಂತಿದ್ದೇನೆ.

ಶ್ರೀ ಬಸವರಾಜ್ ಬೊಮ್ಮಾಯಿ : – ನೀವು ಎದ್ದು ನಿಂತು ಹೇಳಿದರೆ ಮತ್ತೆ ಅವರು ಕುಳಿತುಕೊಳ್ಳುತ್ತಾರೆ. ನೀವು ಅವಕಾಶ ಮಾಡಿಕೊಟ್ಟರೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು : – ಚರ್ಚೆ ಬೇಡ ಕುಳಿತುಕೊಳ್ಳಿ

ಒಬ್ಬ ಮಾನ್ಯ ಸದಸ್ಯರು : – ಬೊಮ್ಮಾಯಿಯವರು ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎಂದ ಹಾಗೆ ಮಾಡುತ್ತಿದ್ದಾರೆ. ಇವರಿಗೆ ಈ ಜಾಗ ಕೊಟ್ಟಾಗ ಸುಮ್ಮನಿದ್ದರು. ಮತ್ತೆ ಜಾಗ ಬದಲಾವಣೆ ಮಾಡಿದಾಗ ಶುರುವಾಯಿತು.

ಶ್ರೀ ಬಸವರಾಜ್ ಬೊಮ್ಮಾಯಿ : – ಏನಿಲ್ಲ, ದೇವರು, ಪೂಜಾರಿ ಎಲ್ಲಾ ಒಂದೇ. ನಮ್ಮ ನಡುವೆ ಯಾವ ಪೂಜಾರಿಗಳಿಲ್ಲ.

ಶ್ರೀ ಸಿದ್ದರಾಮಯ್ಯ : – ಸುವರ್ಣ ಗ್ರಾಮೋದಯ ಕಾರ್ಯಕ್ರಮ ಪ್ರಾರಂಭವಾದದ್ದು 2006–07, 2007–08 ರಲ್ಲಿ. ಸಮ್ಮಿಶ್ರ ಸರ್ಕಾರ ಇದ್ದಾಗ. ಘೋಷಣೆ ಮಾಡಿದ್ದೇನು? ಪ್ರತಿ ವರ್ಷ ಕರ್ನಾಟಕದಲ್ಲಿ 1 ಸಾವಿರ ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆ. ಈಗ 7 ವರ್ಷವಾಯಿತು. ವರ್ಷಕ್ಕೆ ಒಂದು ಸಾವಿರ ಎಂದರೆ 7 ವರ್ಷಕ್ಕೆ 7 ಸಾವಿರ ಆಗಬೇಕಿತ್ತು. ಆಗಿದೆಯೇ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : – ನಾನು explain ಮಾಡಿ ಹೇಳುತ್ತೇನೆ. ಒಟ್ಟು 4 phase ನಲ್ಲಿ ತೆಗೆದುಕೊಂಡಿದ್ದೇವೆಂದು ಹೇಳಿದೆ. ಇಲ್ಲಿಯವರೆಗೆ 7 ವರ್ಷದಲ್ಲಿ, ಮಧ್ಯದಲ್ಲಿ 2 ವರ್ಷ ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : – ಪ್ರತಿ ವರ್ಷ ಒಂದು ಸಾವಿರ ಹಳ್ಳಿಗಳಂತೆ ಈವರೆಗೆ 7 ಹಳ್ಳಿಯಾಗಿದೆಯೇ? Expenditure ಪ್ರತಿ ವರ್ಷ 1 ಸಾವಿರ ಕೋಟಿಯಂತೆ 7 ಸಾವಿರ ಕೋಟಿ ಖರ್ಚಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ : – ನೋಡಿ, ನೀವು correct picture, status ತೆಗೆದುಕೊಳ್ಳಿ. ಮಧ್ಯದಲ್ಲಿ ಎರಡು ವರ್ಷ budget allocation ಕೊಟ್ಟಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎರಡು ಹಂತದಲ್ಲಿ ಆಗಿದೆ. ಈ ವರ್ಷ ಮತ್ತೆ 3ನೇ ಹಂತದ್ದು. ಹೈದರಾಬಾದ್ – ಕರ್ನಾಟಕಕ್ಕೆ extra 2 phase ನಲ್ಲಿ ಅಂದರೆ 2nd and 4th phase ನಲ್ಲಿ ಸಿಕ್ಕಿದೆ. Entire state 1st and 3rd phase ಸಿಕ್ಕಿದೆ. ಈಗ 5th phase entire Stateಗೆ apply ಆಗುತ್ತದೆ. ಮತ್ತೆ ಒಂದು ಸಾವಿರ ಗ್ರಾಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಇಲ್ಲಿಯವರೆಗೆ 4th phase ನಲ್ಲಿ 3300 ಗ್ರಾಮಗಳನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಏಳು ಸಾವಿರ ಆಗಬೇಕು.

ಶ್ರೀ ಜಗದೀಶ್ ಶೆಟ್ಟರ್ : – ನಾವು ಪ್ರತಿ ವರ್ಷ ಕೊಟ್ಟಿದ್ದರೆ ಆಗುತ್ತದೆ. 4th phase ನಲ್ಲಿ ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : – ಅಧ್ಯಕ್ಷರೆ ನಾನು ಅರ್ಧ ಮಿನಿಟ್ ಮಾತನಾಡುತ್ತೇನೆ. ಹೈದರಾಬಾದ್ – ಕರ್ನಾಟಕ ಭಾಗದಿಂದ ಬಂದಿದ್ದೇನೆ. ನೀವು ಹೇಳಿದ್ದು ಸರಿಯಿದೆ ಎಂದು ಹೇಳುತ್ತಿದ್ದೇನೆ. 5th phase ಮೊನ್ನೆ announce ಮಾಡಿದ್ದೀರಿ. ಆದರೆ 3rd phase complete ಆಗಿದೆಯೇ? 4ನೇ phase ಗೆ ದುಡ್ಡು ಬರುತ್ತಾ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಮತ್ತೇನಾದರೂ ಕೇಳುವುದಿದ್ದರೆ ಉತ್ತರ ಮುಗಿದ ಮೇಲೆ ಕೇಳಲಿ.

ಅಧ್ಯಕ್ಷರು : – ನೀವು yield ಆಗಬೇಡಿ.

ಶ್ರೀ ಜಗದೀಶ್ ಶೆಟ್ಟರ್ : – ಈಗ 5th phase announce ಮಾಡಿದ್ದೇವೆ, District Minister ಗೆ list ready ಮಾಡಲು ಕಳುಹಿಸಿದ್ದು, circular, Notification issue ಮಾಡಿದ್ದೇವೆ. ಆದಷ್ಟು ಬೇಗ ಸುವರ್ಣ ಗ್ರಾಮೋದಯವನ್ನು 5th phase ದ್ದು ಪ್ರಾರಂಭ ಮಾಡುತ್ತೇವೆ. ಮತ್ತೇನು ಸ್ಪಷ್ಟೀಕರಣ ಇದ್ದರೂ ನಾನು ನಂತರ ಹೇಳುತ್ತೇನೆ. ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಪ್ರಮುಖವಾದ ಯೋಜನೆ ಶ್ರೀ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ಮೊದಲು ಹೈದರಾಬಾದ್ – ಕರ್ನಾಟಕ, ಬಾಂಬೆ – ಕರ್ನಾಟಕಕ್ಕೆ ಸೀಮಿತವಾಗಿದ್ದನ್ನು ಇವತ್ತು ಇಡೀ ರಾಜ್ಯಕ್ಕೆ ವಿಸ್ತರಿಸಿದ್ದೇವೆ. ವಿಶೇಷ ಅಭಿವೃದ್ಧಿ ಯೋಜನೆ, ಗಿರಿಜನ ಉಪ ಯೋಜನೆಗಳಿಗೆ ಬಜೆಟ್ ಅನುದಾನದಲ್ಲಿ 7,200 ಕೋಟಿ ರೂ. ಗಳನ್ನು ನಿಗದಿ ಮಾಡಲಾಗಿದೆ. ಇದರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಲಾದ ಮತ್ತು ಕ್ರೋಢೀಕೃತ ಮೊತ್ತವನ್ನು 1,250 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇದರ ಜೊತೆಗೆ ನಮ್ಮ ಉಪ ಮುಖ್ಯಮಂತ್ರಿಗಳು ಹೇಳಿದರು. ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಬಜೆಟ್ ಅನುದಾನ 2011–12ನೇ ಸಾಲಿನಲ್ಲಿ 760

ಕೋಟಿ ಇದ್ದದ್ದನ್ನು, 2012–13ನೇ ಸಾಲಿಗೆ 1 ಸಾವಿರ ಕೋಟಿಗೆ ಹೆಚ್ಚಳವನ್ನು ಮಾಡಲಾಗಿದೆ.

ಶ್ರೀ ಸಿದ್ದರಾಮಯ್ಯ : – ದಯಮಾಡಿ 760 ಕೋಟಿ ರೂ. ಗಳಲ್ಲಿ ಎಷ್ಟು ಖರ್ಚಾಗಿದೆ ಎಂದು ಹೇಳಿ. 760 ಕೋಟಿಯಲ್ಲಿ what is the expenditure?

ಶ್ರೀ ಜಗದೀಶ್ ಶೆಟ್ಟರ್ : – ಮಾಡುತ್ತೇವೆ. 1 ಸಾವಿರ ಕೋಟಿ expenditure ಇಟ್ಟಿದ್ದೇವಲ್ಲ?

ಅಧ್ಯಕ್ಷರು : – ಅವರು ಹೇಳುವುದಕ್ಕೆ ನೀವು ಅವಕಾಶವನ್ನೇ ಕೊಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : – ಈ figures ಕೇಳುತ್ತಾ ಕುಳಿತುಕೊಳ್ಳಬೇಕಾ ನಾವು?

ಶ್ರೀ ಜಗದೀಶ್ ಶೆಟ್ಟರ್ : – ಭಾಗ್ಯಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ 500 ಕೋಟಿ ರೂ. ಹಂಚಿಕೆ ಮಾಡಿದ್ದೇವೆ. ಈ ಸಲ 468 ಕೋಟಿ ರೂ. ಗಳನ್ನು ಕೊಟ್ಟಿದ್ದೇವೆ. 2012–13 ನೇ ಪೂರಕ ಅಂದಾಜಿನಲ್ಲಿ 250 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಸಾಮಾಜಿಕ ಭದ್ರತಾ, ಪಿಂಚಣಿ ಯೋಜನೆಗೆ 400 ರಿಂದ 500 ರೂ.ಗೆ ಹೆಚ್ಚಿಗೆ ಮಾಡಲಾಗಿದೆ. ಅದಕ್ಕೆ ಏನು ಹಣ ಕೊಡಬೇಕಿದೆ, ಅದನ್ನು ಕೊಡುತ್ತಿದ್ದೇವೆ. ಬಹಳ ಪ್ರಮುಖವಾಗಿ ಇವತ್ತು ಸಕಾಲ ಎಂಬ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಈ ಯೋಜನೆಯು ತಹಶೀಲ್ದಾರ್ ಕಚೇರಿಯಲ್ಲಿ ಕೆಳಹಂತದ ಆಡಳಿತದಲ್ಲಿ ನಮ್ಮ ನಾಗರಿಕರು ಅರ್ಜಿಗಳನ್ನು ಕೊಡಲು ಹೋದ ಸಂದರ್ಭದಲ್ಲಿ Income certificate, caste certificate ಇರಬಹುದು. ಮತ್ತು ಯಾವುದೇ services, ಕೆಳಹಂತದಲ್ಲಿ ತಹಶೀಲ್ದಾರ್ ಕಚೇರಿ, B.E.O. office ತಾಲ್ಲೂಕು ಪಂಚಾಯಿತಿ ಕಚೇರಿ, health ಇರಬಹುದು ಅದರಲ್ಲಿ ನಮ್ಮ ನಾಗರೀಕರಿಗೆ ಉತ್ತಮವಾದ ಸೇವೆ ಸಿಗುತ್ತಿದೆ, within time-bound period ಎಲ್ಲಾ services ಸಿಗುತ್ತಿದೆ. ಬೆಂಗಳೂರು ಮತ್ತು ಇತರೇ 4 ನಗರಗಳಲ್ಲಿ 50 ವಾರ್ಡ್‌ಗಳ ನಗರ ಆಸ್ತಿ ಮಾಲೀಕತ್ವದ ದಾಖಲೆಗಳನ್ನು ಸಿದ್ದ ಪಡಿಸುತ್ತಿದ್ದೇವೆ. ಅದು haphazard ಆಗಿತ್ತು. ಸರಿಯಾಗಿ ಸರ್ವೇ ಮಾಡಿರಲಿಲ್ಲ. ದಾಖಲೆಯು ಇರಲಿಲ್ಲ. ಅದನ್ನು ಸಹಿತ ಇವತ್ತು ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಈಗಾಗಲೇ ಸಾಲದ ಬಗ್ಗೆ ಹೇಳಿದ್ದೇನೆ.

ನಾವು ಏನು loan ತೆಗೆದುಕೊಳ್ಳುತ್ತಿದ್ದೇವೆ. Liability & debts ಇದೆಯಲ್ಲ within our purview, ನಮ್ಮ limit ನೊಳಗೆ ಇದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಬೇರೆ ಕಡೆಯಿಂದ resource ಇನ್ನೂ mobilization ಮಾಡಬೇಕೆಂದು ಹೇಳಿದ್ದಾರೆ. ಅದು ಉತ್ತಮವಾದ ಸಲಹೆ. ಇಲ್ಲಿ ಎರಡು – ಮೂರು ವಿಚಾರಗಳನ್ನು ಅವರು ಹೇಳಿದ್ದಾರೆ. ಈ ನಿಗಮ – ಮಂಡಳಿ

ಶ್ರೀ ಸಿದ್ದರಾಮಯ್ಯ : – Mysore Minerals ದ್ದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : – Mysore Minerals ಇರಬಹುದು. ಬೇರೆ ಇರಬಹುದು. ನಿಗಮ ಮಂಡಳಿಗೆ ಏನು ಇವತ್ತು ಹಣವನ್ನು ಖರ್ಚು ಮಾಡುತ್ತಿದ್ದೇವೆ, ಅದರಿಂದ returns ಇಲ್ಲ. Resource mobilization ಇಲ್ಲ ಎನ್ನುವಂತಹುದು. ಅದರಲ್ಲಿ 38 ಸಾವಿರ ಕೋಟಿಯಷ್ಟು.

ಶ್ರೀ ಸಿದ್ದರಾಮಯ್ಯ : – 38,420 ಕೋಟಿ

ಶ್ರೀ ಜಗದೀಶ್ ಶೆಟ್ಟರ್ : – 38,420 ಕೋಟಿ, ಅದರಲ್ಲಿ 22 ಸಾವಿರ ಕೋಟಿ ರೂ. ಗಳನ್ನು ಕೃಷ್ಣ ಭಾಗ್ಯ ಜಲ ನಿಗಮ, ಕಾವೇರಿ ನೀರಾವರಿ ನಿಗಮ, ಕರ್ನಾಟಕ ನೀರಾವರಿ ನಿಗಮಗಳಲ್ಲಿ ಹೂಡಿಕೆ ಮಾಡಿದ್ದೇವೆ ಇದರಿಂದ ನಮಗೆ ಯಾವುದೇ ಆದಾಯ ಬರುವುದಿಲ್ಲ. ನಾವು ರೈತರು Irrigation ಕೊಡಲಿಕ್ಕೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ಅದರಲ್ಲಿ ಸೇರಿಲ್ಲ ಅದು. ಬೇಕಾದರೆ ನಾನು – ಕಟ್ಟುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : – 38 ಸಾವಿರ ಕೋಟಿ total investment ನಲ್ಲಿ 28 ಸಾವಿರ ಕೋಟಿ ಅದರಲ್ಲಿದೆ. ಅದರಲ್ಲಿ ಯಾವುದೇ ಆದಾಯ ಬರುವುದಿಲ್ಲ. ಜನರಿಂದ recovery ಮಾಡಲು ಬರುವುದಿಲ್ಲ. ಈಗ Land Army ನಿಗಮ ಏನಿತ್ತು ಅದು ಮೊದಲು ನಷ್ಟದಲ್ಲಿತ್ತು. ಆದರೆ ಈಗ ಅದಕ್ಕೆ profit ಬಂದಿದೆ. ಅಲ್ಲಿ ಈಗ ಉತ್ತಮ ಅಧಿಕಾರಿಗಳಿದ್ದಾರೆ. ಉತ್ತಮ ಆಡಳಿತ ಕೊಡುತ್ತಾರೆ, ಆ ನಿಗಮ ಮಂಡಳಿಗಳು profit ನಲ್ಲಿ ಬರುವುದನ್ನು ನಾವು ನೋಡಿದ್ದೇವೆ. ಕೆಲವೊಂದು ನಿಗಮ ಮಂಡಳಿಗಳು ಏನು loss ನಲ್ಲಿದ್ದವು ಅದನ್ನು ಸರಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವ ಕೆಲಸ ನಾವು ಮಾಡಲು ಪ್ರಾರಂಭಿಸಿದ್ದೇವೆ. ಮತ್ತು ಅದಕ್ಕೆ ಇನ್ನೂ ಏನು ಹೆಚ್ಚು ಒತ್ತು ಕೊಡಬೇಕೋ ಆ

ಕೆಲಸವನ್ನು ನಾವು ಮಾಡುತ್ತೇವೆ. ಇದರ ಜೊತೆಗೆ ಇನ್ನೂ ಹಲವಾರು ವಿಚಾರಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಅದರಲ್ಲಿ ಪ್ರಮುಖವಾಗಿ ಶ್ರೀ ಎ. ಟಿ. ರಾಮಸ್ವಾಮಿ ಯವರ ವರದಿ. ಅವರ ವರದಿಯಲ್ಲಿ ಏನು encroached land ಇದೆ, ಬೆಂಗಳೂರು ಸುತ್ತಮುತ್ತ ಅತಿಕ್ರಮ ಮಾಡಿದ ಭೂಮಿ 19 ಸಾವಿರ ಎಕರೆ ಇರಬಹುದು, 20 ಸಾವಿರ ಇರಬಹುದು ಅದು ಹಿಂದೆ ನಾನು revenue minister ಇದ್ದಾಗ ಎ.ಟಿ. ರಾಮಸ್ವಾಮಿ ಯವರು ಅದನ್ನು study ಮಾಡಿ report ಕೊಟ್ಟಿದ್ದರು. ಆಮೇಲೆ ಮುಂದೆ ಬಾಲಸುಬ್ರಹ್ಮಣಿಯನ್ ಎನ್ನುವಂತಹವರು ಅವರೂ ಸಹ ಒಂದು ವರದಿಯನ್ನು ಕೊಟ್ಟಿದ್ದರು. ಅದಕ್ಕೆ ಸಪರೇಟ್ ಆಗಿ ಒಂದು ನಿಗಮವನ್ನು ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಅವರು ಬೆಂಗಳೂರಿಗೆ, ಇವರು ಇಡೀ ರಾಜ್ಯಕ್ಕೆ.

ಶ್ರೀ ಜಗದೀಶ್ ಶೆಟ್ಟರ್ : – ಬೆಂಗಳೂರು ಸುತ್ತಮುತ್ತ ಇರುವುದಕ್ಕೆ ರಾಮಸ್ವಾಮಿಯವರ ಒಂದು ಕಮಿಟಿ ಇತ್ತು. ಅವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ ಮತ್ತು ಬಾಲಸುಬ್ರಹ್ಮಣಿಯನ್ ಅವರೇನು report ಕೊಟ್ಟಿದ್ದಾರೆ ಅದನ್ನೂ ನಾವು consider ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ಚೆಕ್ ಮಾಡಿದ್ದೀರಾ? What happened to those reports?

ಶ್ರೀ ಜಗದೀಶ್ ಶೆಟ್ಟರ್ : – ಅದನ್ನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : – Whether the report has been accepted or not?

ಶ್ರೀ ಜಗದೀಶ್ ಶೆಟ್ಟರ್ : – ಒಂದು ಮಾತನ್ನು ನಾನು ಹೇಳುತ್ತೇನೆ. ನಾನು ಕಂಪ್ಲೀಟ್ ಮಾಡುತ್ತೇನೆ.

ಅಧ್ಯಕ್ಷರು : – Complete ಮಾಡಲು ಬಿಡಿ

ಶ್ರೀ ಜಗದೀಶ್ ಶೆಟ್ಟರ್ : – ಒಂದು ಮಾತನ್ನು ಹೇಳುತ್ತೇನೆ ಮಾನ್ಯ ಜಯಚಂದ್ರ ಅವರೇ, ಹಿಂದೆ ನಾನು ರೆವಿನ್ಯೂ ಮಿನಿಸ್ಟರ್ ಇದ್ದಾಗಲೂ ಸಹ ಯಾವುದು encroached land ಇವೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾದ ಮೇಲೆ emcroach ಆಗಬಾರದು. ಒಂದು ಸಲ ಸರ್ಕಾರದ

ವಶಕ್ಕೆ ಬಂದ ಮೇಲೆ ಅದನ್ನು action ಮಾಡಿದರೆ ಒಂದು ಸಾವಿರವೋ ಎರಡು ಸಾವಿರ ಕೋಟಿ ಅದರಿಂದ resource ಬರಬೇಕು. ಆ ಪ್ರಯತ್ನವನ್ನು ನಾವು ಈ ಸಂದರ್ಭದಲ್ಲಿ ಮಾಡಿದ್ದೇವೆ. ಆಗ ಏನಾಯಿತು? land ದ್ದು ಸ್ವಲ್ಪ problem ಆಯಿತು. ನಮ್ಮ land Reforms Act ಇದೆ, ಮತ್ತೊಂದು ಇದೆ. ಯಾವುದು agricultural land ಇದೆ, ಅದರ Change of land use ಮಾಡಬೇಕು. ಇವೆಲ್ಲಾ ಇದೆ.

ಶ್ರೀ ಸಿದ್ದರಾಮಯ್ಯ : – Very simple question. Whether the report is accepted by the Government or not?

ಶ್ರೀ ಜಗದೀಶ್ ಶೆಟ್ಟರ್ : – ಅದರ ಪ್ರಕಾರವೇ ನಾವು ಅದನ್ನು action ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : – report accept ಆಗಿದೆಯೋ ಇಲ್ಲವೋ? If accepted, please place on the floor of the House. Accept ಮಾಡಿಕೊಂಡಿದ್ದರೆ ಅದನ್ನು ಪ್ಲೇಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : – O.K. ಅದನ್ನು ನೋಡಿಕೊಂಡು I will take a decision. ಅದರ ಸಲುವಾಗಿ ಇವತ್ತೇನು independent ಆಗಿ resource mobilization ಮಾಡಬೇಕಲ್ಲ, ಅದರ ಬಗ್ಗೆನೂ ನಾವು ಹೆಚ್ಚಿನ ರೀತಿಯಿಂದ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದು action ಆಗುವುದರಿಂದ ಹೆಚ್ಚಿನ ಒಂದು resource mobilization ಆಗುವುದಕ್ಕೆ ಸಾಧ್ಯ ಇದೆ. ಆ ದೃಷ್ಟಿಯಿಂದ ಸಹ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಗ್ರಾಮಗಳ ಸ್ಥಳಾಂತರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಮಾತನಾಡಿದರು. ನಾನು ಮೊನ್ನೆ ಬರಗಾಲದ ಚರ್ಚೆಯ ಸಂದರ್ಭದಲ್ಲಿ ಸಹ ಈ ಸ್ಥಳಾಂತರದ ಬಗ್ಗೆ ಮಾತನಾಡಿದ್ದೇನೆ. ಇವತ್ತು ನಮ್ಮ ಸರ್ಕಾರ ಬಂದ ಮೇಲೆ 5 ಸಾವಿರಕ್ಕೂ ಹೆಚ್ಚು ಭೂ ಸ್ವಾಧೀನ ಮಾಡಿದ್ದೇವೆ. ಈಗಾಗಲೆ ಬಹಳಷ್ಟು ಗ್ರಾಮಗಳಲ್ಲಿ 200ಕ್ಕೂ ಹೆಚ್ಚು ಗ್ರಾಮಗಳನ್ನು ಸ್ಥಳಾಂತರ ಮಾಡುವಂತಹದ್ದು ನಡೆಯುತ್ತಿದೆ. ಇನ್ನೂ 80 ಗ್ರಾಮಗಳು ಇದ್ದಾವೆ ಎನ್ನುವಂತಹದು. ಅವೆಲ್ಲಾ complete ಆದಮೇಲೆ ಸ್ಥಳಾಂತರ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : – ಸರ್ಕಾರ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : – ಕೆಲವೊಂದು Donors ಕೊಟ್ಟಿದ್ದರು. ಅದರ ಪ್ರಕಾರ ಕೊಟ್ಟಿದ್ದೇವೆ. ಆಮೇಲೆ ಕೆಲವು ಅರ್ಧಂಬರ್ಧ ಮಾಡಿದ ಮೇಲೆ ಸರ್ಕಾರದಿಂದ ಖರ್ಚು ಮಾಡಿ ಇವತ್ತು ಕೆಲಸವನ್ನು complete ಮಾಡುತ್ತಿದ್ದೇವೆ. ಅದರ figure ನಿಮಗೆ ಕೊಡುತ್ತೇನೆ. ನೀವು ಯಾವುದನ್ನು ಹೇಳಿದ್ದೀರಿ ಆ figure ಅನ್ನು ನಿಮಗೆ ಪ್ರತ್ಯೇಕವಾಗಿ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. ಏನು ಬೇಕೋ ಆ ಮಾಹಿತಿಯನ್ನೂ ತಮಗೆ ಕಳುಹಿಸಿಕೊಡುತ್ತೇನೆ. ಕಳೆದ ಬಾರಿ ಚರ್ಚೆಯಲ್ಲಿ ನಾನು ಹೇಳಿದ್ದೆ. ಇವತ್ತೇನು ಇನ್ನೂ ಯಾವುದು ಹಸ್ತಾಂತರ ಮಾಡಿಲ್ಲ, ಆ ಹಸ್ತಾಂತರವನ್ನು ಮಾಡುವಂತಹದ್ದನ್ನು ಆದಷ್ಟು ಬೇಗ ಈ ತಿಂಗಳಲ್ಲೇ ಮಾಡುತ್ತೇನೆಂದು ನಾನೇನು ಭರವಸೆ ಕೊಟ್ಟಿದ್ದೇನೆ. ಅದಕ್ಕೆ ಬದ್ಧ ಇದ್ದೇನೆ. ಆದಷ್ಟು ಬೇಗ ಯಾವ್ಯಾವ ಮನೆಗಳನ್ನು ಹಸ್ತಾಂತರ ಮಾಡಿಲ್ಲ ಇವತ್ತು 59 ಸಾವಿರಕ್ಕೂ ಹೆಚ್ಚು ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆ. ಅವುಗಳನ್ನೂ ಹಸ್ತಾಂತರ ಮಾಡುವಂತಹದ್ದನ್ನು ನಾವು ಮಾಡುತ್ತೇವೆ ಮತ್ತು ಯಾರು ಫಲಾನುಭವಿಗಳು ಇದ್ದಾರೆ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನೂ ಮಾಡುತ್ತೇವೆ. ಬಹುಶಃ ಈ ರೀತಿ ನೆರೆ ಹಾವಳಿ ಬಂದಂತಹ ಸಂದರ್ಭದಲ್ಲಿ 59 ಸಾವಿರ ಮನೆಗಳನ್ನು ಬೇರೆ ಯಾವ ಸರ್ಕಾರವೂ ಕೊಟ್ಟಿಲ್ಲ. ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಕೊಟ್ಟಿದ್ದೇವೆ. ಅದಕ್ಕಾಗಿ ಹಣ ಖರ್ಚನ್ನೂ ಮಾಡಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : – ಯಾವುದು?

ಶ್ರೀ ಜಗದೀಶ್ ಶೆಟ್ಟರ್ : – 59 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಹೀಗಾಗಿ ಇವತ್ತು ಬಹಳ ಮುಖ್ಯವಾಗಿ ಹೇಳುವಂತಹದ್ದು.

ಶ್ರೀ ಸಿದ್ದರಾಮಯ್ಯ : – ಅದೆಲ್ಲಾ ಕೇಂದ್ರ ಸರ್ಕಾರದ ದುಡ್ಡು.

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಸಭಾಧ್ಯಕ್ಷರೆ, ಇನ್ನೊಂದು ಬಹಳ ಮುಖ್ಯವಾದಂತಹದ್ದು. ಈಗಾಗಲೇ ನಾನು ಮೊನ್ನೆ ಸಹ ಅದರ ಬಗ್ಗೆ ಘೋಷಣೆಯನ್ನು ಮಾಡಿದ್ದೇನೆ. ಈ ಒಂದು ಕೃಷಿ ಸಾಲ ಮನ್ನಾ ಬಗ್ಗೆ ಮೊನ್ನೆಯೂ ಘೋಷಣೆ ಮಾಡಿದ್ದೆ. ನಮ್ಮ ಮಾನ್ಯ ವಿರೋಧ ಪಕ್ಷದ

ನಾಯಕರು ಪದೇ ಪದೇ ಹೇಳುತ್ತಾರೆ. ಇವತ್ತು ರೈತರಿಗೆ ಬೆಳೆ ನಷ್ಟ ಆಗಿದೆ. ಆಗಿದೆ, ನಾನು ಒಪ್ಪಿಕೊಳ್ಳುತ್ತೇನೆ. ಆ ಬೆಳೆ ನಷ್ಟ ಆದಂತಹ ರೈತರಿಗೆ 5 ಸಾವಿರ ಪ್ರತಿಯೊಬ್ಬರಿಗೂ ಕೊಟ್ಟುಬಿಡಿ ಎನ್ನುವಂತಹ ಮಾತನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು.

ಶ್ರೀ ಸಿದ್ದರಾಮಯ್ಯ :- ಒಂದು ಎಕರೆಗೆ

ಶ್ರೀ ಜಗದೀಶ್ ಶೆಟ್ಟರ್ :- ಒಂದು ಎಕರೆಗೆ 5 ಸಾವಿರ ಕೊಡಿ ಎನ್ನುವ ಮಾತನ್ನು ಹೇಳಿದ್ದೀರಿ. ಇವತ್ತೇನು ನಾವು 2 ಸಲ Hon'ble Prime Minister ಅವರನ್ನು ಹಿಂದಿನ ಮುಖ್ಯಮಂತ್ರಿ ಆಗಲಿ, ನಾವು ಹೋಗಿ ಭೇಟಿ ಆಗಿದ್ದೇವೆ.

ಶ್ರೀ ಸಿದ್ದರಾಮಯ್ಯ :- ನೀವು ಕೊಡಿ.

ಶ್ರೀ ಜಗದೀಶ್ ಶೆಟ್ಟರ್ :- ಮೊನ್ನೆನೂ ನಾನು ಇದನ್ನು ಹೇಳಿದ್ದೇನೆ. ಇವತ್ತೂ ನಾನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಕಾಂಗ್ರೆಸ್ ನಾಯಕರುಗಳಿಗೆ ಹೇಳುತ್ತೇನೆ, ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಹೇಳಿ.

ಶ್ರೀ ಸಿದ್ದರಾಮಯ್ಯ :- ನೀವು ಕೊಡಿ, ಸ್ವಾಮಿ

ಶ್ರೀ ಜಗದೀಶ್ ಶೆಟ್ಟರ್ :- ನಾನು answer complete ಮಾಡುತ್ತೇನೆ. ನೋಡಿ ನೀವು ಮಾತನಾಡುವಾಗ ನಾನು ಸುಮ್ಮನೆ ಕುಳಿತಿದ್ದೆ. ನನಗೆ ಮಾತನಾಡಲು ಅವಕಾಶ ಕೊಡಿ. ನಾನು ಹೇಳುತ್ತೇನೆ. ನೀವು ಅದನ್ನು ಸಹಿಸಿಕೊಳ್ಳಬೇಕು. ಆಮೇಲೆ ನೀವು ಹೇಳಿ, ನಿಮಗೆ ಅಪ್ರಿಯವಾದಂತಹದ್ದು ಆದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ ಪ್ರಿಯವಾದುದನ್ನೇ ಹೇಳಬೇಕು ಎಂದರೆ ನಾನೇನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ :- ಕೇಂದ್ರ ಸರ್ಕಾರದ ಮೇಲೆ ಏಕೆ ಹೇಳುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ :- ಕೇಂದ್ರ ಸರ್ಕಾರದ ಮೇಲೂ ಜವಾಬ್ದಾರಿ ಇದೆ. ಹಾಗಾದರೆ ಕೇಂದ್ರ ಸರ್ಕಾರದ ಜವಾಬ್ದಾರಿ ಇಲ್ಲವೇ? ರಾಜ್ಯ ಸರ್ಕಾರದ ಮೇಲೆಯೇ ಎಲ್ಲಾ burden ಹೊತ್ತು ಕೊಳ್ಳಬೇಕು. ಇದು ನಿಮ್ಮ ವಾದ ಇದು ಸರಿಯಲ್ಲ. ನಾನು ಹೇಳುತ್ತಿದ್ದೇನೆ. ಇವತ್ತು ನಾವೇನು ಭಾರವನ್ನು ಹೊತ್ತುಕೊಳ್ಳುವುದಕ್ಕೆ ಸಾಧ್ಯ ಇದೆ, ಅದನ್ನು ಮಾಡಿದ್ದೇವೆ, 3500 ಕೋಟಿಯಷ್ಟು ಭಾರವನ್ನು ನಾವು ಹೊತ್ತುಕೊಂಡಿದ್ದೇವೆ. ಅದಕ್ಕೆ ನೀವು ಒಂದಿಷ್ಟು 5 ಸಾವಿರದಷ್ಟು ಭಾರವನ್ನು ಹೊತ್ತುಕೊಳ್ಳಿ. ಕೇಂದ್ರ ಸರ್ಕಾರ ಇದೆ. ರಾಷ್ಟ್ರೀಕೃತ

ಬ್ಯಾಂಕಿನಿಂದಲೂ ಸಾಲವನ್ನು ಮನ್ನಾ ಮಾಡಿಸಲಿಕ್ಕೆ ತಯಾರಿಲ್ಲ, ಇವತ್ತು ಬೆಳೆ ನಷ್ಟ ಏನಾಗಿದೆ? ಬೆಳೆ ನಷ್ಟವನ್ನೂ ಕೊಡಿಸಲಿಕ್ಕೆ ನೀವು ತಯಾರಿಲ್ಲ.

ಶ್ರೀ ಸಿದ್ದರಾಮಯ್ಯ : – ನೀವು ಕೊಡುತ್ತಿರುವುದು ಕರ್ನಾಟಕದ ರೈತರಿಗೆ.

(ಗೊಂದಲ)

ಅಧ್ಯಕ್ಷರು : – ಆಯಿತು, ಅವರು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಕೇಂದ್ರ ಸರ್ಕಾರ ಭಿಕ್ಷೆ ಕೊಡುತ್ತಿಲ್ಲ. ಇದು ನಾಟಕ.

(ಗೊಂಧಲ)

ಅಧ್ಯಕ್ಷರು : – ಮಾನ್ಯ ಮುಖ್ಯಮಂತ್ರಿಗಳು ಮುಗಿಸಲಿ, Please,

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಭಾರತ ದೇಶದಲ್ಲಿ ಕರ್ನಾಟಕ ಇದೆ, ಬೇರೆ ದೇಶದಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು : – Please,

(ಒಟ್ಟಿಗೆ ಹಲವಾರು ಸದಸ್ಯರು ಮಾತಾನಾಡುತ್ತಿದ್ದರು.)

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : – ಆಗುವುದಿಲ್ಲ ಅಂದರೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕದ ರೈತರ ಮೇಲೆ ಕಳಕಳಿ ಇಲ್ಲ ಎಂದು declare ಮಾಡಿ

ಶ್ರೀ ಸಿದ್ದರಾಮಯ್ಯ : – ನೀವು ಅಲ್ಲಿ ಹೋಗಿ ಕೇಳಿ. ನಿಮ್ಮ ಎಂ.ಪಿ. ಗಳನ್ನು ಅಲ್ಲಿ ಹೋಗಿ ಕೇಳಿಸಿ.

ಅಧ್ಯಕ್ಷರು : – ಅವರು complete ಮಾಡಲಿ

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಇದು ಕರ್ನಾಟಕ ಅಸೆಂಬ್ಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಇದು ಆರು ಕೋಟಿ ಜನರ ಧ್ವನಿ ಇದು.

(ಗೊಂದಲ)

ಅಧ್ಯಕ್ಷರು :– Please, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ. ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು complete ಮಾಡಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಲೆಕ್ಕ ಪತ್ರ ಎಲ್ಲಾ ನಾವು ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಕತ್ತಿ ಅವರೇ ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ :– ರೈತರ ಬಗ್ಗೆ ಕಳಕಳಿ ಇದ್ದರೆ ಕೊಡಿಸಿ. ಕಳಕಳಿ ಇಲ್ಲ ಎಂದು declare ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಸರ್ಕಾರ 25 ಸಾವಿರದವರೆಗೆ ಸಾಲ ಮನ್ನಾ ಮಾಡಿದೆ. ಅದರ ಬಗ್ಗೆ ನಾನು ಈಗಾಗಲೇ ಎಲ್ಲ ಘೋಷಣೆಯನ್ನು ಮಾಡಿದ್ದೇನೆ. ಆ ಸಾಲ ಮನ್ನಾ ಮಾಡುವ ಯೋಜನೆ ನಾನು ಇನ್ನೊಮ್ಮೆ ಸ್ಪಷ್ಟೀಕರಣ ಮಾಡುತ್ತಿದ್ದೇನೆ. 01.09.2011 ರಿಂದ 30.06.2012ರ ಅವಧಿಯಲ್ಲಿ ವಿತರಣೆ ಮಾಡಿದಂತಹ 25.07.2012 ವರೆಗೆ ಉಳಿದಿರುವಂತಹ ಎಲ್ಲಾ ರೈತರ ಸಾಲದ ಬಾಕಿ ಅಂದರೆ ಏನು 25 ಸಾವಿರದವರೆಗೆ ಅಸಲು ಮತ್ತು ಬಡ್ಡಿ ಒಳಗೊಂಡಂತೆ 25 ಸಾವಿರದವರೆಗೆ ಮನ್ನಾವನ್ನು ನಾವು ಮಾಡುತ್ತಿದ್ದೇವೆ. ಆಮೇಲೆ 01.09.2011 ರಿಂದ 30.06.2012ರ ಅವಧಿಯಲ್ಲಿ ವಿತರಣೆ ಮಾಡಿದಂತಹ ಎಲ್ಲಾ ಸಾಲಗಾರರಿಗೆ ಕೊಟ್ಟಂತಹದ್ದು. ಅವರೆಲ್ಲಾ ಸಾಲಗಾರರಿಗೂ ಸಹ ಇವತ್ತು 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇನೆ. ಆಮೇಲೆ ಮುಂದೆ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :– ಇದನ್ನು extend ಮಾಡಿ, ಇಲ್ಲ ಎಂದರೆ ಯಾರಿಗೂ ಪ್ರಯೋಜನ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :– ನಾನು ಹೇಳುತ್ತೇನೆ ಕೇಳಿ. ಜುಲೈ 25ರವರೆಗೆ ಇದ್ದಂತಹ ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಸಿದ್ದರಾಮಯ್ಯ :– ಕಳೆದ ಜುಲೈದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಅದರದ್ದೂ ಸ್ಪಷ್ಟೀಕರಣ ಮಾಡುತ್ತೇನೆ. ಜುಲೈದು ಏಕೆ ಮಾಡಿಲ್ಲ ಎಂಬುದನ್ನೂ ಹೇಳುತ್ತೇನೆ. ಮೊನ್ನೆ ನಿಮಗೆ ನಾನು ಹೇಳಿದೆನಲ್ಲಾ, ಅದರ ಪ್ರಕಾರ ನಾನು ವಿಚಾರ ಮಾಡಿಕೊಂಡು ಈಗ ನೀವು ಏಪ್ರಿಲ್, ಜೂನ್ 2011 ರಿಂದ ಅಪ್ಲೈ ಮಾಡಿ ಎಂದು ಹೇಳಿದಿರಿ. ಅದನ್ನು ಮಾಡುವುದರಿಂದ ಈಗ ನೀವು ಏಪ್ರಿಲ್, ಜೂನ್‌ನಲ್ಲಿ ಲೋನ್ ತೆಗೆದುಕೊಂಡಂತಹವರು ಈ ವರ್ಷ ಏಪ್ರಿಲ್, ಜೂನ್‌ನಲ್ಲಿ repayment ಮಾಡಿರುತ್ತಾರೆ. ಅವರದ್ದು ಯಾವುದೂ ಲೋನ್ ಇರುವುದಿಲ್ಲ. ಈಗ ಆ ದೃಷ್ಟಿಯಿಂದ ನಾವು 01.09.2011 ರಿಂದ ತೆಗೆದುಕೊಂಡಿದ್ದು. ಆ ದೃಷ್ಟಿಯಿಂದ ನಾವು ತೆಗೆದುಕೊಂಡಿದ್ದೇವೆಯೇ ಹೊರತು ಬೇರೆ ಯಾವುದೇ ರೀತಿಯಿಂದಲ್ಲ. ನಾನು study ಮಾಡಿಕೊಂಡೇ ಹೇಳುತ್ತಿದ್ದೇನೆ. ಈ ಏಪ್ರಿಲ್, ಜೂನ್‌ನಲ್ಲಿ ಆಗ ತೆಗೆದುಕೊಂಡವರು ಮೊನ್ನೆ ಏಪ್ರಿಲ್‌ನಲ್ಲಿ ಅವರು ಚುಕ್ತಾ ಮಾಡಿರುತ್ತಾರೆ. ಅವರದ್ದು ಯಾವುದೇ ಅಕೌಂಟ್ ಇರುವುದಿಲ್ಲ. ಈಗ out standing ಇರುವುದಿಲ್ಲ. ಆ ದೃಷ್ಟಿಯಿಂದ ಅವರನ್ನು ನಾವು consider ಮಾಡುವುದಿಲ್ಲ. ಅದಕ್ಕೆ 01.09.2011 ರಿಂದ ಒಂದು ವರ್ಷ ಇಲ್ಲಿಯವರೆಗೂ 30ನೇ ಜೂನ್, ಅದು applicable to 25th July. ನಾವು 25ನೇ ಜುಲೈವರೆಗೆ ಅಪ್ಲೈ ಮಾಡಿರುವುದರಿಂದ ಬಹಳಷ್ಟು ಜನರಿಗೆ ಅನುಕೂಲ ಆಗುತ್ತದೆ. ಅದಕ್ಕೆ ಇದನ್ನು ನಾವು ಮಾಡಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :– ಎಷ್ಟು ಜನರಿಗೆ ಅದರಿಂದ ಅನುಕೂಲವಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಅದನ್ನೂ ಹೇಳುತ್ತೇನೆ. ಒಟ್ಟು 16 ಲಕ್ಷ ಜನರಿಗೆ ಅನುಕೂಲವಾಗುತ್ತದೆ. ನಿಮಗೆ ಎಲ್ಲಾ ವಿವರಗಳನ್ನು ಹೇಳಿಬಿಡುತ್ತೇನೆ. 25 ಸಾವಿರ ರೂ. ಗಳವರೆಗೆ ಸಾಲ ತೆಗೆದುಕೊಂಡವರು 5 ಲಕ್ಷ 40 ಸಾವಿರ farmers ಇದ್ದಾರೆ.

ಶ್ರೀ ಸಿದ್ದರಾಮಯ್ಯ :– ಎಲ್ಲಾ out standing dues ಮನ್ನಾ ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : – ಹೌದು, ಎಲ್ಲಾ out standing dues

ಶ್ರೀ ಸಿದ್ದರಾಮಯ್ಯ : – Re-payment ಆಗಿರುವುದು.

ಶ್ರೀ ಜಗದೀಶ್ ಶೆಟ್ಟರ್ : – Re-payment ಆಗಿಲ್ಲ. ಇದು out standing ಇದ್ದದ್ದು ಮಾತ್ರ. ದಯವಿಟ್ಟು ನಾನು ಎಲ್ಲವನ್ನೂ ಹೇಳುತ್ತೇನೆ, ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಾನು ಏಕೆ clarification ಅನ್ನು ಕೇಳುತ್ತಿದ್ದೇನೆ ಎಂದರೆ..

ಶ್ರೀ ಜಗದೀಶ್ ಶೆಟ್ಟರ್ : – ನಾನು ಅದರ ಬಗ್ಗೆಯೇ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : – Let it be benefited to more people.

ಶ್ರೀ ಜಗದೀಶ್ ಶೆಟ್ಟರ್ : – Definitely. ನಮ್ಮದೂ ಅದೇ ಅಭಿಪ್ರಾಯವಾಗಿದೆ. ನಾನು ಅದನ್ನೂ ತಮಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : – 1.9.2011 ರಿಂದ ಜುಲೈ 25ರವರೆಗೆ, 25 ಸಾವಿರ ರೂ. ಗಳವರೆಗೆ ಸಾಲ ತೆಗೆದುಕೊಂಡವರ out standing dues ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ : – 25 ಸಾವಿರ ರೂ. ಗಳ ಸಾಲ ತೆಗೆದುಕೊಂಡು, out standing dues ಇರುವವರಿಗೆ ಇದು apply ಆಗುತ್ತದೆ.

ಶ್ರೀ ಸಿದ್ದರಾಮಯ್ಯ : – ನನ್ನ ಪ್ರಕಾರ ಶೇಕಡ 93 ರಷ್ಟು re-payment ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : – ಆ ರೀತಿ ಏನೂ ಇಲ್ಲ, ಹಾಗೇನಿಲ್ಲ. 25 ಸಾವಿರ ರೂ. ಗಳವರೆಗೆ ಸಾಲ ತೆಗೆದುಕೊಂಡ 5 ಲಕ್ಷ 4 ಸಾವಿರ ಜನರಿಗೆ benefit ಆಗುತ್ತದೆ.

ಶ್ರೀ ಸಿದ್ದರಾಮಯ್ಯ : – Loan ಎಲ್ಲಾ ಈಗಾಗಲೇ recovery ಆಗಿಬಿಟ್ಟಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : – ಇಲ್ಲ. ಈಗ pending ಇರುವ, 5 ಲಕ್ಷ 4 ಸಾವಿರ ಜನರಿಗೆ benefit ಆಗುತ್ತದೆ. More than 50,000/– ರೂ. ಗಳು ಇದ್ದ 7 ಲಕ್ಷ 17 ಸಾವಿರ ಜನರಿಗೆ ಅನುಕೂಲವಾಗುತ್ತದೆ. Above 50,000/– ರೂ. ಗಳವರೆಗೆ 3 ಲಕ್ಷ 75 ಸಾವಿರ ಜನ ರೈತರಿಗೆ ಅನುಕೂಲವಾಗುತ್ತದೆ.

Total ಆಗಿ 16 ಲಕ್ಷ ಜನ ರೈತರಿಗೆ ಇದರಿಂದ ಅನುಕೂಲವಾಗುತ್ತದೆ. ಅದಕ್ಕಾಗಿ ಒಟ್ಟು Total, 3500 ಕೋಟಿ ರೂ. ಗಳಿಗಿಂತ ಹೆಚ್ಚು ಇವತ್ತು ನಮ್ಮ ಮೇಲೆ burden ಆಗುತ್ತದೆ. ಅದರ ಸಲುವಾಗಿ, ಈ burden ಅನ್ನು ಎಲ್ಲಿಂದ ಹೊತ್ತುಕೊಳ್ಳುತ್ತೀರಿ ಎಂದು ಕೇಳಿದರು..

ಶ್ರೀ ಟಿ.ಬಿ. ಜಯಚಂದ್ರ : – ಎಲ್ಲಾ ವರ್ಗದ ರೈತರಿಗೆ ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : – ಇದು ಎಲ್ಲಾ ವರ್ಗದ ರೈತರಿಗೆ, ಸಣ್ಣ ರೈತರು, ದೊಡ್ಡ ರೈತರು ಸೇರಿದಂತೆ, ಎಲ್ಲಾ ರೈತರಿಗೂ ಇದರಿಂದ benefit ಆಗುತ್ತದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : – ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲ ಎರಡಕ್ಕೂ ಅನ್ವಯಿಸುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಎಲ್ಲಾ ಬೆಳೆ ಸಾಲಕ್ಕೆ ಇದು ಅನ್ವಯಿಸುತ್ತದೆ.

(ಗೊಂದಲ)

ಅಧ್ಯಕ್ಷರು : – PLD Bank and Co-operative Society ಆಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಇವತ್ತು ಈ ಯೋಜನೆಯನ್ನು ತೆಗೆದುಕೊಂಡು ಬಂದಿದ್ದೇವೆ. ಇದರಿಂದ ಬಹಳಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ನಾನು ನಮ್ಮ ಮಾನ್ಯ ವಿರೋಧ ಪಕ್ಷದ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ, ನಾನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. ನಾವು ಕೇಂದ್ರ ಸರ್ಕಾರಕ್ಕೆ ಹೋಗೋಣ. ಈ ಬೆಳೆ ನಷ್ಟದ ಬಗ್ಗೆ 2,000 ಕೋಟಿ ರೂ. ಗಳನ್ನು ಕೇಂದ್ರದಿಂದ ತಾವು ಕೊಡಿಸಿದರೆ, ನಮ್ಮ ಇಡೀ ರಾಜ್ಯದ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇಷ್ಟು ವಿಚಾರಗಳನ್ನು ಹೇಳಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಈ ಒಂದು ಬಜೆಟ್, ಈ Financial Bills approve ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : – Clarifications ಏನಾದರೂ ಇದ್ದರೆ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ... ನೀವು ಇನ್ನೂ ಹೇಳುವುದಿದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಇನ್ನೊಂದು ಸ್ವಲ್ಪ ಹೇಳುವುದಿತ್ತು. ಇನ್ನೊಂದು ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ನಮ್ಮ ಮೇಲೆ ಇಷ್ಟೊಂದು, 3500 ಕೋಟಿ ರೂ. ಗಳಷ್ಟು burden ಬಂದಿದೆ. ಇದನ್ನು ಎಲ್ಲಿಂದ ಭರಿಸುವುದು ಎಂಬ ಪ್ರಶ್ನೆ ಕೇಳಿಬಂದಿದೆ. ಅದಕ್ಕಾಗಿ ಎಲ್ಲಿಯಾದರೂ ನಾವೊಂದು tax ಅನ್ನು impose ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ VAT, ಮೌಲ್ಯವರ್ಧಿತ ತೆರಿಗೆಯಲ್ಲಿ 0.5% ನಷ್ಟು ನಾವು increase ಮಾಡಿದ್ದೇವೆ. ಸರಕುಗಳ ಮೇಲೆ ವಿಧಿಸಲಾಗುತ್ತಿರುವ ಶೇಕಡ 5% ಮತ್ತು ಶೇಕಡ 14 % ಮೌಲ್ಯ ವರ್ಧಿತ ತೆರಿಗೆ ದರಗಳನ್ನು ಕ್ರಮವಾಗಿ ಶೇಕಡ 5.5% ಮತ್ತು 14.5% ಏರಿಸುವುದರ ಮುಖಾಂತರ ಅಗತ್ಯ ಸಂಪನ್ಮೂಲ ಕ್ರೋಢೀಕರಿಸುವುದು ಅನಿವಾರ್ಯವಾಗಿರುತ್ತದೆ. ಆ ದೃಷ್ಟಿಯಿಂದ ಇಲ್ಲಿ ತೆರಿಗೆ ದರ ಏರಿಕೆ ಮಾಡಿ ಕ್ರೋಢೀಕರಣ ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ. ಈ ತೆರಿಗೆ ದರಗಳ ಏರಿಕೆಯನ್ನು 2012ರ ಆಗಸ್ಟ್ 1 ರಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದ್ದು, ಮುಂದಿನ 12 ತಿಂಗಳ ಅವಧಿಯಲ್ಲಿ ಈ ಕ್ರಮದಿಂದ 1000 ಕೋಟಿ ರೂ. ಗಳ ಅಧಿಕ ತೆರಿಗೆಯನ್ನು ಸಂಗ್ರಹಿಸುವ ಸಾಧ್ಯತೆಯಿದ್ದು, ಈ ರೀತಿ ಏರಿಕೆ ಮಾಡಲು 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ವಿಧೇಯಕವನ್ನು ನಾವು ಮಂಡಿಸುವವರಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : – ಇದನ್ನು adjustment ಮಾಡಲು VAT ನಲ್ಲಿ 0.5 % ನಷ್ಟು ನಾವು enhancement ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : – VAT ಏರಿಕೆ ಮಾಡುತ್ತಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : – ಶೇ. 14 VAT ಇರುವುದನ್ನು 0.5 % ನಷ್ಟು ಮತ್ತು ಶೇ. 5 % ಇರುವುದನ್ನು 0.5 % ನಷ್ಟು ಏರಿಕೆ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : – ನಾವು ಅದನ್ನು ವಿರೋಧಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : – ಇನ್ನೊಂದು ವಿಚಾರದ ಬಗ್ಗೆ ನಾನು announcement ಮಾಡುತ್ತೇನೆ. ನಂತರ ತಾವು ಮಾತನಾಡಿ. ಮೌಲ್ಯ ವರ್ಧಿತ ತೆರಿಗೆಯಲ್ಲಿ ಪರಿಹಾರ ಕೊಡುವಂಥದ್ದನ್ನು ಹೇಳುತ್ತಿದ್ದೇನೆ. 2012–13 ರ ಆಯವ್ಯಯದಲ್ಲಿ ಪ್ಲಾಸ್ಟಿಕ್‌ನಿಂದ ನೇಯ್ದ ಬಟ್ಟೆಗಳ ಮೇಲಿದ್ದ ತೆರಿಗೆ ವಿನಾಯಿತಿಯ ದುರುಪಯೋಗವನ್ನು ತಡೆಯುವ ಸಲುವಾಗಿ ಪ್ಲಾಸ್ಟಿಕ್‌ನಿಂದ ನೇಯ್ದ ಬಟ್ಟೆಗಳ ಮೇಲೆ ಶೇ. 5 % ರಷ್ಟು ಮೌಲ್ಯ ವರ್ಧಿತ ತೆರಿಗೆಯನ್ನು 2012ರ ಏಪ್ರಿಲ್ 1 ರಿಂದ ವಿಧಿಸಲಾಗಿದೆ. ಆದರೆ ಇಂತಹ ಹೊಸ ತೆರಿಗೆಯಿಂದ ಕೃಷಿ ಮತ್ತು ತೋಟಗಾರಿಕೆಗಳಲ್ಲಿ ಪರದೆಗಳ ರೂಪದಲ್ಲಿ ಬಳಕೆಯಾಗುವಂತಹ ಪ್ಲಾಸ್ಟಿಕ್ ಮೊನೋ ಫಿಲ್ಮೆಟ್‌ನಿಂದ ನೇಯ್ದದಂತಹ ಬಟ್ಟೆಗಳನ್ನು ತಯಾರಿಸುವ ಸ್ಥಳೀಯ ಉದ್ಯಮಗಳು, ನೆರೆ ರಾಜ್ಯಗಳಲ್ಲಿರುವ ತೆರಿಗೆ ವಿನಾಯಿತಿಯಿಂದಾಗಿ, ಅಂತರರಾಜ್ಯ ಮಾರುಕಟ್ಟೆಯಲ್ಲಿ, ಆ ಒಂದು ಸ್ಪರ್ಧೆಯಲ್ಲಿ ಅವರಿಗೆ ನಿಲ್ಲಲಿಕ್ಕೆ ಆಗದಿರುವುದರಿಂದ ಅವರ ವ್ಯಾಪಾರಕ್ಕೆ ಧಕ್ಕೆಯುಂಟಾಗಿದೆ ಎನ್ನುವಂಥದ್ದು ನಮ್ಮ ಗಮನಕ್ಕೆ ಬಂದ ಮೇಲೆ ಮತ್ತು ಅದರಿಂದ ನಮಗೆ ಆದಾಯ, resource, 2 ಕೋಟಿ ರೂ. ಗಳಷ್ಟು ಆಗುವುದರಿಂದ, ಪ್ಲಾಸ್ಟಿಕ್ ಮೊನೋ ಫಿಲ್ಮೆಟ್‌ನಿಂದ ನೇಯ್ದ ಬಟ್ಟೆಗಳ ಮೇಲೆ ಶೇ. 5 % ಮೌಲ್ಯ ವರ್ಧಿತ ತೆರಿಗೆಯನ್ನು 1.8.2012ರಿಂದ ರದ್ದುಮಾಡಲು ಉದ್ದೇಶಿಸರುತ್ತೇವೆ. ಇಷ್ಟು ವಿಷಯಗಳನ್ನು ನಾನು ಸದನದ ಮುಂದೆ ಮಂಡನೆ ಮಾಡಿದ್ದೇನೆ. ಈ ಒಂದು ಬಜೆಟ್ ಅನ್ನು ಅನುಮೋದಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಾವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರೂ ಕೂಡ, ಅವುಗಳಿಗೆ ಉತ್ತರ ಕೊಡತಕ್ಕ ಗೋಜಿಗೆ ಅವರು ಹೋಗಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಸ್ವಲ್ಪ ಸುಮ್ಮನಿರಪ್ಪ. ಅವರು ಹೇಳಿದ ಮೇಲೆ ನಾನು clarification ಅನ್ನು ಕೇಳಬೇಕೋ? ಬೇಡವೋ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನೀವು ಹೋಗುವುದಿದ್ದರೆ ಹೋಗಿ.

(ಗೊಂದಲ)

ಅಧ್ಯಕ್ಷರು : – ತಾವು ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – What is this? ಮಾನ್ಯ ಅಧ್ಯಕ್ಷರೆ, This is not the way.

(ಗೊಂದಲ)

ಅಧ್ಯಕ್ಷರು : – Please ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಿಮಗೆ time ಇಲ್ಲದಿದ್ದರೆ ದಯಮಾಡಿ ಹೋಗಿ.

(ಗೊಂದಲ)

ಅಧ್ಯಕ್ಷರು : – clarification ಕೇಳಿ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ಮೊನ್ನೆ ತಾನೇ ರಾಷ್ಟ್ರಪತಿಗಳ ಚುನಾವಣೆಯಲ್ಲಿ ಓಟ್ ಹಾಕಿ, ಇವತ್ತು ಇಲ್ಲಿ ಬಹಳ ಮಾತನಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : – Please ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – 16 ಓಟ್ ಕ್ರಾಸ್ ಆಗಿದ್ದವಲ್ಲಾ, ಅವು ಯಾರವು?

(ಗೊಂದಲ)

ಶ್ರೀ ಆರ್. ಅಶೋಕ್ : – MLC election ನಲ್ಲಿ ನಿಮ್ದೂ ಕ್ರಾಸ್ ಆಗಿತ್ತಲ್ಲಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಆಗ ನಿಮ್ಮವು 12, ನಮ್ಮವು 5 ಆಗಿದ್ದವು.

(ಗೊಂದಲ)

ಅಧ್ಯಕ್ಷರು : – Please ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಈ ರೀತಿಯಾದರೆ ನಾನು ಕೇಳುವುದಿಲ್ಲ. What is this? ಇದೇನು ಅಸೆಂಬ್ಲಿಯೋ? ಏನು? ಈ ರೀತಿಯಾದರೆ ಹೇಗೆ?

(ಗೊಂದಲ)

ಅಧ್ಯಕ್ಷರು : – Please, ಮಾತನಾಡಿ.

(ಗೊಂದಲ)

ಸಿದ್ದರಾಮಯ್ಯ : – ನಾನು ಮಾತನಾಡುವುದು ಬೇಡ ಎಂದರೆ ಮಾತಾಡುವುದಿಲ್ಲ, ನಮಗೇನಂತೆ? ನೀವು ಪಾಸ್ ಮಾಡಿಕೊಂಡು ಹೋಗಿ, ನಾವು ಹೋಗುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್ : – ನೀವು ಮಾತನಾಡಿ, ನಾವು ಮೇಜು ತಟ್ಟುತ್ತೇವೆ.

ಶ್ರೀ ಸಿದ್ದರಾಮಯ್ಯ : – ನೀವೇನು ನಮಗೆ ಮೇಜು ತಟ್ಟುವುದು ಬೇಡ. ಈಗಾಗಲೇ ನೀವೆಲ್ಲಾ ತಟ್ಟಿ ಆಯಿತಲ್ಲಾ?

ಅಧ್ಯಕ್ಷರು : – Please ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಬಹಳ ನಿರೀಕ್ಷೆ ಮಾಡಿದ್ದೆ. ಅವರ ಉತ್ತರ ಬೇರೆ ತರಹ ಇರುತ್ತದೆ. ಹೊಸದಾಗಿ ಅವರ ಅನುಭವಗಳೆಲ್ಲಾ ಉತ್ತರದಲ್ಲಿ ಉಪಯೋಗಕ್ಕೆ ಬರುತ್ತದೆಂದು ನಿರೀಕ್ಷಿಸಿದ್ದೆ. ಆ ರೀತಿ ಏನೂ ಆದಂತೆ ಕಾಣುತ್ತಿಲ್ಲ. ನಾವು ಹೇಳಿದಂತಹ ಅನೇಕ ವಿಚಾರಗಳಿಗೆ ಅವರು ಉತ್ತರ ಹೇಳಲಿಕ್ಕೆ ಹೋಗಲಿಲ್ಲ. ಕೃಷಿ ಬಜೆಟ್ ಬಗ್ಗೆ ಈ ರೀತಿಯಾಗಿದೆ ಎಂದು ನಾನು ಅಂಕಿ ಅಂಶಗಳ ಮೂಲಕ ಹೇಳಿದೆ. ಅದರ ಬಗ್ಗೆ ಅವರೇನೂ ಮಾತನಾಡುವುದಕ್ಕೆ ಹೋಗಲಿಲ್ಲ. ಕುಡಿಯುವ ನೀರಿನದ್ದು ಈ ರೀತಿಯಾಗಿದೆ ಎಂದು ಹೇಳಿದ್ದೆ. ಅದರ ಬಗ್ಗೆಯೂ ಹೇಳಲಿಲ್ಲ. NREGS, ಡಾ : ನಂಜುಂಡಪ್ಪನವರ ವರದಿ, ಸುವರ್ಣ ಗ್ರಾಮೋದಯ ಬಗ್ಗೆ ಮಾತನಾಡಿದ್ದೆ. ಇನ್ನು Education Department ನಲ್ಲಿ ಸುಮಾರು 18 ಸಾವಿರ ಶಿಕ್ಷಕರ ಕೊರತೆ ಇದೆ. Health Department ನಲ್ಲಿ Doctors ಕೊರತೆ ಇದೆ.

